ಶಿವೇಶ್ವರ ದೊಡ್ಡಮನಿ

ಜೀವನ ಮತ್ತು ಸಾಹಿತ್ಯ



ಸಂಪಾದಕ
ಡಾ.ಶ್ಯಾಮಸುಂದರ ಬಿದರಕುಂದಿ

ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು

ಶಿವೇಶ್ವರ ದೊಡ್ಡಮನಿ

(ಜೀವನ ಮತ್ತು ಸಾಹಿತ್ಯ)

(೧೯೨೫ – ೧೯೫೦)

ಸಂಪಾದಕ

ಡಾ. ಶ್ಯಾಮಸುಂದರ ಬಿದರಕುಂದಿ

ಕರ್ನಾಟಕ ಸರ್ಕಾರ

ಕನ್ನಡ ಪುಸ್ತಕ ಪ್ರಾಧಿಕಾರ

ಬೆಂಗಳೂರು

SHIVESWARA DODDAMANI : JEEVANA-SAHITHYA an anthology of literary text and biographical notes on Shiveswara Doddamani (1925-1950) Edited by: Dr. Shyamsundar Bidarakundi, Gadag. Published by Mallikarjuna Swamy V. N. Administrative Officer Kannada Pusthaka Pradhikara, Bangalore-18 December 2000.

Pages : xxvi + 222=246

ಬೆಲೆ : ರೂ. ೬೦=೦೦

ISBN : 81-7713-050-01

ಪ್ರಥಮ ಮುದ್ರಣ : ೨೦೦೦

ಪ್ರತಿಗಳು : ೧೦೦೦

ಮುಖಪುಟ ವಿನ್ಯಾಸ ಯು. ಟಿ. ಸುರೇಶ
ಚಿತ್ರಕೃಪೆ : ಚೆನ್ನವೀರ ಕಣವಿ

ಅಕ್ಷರ ಜೋಡಣೆ ಮತ್ತು ಮುದ್ರಣ
ಫ. ಶಿ. ಭಾಂಡಗೆ **✆ : 38617**
ತ್ವರಿತ ಮುದ್ರಣ ಆಫ್‌ಸೆಟ್ ಪ್ರಿಂಟರ್ಸ್
ಕಾಗದಗೇರಿ ಓಣಿ, ಗದಗ–582 101
✆ : 37566, 35509 (O), 36578 (R)

ಮುನ್ನುಡಿ

ಜ್ಞಾನ ಸಂಪಾದನೆ ಮತ್ತು ಜ್ಞಾನ ಪ್ರಸಾರಗಳ ಅತ್ಯಂತ ಪ್ರಬಲ ಮತ್ತು ಪರಿಣಾಮಕಾರೀ ಮಾಧ್ಯಮ ಅಕ್ಷರ ಮಾಧ್ಯಮ. ಈ ಮಾಧ್ಯಮದಲ್ಲಿ ಆಹ್ಲಾದ ಕಾರಿಯೂ ಅತ್ಯಾಕರ್ಷಕವೂ ಜೀವನ ಸೌಂದರ್ಯದಾಯಕವೂ ಸಂಸ್ಕೃತಿ ಸಂಪನ್ನವೂ ಬುದ್ಧಿ ಮನಸ್ಸುಗಳ ವರ್ಧಕವೂ ಆದ ಅಪೂರ್ವ ಮಾಧ್ಯಮವೇ ಸಾಹಿತ್ಯ. ನಿತ್ಯ ಪರಿವರ್ತನಶೀಲವಾದ ಜಗತ್ತಿನ ಜ್ಞಾನ ವಿಜ್ಞಾನ ಸಂಸ್ಕೃತಿಗಳನ್ನು ತಲೆಮಾರಿನಿಂದ ತಲೆಮಾರಿಗೆ ಪ್ರವಹಣ ಮಾಡುತ್ತಾ ಮನುಷ್ಯನ ಜೀವನವನ್ನು ಪುಷ್ಟಿಗೊಳಿಸುತ್ತ, ತುಷ್ಟಿಗೊಳಿಸುತ್ತ, ವಿಕಾಸಗೊಳಿಸುತ್ತ, ಪೂರ್ಣತೆಯ ಕಡೆಗೆ ಅವನನ್ನು ಕರೆದೊಯ್ಯು ವುದೇ ಇದರ ಪರಮ ಗುರಿ. ಇಂಥ ಜೀವನೋತ್ಥಾನಕಾರಿಯಾದ ಉತ್ತಮ ಜ್ಞಾನ ಸಂಪತ್ತನ್ನು ವಿಶಿಷ್ಟ ಹಾಗೂ ಅರ್ಥಪೂರ್ಣ ಗ್ರಂಥಗಳ ಮೂಲಕ ಕನ್ನಡ ಓದುಗರಿಗೆ ಒದಗಿಸುವ ಗುರುತರ ಜವಾಬ್ದಾರಿಯನ್ನು 'ಕನ್ನಡ ಪುಸ್ತಕ ಪ್ರಾಧಿಕಾರ' ಹೊತ್ತು ಕೊಂಡು ನಿರ್ವಹಿಸುತ್ತಿದೆ.

ಜ್ಞಾನ, ಸಂಸ್ಕೃತಿ ಮತ್ತು ಸಾಹಿತ್ಯ ಪ್ರಸಾರ ಕಾರ್ಯಕ್ಕೆ ಕರ್ನಾಟಕ ಸರ್ಕಾರ ಬಹು ಹಿಂದಿನಿಂದ ಒತ್ತಾಸೆ ನೀಡುತ್ತ ಬಂದಿದೆ. ಈ ಮೌಲಿಕ ಪರಂಪರೆಯನ್ನು ಆರಂಭಿಸಿದ ಕೀರ್ತಿ ಕರ್ನಾಟಕ ಕಂಡ ಅತ್ಯಂತ ದಕ್ಷ ಹಾಗೂ ದೂರದೃಷ್ಟಿಯ ಮುಖ್ಯಮಂತ್ರಿಗಳಲ್ಲಿ ಒಬ್ಬರಾದ ಶ್ರೀ ಕೆಂಗಲ್ ಹನುಮಂತಯ್ಯ ಅವರಿಗೆ ಸಲ್ಲಬೇಕು. ಕನ್ನಡದ ಶ್ರೀಮಂತ ಸಾಂಸ್ಕೃತಿಕ ಪರಂಪರೆಯ ಶ್ರೇಷ್ಠ ಗ್ರಂಥಗಳನ್ನು ಸುಲಭ ಬೆಲೆಯಲ್ಲಿ ಓದುಗರಿಗೆ ತಲುಪಿಸುವ ಸುತ್ತ್ಯ ಕಾರ್ಯವನ್ನು ಅಂದಿನಿಂದ ನಿರ್ವಹಿಸುತ್ತ ಬಹುಬೇಡಿಕೆಯ ನೂರಾರು ಕೃತಿಗಳನ್ನು ಸರ್ಕಾರ ಪ್ರಕಟಿಸಿ ಜನಮನ್ನಣೆಯನ್ನು ಗಳಿಸಿದೆ.

ಇದುವರೆಗೆ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಪ್ರಕಟಿಸುತ್ತಿದ್ದ ಇಂಥ ಪ್ರಾಚೀನ ಹಾಗೂ ಆಧುನಿಕ ಜನಪ್ರಿಯ ಪುಸ್ತಕಗಳನ್ನು ಈಗ ಕನ್ನಡ ಪುಸ್ತಕ ಪ್ರಾಧಿಕಾರ ಪ್ರಕಟಿಸುತ್ತಿದೆ. ಅಲಭ್ಯವಾಗಿರುವ ಹಾಗೂ ಬಹುಬೇಡಿಕೆಯ ಸಾಹಿತ್ಯಮೌಲ್ಯ ಮತ್ತು ವೈಚಾರಿಕ ಮೌಲ್ಯಗಳನ್ನು ಒಳಗೊಂಡಿರುವ ಕೃತಿಗಳನ್ನು ಅತ್ಯಂತ ಕಡಿಮೆ ಬೆಲೆಯಲ್ಲಿ ಕನ್ನಡ ಸಹೃದಯರಿಗೆ ನೀಡುವುದೇ ಈ ಜನಪ್ರಿಯ ಪುಸ್ತಕ ಮಾಲೆಯ ಮುಖ್ಯೋದ್ದೇಶ.

ಈ ಮಾಲೆಯಲ್ಲಿ ಇದೀಗ ಶ್ರೀ ಶಿವೇಶ್ವರ ದೊಡ್ಡಮನಿಯವರ ಕೃತಿ ಸಂಪುಟ ಪ್ರಕಟವಾಗುತ್ತಿರುವುದು ಸಂತೋಷದ ಸಂಗತಿ. (ಉತ್ತರ ಕರ್ನಾಟಕದಲ್ಲಿ ಹುಟ್ಟಿ, ತಮ್ಮ ಬದುಕಿನ ಇಪ್ಪತ್ತೈದನೆಯ ವಯಸ್ಸಿಗೆ ಕಣ್ಮರೆಯಾದ ಶ್ರೀ ಶಿವೇಶ್ವರ ದೊಡ್ಡಮನಿ ಯವರು ಆಗ ಅತ್ಯಂತ ಪ್ರಖರವಾಗಿದ್ದ ಪ್ರಗತಿಶೀಲ ಸಾಹಿತ್ಯ ಚಳುವಳಿಯಲ್ಲಿ ಕಾಯಾ–ವಾಚಾ–ಮನಸಾ ಪಾಲ್ಗೊಂಡು ಜನಪರ ಹೋರಾಟಗಳಲ್ಲಿ ಮತ್ತು ಜನಪರವಾದ ಸಾಹಿತ್ಯ ರಚನೆಯಲ್ಲಿ ತನ್ನನ್ನು ತೊಡಗಿಸಿಕೊಂಡ ಕ್ರಿಯಾಶಾಲಿ ಲೇಖಕ. ಅ. ನ. ಕೃ., ತ. ರಾ. ಸು., ಬಸವರಾಜ ಕಟ್ಟೀಮನಿ, ನಿರಂಜನ ಮುಂತಾದ ಕನ್ನಡದ ಅಗ್ರಮಾನ್ಯ ಲೇಖಕರು ಪಾಲ್ಗೊಂಡಿದ್ದ ಈ ಸಾಹಿತ್ಯಕ ಚಳುವಳಿಯಿಂದ

ಪ್ರಭಾವಿತರಾಗಿ ಸಾಹಿತ್ಯವು ಜನಜೀವನದ ಸಮರ್ಥ ಪ್ರತಿಬಿಂಬವಾಗಬೇಕೆಂಬ ತೀವ್ರ ಹಂಬಲದಿಂದ ಹುಟ್ಟಿಕೊಂಡ ಈ ಸಾಹಿತ್ಯ ಪರಂಪರೆ ಹುಟ್ಟು ಹಾಕಿದ ಆದರ್ಶವಾದಿ ಯುವಲೇಖಕರಲ್ಲಿ ದೊಡ್ಡಮನಿಯವರೂ ಒಬ್ಬರು.) ಇದರ ಜೊತೆಗೆ ಕಮ್ಯುನಿಸ್ಟ್ ಪಕ್ಷದ ಸಕ್ರಿಯ ಕಾರ್ಯಕರ್ತರಾಗಿಯೂ ದುಡಿದ ಈ ಲೇಖಕರು ಬಡವರ, ಕೂಲಿಕಾರರ, ಕೆಳವರ್ಗದವರ ಸಂಘಟನೆಗಾಗಿ ಶ್ರಮಿಸಿದವರು. ಧಾರವಾಡ ತಾಲ್ಲೂಕಿನ ನವಿಲೂರು ಗ್ರಾಮದ ಈ ಯುವಚೇತನ ಹಳ್ಳಿಯ ಸಹೃದಯದಲ್ಲಿ ಹುಟ್ಟಿಕೊಂಡ, ಬದುಕಿನ ಜೀವಂತ ಪ್ರತೀಕವಾದ ಜಾನಪದ ಸಾಹಿತ್ಯವನ್ನು ಸಂಗ್ರಹಿಸಿದರು. ಸ್ವತಃ ಕವಿಗಳಾಗಿ ರಚಿಸಿದ ಕವಿತೆಗಳನ್ನು, ಜನಪದ ಹಾಡುಗಳನ್ನು ಅಂದಿನ ಜಯಂತಿ, ಜೀವನ ಮುಂತಾದ ಪತ್ರಿಕೆಗಳಲ್ಲಿ ಪ್ರಕಟಿಸಿದರು. ಪತ್ರಿಕಾಕಾರರೂ ಆಗಿ ಜನರ ನೋವು–ನಲಿವುಗಳಿಗೆ ಸ್ಪಂದಿಸಿ, ಪತ್ರಿಕೆಯ ಮೂಲಕ ತೋಡಿಕೊಂಡರು. ಆನಂತರ ದೈಹಿಕ ತೊಂದರೆಗಳು ಹಾಗೂ ಆರ್ಥಿಕ ಅಡಚಣೆಗಳಿಂದ ನೊಂದು, ಬೆಂದು ಅನಿರೀಕ್ಷಿತವಾಗಿ ಸಾವನ್ನಪ್ಪಿದರು. (ಆ ಕಾಲದ ಧಾರವಾಡದ ಪರಿಸರದ ಮುಖ್ಯಕವಿಗಳ ಪ್ರೀತಿ–ಸ್ನೇಹಗಳನ್ನು ಸಂಪಾದಿಸಿದ ಈ ಯುವಕ ಹೊಟ್ಟೆ–ಬಟ್ಟೆಯ ಬವಣೆಗಾಗಿ ಹಲವಾರು ಕಡೆ ದುಡಿದು, ಆ ದುಡಿಮೆಯ ದಣಿವಿನಲ್ಲೇ ಸಾಹಿತ್ಯ ಸೃಷ್ಟಿಯ ಚಿಲುಮೆಯನ್ನು ಚಿಮ್ಮಿಸಿದರು; ಹಲವಾರು ಸಾನೆಟ್‌ಗಳನ್ನು, ಕಥೆ ಹಾಗೂ ಲೇಖನಗಳನ್ನು ರಚಿಸಿದರು. ಅದರ ಜೊತೆಗೆ ಅಮೂಲ್ಯವಾದ ಜನಪದ ಗೀತೆಗಳನ್ನೂ ಸಂಗ್ರಹಿಸಿದ್ದಾರೆ.) ಅವರ ಕೃತಿಗಳು ಸಂಕಲನಗಳಾಗಿ ಬೆಳಕು ಕಾಣುವ ಮೊದಲೇ ಅವರು ನಿಧನರಾದರು. ಶ್ರೀ ಬಸವರಾಜ ಕಟ್ಟೀಮನಿ ಅವರು ಮತ್ತು ಶ್ರೀ ಚನ್ನವೀರ ಕಣವಿಯವರು ದೊಡ್ಡಮನಿಯವರ ಕೆಲವು ಕವನಗಳನ್ನು ಆಯ್ದು, ಅವರು ನಿಧನರಾದ ಮೇಲೆ 'ನವಿಲೂರ ಮನೆಯಿಂದ' ಎಂಬ ಗ್ರಂಥವನ್ನು ಹೊರತಂದರು. ಅದು ಜನಪದ ಸಾಹಿತ್ಯದ ಪ್ರಾರಂಭಿಕ ಸುಂದರ ಸಂಗ್ರಹಗಳಲ್ಲಿ ಒಂದಾಯಿತು. (ಈಗ ಶ್ರೀ ಶಿವೇಶ್ವರ ದೊಡ್ಡಮನಿಯವರ ಎಲ್ಲಾ ಬರಹಗಳನ್ನು ಈ ಸಂಪುಟದಲ್ಲಿ ಸಮಗ್ರವಾಗಿ ಸೇರ್ಪಡೆ ಗೊಳಿಸಲಾಗಿದೆ.) ನಮ್ಮ ಪ್ರಸಿದ್ಧ ಕವಿ–ಲೇಖಕರಲ್ಲಿ ಒಬ್ಬರಾದ ಶ್ರೀ ಶ್ಯಾಮಸುಂದರ ಬಿದರಕುಂದಿಯವರು ಈ ಸಂಕಲನವನ್ನು ತುಂಬಾ ಶ್ರದ್ಧೆ ಶ್ರಮ, ಪ್ರೀತಿಗಳಿಂದ ಸಿದ್ಧಪಡಿಸಿಕೊಟ್ಟು, ತರುಣ ವಯಸ್ಸಿನಲ್ಲಿಯೇ ಕಮರಿ ಹೋದ ಈ ಯುವಕವಿಯ ಪರಿಚಯವನ್ನು ಕನ್ನಡಲೋಕಕ್ಕೆ ಪರಿಣಾಮಕಾರಿಯಾಗಿ ಮಾಡಿಕೊಟ್ಟಿದ್ದಾರೆ. ಸುವಿಖ್ಯಾತ ಕವಿಗಳಾದ ಶ್ರೀ ಚನ್ನವೀರ ಕಣವಿಯವರು ಈ ಸಂಕಲನವನ್ನು ಪ್ರಕಟಿಸಲು ಪ್ರೇರಣೆ ನೀಡಿದ್ದಾರೆ.

ಕನ್ನಡ ಪುಸ್ತಕ ಪ್ರಾಧಿಕಾರದ ಸಹೃದಯ ಸದಸ್ಯರು ಇದರ ಪ್ರಕಟಣೆಗೆ ಅನುಮತಿಸಿದ್ದಾರೆ. ಅಚ್ಚುಕಟ್ಟಾದ ಮುದ್ರಣಕ್ಕೆ ಹೆಸರಾದ ಗದುಗಿನ 'ತ್ವರಿತ ಮುದ್ರಣಾಲಯದ' ಶ್ರೀ ಫ. ಶಿ. ಭಾಂಡಗೆಯವರು ಮತ್ತು ಅವರ ಸಿಬ್ಬಂದಿ ವರ್ಗದವರು ಅಲ್ಪಕಾಲದಲ್ಲಿಯೇ ಇದನ್ನು ಸುಂದರವಾಗಿ ಮುದ್ರಿಸಿಕೊಟ್ಟಿದ್ದಾರೆ. ಇವರೆಲ್ಲರಿಗೂ ನನ್ನ ಹೃತ್ಪೂರ್ವಕ ನಮನಗಳು.

೧೬–೧೧–೨೦೦೦
ಬೆಂಗಳೂರು.

ಡಾ. ಎಚ್. ಜೆ. ಲಕ್ಕಪ್ಪಗೌಡ
ಅಧ್ಯಕ್ಷರು
ಕನ್ನಡ ಪುಸ್ತಕ ಪ್ರಾಧಿಕಾರ

ಅನುಕ್ರಮಣಿಕೆ

ಮುನ್ನುಡಿ iii
ಅರಿಕೆ ix–xi
ಶಿವೇಶ್ವರ ದೊಡ್ಡಮನಿ : ಜೀವನ xiii–xxi
ಸಾಹಿತ್ಯ ಸಾಧನೆ xxii
ಭಾವಗೀತೆಗಳು xxv

ಭಾಗ-ಒಂದು

ಶಿವೇಶ್ವರ ದೊಡ್ಡಮನಿ : ಸಾನೆಟ್‌ಗಳು

೧. ಚೆಂಬೆಳಕು (೧) ೩
೨. ಕವಿ ಕೆಲಸ ೪
೩. ಕವಿತೆಗೆ ೫
೪. ಕಣ್ಣಿಗೆ ೬
೫. ರಾಜಮಾ ೭
೬. ಸರೋಜಿನಿಗೆ (೧) ೮
೭. ಸರೋಜನಿಗೆ (೨) ೯
೮. ಮೂಜಗಕೆ ಮಾದರಿಯು (೧) ೧೦
೯. ಮೂಜಗಕೆ ಮಾದರಿಯು (೨) ೧೧
೧೦. ಜಾನಪದ ಸಾಹಿತ್ಯವನು ನೆನೆದು ೧೨
೧೧. ಮೀಟ್ ಮೈ ಪೀಪಲ್ ೧೩
೧೨. ನಡುರಾತ್ರಿ ಕನಸಿನಲಿ ೧೪
೧೩. ಜೀವನುಡಿ ೧೫
೧೪. ನನ್ನವರಿಗೆ ೧೬
೧೫. ಸಂಕ್ರಾಂತಿ ೧೭
೧೬. ಮಾರ್ಕ್ಸಿಂಗಾರ್ಕಿ ೧೮
೧೭. ಬಾಪೂ ೧೯
೧೮. ಸ್ವಪ್ನ – ಸಂದೇಶ ೨೦
೧೯. ಗ್ರಾಯತ್ರಿ ಮಂತ್ರಿವೀ ೨೧
೨೦. ನಮ್ಮ ಒಲವು ೨೨
೨೧. ಧಿಃಕ್ಕಾರ ! ೨೩
೨೨. ವಿಜಯ ದಶಮಿ ೨೪
೨೩. ನವಿಲೂರ ತಾಯಿಗೆ (೧) ೨೫
೨೪. ನವಿಲೂರ ತಾಯಿಗೆ (೨) ೨೬

೨೫. ವಾತ್ಸಲ್ಯವಾರಿಧಿ ೨೭
೨೬. ಪ್ರತಿಕ್ರಿಯೆ ೨೮
೨೭. ಮಮತೆಯ ಶೃತಿ ೨೯
೨೮. ಮೂಜಗಕೆ ಮಾದರಿಯು (೩) ೩೦
೨೯. ಕುವೆಂಪುವಿಗೆ ೩೧
೩೦. ರಕ್ತ ಸಂದೇಶ ೩೨
೩೧. ನಮ್ಮ ಉದ್ಘೋಷ ೩೩
೩೨. ಒಳದನಿ ೩೪

ಭಾಗ- ಎರಡು

ಭಾವಗೀತೆಗಳು – ಗಾಂಜ್ಬಡ್ಕನ ಪದಗಳು

೩೩. ನವಿಲೂರು ನಕ್ಕಿತ್ತು ೩೭
೩೪. ಮಡದಿಗೆ ೩೮
೩೫. ಉಷೆ ೩೯
೩೬. ಕೋಗಿಲೆ ೪೦
೩೭. ಸುಸ್ವಾಗತ ೪೧
೩೮. ನಲ್ಲೆಗೆ ೪೨
೩೯. ನಮ್ಮೊಲುಮೆ ಕನಸ ತೋರು ೪೫
೪೦. ನೀಗೀತೆ, ಮಂಕುಮಾಟ ? ೪೬
೪೧. ಜನಪದ ನುಡಿ–ಬೆಡಗಿಗೆ ೪೭
೪೨. ಅಭಿಮಾನ ೪೮
೪೩. ಯಾವ ಕಾರಣ ? ೪೯
೪೪. ಕಾಳಿ ೫೧
೪೫. ನನ್ನ ಆಸೆ...... ೫೫
೪೬. ಗಿರಿಯನೇರಲಾರೆಯ ? ೫೭
೪೭. ವಿಜಯೀ ಭಾವ ೫೯
೪೮. ವಿರಹಿಣಿಯ ಕನಸು ೬೧
೪೯. ಬರಗಾಲ ೬೨
೫೦. ಎದೆಗುದಿ ೬೩
೫೧. ನಾ ನಿನ್ನ ಮಗನಲ್ಲ ೬೪
೫೨. ಕುರುಡು ಬೆಳಕಿಗೆ (೧) ೬೫
೫೩. ಕುರುಡು ಬೆಳಕಿಗೆ (೨) ೬೬
೫೪. ಕುರುಡು ಬೆಳಕಿಗೆ (೩) ೬೭
೫೫. ತಪ್ಪದೀ ತೊಳಲಾಟ ೬೯
೫೬. ತಾಯಿಗೆ ೭೦

೫೭. ಏಕೆ ? ೭೨
೫೮. ಕರುಣೆಸೊಡೆಯ ೭೩
೫೯. ನನ್ನ ಮುರುವು ೭೪
೬೦. ಒಂದುಸುರಲಿಲ್ಲ ೭೫
೬೧. ವೀರ ಕಹಳೆ ೭೬
೬೨. ಜೀವನ–ಪ್ರೇರಣೆ ೭೮
೬೩. ಸಣ್ಣ ಸಣ್ಣ ಪದ್ಯಗಳು ೭೯
೬೪. ಇನ್ನೊಂದೀಽಽಽಽಽಟ ಪಲ್ಲೆ ೮೨
೬೫. ಜೀತದಾಳು ೮೩
೬೬. ಮೌನಗೊಳ್ಳು ೮೪
೬೭. ದೇವೇಂದ್ರ ಸತ್ಯಾರ್ಥಿ ೮೫
೬೮. ಸ್ವಪ್ನ ಪೂಜೆ ೮೬
೬೯. ಉತ್ರಾ ಕೊಡ್ಬಾ ಗೆಳೆಯ ೮೭
೭೦. ಗಾಂಜಿ ೯೦
೭೧. ಬಡವ್ರು ೯೧
೭೨. ಬದ್ಲಾವ್ಣಿ ೯೩
೭೩. ಕೂಳಿನ್‌ಕಾಳ್ಗ ೯೪

ಭಾಗ-ಮೂರು
ಲೇಖನಗಳು ಹಾಗೂ ಕತೆಗಳು

೭೪. ಜಾನಪದ ಸಾಹಿತ್ಯ ೯೭
೭೫. ಜಾನಪದ ಸಾಹಿತ್ಯದಲ್ಲಿ ಸೌಂದರ್ಯ ೯೯
೭೬. ಜಾನಪದ ಸಾಹಿತ್ಯದಲ್ಲಿ ಸೌಂದರ್ಯ ೧೦೩
೭೭. ರಾಯಾಪುರದಲ್ಲಿ ಸಂಗ್ರಾಹಕ ೧೦೮
೭೮. ರಾಜಮಾ (ಸಣ್ಣಕತೆ) ೧೧೧
೭೯. ನಮ್ಮ ನಡುವಿನ ಗೋಡೆ (ಅನುವಾದ) ೧೨೪

ಭಾಗ-ನಾಲ್ಕು
ತ್ರಿಪದಿಗಳು, ಹಾಡುಗಳು

೮೦. ನಗೆನಾಡು ೧೩೩
೮೧. ಸುಖ–ದುಃಖ ೧೩೪
೮೨. ನಾಡ–ಸಿರಿ ೧೩೫
೮೩. ಒಡನಾಡಿ ೧೩೬
೮೪. ತವರಿಗೆ ಬಂದ ತರುಣೆಗೆ ೧೩೭
೮೫. ತವರು ಬಿಡುವ ತರುಣೆಗೆ ೧೩೮

೮೬.	ಹೆಣ್ಣು ಹೃದಯ	೧೪೦
೮೭.	ಮನದನ್ನೆ	೧೪೧
೮೮.	ಶೃಂಗಾರ	೧೪೪
೮೯.	ವಿರಹ	೧೪೬
೯೦.	ವಿಧವೆಯ ಬಾಳು	೧೫೦
೯೧.	ಅಲ್ಲೀಕೆರಿ	೧೫೨
೯೨.	ದೇವರು	೧೫೫
೯೩.	ಮಡದಿ	೧೫೭
೯೪.	ತಾಯಿಯ ಹಾಡುಗಳು	೧೫೯
೯೫.	ಸುವ್ವಿಲಾಲಿ	೧೬೫
೯೬.	ವೀರಗೀತೆ	೧೬೭
೯೭.	ಬಸವಣ್ಣ	೧೬೯
೯೮.	ತಮ್ಮಂದಿರು	೧೭೧
೯೯.	ಮಲ್ಲಯ್ಯ	೧೭೩
೧೦೦.	ತಾಯಿ–ಮಗು	೧೭೫
೧೦೧.	ಅಣ್ಣಂದಿರು	೧೭೭
೧೦೨.	ಹನುಮಂತ	೧೭೯
೧೦೩.	ಮುಂಜಾವು	೧೮೧
೧೦೪.	ಯಾವುರ್‍ಗೆ ಕೊಡಲವ್ವ	೧೮೩
೧೦೫.	ದ್ಯಾಮವ್ವ–ದುರಗವ್ವ	೧೮೫
೧೦೬.	ಪರಮ ಪತಿವ್ರತೆ ಸೀತೆ	೧೮೭
೧೦೭.	ವಿಧವೆ	೧೮೮
೧೦೮.	ಬುಡಬುಡಕ್ಯಾ	೧೯೦
೧೦೯.	ಬೆಕ್ಕು	೧೯೧
೧೧೦.	ಗಡಿಗಿ	೧೯೨
೧೧೧.	ಮುಡಸ್ಕೋಳೋ ಕಾಳ !	೧೯೩

ಭಾಗ-ಐದು ಅನುಬಂಧ

ನೆನಪು, ಶ್ರದ್ಧಾಂಜಲಿ

೧೧೨.	ಆ ಗಿಡಾ, ಈ ಗಿಡಾ........ಚೆನ್ನವೀರ ಕಣವಿ	೧೯೭
೧೧೩.	ಚರಮಗೀತ.................ಚೆನ್ನವೀರ ಕಣವಿ	೨೦೦
೧೧೪.	ಶಿವೇಶ್ವರನ ಸಾವು.....ಬಸವರಾಜ ಕಟ್ಟೀಮನಿ	೨೦೪
೧೧೫.	ಹೊಸ ಕತೆಗಾರರು...............ವಾಸುದೇವ	೨೧೧
೧೧೬.	ಸೋದರ ಶಿವೇಶ್ವರ...............'ನಿರಂಜನ'	೨೧೩

ಅರಿಕೆ

ಶಿವೇಶ್ವರ ದೊಡ್ಡಮನಿ : ಮೂವತ್ತೈದು ವರ್ಷದ ಹಿಂದೆ 'ನವಿಲೂರ ಮನೆಯಿಂದ' ಎಂಬ ಪುಸ್ತಕದ ತಲೆಬರಹದ ಜತೆ ಮತ್ತೆ ಮತ್ತೆ ನೆನಪಾಗುತ್ತಿದ್ದ ಒಂದು ಹೆಸರು ಮಾತ್ರ ಆಗಿತ್ತು ನನ್ನ ಮಟ್ಟಿಗೆ. 'ಅವರ್‍ಯಾರೋ ಹಳ್ಳಿಗಾಡಿನ ಒಬ್ಬ ಸಾಮಾನ್ಯ ಕವಿಯಾಗಿದ್ದಿರಬೇಕು' ಎಂಬ ತಿಳುವಳಿಕೆಯ ಪರಿಣಾಮ ಅದು. ಬಸವರಾಜ ಕಟ್ಟೀಮನಿಯವರು ತಮ್ಮ 'ಕಾದಂಬರಿಕಾರನ ಕಥೆ' (೧೯೮೧)ಯಲ್ಲಿ ಒಂದು ಕಡೆಗೆ ಶಿವೇಶ್ವರರ ಬಗ್ಗೆ ಉಲ್ಲೇಖಿಸಿದ್ದನ್ನು ಓದಿಕೊಂಡಾಗ ಮಾತ್ರ ದೊಡ್ಡಮನಿಯವರ ಬಗೆಗಿನ ನನ್ನ ತಿಳುವಳಿಕೆ ಗಮನಾರ್ಹವಾಗಿ ಬದಲಾಯಿತು. ಅಲ್ಲಿ ಕಟ್ಟೀಮನಿಯವರು– ಬರೆದ ಮಾತುಗಳು ಹೀಗಿವೆ :

''ಶಿವೇಶ್ವರ ದೊಡ್ಡಮನಿ ಭಾವಜೀವಿ ; ಕವಿ ; ಜನಪದ ಕಾವ್ಯ ಸಂಗ್ರಾಹಕ. ಪರೋಪಕಾರವೇ ಆತನ ಪ್ರಮುಖ ಗುಣ. ಸಮತಾವಾದದಲ್ಲಿ ಪೂರ್ಣನಿಷ್ಠೆ. ತಾರುಣ್ಯದಲ್ಲೇ ಕಣ್ಣಿನ ಶಕ್ತಿ ಕುಂದಿ ಹೋಗಿದ್ದುದರಿಂದ ಆತ ಅದನ್ನೇ ಮನಸ್ಸಿಗೆ ಹಚ್ಚಿಕೊಂಡು ಕೊರಗಿ ಕೊರಗಿ ತೀರಿಕೊಂಡ............... ಎಲ್ಲ ಲೇಖಕರ ಬಗೆಗೂ ಆತನಿಗೆ ಅಪಾರ ಪ್ರೀತಿ, ಅಭಿಮಾನ. ಆಗ ವಿದ್ಯಾರ್ಥಿಯಾಗಿದ್ದ ಕಣವಿಯವರ ಕೋಣೆಯಲ್ಲಿಯೇ ಆತನ ವಾಸ. ''ಪ್ರಗತಿಶೀಲ ಸಾಹಿತ್ಯ ಮಾಲೆ'' ಬದುಕಿದ್ದಷ್ಟು ದಿನವೂ ಶಿವೇಶ್ವರ ಅದಕ್ಕಾಗಿ ಪ್ರತಿಫಲವಿಲ್ಲದೆ ದುಡಿದ. ಇಂತಹ ಸ್ನೇಹಜೀವಿಗಳು ಈ ಲೋಕದಲ್ಲಿ ವಿರಳ''. *(ಪು. ೨೭೬–೭೭)*

ಅನಂತರ, ಶಿವೇಶ್ವರರ ಬಗೆಗೆ ತಿಳಿಯುವ ಮತ್ತು ಅವರ ಕವಿತೆ ಓದುವ ಕುತೂಹಲ ಹುಟ್ಟಿ, ಹಿರಿಯರಾದ ಚೆನ್ನವೀರ ಕಣವಿಯವರನ್ನು ವಿಚಾರಿಸಿದೆ. ಕಣವಿಯವರು ೪೫ ವರ್ಷಗಳ ಹಿಂದಿನ ದಿನಗಳನ್ನು ನೆನಪಿಸಿಕೊಂಡು ಶಿವೇಶ್ವರರ ಬಗೆಗೆ ಹಲವಾರು ಸಂಗತಿಗಳನ್ನು ಹೇಳುತ್ತ ''ಆತ ಇಂದಿಗೂ ಬದುಕಿ, ಬರವಣಿಗೆಯಲ್ಲಿ ತೊಡಗಿದ್ದಿದ್ದರೆ, ನಿಸ್ಸಂಶಯವಾಗಿ ನಮ್ಮ ನಡುವಿನ ಮಹತ್ವದ ಕವಿ ; ಅಷ್ಟೇ ಏಕೆ, 'ಕ್ರಾಂತಿಕಾರಿ ಕವಿ' ಅನಿಸಿಕೊಳ್ಳುತ್ತಿದ್ದರು'' ಎಂದರು. ಬದುಕಿದ್ದಾಗ ತನ್ನ ಒಂದೂ ಪುಸ್ತಕವನ್ನು ಹೊರತರಲಾಗದ ಆ ಕವಿಯನ್ನು ದಾಖಲಿಸಬೇಕೆಂಬ ದೃಷ್ಟಿಯಿಂದ ಕಟ್ಟೀಮನಿ ಮತ್ತು ಕಣವಿಯವರು ೧೯೫೬ರಲ್ಲಿ ''ನವಿಲೂರ ಮನೆಯಿಂದ'' ಕವಿತೆಗಳ ಮೊದಲ ಸಂಕಲನವನ್ನು ಪ್ರಕಟಿಸಿದರು. ಶಿವೇಶ್ವರರ ಹೃದಯದ ಒಂದು ಭಾಗವಾಗಿಯೇ ಆಗಿದ್ದ ಕುಳಕುಂದ ಶಿವರಾಯರು ('ನಿರಂಜನ') ತಮ್ಮ ''ಪುರೋಗಾಮಿ ಪ್ರಕಾಶನ''ದ ಪರವಾಗಿ ೧೯೫೧ ರಲ್ಲಿ ''ನಮ್ಮ ನಡುವಿನ ಗೋಡೆ'' ಕಥಾ ಸಂಕಲನ ಪ್ರಕಟಿಸಿ ದೊಡ್ಡಮನಿಯವರು ಭಾವಾನುವಾದ ಮಾಡಿದ್ದ ಒಂದು ಬಂಗಾಲೀ ಸಣ್ಣಕತೆಯನ್ನು ಅದರಲ್ಲಿ ಸೇರಿಸಿದ್ದರು. ಸಂಕಲನದ ಮುನ್ನುಡಿಯಲ್ಲಿ ಕುಳಕುಂದರು ಬರೆದ ಮಾತುಗಳು ಹೃದಯಸ್ಪರ್ಶಿಯಾಗಿವೆ. ಮುಂದೆ ೧೯೮೦ರಲ್ಲಿ ಇದೇ ಕುಳಕುಂದ ಶಿವರಾಯರು 'ನಿರಂಜನ'ರಾಗಿ ಸಂಪಾದಿಸಿದ ವಿಶ್ವಕಥಾಕೋಶ

ಮಾಲಿಕೆಯ ಮೊದಲನೇ ಸಂಪುಟ : 'ಧರಣಿ ಮಂಡಲ ಮಧ್ಯ ದೊಳಗೆ' (ಕನ್ನಡದ ಸಮಾಜವಾದೀ ನಿಲುವಿನ ಸಣ್ಣಕತೆಗಳ ಒಂದು ಪ್ರಾತಿನಿಧಿಕ ಸಂಕಲನ) ಕೃತಿಯಲ್ಲಿ ಶಿವೇಶ್ವರರ 'ರಾಜಮಾ' ಕತೆಯನ್ನು ಸೇರಿಸಿದ್ದಾರೆ. ಇಷ್ಟು ಮುದ್ರಿತ ದಾಖಲೆ ಬಿಟ್ಟರೆ ಬಹುಮಟ್ಟಿಗೆ ಶಿವೇಶ್ವರ ದೊಡ್ಡಮನಿ ನಮ್ಮ ಪಾಲಿಗೆ ಒಬ್ಬ ಅಜ್ಞಾತ ಕವಿ ಅಥವಾ ಲೇಖಕ.

ಹೊಸಗನ್ನಡದ ಎರಡನೆಯ ಕಾವ್ಯಘಟ್ಟವಾದ 'ಪ್ರಗತಿಶೀಲತೆ'ಯ ಧಾರೆಯಲ್ಲಿ ಕವಿಗಳೇ ಅಪರೂಪ. ವಿ. ಜಿ. ಭಟ್ಟ, ಸು. ರಂ. ಎಕ್ಕುಂಡಿ, ಗಂಗಾಧರ ಚಿತ್ತಾಲರಂಥ ಕೆಲವರು ಪ್ರಗತಿಶೀಲತೆಗೆ ದನಿಗೂಡಿಸಿ ಧ್ವನಿಪೂರ್ಣ ಕವನಗಳನ್ನು ಕೊಟ್ಟ ಅಪೂರ್ವ ಕವಿಗಳು. ಅವರಷ್ಟೇ ಪ್ರಖರವಾಗಿ, ತಾತ್ತ್ವಿಕ ನೆಲೆ–ನಿಷ್ಠೆಗಳಿಂದ ಕವಿತೆ ಬರೆದವರು ಶಿವೇಶ್ವರ. ಸ್ವತಃ ಕಷ್ಟ–ನಿಷ್ಠುರದ ನಿರಂತರ ಬದುಕನ್ನೇ ಸವೆಸಿದ ದೊಡ್ಡಮನಿಯವರಲ್ಲಿ ಜನಪರ ಹೋರಾಟದ ಕೆಚ್ಚು ಜ್ವಲಂತವಾಗಿತ್ತು. ಆ ಕೆಚ್ಚನ್ನು ಕಾವ್ಯದ ಕಿಚ್ಚಿನಲ್ಲಿ ಕಾಯಿಸಿ, ಬಡಿದು ಹದವಾಗಿ ತಿಕ್ಕಿ ತೀಡಿ ಹಲವಾರು ಚೂಪಾಸ್ತ್ರದ 'ಸಾನೆಟ್' ರೂಪದ ಪದ್ಯಗಳನ್ನವರು ಬರೆದರು. 'ಜನಶಕ್ತಿ' ಪತ್ರಿಕೆಯ ಸಂಪಾದಕರಲ್ಲೊಬ್ಬರಾಗಿ ಮುದ್ರಣಾಲಯದ ಗದ್ದಲ, ಗಡಿಬಿಡಿಗಳ ನಡುವೆಯೇ ಅವರು ತಮ್ಮ ಉರಿಯುವ ಮೌನಕ್ಕೆ ಮಾತಿನ ದೀಪ ಮುಡಿಸಿದರು. ಆ ದಿನಗಳ ಅವರ ಕವನಗಳ ಇಂದಿನ ನಮ್ಮ ಓದುವಿಕೆಯು ಆ ಕವಿಯ ಕಾಲ ಮತ್ತು ಪರಿಸ್ಥಿತಿಯ ಚಿತ್ರಣದ ಪ್ರತ್ಯಕ್ಷ ದರ್ಶನವೇ ಆಗುವಂತಿದೆ.

ಸಾಯುವ ಕೆಲವು ದಿನಗಳ ಮುಂಚೆ ಶಿವೇಶ್ವರರು ''ಜನಶಕ್ತಿ'', ''ಜಯಂತಿ'', ''ಜೀವನ'' ಮೊದಲಾದ ಪತ್ರಿಕೆಗಳಲ್ಲಿ ಆಗಾಗ ಪ್ರಕಟಗೊಂಡಿದ್ದ ಹಾಗೂ ಅಪ್ರಕಟಿತವಾಗಿದ್ದ ತಮ್ಮ ಕವನಗಳನ್ನೆಲ್ಲ ಸಂಗ್ರಹಿಸಿ, 'ಎದೆಯಾಳದಿಂದ' ಹೆಸರಿಟ್ಟು ಒಂದು ಹಸ್ತಪ್ರತಿಯನ್ನು ತಯಾರಿಸಿದ್ದರು. ಅದು ಪುಸ್ತಕ ರೂಪವಾಗಿ ಹೊರಬರಲಿ ಎನ್ನುವ ಅವರ ಆಸೆ ಬದುಕಿದ್ದಾಗ ನೆರವೇರಲೇ ಇಲ್ಲ. 'ಎದೆಯಾಳದಿಂದ' ಸಂಗ್ರಹ ಹಸ್ತಪ್ರತಿ ರೂಪದಲ್ಲಿ ಚೆನ್ನವೀರ ಕಣವಿಯವರಲ್ಲಿ ಜತನವಾಗಿದ್ದದ್ದು ಈಗ, ಸಮಗ್ರ ರೂಪದಲ್ಲಿ ಪ್ರಕಟವಾಗಲು ಸಹಾಯಕವಾಗಿದೆ. ಅಲ್ಲಲ್ಲಿ ಚೆದುರಿ ಹೋಗಿದ್ದ ಶಿವೇಶ್ವರರ ಗದ್ಯ ಬರಹಗಳನ್ನು ಹಾಗೂ ಪ್ರಕಟಿತ ಪುಸ್ತಕಗಳನ್ನು ಕೂಡ ಕಣವಿಯವರು ಜೋಡಿಸಿ ಕೊಟ್ಟಿದ್ದರ ಪರಿಣಾಮ ಇಂದಿನ ಈ 'ಜೀವನ ಸಾಹಿತ್ಯ'. ತಮ್ಮ ದಿವಂಗತ ಗೆಳೆಯನ 'ಸ್ಮಾರಕ'ದ ಪುನರ್ನೆಲೆಗಾಗಿ ಚೆನ್ನವೀರ ಕಣವಿಯವರು ವಹಿಸಿದ ಮುತುವರ್ಜಿ ಎಷ್ಟೆಂದರೆ, ೮ ವರ್ಷಗಳಿಂದಲೂ ಈ 'ಜೀವನ– ಸಾಹಿತ್ಯ'ವು ಪ್ರಕಟಗೊಳ್ಳಲೇಬೇಕೆಂದು ಸತಾಯಿಸುತ್ತ ಈಗ 'ಕನ್ನಡ ಪುಸ್ತಕ ಪ್ರಾಧಿಕಾರ'ದಿಂದ ಹೊರ ಬರುವಂತೆ ಕಾಳಜಿ–ಕಳಕಳಿಯನ್ನು ವಹಿಸಿದ್ದು. ಸಂಪಾದನೆಯ ಕೆಲಸವನ್ನು ನನಗೆ ಒಪ್ಪಿಸಿದ ಕಣವಿಯವರಿಗೆ ನಾನು ಅತ್ಯಂತ ಆಭಾರಿಯಾಗಿದ್ದೇನೆ.

ಹಸ್ತಪ್ರತಿಯನ್ನು ಮುದ್ರಣಕ್ಕೆ ಅಣಿಗೊಳಿಸುವಲ್ಲಿ ನನ್ನ ವಿದ್ಯಾರ್ಥಿ ಮಿತ್ರ ಎಚ್. ಬಿ. ಪೂಜಾರ ಶ್ರಮವಹಿಸಿದ್ದಾರೆ. ಇದಕ್ಕೆ ಬೆರಳಚ್ಚು ರೂಪ ಕೊಟ್ಟ ಶಂಕರ

ವಾಲ್ಮೀಕಿಯವರ ಸಹಕಾರ ನೆನೆಯುವಂತಹದು. ಶಿವೇಶ್ವರರ ಬದುಕಿನ ವಿವರಗಳನ್ನು ನೀಡಿದ್ದಲ್ಲದೆ ಅವರ ಮನೆ ಮತ್ತು ಮನೆಯವರನ್ನೂ ಪರಿಚಯಿಸಿ, ನನ್ನ ಕಲ್ಪನೆಗೆ ಸಾಕಾರ ರೂಪಕೊಟ್ಟವರು ಅವರ ಸೋದರಳಿಯರಾದ ಶ್ರೀ ಈಶ್ವರ ಬಳ್ಳೂರ (ಸಾ. ನವಲೂರ). 'ಜೀವನ ಸಾಹಿತ್ಯ'ವನ್ನು ಕನ್ನಡ ಪುಸ್ತಕ ಪ್ರಾಧಿಕಾರದಿಂದ ಹೊರ ತರಬೇಕೆಂದು ಒತ್ತಾಸೆ ನೀಡಿದವರು ಡಾ. ದೇವೇಂದ್ರಕುಮಾರ ಹಕಾರಿಯವರು. ಪ್ರಾಧಿಕಾರದ ಅಧ್ಯಕ್ಷರಾದ ಡಾ. ಎಚ್. ಜೆ. ಲಕ್ಕಪ್ಪಗೌಡರು ಈ ಒತ್ತಾಸೆಯನ್ನು ಪ್ರೀತಿಯಿಂದ ನೆರವೇರಿಸಿಕೊಟ್ಟಿದ್ದಾರೆ. ಇವರೆಲ್ಲರಿಗೂ ಹೃತ್ಪೂರ್ವಕ ಧನ್ಯವಾದಗಳು.

೨೬ನೆಯ ಮಾರ್ಚ್, ೨೦೦೦
ಗದಗ

ಶ್ಯಾಮಸುಂದರ ಬಿದರಕುಂದಿ
ಸಂಪಾದಕ

ಹುಡುಗಾಟ ಬಂದಿಲ್ಲ, ಹುಡಿಕಿನಾ ನಿಂದೇನೊ
ನನ್ನವನ ಮುಂದ ಎಲ್ಲೆಲ್ಲೊ | ಒಲವಾದ
ಮಾತುಗಳ್ಳು ನೀನೇ ನಗಿಸ್ಸಿದೆ!

ರಾಜಿಯಾ ಕುಣದವೆ, ತುಂಬಿ ಬಂದವೆ
ನನ್ನ ನಗಿಸ್ತಾಕ ನಿನಮಾತು | ನಗಸ್ಯೆ
ನಗದ ಬಿಚ್ಚಿದ ಮಾತಾಕ!

ನಗತ ಬಂದನಿರಾಯ ನನಗ ತಂದೇನಾ
ನಗತ ಕೊಡುವ ನಗಿಮುಖ | ನನ ಗಾವ
ಬಿಗಪ್ಪಿಕೊಂಡ ಮಾತ ನಿಟ್ಟಿಸಿದ!

ನಕ್ಕಿ ನಿಂಗಾಂದಾದ ಎಲ್ಲಾ ಕಚ್ಚಿದ ಬಾಲ
ನಕ್ಕು ನಲಿಯಾಗ ನನಕಂದ | ನಿಕ್ಕ
ಬಂಗಾರ ಕೈಗೆ ಬೆಳಕಿಟ್ಟ ?

'ಧರ್ಮದ' ರಾಜರ ಗಂಡುಮಕ್ಕಳ್ಳಿಸಿ:
'ಸೋಲಿಲ್ಲ' ಎಂಬ ನಿತ್ಯದ | ಬದುಕ
ಮಾತು ಕಲಿಸಿದ ಅಜ್ಜನ!

ಬಿಂದ ಬಾಗಿಲ | ಧರ್ಮಯುದ್ಧ
ಬಂದ ವೀರಯೋಧನ ಬಿಲ್ಲವನ್ನೆ
ನಿಂದ ನನಕಂದನೆ ನಗಿಸ್ಸು!

ಶಿವೇಶ್ವರ ದೊಡ್ಡಮನಿ : ಜೀವನ

ನವಲೂರು; ತನ್ನ ಈ ಹುಟ್ಟಿದೂರಿಗೆ 'ನವಿಲೂರು' ಎಂಬ ಕಾವ್ಯಮಯ ಹೆಸರನ್ನಿಟ್ಟಿದ್ದವರು ಕವಿ ಶಿವೇಶ್ವರ ದೊಡ್ಡಮನಿ (೧೯೨೫–೧೯೫೦). ಧಾರವಾಡದಿಂದ ಹುಬ್ಬಳ್ಳಿಯ ಕಡೆ ಸಾಗುವ ೪ನೆಯ ರಾಷ್ಟ್ರೀಯ ಹೆದ್ದಾರಿಯ ಎಡಬದಿಗೆ–ಗಿಡಮರಗಳ ಸೊಂಪಾದ ನೆರಳಲ್ಲಿ, ಸದಾ ತುಂಬಿರುವ ಕೆರೆಗಳೆರಡರ ದಂಡೆಯ ಮೇಲೆ ಪವಡಿಸಿದ ಹಳ್ಳಿ ಇದು. ಊರಿನ ಜನಸಂಖ್ಯೆ ಈಗ ಹದಿನೈದು ಸಾವಿರವೆಂದು, ಅಲ್ಲಿಯ ಕಾಯಂ ನಿವಾಸಿ, ಶಿವೇಶ್ವರ ದೊಡ್ಡಮನಿಯವರ ಸೋದರಳಿಯ (ಹೆಂಡತಿಯ ತಮ್ಮ) ಶ್ರೀ ಈಶ್ವರ ಬಳ್ಳೂರ ಹೇಳುತ್ತಾರೆ. ಒಂದು ಕಾಲಕ್ಕೆ ನೇಕಾರಿಕೆಗೆ ಪ್ರಸಿದ್ಧವಾಗಿದ್ದ ನವಲೂರು, ಯಾವತ್ತೋ ಆ ಮೂಲ ಉದ್ಯೋಗಕ್ಕೆ ''ಕೊನೇ ನಮಸ್ಕಾರ'' ಹೇಳಿಬಿಟ್ಟಿದೆ. ಸುತ್ತಮುತ್ತಲಿನ ಫಲವತ್ತಾದ ಹೊಲ, ತೋಟ, ತೋಪುಗಳಲ್ಲಿ ದುಡಿಯುವ ಮಧ್ಯಮ ವರ್ಗದ ರೈತರಿಂದ ಹಾಗೂ ಹುಬ್ಬಳ್ಳಿ–ಧಾರವಾಡಗಳಲ್ಲಿ ನೌಕರಿ ಮಾಡುವ ಜನಗಳಿಂದ ತುಂಬಿರುವ ನವಲೂರು ಈಗ ಸಾಕಷ್ಟು ಸುಧಾರಿಸಿದ ಹಾಗೂ ತಕ್ಕಷ್ಟು ಸಮೃದ್ಧವಾಗಿರುವ ಹಳ್ಳಿ. ಹಳೆಯ ಮಣ್ಣಿನ ಮನೆಗಳೆಲ್ಲ ಮಾಯವಾಗಿ ಕಾಂಕ್ರೀಟು ಕಟ್ಟಡಗಳು ತಲೆ ಎತ್ತುತ್ತಿವೆ, ಹಳ್ಳಿ ಪಟ್ಟಣವಾಗುತ್ತಿದೆ.

ಮುಖ್ಯ ರಸ್ತೆಯಿಂದ ನೂರಾರು ಹೆಜ್ಜೆ ಕೆಳಕ್ಕಿಳಿದರೆ ಎಡಕ್ಕೊಂದು ಚಿಕ್ಕ ಕೆರೆ. ಅದನ್ನೂ ದಾಟಿ ಮುಂದುವರಿದರೆ ಅಂಕುಡೊಂಕಾದ ಮಣ್ಣಿನ ಹಾದಿಗಳ ಇಕ್ಕೆಲದಲ್ಲಿ ನವಲೂರಿನ ಓಣಿಗಳಿವೆ. ಮಣ್ಣಿನ ಮನೆಗಳೇ ಹೆಚ್ಚು. ಕುಬ್ಜ ಬಾಗಿಲುಗಳು, ಕರಿ ಹೆಂಚು ಹೊದ್ದ ಅಂತಹ ಮನೆಗಳ ಸಾಲಿನಲ್ಲಿ ಶಿವೇಶ್ವರರು ಹುಟ್ಟಿ, ಬದುಕಿ–ಬರೆದ ಒಂದು ಹಳೆಯ ಮನೆ ಈಗಲೂ ಇದೆ. ಮನೆಯ ಒಂದೆಡೆ ಜಗುಲಿ; ಇನ್ನೊಂದೆಡೆ ಮಗ್ಗದ ಕುಣಿ ಹಾಕಿದ್ದ ಗುರುತುಗಳು; ಅಡಿಗೆ ಮನೆ. ಹಳೆಯದಾದುದರಿಂದ ನೆಲ–ಗೋಡೆ–ಜಂತಿ ಜೀರ್ಣವಾಗಿವೆ. ೫೦ ವರ್ಷಗಳ ಹಿಂದೆ ಇದು 'ನವಿಲೂರ ಕೋಗಿಲೆ'ಯೊಂದಕ್ಕೆ ಆವಾಸವಾಗಿತ್ತು; ಇದು ಕವಿಗಳ, ಚಳುವಳಿಗಾರರ, ಕಮ್ಯುನಿಸ್ಟ್ ಕಾರ್ಯಕರ್ತರ ಹಾಗೂ ಎಷ್ಟೋ ಜನ ಭೂಗತ ಹೋರಾಟಗಾರರಿಗೆ ಅಡಗುದಾಣವಾಗಿತ್ತು. ಇಂದು ಅದು ಏಕಾಕಿ. ಹಳೆಯಕತೆಗೆ ಕೇವಲ ಒಂದು ಮೂಕ ಸಾಕ್ಷಿ.

ಹುಟ್ಟು

ಇಂತಹ ಮನೆಯಲ್ಲಿ ೧೯೨೫ ರ ಮೇ ೭ ರಂದು ಶಿವಬಸಪ್ಪ ಹುಟ್ಟಿದರು. ತಂದೆ ಈಶ್ವರಪ್ಪ ನೇಕಾರರಾಗಿದ್ದರು. ತಾಯಿ ಚೆನ್ನವೀರಮ್ಮ. ತಂದೆ–ತಾಯಿಯರ ಪಾಲಿಗೆ 'ಶಿವ' ಒಬ್ಬನೇ ಮಗ. ಆರು ತಿಂಗಳ ಕೂಸಿದ್ದಾಗಲೇ ತಂದೆಯ ವಿಯೋಗ ಶಿವನಿಗೆ. ನವಲೂರಿನ ಮಟ್ಟಿಗೆ ಒಂದು ಕಾಲಕ್ಕೆ 'ದೊಡ್ಡಮನೆ'ಯವರೆನ್ನಿಸಿಕೊಂಡಿದ್ದ ಈ ಮನೆತನ ತಕ್ಕಷ್ಟು ಶ್ರೀಮಂತಿಕೆಯನ್ನು ಅನುಭವಿಸಿತ್ತು. ನೇಕಾರಿಕೆಯನ್ನಾಗಲಿ ಒಕ್ಕಲತನವನ್ನಾಗಲಿ ನೆಚ್ಚಿಕೊಂಡು ನಿರಂತರ ಶ್ರೀಮಂತಿಕೆಯಲ್ಲಿ ಉಳಿದುಬಂದ

ಮನೆತನಗಳೆಷ್ಟಿದ್ದಾವು ಈ ನಾಡಿನಲ್ಲಿ ? ಈಶ್ವರಪ್ಪನವರ ಕಾಲಕ್ಕಾಗಲೇ ಮನೆಯ ಆರ್ಥಿಕ ಸ್ಥಿತಿ ಹದಗೆಟ್ಟಿತ್ತು. ಎಲ್ಲಾ ಹೋಗಿ ಉಳಿದುದೊಂದು ನೇಯುವ ಮಗ್ಗ; ಒಂದಿಷ್ಟು ಎಕರೆ ಒಣಬೇಸಾಯದ ಹೊಲ. ತಾಯಿ–ಮಗ ಇಬ್ಬರ ಜೀವನಕ್ಕೇ ತತ್ವಾರ. ಚೆನ್ನವೀರಮ್ಮ ದಿಟ್ಟ ಹೆಣ್ಣುಮಗಳು. ಮಗನನ್ನು ಮಮತೆ, ಕಾಳಜಿಗಳಿಂದ ಬೆಳೆಸಿದಳು; ಓದಿಸಿದಳು ; ಅದಕ್ಕಾಗಿ ಪಡಬಾರದ ಕಷ್ಟವನ್ನನುಭವಿಸಿದಳು. ಬೀಸುವಾಗ, ಕುಟ್ಟುವಾಗ, ನೇಯುವಾಗ ಆಕೆ ಹಾಡುತ್ತಿದ್ದ ಹಾಡುಗಳಿಗೆ ಕಿವಿಗೊಡುತ್ತಿದ್ದ ಬಾಲಕ ಶಿವಬಸಪ್ಪ, ದೊಡ್ಡವನಾದಂತೆ ತಾಯಿಯಿಂದ ಮುದ್ದಾಂ ಹಾಡಿಸಿ ಬರೆದುಕೊಳ್ಳುವ ಹವ್ಯಾಸ ಬೆಳೆಸಿಕೊಂಡನು. ನವಲೂರಿನ ಎಲ್ಲಾ ನಮೂನೆಯ ವೃತ್ತಿವಂತರ ಬಳಿ; ಗರತಿಯರ ಬಳಿ ಹೋಗಿ ಬರೆದುಕೊಳ್ಳುವುದು ಆತನ ಮುಖ್ಯ ಕೆಲಸವೇ ಆಗಿತ್ತು. ಜಾನಪದ ಸಾಹಿತ್ಯ ನಾಡಿನ ಸಂಪತ್ತು; ಅದನ್ನು ಉಳಿಸಿ, ಪ್ರಕಟಿಸಿ ಜನತೆಯಲ್ಲಿ ಹಬ್ಬಿಸಬೇಕೆಂಬ ಹಂಬಲ ಶಿವಬಸಪ್ಪನಲ್ಲಿ ತಾನೇ ತಾನಾಗಿ ಹುಟ್ಟಿತ್ತು. ನವಲೂರು, ರಾಯಾಪೂರ, ಉಣಕಲ್ಲುಗಳಲ್ಲಿದ್ದ ಅಂದಿನ ಜಾನಪದ ಹಾಡುಗಾರರನ್ನೆಲ್ಲ ಸಂದರ್ಶಿಸಿ ಹಾಳೆಗಳಲ್ಲಿ ಬರೆದಿಟ್ಟುಕೊಂಡು, ನಾಡಿನ ಪತ್ರಿಕೆಗಳಿಗೆ ಕಳಿಸಿಕೊಡುವ ಮೂಲಕ ಶಿವಬಸಪ್ಪ ಸಾಹಿತ್ಯಲೋಕಕ್ಕೆ ಅಡಿ ಇಟ್ಟನು.

ಓದು–ವಿದ್ಯಾಭ್ಯಾಸ

ಶಿವಬಸಪ್ಪ ಧಾರವಾಡದ ಕರ್ನಾಟಕ ಹೈಸ್ಕೂಲಿಗೆ ಹೆಸರು ಹಚ್ಚಿ ದಿನವೂ ಕಾಲ್ನಡಿಗೆಯಿಂದ ಹೋಗಿ–ಬಂದು ಮಾಡುತ್ತಿದ್ದ. ೧೯೪೨ ರಲ್ಲಿ ಮೆಟ್ರಿಕ್ ಪರೀಕ್ಷೆ ಪಾಸಾದ ನಂತರ, ಕಾಲೇಜಿಗೆ ಹೋಗುವ ಆಸೆಯಿತ್ತಾದರೂ ದುಡ್ಡಿನ ಬೆಂಬಲವಿರಲಿಲ್ಲ. ಕುಟುಂಬದ ನಿರ್ವಹಣೆಗಾಗಿ ತತ್‌ಕ್ಷಣವೇ ನೌಕರಿ ಹಿಡಿಯುವುದು ಅನಿವಾರ್ಯವಿತ್ತು. ಧಾರವಾಡದ ಮುನಸಿಪಲ್ ಸ್ಕೂಲ್ ಬೋರ್ಡಿನಲ್ಲಿ ಕಾರಕೂನನಾಗಿ ಕೆಲವು ತಿಂಗಳು; ಆಮೇಲೆ ಹುಬ್ಬಳ್ಳಿಯ ಆಂಗ್ಲೋ–ಉರ್ದು ಶಾಲೆಯಲ್ಲಿ ಗುಮಾಸ್ತನಾಗಿ ಒಂದು ವರ್ಷ; ಕೊನೆಗೆ ಧಾರವಾಡದಲ್ಲಿ ಸರಕಾರದ ರೇಶನಿಂಗ್ ಇಲಾಖೆಯಲ್ಲಿ ಏನ್ಯುಮರೇಟರ್ ಆಗಿ ಕೆಲವು ವರ್ಷ ಆತ ದುಡಿದರು. ಈ ನೌಕರಿಗಳ ಅದಲು–ಬದಲಿಗೆ ಮುಖ್ಯ ಕಾರಣ, ಅವರಿಗೆ ನೌಕರಿ–ಚಾಕರಿಗಳಲ್ಲಿ ನಿರಾಸಕ್ತಿ ಇದ್ದುದು ಹಾಗೂ ಸದಾ ನಿಶ್ಶಕ್ತಿಯಿಂದ ಬಳಲುತ್ತಿದ್ದುದು. ಈ ನಿಶ್ಶಕ್ತಿಯಿಂದಾಗಿಯೇ ಕಣ್ಣಿನ ದೋಷ ಹೆಚ್ಚಾಯಿತು. ಯಾವ ಕೆಲಸವನ್ನೂ ಹೆಚ್ಚು ಹೊತ್ತು ಕುಳಿತು ಮಾಡಲಾಗುತ್ತಿರಲಿಲ್ಲ. ಆದರೆ ಅವರ ಹೃದಯಕ್ಕೆ ಹತ್ತಿರವಿದ್ದ ಸಾಹಿತ್ಯ ಕೃತಿಗಳ ಓದು ಹಾಗೂ ಕವಿತೆಗಳ ರಚನೆ, ಜನಪದ ಹಾಡುಗಳ ಸಂಗ್ರಹದ ಕೆಲಸಗಳಿಗೆ ಈ ಅನಾರೋಗ್ಯವಾಗಲಿ, ದೃಷ್ಟಿಮಾಂದ್ಯವಾಗಲಿ ಅಡಚಣೆಯಾಗಲಿಲ್ಲ.

೧೯೪೪ಲರಲ್ಲಿ ಒಮ್ಮೆ ಶಿವೇಶ್ವರರು ಹುಬ್ಬಳ್ಳಿಯ ತಬೀಬ್‌ಲ್ಯಾಂಡಿನಲ್ಲಿದ್ದ 'ಜನಶಕ್ತಿ'ಯ ಕಾರ್ಯಾಲಯದಲ್ಲಿ ತಂಗಿದ್ದರು. ನಡುವಿರುಳು ಸರಿದರೂ ಲೆಕ್ಕಿಸದೆ ಚಿಮಣಿ ದೀಪ ಉರಿಸಿಕೊಂಡು ಮಾರ್ಕ್ಸ್, ಏಂಗೆಲ್ಸ್‌ರ ಸುಪ್ರಸಿದ್ಧ ಕೃತಿ ''ಸಮತಾ ಪಕ್ಷದ ಪ್ರಣಾಳಿಕೆ'' (Manifesto of Communist Party)ಯನ್ನವರು ಓದುತ್ತ ಕುಳಿತಿದ್ದರು. 'ಜನಶಕ್ತಿ'ಯ 'ನಿರಂಜನ'ರಿಗೆ ಗೆಳೆಯನ ಅನಾರೋಗ್ಯದ ಬಗ್ಗೆ ಅವಿರತ ಕಾಳಜಿ. ''ಆ ದೀಪದೆದುರಲಿ ಎಂಥ ಓದು? ನೋವಿನ ಕಣ್ಣನ್ನು ಇನ್ನಷ್ಟು

ನೋಯಿಸಬೇಡಿ''. ಪ್ರೀತಿಯಿಂದ ನಿರಂಜನ ಎಚ್ಚರಿಸಿದರು. ಶಿವೇಶ್ವರರಿಗೆ ಆ ಮಾತಿನತ್ತ ಗಮನವೇ ಇರಲಿಲ್ಲ. ಆ ಓದಿನಲ್ಲಿ ಅವರಿಗೊಂದು ಪದ ತೊಡಕಾಗಿತ್ತು; ಕೇಳಿದರು : ''ಪ್ರೊಲೆಟರಿಯಟ್ ಅಂದರೆ ಏನ್ರೀ ?'' ಗೆಳೆಯ ಶಿವೇಶ್ವರನ ಓದುಗಾರಿಕೆಯ ಹಿರಿಮೆಯನ್ನು ನಿರಂಜನ ಅಭಿಮಾನದಿಂದ ಸ್ಮರಿಸಿಕೊಂಡ ಬಗೆ ಹೀಗಿದೆ. (''ನಮ್ಮ ನಡುವಿನ ಗೋಡೆ'' ಪುರೋಗಾಮಿ ಪ್ರಕಾಶನ ೧೯೫೧).

ಶಿವಬಸಪ್ಪ 'ಶಿವೇಶ್ವರ' ಆದುದು :

ಅವು ೧೯೪೪ರ ದಿನಗಳು. ಹತ್ತೊಂಬತ್ತರ ಹರಯದ ಶಿವಬಸಪ್ಪನನ್ನು ತ್ವರಿತವಾಗಿ ಸಂಸಾರಿಯನ್ನಾಗಿ ಮಾಡುವ ಆತುರ ಚೆನ್ನವೀರಮ್ಮನಿಗೆ. ನವಲೂರಿನ ಬಳ್ಳೂರ ಮನೆತನದ ಕನ್ಯೆ ಈರವ್ವನನ್ನು ಸೊಸೆಯನ್ನಾಗಿ ತಂದುಕೊಂಡಳು. ಸಂಸಾರಿ ಶಿವಬಸಪ್ಪ ಈರವ್ವನೊಂದಿಗೆ ನಡೆಸಿದ ದಾಂಪತ್ಯಜೀವನ ಹಾರ್ದಿಕವಾಗಿತ್ತು. ಬಡತನ, ಅನಾರೋಗ್ಯಗಳ ನಡುವೆ ಅವರಿಗೆ ಹೆಂಡತಿಯ ಒಡನಾಟ, ಬಾಳಿನ ಸೌಹಾರ್ದತೆಯನ್ನು ಅನುಭವಿಸಲು ಅವಕಾಶಕೊಟ್ಟಂತಾಯಿತು. ಈ ವೇಳೆಗೆ ಶಿವಬಸಪ್ಪನಿಗೆ ವಿದ್ಯಾರ್ಥಿ ಕವಿಯಾಗಿದ್ದ ಚೆನ್ನವೀರ ಕಣವಿಯವರ ಪರಿಚಯವಾಗಿ, ಕ್ರಮೇಣ ಅದು ಸ್ನೇಹವಾಗಿ ಪರಿಣಮಿಸಿತ್ತು. ಅಂದಿನ ತರುಣ ಲೇಖಕರಾದ ಪತ್ರಕರ್ತ ಪಾಟೀಲ ಪುಟ್ಟಪ್ಪ, ಲೇಖಕ ಹಿರೇಮಲ್ಲೂರ ಈಶ್ವರನ್, ಚಿತ್ರ ಕಲಾವಿದ ಎನ್. ಸಿ. ದೇಸಾಯಿ, ಕವಿ ವಿ. ಜಿ. ಭಟ್ಟ ಮೊದಲಾದವರ ಸಹವಾಸವೂ ಲಭಿಸಿತ್ತು. ಶಿವಬಸಪ್ಪನಲ್ಲಿ ಅಡಕವಾಗಿದ್ದ 'ಕವಿ' ಹೊರಗೆ ಕಾಣಿಸಿಕೊಳ್ಳಲು ಧಾರವಾಡದ ಈ ಸಾಹಿತ್ಯ ಬಳಗವೇ ಕಾರಣ. ಅವರೆಲ್ಲರ ಹಾಗೆ ತಾನೂ ಉಚ್ಚಶಿಕ್ಷಣದ ಲಾಭ ಪಡೆಯಲಿಲ್ಲವಲ್ಲ ಎಂಬ ಅಳುಕು, ಸಂಕೋಚ ಅವರಲ್ಲಿದ್ದಿತು. ಆದರೆ ಈ ಸ್ನೇಹಿತರ ನಿರ್ಮತ್ಸರ ಬುದ್ಧಿ, ಆತ್ಮೀಯತೆ, ಆದರ ವಿಶ್ವಾಸದ ನಡತೆಗಳು ಈ 'ಹಳ್ಳಿಕವಿ'ಯಲ್ಲಿ ಸಾಕಷ್ಟು ಆತ್ಮವಿಶ್ವಾಸ ತುಂಬಿಸಿದವು. ಒಬ್ಬೊಬ್ಬರಿಂದ ಒಂದೊಂದು ಗುಣವನ್ನು ನೋಡಿ ಕಲಿಯುವ ಅವಕಾಶವನ್ನು ಶಿವೇಶ್ವರ ಬಳಸಿಕೊಂಡರು. ಹುಟ್ಟಿನಿಂದ 'ಶಿವ'ನಾದ ಆತ, ತನ್ನ ಗತ ತಂದೆಯ ಪ್ರೀತಿಯ ನೆನಪಿಗಾಗಿ 'ಈಶ್ವರ' ಎಂಬುದನ್ನು 'ಶಿವ'ನೊಂದಿಗೆ ಸಮಾಸಗೊಳಿಸಿ ಕವಿ ''ಶಿವೇಶ್ವರ'' ಆದರು.

ಧಾರವಾಡದ ಉಳವಿಬಸಪ್ಪನ ಗುಡ್ಡದಲ್ಲಿ ಜೋಗ್ ಎಂಬವರ ಬಂಗ್ಲೋ ಇತ್ತು. ಆ ಬಂಗ್ಲೋದ ಒಂದು ಕೋಣೆ, ಕಾಲೇಜು ವಿದ್ಯಾಭ್ಯಾಸದಲ್ಲಿದ್ದ ಚೆನ್ನವೀರ ಕಣವಿಯವರ ವಾಸಸ್ಥಾನವಾಗಿತ್ತು. ಕವಿಕಣವಿಯವರ ಈ ಕೋಣೆಯ ಹೆಸರು : 'ಚೆಂಬೆಳಕು'. ವರ್ಡ್ಸ್‌ವರ್ತನ ರಮ್ಯ ಕಲ್ಪನೆಯಲ್ಲಿ ಮೂಡಿ ಬಂದ ಆ ಪದದಿಂದ ಪ್ರೇರಿತರಾಗಿದ್ದ ಚೆನ್ನವೀರ ಕಣವಿಯವರು, ಚೆಂಬೆಳಕಿನ ಕವಿಯಾಗಿ ಅದಾಗಲೇ ರೂಪುಗೊಳ್ಳುತ್ತಿದ್ದರು. ಈ 'ಚೆಂಬೆಳಕು' ಧಾರವಾಡದ ಓರಗೆಯ ಉದಯೋನ್ಮುಖ ಕವಿಗಳೆಲ್ಲರ ರಂಗತಾಲೀಮಿನ ಜಾಗವಾಯಿತು. ಇಲ್ಲಿ 'ಕಾವ್ಯಾನುಭವ ಮಂಟಪ' ಎಂಬ ಅನೌಪಚಾರಿಕ ಸಂಘವನ್ನು ಗೆಳೆಯರೆಲ್ಲರೂ ಕೂಡಿ ಕಟ್ಟಿಕೊಂಡಿದ್ದರು. ಹಿರಿ-ಹಿರಿಯ ಕವಿಗಳು ಬಂದು ಹೋಗುತ್ತಿದ್ದ ಜೇನುಗೂಡು ಅದಾಗಿತ್ತು. ಶಂಕರ ಮೊಕಾಶಿ, ಪುಣೇಕರ, ಜಿ. ಎಚ್. ಕಣಿಕಲ್ಲ, ಎಂ. ಪಿ. ಜೋಶಿ, ವಸಂತ ಕವಲಿ, ಕೀರ್ತಿನಾಥ ಕುರ್ತಕೋಟಿ, ಕಣವಿ ಮಂಟಪದ ಸದಸ್ಯರಾಗಿದ್ದರು. ಹೊಸ ಕವಿತೆಗಳ

ಓದುವಿಕೆ, ವಿಮರ್ಶೆ ಹಾಗೂ ಚರ್ಚೆಗಳ ಆಡುಂಬೊಲವಾಗಿದ್ದ 'ಚೆಂಬೆಳಕು', ಶಿವೇಶ್ವರರಿಗೆ ಅತ್ಯಂತ ಪ್ರಿಯವಾದ ಎಡೆಯಾಯಿತು. ಹೈಸ್ಕೂಲಿನ ವಿದ್ಯಾರ್ಥಿಯಾಗಿದ್ದಾಗಿನಿಂದಲೂ ಧಾರವಾಡಕ್ಕೆ ಬರುತ್ತಿದ್ದ ಪ್ರತಿಯೊಂದು ಸಲವೂ ದೊಡ್ಡಮನಿಯವರ ಹತ್ತಿರ ದೊಡ್ಡದೊಂದು ಬುತ್ತೀಗಂಟು ಇರುತ್ತಿತ್ತು. ಮನೆಯಿಂದ ಹೊರಗಿದ್ದಾಗ ಮಗ ಹಸಿವಿನಿಂದ ಬಳಲಬಾರದೆಂಬುದು ತಾಯಿ ಚೆನ್ನವೀರಮ್ಮನ ಏಕೈಕ ಕಾಳಜಿ. ಅಂತೆಯೇ, ಒಬ್ಬನ ಹೊಟ್ಟೆಯಲ್ಲ, ಆತನ ಜತೆಗಿರುವ ಸಹಪಾಠಿಗಳೂ ತಿಂದುಣ್ಣಬೇಕೆಂಬ ಮಮತೆಯಿಂದ ಆ ತಾಯಿ ಹತ್ತಿಪ್ಪತ್ತು ರೊಟ್ಟಿ, ಪಲ್ಲೆ, ಚಟ್ನಿ, ಮೊಸರನ್ನ ಭರ್ತಿಯಾಗಿ ಕಟ್ಟಿಕೊಡುತ್ತಿದ್ದಳು. ಈ ಬುತ್ತಿಯ ಗಂಟು 'ಚೆಂಬೆಳಕಿನ' ಗೆಳೆಯರ ನಡುವೆ ಸವಿಯುಣಿಸಾಗಿ ಹಂಚಿ ಹೋಗುತ್ತಿತ್ತು. ಉಂಡ ಮೇಲೆ ಹರಟೆ–ಹೆಚ್ಚು ಸಲ ಕಾವ್ಯಗೋಷ್ಠಿ. ಶಿವೇಶ್ವರರ ಕವಿ ವ್ಯಕ್ತಿತ್ವ ಬೆಳೆದುದು ಗೆಳೆಯರ ಇಂತಹ ಹಾರ್ದಿಕ ಒಡನಾಟದಲ್ಲಿಯೇ.

ಒಂದೊಂದು ಸಲ, ಒಂದು ವಿಷಯವನ್ನೆತ್ತಿಕೊಂಡು ಅದರ ಮೇಲೆ ಕವನವನ್ನು ಅಲ್ಲೇ ರಚಿಸುವ 'ಸ್ಪರ್ಧೆ'ಯೂ ಈ ಗೆಳೆಯರ ನಡುವೆ ಏರ್ಪಡುತ್ತಿತ್ತು. ''ಒಲವಿನಗ್ನಿಕುಂಡ'' ಎಂಬೊಂದು ಕವಿತೆಯ ರಚನೆಯನ್ನಿಲ್ಲಿ ಉದಾಹರಿಸಬಹುದು. ಬಹುಶಃ ೧೯೪೭ರ ಸ್ವಾತಂತ್ರ್ಯೋದಯದ ಸಂದರ್ಭ ಇದಾಗಿರಬಹುದು. ದೇಶದಲ್ಲಿ ಕೋಮುದ್ವೇಷದ ದಳ್ಳುರಿ ಹಬ್ಬಿ, ಮಾನವತೆಯ ಒರತೆಯೇ ಬತ್ತಿ ಹೋದಂತೆನ್ನಿಸಿದಾಗ ಶಿವೇಶ್ವರ ಹಾಗೂ ಚೆನ್ನವೀರರು ಈ ಕವನವನ್ನು ಒಂದೇ ಹೊತ್ತಿಗೆ ರಚಿಸಿಕೊಂಡಿದ್ದಾರೆ. ಕಣವಿಯವರು ೪ ಸಾಲಿನ 'ಸ್ಟಾಂಜಾ'ಗಳಲ್ಲಿ ಕವನ ರಚಿಸಿದ್ದಾರೆ. ಶಿವೇಶ್ವರರು 'ಅಷ್ಟಷಟ್ಪದಿ' (ಸಾನೆಟ್ ರೂಪ)ದಲ್ಲಿ ಬರೆದಿದ್ದಾರೆ. ಕುತೂಹಲಕರವಾದ ಈ ಕಾವ್ಯ ಪ್ರಯೋಗವನ್ನಿಲ್ಲಿ ಉದಾಹರಿಸಬೇಕೆನಿಸುತ್ತಿದೆ :

ನಮ್ಮ ನನ್ನಿಯ ಒಲವಿನಗ್ನಿಕುಂಡ ಜ್ಯೋತಿ
ಬಾಳ್ಗುಡಿಯ ಹೊಂಗಳಸ ಕಂಗೊಳಿಸಲಿ !
ಜಗದಳಲ ಜಟಿಲ ಕುಟಿಲ ಕೋಟಲೆಗಳು
ಪ್ರೇಮ ಬಾಹುಳ್ಯವನು ಸಾರುತಿರಲಿ !
ಮಲಿನ ಮನದಾತ್ಮಗಳ ಕಾಳಿಕೆಯನುರೆ ಸುಟ್ಟು
ವೀರ ವಿಲಸತ್ ಪ್ರಭೆಯು ಬೆಳಕೀಯಲಿ ; ಜನದ
ಹಿತ ತನ್ನ ಹಿತ, ಲೋಕ ಕರುಣೆಯ ಹುಟ್ಟು ಇದಕೆ
ಮಂಗಳ ಗೀತೆ ಪಾಡುತಿರಲಿ ;
ಸಣ್ಣತನ ಸಂಕುಚಿತ ವೃತ್ತಿಗಳು ಹುಡಿಗೂಡಿ
ಸುವಿಶಾಲ ಮತಿಯುಕ್ತ ಜನರಾಗಲಿ ; ಜಾತಿಮತ
ಲುಬ್ಧಕರು ಗೈದ ರಕ್ತದ ಕೋಡಿ ಹರಿಗಡಿದು
ನೇಹಸೆಲೆ ಹೊರ ಹೊಮ್ಮಲಿ !
ನಾವೆಲ್ಲ ಮಡಿದರೂ ನಮ್ಮ ಗೋರಿಯ ಮೇಲೆ
ಪ್ರೇಮಪುಷ್ಪಗಳರಳಿ ಮಧುವೀಯಲಿ !
ನಾವೆಲ್ಲರೊಂದೆಂಬ ಏಕಗಾನದ ಲೀಲೆ ಭಾರತದ
ಗಾಳಿಯಲಿ ಬೆರೆಯುತಿರಲಿ !

-ಚೆನ್ನವೀರ ಕಣವಿ

ಮನಮಸಣ, ಮೇಣ್ ಎದೆಯು ಪಾಷಾಣ
ಬಗೆವಗುಣ ನಗೆಗಣಕೆ ಒಣನಿಗ್ಗರದ ಜಿಗಿಬಿಗಿಯ
ತೆಕ್ಕೆ ; ಮುದವೆಲ್ಲಿ ? ದುಗುಡಗಾಣದಲಿ
ಮೈರಕ್ತನೆಣ ಕರಗಿತೆನ್ನುವ ಕಾಲವಿನ್ನಿಲ್ಲ ; ಇದೊ
ನಕ್ಕೆ; ಒಲವಿನಾಸರೆಯ ಜನ–ಭ್ರಮಿತ ಜೀವನದ
ಕಸ ಉಡುಗಿ, ಬೇಗುದಿ–ಬೆಡಗು ಕಿಚ್ಚನಾಹುತಿ
ಗೊಂಡು ಸಂಸ್ಕೃತಿಯ ಉಚ್ಚಹೊಸ ಶ್ವಾಸ
ದಾಸೆಯ ಸಾಸ–ಕೆಡೆಗೊಟ್ಟು ನೀಗಿಸಿತೆಮ್ಮ
ಬಾಳಕೊಳೆ–ಜೊಂಡು.
ಝಲ್ಲೆನುವೆ ಏನೆದೆಯೆ ? ಕ್ಷುದ್ರಛಿದ್ರವೆ ಮನಸೆ ?
ಇಲ್ಲಿಲ್ಲ ತೃಪ್ತಿಮಿಗೆ, ಭದ್ರ ಬಾಳುವೆ ಸೊಗಸು ;
ಶತಜೀವ ನಮ್ಮ ಸವಿಯೊಲವಿನಂಬುಧಿಗೆ ತುಸು
ವಾದರೂ ಕಂಬನಿಯ ಹೊನಲ ಹನಿ ಸೇರ್ಪಡಿಸೆ
ಈ ಬುವಿಗೆ ಅಸದಳವು–ನನ್ನಿಯಲ್ಲವೆ ಒಲವು ?
ಇದು ನಮ್ಮ ಉದ್ಘೋಷ– ಬದುಕಿಸುವುದೆಮ್ಮ
ನೊಲವು !

-ಶಿವೇಶ್ವರ ದೊಡ್ಡಮನಿ

'ಕಾವ್ಯಾಕ್ಷಿ'

ಶಿವೇಶ್ವರರು ತಮ್ಮ ಮನೆಯನ್ನು ಬೆಳಗಲು ಬಂದ ಚೊಚ್ಚಲು ಹೆಣ್ಣುಮಗು (ಬಸಮ್ಮ: ತೊಟ್ಟಿಲಲ್ಲಿಟ್ಟ ಹೆಸರು)ವಿಗೆ 'ಕಾವ್ಯಾಕ್ಷಿ' ಎಂದು ಹೆಸರಿಟ್ಟರು. ಕಣವಿಯವರ 'ಕಾವ್ಯಾಕ್ಷಿ' ಅದೇ ಆಗ ಪ್ರಭಾವಶಾಲೀ ಕವಿತೆಯಾಗಿ ಹೊರಹೊಮ್ಮಿ ಪ್ರಸಿದ್ಧಿಯನ್ನು ಪಡೆದಿತ್ತು. ಕವಿಗೆಳೆಯನ ಕವಿತೆಯನ್ನು ಮಗಳ ಹೆಸರಾಗಿ ಇಡುವಲ್ಲಿ ಶಿವೇಶ್ವರರ ಕಾವ್ಯಪ್ರೀತಿ ಅಪೂರ್ವವಾಗಿ ವ್ಯಕ್ತವಾಗಿದೆ. ತಮ್ಮ ಕೆಲವು ಕವಿತೆಗಳಲ್ಲಿ 'ಶಿವ–ಚೆನ್ನ' ಸಮಾಸ ನಾಮವನ್ನೂ ದೊಡ್ಡಮನಿಯವರು ಪ್ರಯೋಗಿಸುವ ಮೂಲಕ ಗೆಳೆತನದ ಉದಾತ್ತತೆಯನ್ನು ಎತ್ತಿ ತೋರಿಸಿದ್ದಾರೆ.

ಹೊಟ್ಟೆಪಾಡಿಗಾಗಿ ಮನಸ್ಸಿಲ್ಲದ ಮನಸ್ಸಿನಿಂದ ನೌಕರಿಗೆ ಹೋಗಿ ಬರುತ್ತಿದ್ದ ದೊಡ್ಡಮನಿಯವರಿಗೆ ಮನೆ ಮತ್ತು ಆಫೀಸಿಗಿಂತ ಹೊರಜಗತ್ತಿನ ಒಡನಾಟವೇ ಚಿತ್ತ ಚೈತನ್ಯ ನೀಡುತ್ತಿತ್ತೇನೋ. ಅಲ್ಲಿ ಮಾಡ ಬೇಕಾದಷ್ಟು ಕೆಲಸವನ್ನು ಮಾಡಿ ಮುಗಿಸಿ, ಅವರು ಸಂಜೆ, ರಾತ್ರಿಯ ಹೊತ್ತಿನಲ್ಲಿ ಧಾರವಾಡದ ಒಂದು ಮೂಲೆಯಿಂದ ಮತ್ತೊಂದು ಮೂಲೆಗೆ ಸೈಕಲ್ ಹತ್ತಿ ಹೊರಟು ಬಿಡುತ್ತಿದ್ದರು. ಯಾರೋ ಒಬ್ಬ ಹಾಡುಗಾರ ಅಥವಾ ಹಾಡುಗಾರ್ತಿ ಇಂಥಲ್ಲಿದ್ದಾರೆಂದು ತಿಳಿದು ಬಂದರೆ ಆಯಿತು, ದೊಡ್ಡಮನಿಯವರ ಸವಾರಿ ಅತ್ತ ಸಾಗುತ್ತಿತ್ತು. ಅವರನ್ನು ಭೆಟ್ಟಿಮಾಡಿ, ಸ್ನೇಹ ಕುದುರಿಸಿ ಆ ಅನಕ್ಷರಸ್ಥರಿಂದ ಅವರು ಪಡೆಯುತ್ತಿದ್ದ ಹಾಡುಗಳು ನೂರಾರಿವೆ. ಆ ಜನರಾದರೋ ಜೀವನದಲ್ಲಿ ನೆಲೆ ಅಥವಾ ನೆಲ ಯಾವುದೂ ಇಲ್ಲದವರು. ಅಂಥವರ ಬಾಳಿನ ಸಂಕಟಗಳನ್ನು ಕೇಳಿ, ಸಾಧ್ಯವಾದರೆ ನೆರವು ನೀಡುವ ಉದಾರ ಬುದ್ಧಿ ದೊಡ್ಡಮನಿಯವರದಾಗಿರುತ್ತಿತ್ತು. ಅವರ 'ರಾಜಮಾ' ಸಣ್ಣಕತೆ, ಅಂತಹದೊಂದು ವಾಸ್ತವಿಕ ಅನುಭವದ ಚಿತ್ರಣವೇ ಆಗಿದೆ. ಕಾವ್ಯರಚನೆಯೊಂದರ ಹಿಂದೆ ಕವಿ ಪಡೆಯಬೇಕಾದ ಶ್ರಮ, ಗಳಿಸಬೇಕಾದ ಅನುಭವ, ಹಾಗೆಯೇ ಹದಗೊಳಿಸಬೇಕಾದ ನುಡಿಗಟ್ಟುಗಳ ಬಗ್ಗೆ ಶಿವೇಶ್ವರರು ಸಾಕಷ್ಟು ಅರಿತಿದ್ದರು. ವಾಸ್ತವದಲ್ಲಿ ಕಾವ್ಯಮಯವಾಗಿ ಬದುಕುವುದೇ ಉತ್ತಮ ಕಾವ್ಯಕ್ಕೆ ತಳಹದಿ ಎಂಬುದನ್ನವರು ಮನಗಂಡಿದ್ದರು. ಕಣವಿಯವರು ಈ ಕವಿಗೆಳೆಯನ ಅಕಾಲಿಕ ಸಾವಿನ ದುಃಖವನ್ನು 'ಚರಮಗೀತೆ' ('ಆಕಾಶ ಬುಟ್ಟಿ' ೧೯೫೩)ಯಲ್ಲಿ ಹೃದಯ ಸ್ಪರ್ಶಿಯಾಗಿ ತೋಡಿಕೊಂಡಿದ್ದಾರೆ :

ನಿನ್ನ ಹೃದಯದ ದೊಡ್ಡಿತೆಗೆ, ನಮ್ರತೆಗೆ ಘನ ಔದಾರ್ಯಕೆ
ಕವಡು ಹೊದ್ದದ, ಕೃತಕವರಿಯದ ಮುಗ್ಧಮನ ಮಾಧುರ್ಯಕೆ
ಏನುಕೊಟ್ಟರು ತೀರದಯ್ಯೋ ! ಏನು ಕೊಟ್ಟರೂ ಬಾರದು ;
ಪರಮ ಪ್ರೀತಿಗೆ ಪ್ರೀತಿಯೇ ಪ್ರತಿಫಲವು, ಉಳಿದುದು ಸಲ್ಲದು.

'ಜನಶಕ್ತಿ'ಯತ್ತ ಒಲವು :

ತನ್ನ ಬಳಿಯಿರುವುದೆಲ್ಲವೂ ತನ್ನೊಬ್ಬನಿಗಾಗಿ ಅಲ್ಲ ; ತನ್ನಂತೆಯೇ ಹಸಿದಿರುವವರ, ಕಂಗಾಲಾಗಿರುವವರ ಗತಿ ನೋಡಿ ಇರುವುದನ್ನು ಹಂಚಿ ತಿಂದು ತೃಪ್ತಿ ಪಡುವುದಕ್ಕಾಗಿ. ಇದು, ಶಿವೇಶ್ವರರಿಗೆ ತಾಯಿಯಿಂದ ಬಂದ ಸಂಸ್ಕಾರದ

ತಿಳಿವು. ತಾಯಿ ಕಟ್ಟಿಕೊಡುತ್ತಿದ್ದ ಬುತ್ತಿಗಂಟಿನ ಉಣಿಸಿನ ಪಾಠವನ್ನವರು ತಮ್ಮ ಅಲ್ಪಾಯುಷ್ಯದ ಉದ್ದಕ್ಕೂ ತಪ್ಪದೆ ಅನುಸರಿಸಿದರು. ಬಡತನದ ಸ್ವಾನುಭವ ಹಾಗೂ ಪರಿಸರದಲ್ಲಿ ಕಂಡ ಅನ್ಯಾಯ, ಅಸಮಾನತೆ; ಭಾರತದ ಬದುಕನ್ನೇ ಬರಡು ಗೊಳಿಸುತ್ತಿದ್ದ ಹಣವಂತರ ಶೋಷಕ ಪ್ರವೃತ್ತಿ-ಯುವ ಚಿಂತನಕಾರ ಶಿವೇಶ್ವರರಲ್ಲಿ 'ಬಂಡಾಯ' ಮನೋವೃತ್ತಿಯು ಮೂಡಲು ಕಾರಣವಾದವು. ಹಿಂದಿಯಲ್ಲಿಯ ಪ್ರೇಮಚಂದರ ಕತೆ- ಕಾದಂಬರಿಗಳಂತೂ ಅವರ ಚಿತ್ತದಲ್ಲಿ ಆಗಲೇ ಅಚ್ಚೊತ್ತಿದ್ದವು. ಇಂತಹ ಓದಿನಿಂದ ಪ್ರಭಾವಿತರಾಗಿ ಅವರು 'ಮಾರ್ಕ್ಸ್‌ವಾದಿ'ಯಾಗಿ ಮಾರ್ಪಡಲು ತಡ ಹಿಡಿಯಲಿಲ್ಲ. ೧೯೪೪ ರಲ್ಲಿ ಕುಳುಕುಂದ ಶಿವರಾಯರ (ನಿರಂಜನ) ಸ್ನೇಹ-ಸಹವಾಸವೂ ಅವರಿಗೆ ಲಭಿಸಿ ಅದು ಬಲಿತಿತು. ಕುಳುಕುಂದರು ಆಗ 'ಭಾರತೀಯ ಕಮ್ಯುನಿಸ್ಟ್ ಪಕ್ಷ'ದ ಸಕ್ರಿಯ ಕಾರ್ಯಕರ್ತರು. ಕರ್ನಾಟಕದಲ್ಲಿ ಕನ್ನಡಿಗರಲ್ಲಿ ಪ್ರಗತಿಶೀಲಚಿಂತನಕ್ರಮವನ್ನು ಬಿತ್ತಲು ಮತ್ತು ರಾಜಕೀಯ ಚಳುವಳಿಯನ್ನು ಹೂಡಲು ಕುಳುಕುಂದರು ಯತ್ನಿಸುತ್ತಿದ್ದರು.

ಶಿವೇಶ್ವರ ದೊಡ್ಡಮನಿಯವರು ಆ ಹೊತ್ತಿಗಾಗಲೇ ತಾತ್ವಿಕವಾಗಿ, ಬೌದ್ಧಿಕ ವಾಗಿ ತಮ್ಮಷ್ಟಕ್ಕೆ ತಾವು 'ಸಮತಾವಾದಿ'ಯಾಗಿ ರೂಪುಗೊಂಡಿದ್ದರು. ತತ್ವಾದರ್ಶಕ್ಕೆ ವ್ಯಾವಹಾರಿಕ ವರ್ತನೆಯ ಒಂದು ಅವಕಾಶ ಬೇಕಾಗಿತ್ತಷ್ಟೆ. ಕೆ.ಸಿ.ಸಿ. ಬ್ಯಾಂಕಿನ ನೌಕರಿಗೆ (ಟೈಪಿಸ್ಟ್) ತಿಲಾಂಜಲಿಯನ್ನಿತ್ತು ಶಿವೇಶ್ವರರು ೧೯೪೪ ರಲ್ಲಿ 'ನಿರಂಜನ'ರ ಜತೆ 'ಜನಶಕ್ತಿ' ಪತ್ರಿಕೆಯಲ್ಲಿ ಉಪ ಸಂಪಾದಕನಾಗಿ ಸೇರಿದರು. ಹುಬ್ಬಳ್ಳಿಗೆ ಪ್ರತಿದಿನ ಅವರು 'ಬುತ್ತೀಗಂಟು' ಸಮೇತ ಮುಂಜಾನೆ ಹೊರಟು ಬರುತ್ತಿದ್ದರು. ಸಂಜೆಯಾದ ಮೇಲೆ ಬಸ್ ಹಿಡಿದು 'ಚೆಂಬೆಳಕು' ಸೇರಬೇಕು. ಆ ಮೇಲೆ ರಾತ್ರಿಯೇ ನವಿಲೂರ ಮನೆಯ ದರ್ಶನ.

ಎಲ್ಲ ದೃಷ್ಟಿಯಿಂದಲೂ ದುರ್ಭರದ ದಿನಗಳವು. ದೊಡ್ಡಮನಿಯವರ ಸಂಸಾರ ವಂತೂ ಆರ್ಥಿಕವಾಗಿ ದಿನ ದಿನಕ್ಕೆ ಶೋಚನೀಯ ಪರಿಸ್ಥಿತಿಯಲ್ಲಿ ತೊಳಲಾಡುತ್ತಿತ್ತು. ಆದರೆ ಅವರ ಚೈತನ್ಯ ಈ ಸಮಾಜದ, ಈ ನಾಡಿನ ಒಟ್ಟು ಪರಿಸ್ಥಿತಿಯನ್ನು ಬದಲಾಯಿಸಬೇಕೆನ್ನುವ ಕಡೆಗೇ ತುಡಿಯುತ್ತಿತ್ತು. ಉತ್ತರ ಕರ್ನಾಟಕದಲ್ಲಿ ಆ ಹೊತ್ತಿಗೆ ಆರಂಭವಾಗಿದ್ದ ರೈತಚಳುವಳಿ, ಕೂಲಿಕಾರರ ಸಂಘಟನೆಗಳು, ಅವುಗಳ ಹೋರಾಟಗಳು ದೊಡ್ಡಮನಿಯವರಿಗೆ ತನ್ನ ಆಶಯವನ್ನು ಪೂರೈಸುವ ಮಹತ್ವದ ಸೂಚನೆಗಳಾಗಿ ಕಂಡದ್ದು ಸ್ವಾಭಾವಿಕ. ಕನ್ನಡದ ಬಹುತೇಕ ಲೇಖಕರು, ಚಿಂತಕರು, ಪ್ರತಿಭಾವಂತರು ಯಾವುದೇ 'ರಿಸ್ಕ್'ವಹಿಸಿ ಇಂತಹ ಸಾಮಾಜಿಕ-ಆರ್ಥಿಕ ಮೂಲ ಬದಲಾವಣೆಯ ಚಟುವಟಿಕೆಗಳ ಕಡೆಗೆ ಕಣ್ಣೆತ್ತಿಕೂಡ ಆಗ ನೋಡುತ್ತಿರಲಿಲ್ಲ. ಭೂಗತರಾಗಿರುತ್ತಿದ್ದ ಲೇಖಕ 'ನಿರಂಜನ'ರನ್ನೇ ಆಗಿನ 'ಪ್ರಗತಿಶೀಲ ಸಾಹಿತಿ' ಎನ್ನಿಸಿಕೊಂಡವರು ಅಪಾರ್ಥ ಕಲ್ಪನೆಯಿಂದ ನೋಡುತ್ತಿದ್ದರು; 'ನಿರಂಜನ'ರನ್ನು ಬಲ್ಲವರು ಹಾಗೂ ಗೆಳೆಯರು ಕೂಡ ಅವರಿಂದ ದೂರ ಇರುತ್ತಿದ್ದರು; ಅಥವಾ ಹಾಗೆ ಇದ್ದಂತೆ ತೋರಿಸಿಕೊಳ್ಳುತ್ತಿದ್ದರು. 'ಜನಶಕ್ತಿ'ಗೆ ಪ್ರೇಷಕ-ಪೋಷಕರಾಗಿರ ಬೇಕಾದವರೇ, ನಾಜೂಕಾಗಿ ಅವರಿಂದ ಪಲಾಯನ ಹೇಳುತ್ತಿದ್ದರು.

ಇಂತಹ ವಿಷಮ ಪ್ರಸಂಗದಲ್ಲಿ ನವಲೂರ ಹಳ್ಳಿಯ, ಮೆಟ್ರಿಕ್ ಮಾತ್ರ ಪಾಸಾದ, ಕೇವಲ ನಿಸ್ಪೃಹತೆ ಮತ್ತು ನಿಸ್ವಾರ್ಥತೆಯಿಂದ ಸಾಹಿತ್ಯಲೋಕದಲ್ಲಿ ಅಲ್ಪಸ್ವಲ್ಪ ಶ್ರಮಪಡುತ್ತ ತನ್ನ ಒಳ ಚೈತನ್ಯದುರಿಯನ್ನು ನಿಗಿನಿಗಿ ಕೆಂಡವಾಗಿ ಉಳಿಸಿಕೊಂಡಿದ್ದ ಶಿವೇಶ್ವರ, ಬಹುದೊಡ್ಡ 'ರಿಸ್ಕ್'ನ್ನು ಸ್ವಯಂಸ್ಫೂರ್ತಿಯಿಂದ ಹಾಗೂ ಸಂತೋಷದಿಂದ ಮೈಮೇಲೆ ತೆಗೆದುಕೊಂಡರು. ಇದ್ದ ನೌಕರಿ ತೊರೆದು ಆರ್ಥಿಕವಾಗಿ ಏನೂ ಪ್ರತಿಫಲವಿಲ್ಲದ ಪತ್ರಿಕೋದ್ಯಮಕ್ಕೆ ಧುಮುಕಿದರು. ಆದರಿದು ಅವರಿಗೆ ಪ್ರೀತಿಯ ಆಯ್ಕೆಯಾಗಿತ್ತು, ಅವರ ಬರವಣಿಗೆಗೆ ವ್ಯಾಪಕ ಇಂಬು ಕೊಡುವಂತಹದಾಗಿತ್ತು; ಬರವಣಿಗೆಯಿಂದ ಸಾಮುದಾಯಕ ಬದಲಾವಣೆಗೆ ಇಂಬು ಕೊಡಬೇಕೆಂಬುದೇ ದೊಡ್ಡಮನಿಯವರ ಜೀವನ ಧ್ಯೇಯವಾಯಿತು.

'ಜನಶಕ್ತಿ'ಯ ಈ ಉಪ ಸಂಪಾದಕ ಮತ್ತು ಪ್ರಕಾಶಕ ಅನೇಕ ಸಲ ಪೋಲೀಸರ ಕಿರುಕುಳಗಳಿಗೆ ತುತ್ತಾದರು. ಕಣ್ತಪ್ಪಿಸಿ ಅಡ್ಡಾಡುವುದು; ಭೂಗತ ಕಾರ್ಯಕರ್ತರಿಗೆ ಊಟ, ವಸತಿ, ಪ್ರಯಾಣದ ವ್ಯವಸ್ಥೆ ಮಾಡುವುದು ಮುಂತಾದವು ತನ್ನ ಪಾಲಿಗೆ ಬಂದಾಗಲೆಲ್ಲ ತನ್ನ ದೈಹಿಕ ಅಶಕ್ತತೆ, ಕಣ್ಣುಬೇನೆಯ ಸಂಕಟ ಲೆಕ್ಕಿಸದೇ ಮಾಡುತ್ತಿದ್ದರು. ಕೆಡುತ್ತಲಿದ್ದ ಆರೋಗ್ಯವನ್ನು ಕಡೆಗಣಿಸಿ ಶಿವೇಶ್ವರ ಪತ್ರಿಕೆಗಾಗಿ ಬರೆಯುತ್ತಿದ್ದರು; ಚರ್ಚಿಸುತ್ತಿದ್ದರು. ಆ ಗಳಿಗೆಗಳಲ್ಲಿ ಸಿಗರೇಟು ಸೇವನೆ ಅವರಿಗೆ ಸಮಾಧಾನ ಕೊಡುವ ಒಂದು ಚಟವಾಗಿತ್ತು. ದೃಷ್ಟಿದೋಷದಿಂದಾಗಿ ಕೊನೆ ಕೊನೆಯ ವರ್ಷಗಳಲ್ಲಿ ಓದುವುದೂ ಅಸಾಧ್ಯವಾಗಿ ಅವರು ಮೌನಿಯಾಗಿರುವಂತಾಯಿತು. ಈ ಮೂಕ ಸಂಕಟ ಅವರ ಕವಿತೆಗಳಲ್ಲಿ ಮಾತಾಗಿ ಮೂಡಿದೆ.

ಈ ನಡುವೆ, ಶಿವೇಶ್ವರರ ಸಂಸಾರ ಬೆಳೆಯಿತು. ಮಗಳು ಕಾವ್ಯಾಕ್ಷಿಯ ನಂತರ ಮಗ ರವಿ ಹುಟ್ಟಿದ (೧೯೪೮) ; ಸಾವಿಗೆ ತುಸು ಮುಂಚೆ ಹುಟ್ಟಿದವಳು ಪೂರ್ಣಿಮಾ. (ಈ ಮೂವರೂ ಮಕ್ಕಳು ಈಗ ಸುಸ್ಥಿರರಾಗಿ ತಮ್ಮ ತಮ್ಮ ಬದುಕು ಸಾಗಿಸಿದ್ದಾರೆ : ಮಗ ರವೀಂದ್ರ ದೊಡ್ಡಮನಿಯವರು ಸದ್ಯ ರಾಯಚೂರಿನ ''ಶಕ್ತಿ ನಗರ''ದಲ್ಲಿ ಥರ್ಮಲ್ ವಿದ್ಯುತ್ ಪ್ಲ್ಯಾಂಟ್‌ನಲ್ಲಿ ಸೂಪರಿಂಟೆಂಡೆಂಟ್ ಎಂಜಿನಿಯರ್ ಆಗಿದ್ದಾರೆ. ಪ್ರತಿಭಾವಂತ ತಂದೆಯ ಪ್ರತಿಭಾವಂತ ಪುತ್ರ.) ಬೆಳೆದ ಸಂಸಾರವನ್ನು ಶಿವೇಶ್ವರರ ಅವ್ವ ಸಮರ್ಥವಾಗಿ ಪೋಷಿಸಿದರು. ಹೆಂಡತಿ ಈರವ್ವ (ಈಗ ನವಿಲೂರಿನಲ್ಲಿ ಸ್ವಂತ ಮನೆ ಮಾಡಿಕೊಂಡು ಮೊಮ್ಮಕ್ಕಳ ಜತೆಗೆ ನೆಮ್ಮದಿಯಾಗಿದ್ದಾರೆ) ಗಂಡನ ಸಾರ್ವಜನಿಕ ವ್ಯಕ್ತಿತ್ವವನ್ನು ಮೌನವಾಗಿ ಗೌರವಿಸಿದಳಷ್ಟೆ. ಶಿವೇಶ್ವರರಿಗೆ ಸಂಸಾರದ ಭಾರವನ್ನು ಹೊರುವ ಶಕ್ತಿ ಉಳಿಯಲಿಲ್ಲ; ತಾಯಿಯೇ ಅದನ್ನು ಸಮರ್ಥವಾಗಿ ನಿರ್ವಹಿಸಿದರು.

೧೯೪೮ ರಲ್ಲಿ ಸ್ವತಂತ್ರ ಭಾರತದ, ನಮ್ಮವರದೇ ಆದ ಸರಕಾರವು ಸಾರ್ವತ್ರಿಕ ದಬ್ಬಾಳಿಕೆಯ ತಂತ್ರ ಆರಂಭಿಸಿದಾಗ ಎಡಪಂಥೀಯ ಚಳವಳಿಗೆ ತೀವ್ರ ಪೆಟ್ಟು ತಗುಲಿತು. ''ಜನಶಕ್ತಿ''ಯ ಸಂಪಾದಕೀಯ ಮಂಡಳಿ ಅಸ್ಥಿರವಾಯಿತು. ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲೆ ನಿಷೇಧ ಹೇರಿದ ಆ ಗಳಿಗೆಗಳಲ್ಲೂ ಪತ್ರಿಕೆಯನ್ನು ಗುಟ್ಟಾಗಿ ಹೊರಡಿಸುವಲ್ಲಿ ಶಿವೇಶ್ವರರು ಕೆಲಕಾಲ ಹಗಲಿರುಳು ಶ್ರಮಿಸಿದರು. ಈ ಅವಧಿಯಲ್ಲಿ ಅವರು ಪಟ್ಟ ಯಾತನೆಗಳು ಅನೇಕ. ಅವರ ಕವಿತೆಗಳಲ್ಲಿ ಅವೆಲ್ಲವೂ ದಾಖಲಾಗಿವೆ. ೧೯೪೯ರಲ್ಲಿ 'ಜನಶಕ್ತಿ' ನಿಂತೇ ಹೋಯಿತು. 'ನಿರಂಜನ'ರು ಬೆಂಗಳೂರಿಗೆ ನಿರ್ಗಮಿಸಿದರು. ಶಿವೇಶ್ವರರ ಅಭಿವ್ಯಕ್ತಿಯೂ ನಿಶ್ಶಕ್ತಗೊಳ್ಳತೊಡಗಿತು.

ಬದುಕಿನ ಕೊನೆಯ ಒಂದು ವರ್ಷ ಶಿವೇಶ್ವರ ಹೆಚ್ಚೇನೂ ಬರೆದಂತಿಲ್ಲ. ದೃಷ್ಟಿದೋಷ ತೀವ್ರವಾಗಿದ್ದರಿಂದ ಅವರ ಬರವಣಿಗೆ ನಿಂತಿತು. ೧೯೫೦ ಫೆಬ್ರುವರಿ ಯಲ್ಲಿ ವಿಷಮಶೀತ ಜ್ವರಕ್ಕೆ ತುತ್ತಾದರು. ಸರಿಯಾದ ಔಷಧೋಪಚಾರ ಸಿಗದೇ ಹೋದುದರಿಂದ; ಮಾನಸಿಕವಾಗಿಯೂ ಜರ್ಜಿತರಾದ ಶಿವೇಶ್ವರ ೨೬ನೆಯ ಮಾರ್ಚ ೧೯೫೦ ರ ನಡುರಾತ್ರಿ ತೀರಿಕೊಂಡರು.

ವ್ಯಕ್ತಿತ್ವ :

ಶಿವೇಶ್ವರ ದೊಡ್ಡಮನಿ, ಕವಿಯಾಗಿ ಮತ್ತು ಚಳುವಳಿಗಾರನಾಗಿ ತಮ್ಮ ಉಜ್ವಲ ವ್ಯಕ್ತಿತ್ವ ರೂಪಿಸಿಕೊಂಡಿದ್ದ ವ್ಯಕ್ತಿ. ಅವರ ಕವಿತೆಗಳು ಅವರ ಕೈ ಬರಹದಲ್ಲೇ ಬಿಡಿ ಬಿಡಿ ಹಾಳೆಗಳಲ್ಲಿ ಸಿಕ್ಕಿವೆ. ಮೊದ ಮೊದಲು ಪ್ರಕೃತಿಯ ಸೌಂದರ್ಯ, ಮಾನವನ ಮುಗ್ಧತೆಗಳ ಬಗ್ಗೆ ಬರೆಯುತ್ತಿದ್ದ ಅವರು, ಬಲು ಬೇಗನೆ ಬಾಳಿನ ಗಂಭೀರ ಅನುಭವಗಳಿಗೆ ಪ್ರತಿಕ್ರಿಯೆ ಕೊಡುವ ರೀತಿಯಲ್ಲಿ ಬರೆಯಲಾರಂಭಿಸಿದರು. ಅಪರಿಹಾರ್ಯವಾದ ದುಃಖ–ದುಗುಡಗಳು ಅವರನ್ನು ಅಧೀರನನ್ನಾಗಿ ಮಾಡಿರಬೇಕು. ಸಾಮಾಜಿಕ ವ್ಯವಸ್ಥೆ, ಆರ್ಥಿಕ ವ್ಯವಸ್ಥೆ ಮತ್ತು ಜಾಗತಿಕ ಪರಿಸ್ಥಿತಿ (ಯುದ್ಧದ ಪಿಡುಗು, ಕ್ಷಾಮ, ಬಡವರಿಗೆ ಆಹಾರದ ಕೊರತೆ, ಕೋಮುಗಲಭೆ ಇತ್ಯಾದಿ)ಯನ್ನು ಅತ್ಯಂತ ಸೂಕ್ಷ್ಮ ಸಂವೇದನೆಯಿಂದ ಶಿವೇಶ್ವರರು ಪರಿಶೀಲಿಸಿದ್ದಾರೆ. ಹೀಗಾಗಿ ಚಿಂತಕನ ಗಂಭೀರ ಕಾಳಜಿಗಳು ಅವರ ಕವಿತೆಯನ್ನು ಆವರಿಸಿವೆ. ಬಡ ಹಳ್ಳಿಗನಾದ ಒಬ್ಬ ಭಾರತೀಯ ಏನೆಲ್ಲ ಆಘಾತಗಳಿಗೆ ಒಳಗಾಗಿ, ನಿರ್ವಿಣ್ಣನಾಗಿ ಆಯುಷ್ಯ ಸವೆಸಬೇಕೋ ಅಷ್ಟನ್ನೂ ಅವರು ಸ್ವತಃ ಸವೆಸಿದರು. ಅಂತೆಯೆ ೧೯೪೦–೫೦ ರ ಕಾಲಘಟ್ಟದ ಗ್ರಾಮ ಭಾರತದ ಸಂವೇದನಶೀಲ ಮನುಷ್ಯನೊಬ್ಬ ಅವರ ಕವಿತೆಯಲ್ಲಿ ಪ್ರತಿಮೆ ಪಡೆದಿದ್ದಾನೆ.

ಹದಗೆಡುತ್ತಿದ್ದ ಲೋಕಜೀವನವೊಂದು ಕಡೆ, ಜರ್ಜರಿತವಾಗುತ್ತಿದ್ದ ತನ್ನ ವೈಯಕ್ತಿಕ ಜೀವನ ಇನ್ನೊಂದು ಕಡೆ ಹಾಗೂ ಶೋಷಣೆ, ಪರಾವಲಂಬನೆಗಳಿಗೆ ಬಲಿಯಾದ ತೀರ ಸನಿಹದ ತನ್ನ ನಡುವಿನ ಜನತೆಯ ಕಷ್ಟ ನಷ್ಟದ ಬದುಕು ಮತ್ತೊಂದೆಡೆ. ಇವು ಶಿವೇಶ್ವರರನ್ನು ಕನಲುವಂತೆ ಮಾಡಿದ್ದವು. ಅವರ ಲೇಖನಿ ಚೂಪಾಯಿತು; ದನಿ ಕೆರಳಿತು. ಆದರೆ ಮಾನವೀಯ ಅಂತಃಕರಣವೊಂದು ಶಿವೇಶ್ವರ ರಲ್ಲಿ ಒಳದನಿಯಾಗಿ ಸದಾ ಹಾರ್ದಿಕವಾಗಿ ಹರಿಯುತ್ತಿತ್ತು. 'ನಿರಂಜನ'ರು ವರ್ಣಿಸಿ ದಂತೆ ಶಿವೇಶ್ವರರ ಗದ್ಯ–ಪದ್ಯಗಳ ಶೈಲಿಯು ಹೀಗಿದೆ.

''ಬೇಕಾದಾಗ ಗಡಸುತನ, ಬೇಕಾದಾಗ ಸೂಕ್ಷ್ಮ ನಗೆ–ವ್ಯಂಗ್ಯ.....
ಮತ್ತೆ ಬೇಕಾದಾಗ ಅತಿ ಮಧುರ ಭಾವನೆಯ ಕಲಕಲನಾದ...........''

ಶಿವೇಶ್ವರ, ಆಶುಕವಿಯ ರೀತಿಯಲ್ಲಿಯೂ ಕವನ ರಚಿಸುತ್ತಿದ್ದರು. ನಮಗೆ ಸಿಕ್ಕಿರುವ ಅವರ ಕವನಗಳ ಹಾಳೆಗಳನ್ನು ನೋಡಿದರೆ ಗೊತ್ತಾಗುವ ವಿಲಕ್ಷಣ ಇದು : ಎಲ್ಲೆಂದರಲ್ಲಿ, ಯಾವಾಗ ಬೇಕೆಂದರೆ ಆಗ ಅವರು ಪೆನ್ನಿನಿಂದ ಹಾಳೆಯ ಮೇಲೆ ಕವನಗಳನ್ನು ಒಡಮೂಡಿಸಿದ ರೀತಿ. ಸಿಟಿ ಬಸ್ಸಿನ ತಿಕೀಟಿನ ಎರಡಂಚಿನ ಜಾಗದಲ್ಲಿ;

ರೇಶನಿಂಗ್ ಕಚೇರಿಯ ಯಾವುದೋ 'ನಮೂನೆ'ಯ ಕಾಗದದ ಅಂಚಿನಲ್ಲಿ, ಈ ತರದ ಅವರ ಬರವಣಿಗೆಯನ್ನು ನಿರಂಜನರು ''ಮಾಯಕೋವ್ಸಕ್ಕಿಯ ಪರಂಪರೆ'' ಎಂದು ವಿನೋದದಿಂದ ಕರೆದಿದ್ದಾರೆ. ಅದು ತೀರ ನಿಜ. ಯಾವುದೋ ಒಂದು ಸಂಜೆ, ಕವಿ ಸು. ರಂ. ಎಕ್ಕುಂಡಿಯವರು 'ಜನಶಕ್ತಿ'ಯ ಮುದ್ರಣಾಲಯಕ್ಕೆ ಭೆಟ್ಟಿಕೊಟ್ಟ ಸಂದರ್ಭ. ಎಕ್ಕುಂಡಿಯವರು ಪತ್ರಿಕೆಗಾಗಿ ಮಾಯಕೋವ್ಸಕ್ಕಿಯ ಕವನವೊಂದರ ಅನುವಾದದಲ್ಲಿ ತೊಡಗಿ ಕುಳಿತಿದ್ದರು. ಅವರ ಮಗ್ಗುಲಿಗಿದ್ದ ಶಿವೇಶ್ವರ ಸುಮ್ಮನೆ ಕೂಡದೆ ''ಸೋವಿಯಟ್ ಬಾಂಧವರಿಗೆ'' ಎಂಬ ೨೦ ಪಂಕ್ತಿಗಳ ಪದ್ಯವೊಂದನ್ನು ರಚಿಸಿಯೇ ಬಿಟ್ಟರು. ಕ್ರಾಂತಿಗೆ ಸಲ್ಲುವ ಧನ್ಯಭಾವದ ಆ ಪದ್ಯದ ಮೊದಲ ನಾಲ್ಕು ಸಾಲುಗಳು ಹೀಗಿವೆ :

> ಉರಿ ರೂಪಾಂತು, ಸ್ವಾತಂತ್ರ್ಯ ಬಂತು, ಅರೆಬಿರಿದ ನಾಡ ಜೀವ
> ಸುಖಸಮತೆ ಸವಿಯ ಹೆಗ್ಗಳಿಕೆಯಾಸೆ ; ನೀಗುವವು ನಿತ್ಯನೋವ
> ಈ ಸುಡುವ ನೆಲಕೆ, ಈ ದುಡಿವ ಕುಲಕೆ, ನಗೆ ಸಲಿಗೆ ಬಹುದೂರ
> ನೆಲೆನಿಲ್ಲಲೆಂದು ಸೌಹಾರ್ದಭಾವ ಹೂಡುವೆವು ನೂರು ಸಮರ ;

ಕವನದ ಕೊನೆಯ ನಾಲ್ಕು ಸಾಲುಗಳು :

> ಮನದಂದು ನಿಮ್ಮ ಸಾಹಸದ ದಿವ್ಯ ಉತ್ಸಾಹಪೂರ್ಣದಿರವ
> ವಂದಿಸುವೆವಿಂದು, ಬಂಧುತ್ವ ಬಲದ ಹಾರೈಕೆಯಿಂಬು ಸ್ವರವ
> ಆಲಿಸಿದಿರಿ ನೀವು ಜಗದೆಲ್ಲ ಚರಿತೆಯುನ್ನತಿಕೆ ಇತ್ತ ನೆರವು
> ಮರೆಯಾಗದಖಿಲ ಜನಕೋಟಿಯೆದೆಯ ತುಂಬಿಹುದು ನಿಮ್ಮ ಕುರುಹು.

ಕವಿ ಶಿವೇಶ್ವರರು ಶ್ರಮಜೀವಿ ಚಳುವಳಿಗೆ ಕೊಟ್ಟ ಕೊಡುಗೆಯೆಂದರೆ, ತಮ್ಮ ವೈಯಕ್ತಿಕ ಕಷ್ಟ-ನಷ್ಟಗಳನ್ನೂ ಲೆಕ್ಕಿಸದೆ 'ಜನಶಕ್ತಿ'ಗಾಗಿ ದುಡಿದದ್ದು; ಲೇಖನ, ಬರಹಗಳಲ್ಲಿ ತೊಡಗುವ ಮೂಲಕ ಅವರು ತಮ್ಮ ವೈಯಕ್ತಿಕ ತ್ರಾಸು-ತೊಂದರೆಗಳನ್ನೂ ಮರೆಯುತ್ತಿದ್ದುದು. ಹೊಸ ಹೊಸ ಪದ ಪ್ರಯೋಗದಲ್ಲಿ ಪರಿಣತರಾಗಿದ್ದ ಅವರಿಂದ ಕನ್ನಡಕವಿತೆಗೆ ದೊರೆತ ಕೆಲವು ನವೀನ ಪದಗಳೆಂದರೆ- ''ವಿಪ್ಲವ ವಂದನೆ'', ''ರಕ್ತ ನಮಸ್ಕಾರ'', ''ಕೆಂಗಾಯನ'', ''ಬಾಳ ಕೊಳೆ ಜೊಂಡು'' ಇತ್ಯಾದಿ. ಶಿವೇಶ್ವರರ ಕಾವ್ಯ ಮತ್ತು ಬದುಕಿನ ಸಾಧನಗಳನ್ನು ಹತ್ತಿರದಿಂದ ಕಂಡು ಅನುಭವಿಸಿದ್ದ 'ನಿರಂಜನ'ರು ಅವರ ಬಗ್ಗೆ ಶ್ರದ್ಧಾಂಜಲಿ ರೂಪದ ತಮ್ಮ ಒಂದು ಉಲ್ಲೇಖದಲ್ಲಿ ಹೀಗೆ ಹೇಳಿದ್ದಾರೆ :

''ನಮ್ಮ ಬುದ್ಧಿಜೀವಿ ಯುವಜನಾಂಗದ ಒಂದು ವಿಭಾಗ, ವರ್ಗಜಾಗೃತಿಯ ಕಾಲಘಟ್ಟದಲ್ಲಿ ಕರ್ನಾಟಕದ ಶ್ರಮಜೀವಿ ಜನಸಮುದಾಯದೊಡನೆ ಒಂದಾಗ ಲೆಳಸಿತು. ಆ ವಿಭಾಗದ ಪ್ರತಿನಿಧಿ ಶಿವೇಶ್ವರ ದೊಡ್ಡಮನಿ. ಅವರ ಹೆಸರು ಚಿರಸ್ಥಾಯಿಯಾಗುವುದು..........ಭವಿಷ್ಯತ್ತಿನ ನಿರ್ಮಾತೃಗಳಾದ, ತಮ್ಮ ಗುರಿಯನ್ನು ತಾವೇ ರೂಪಿಸುವ ಸಾಮರ್ಥ್ಯವುಳ್ಳ, ಇತಿಹಾಸದ ಸಾಧನಗಳಾದ, ಉದಯಿಸಲಿರುವ ಹೊಸ ಸಮಾಜದ ಶಿಲ್ಪಿಗಳಾದ, ಕರ್ನಾಟಕದ ಶ್ರಮಜೀವಿಗಳು ಶಿವೇಶ್ವರರನ್ನು ನೆನಪಿಡುವರು''.

ಸಾಹಿತ್ಯ ಸಾಧನೆ

ಶಿವೇಶ್ವರ ಸ್ವಭಾವತಃ ಕವಿ ಎಂಬುದು ಅವರ ವೈವಿಧ್ಯಮಯ ಪದ್ಯ ರಚನೆಗಳಲ್ಲಿ ವ್ಯಕ್ತವಾಗಿದೆ. ಕವಿ ವ್ಯಕ್ತಿತ್ವಕ್ಕೆ ಬೇಕಾದ ಆಕರ ಪರಿಕರಗಳನ್ನು ಕಟ್ಟಿಕೊಳ್ಳುವ ಉತ್ಸಾಹ ಮತ್ತು ಪ್ರಯತ್ನ ಅವರಿಗಿತ್ತು ಎನ್ನುವುದಕ್ಕೆ 'ಜಾನಪದ ಗೀತೆ'ಗಳನ್ನು ಸಂಗ್ರಹಿಸುವಲ್ಲಿ ಅವರು ತೋರಿಸಿದ ಆಸಕ್ತಿ ಉದಾಹರಣೆಯಾಗಿದೆ. ಶಿಷ್ಟರೂಪದ ಪದ್ಯಗಳನ್ನು ಬರೆಯುವುದಕ್ಕೆ ಬೇಕಾದ ಓದುಗಾರಿಕೆ, ಒಡನಾಟಗಳನ್ನವರು ಸ್ನೇಹಪೂರ್ವಕ ಬೆಳೆಸಿಕೊಂಡಿದ್ದರು; ಒಬ್ಬ 'ಹಳ್ಳಿಗ'ನಾಗಿ ಜನಪದ ಧಾಟಿಯಲ್ಲಿ ಪದ್ಯ ಬರೆಯುವುದರಲ್ಲೂ ಅವರ ಸಹಜ ಪ್ರತಿಭೆ ಕೈಗೂಡಿಸಿದೆ. ಇಂಗ್ಲೀಷಿನ ಓದುಗಾರಿಕೆಯಿಂದ ಶಿವೇಶ್ವರರ ಮೇಲೆ ಆದ ಪರಿಣಾಮವೆಂದರೆ 'ಸಾನೆಟ್'ನಂತಹ ಪದ್ಯಶಿಲ್ಪವನ್ನು ತಮ್ಮ ಕ್ರಾಂತಿಕಾರಕವಾದ ಶಿಷ್ಟ ಸಂವೇದನೆಯ ಅಭಿವ್ಯಕ್ತಿಗೆ ಅವರು ವಿಪುಲವಾಗಿ ಬಳಸಿಕೊಂಡಿದ್ದು.

ಸಾನೆಟ್‌ಗಳು

ಒಟ್ಟು ಮೂವತ್ನಾಲ್ಕು ಸಾನೆಟ್ ಪದ್ಯಗಳು ನಮಗೆ ಲಭ್ಯವಾಗಿದ್ದು ಅವನ್ನಿಲ್ಲಿ ಸಂಗ್ರಹಿಸಲಾಗಿದೆ. ಇವು ಅಷ್ಟಷಟ್ಪದಿಯ (೮+೬ ಪಂಕ್ತಿಗಳ ಯೋಜನೆ) ರಚನೆಗಳಾಗಿವೆ. ಎರಡು ರಚನೆಗಳು ಮಾತ್ರ ಭಿನ್ನವಾಗಿವೆ (೪ + ೪ + ೪+೨ ಹೀಗಿವೆ) ಅಂತ್ಯಪ್ರಾಸ ಜೋಡಣೆಯಲ್ಲಿ ಸಾಂಪ್ರದಾಯಿಕ ಯೋಜನೆಯನ್ನು ಶಿವೇಶ್ವರರು ಕಟ್ಟುನಿಟ್ಟಾಗಿ ಪಾಲಿಸಿಲ್ಲ, ಭಾವಾರ್ಥಕ್ಕೆ ಗಮನಕೊಟ್ಟು ಕೆಲವೊಮ್ಮೆ ಒಂದೇ ಅಕ್ಷರ ಪ್ರಾಸವನ್ನು ಬಳಸಿ ಕೊಂಡದ್ದುಂಟು. ಸಾನೆಟ್‌ನ ಶಿಸ್ತನ್ನು ಅನುಸರಿಸಿಯೂ ಶಿವೇಶ್ವರರು ತಮ್ಮ ಭಾವಾವೇಶವನ್ನು ಮುಕ್ತವಾಗಿ ಹರಿಬಿಟ್ಟಿದ್ದಾರೆ. ಅನುಪ್ರಾಸದ ಬಳಕೆಯಿಂದ ಸಾನೆಟ್‌ಗಳ ಭಾವಾಭಿವ್ಯಕ್ತಿಗೆ ಸೊಗಸು ಬಂದಿದೆ. ಹಲವೆಡೆ ಶ್ಲೇಷಾರ್ಥಗಳನ್ನು ಹೊಮ್ಮಿಸುವ ಪದಗಳನ್ನು ಅತ್ಯಂತ ಸಹಜವಾಗಿ ಹೊಂದಿಸಿದ್ದಾರೆ. ಪದಸಂಯೋಜನೆ ಮಾಡುವಾಗ, ಕವಿ ಅನೇಕ ಕಡೆ ಹೊಸ ಹೊಸ ಸಮಾಸೋಕ್ತಿಗಳನ್ನು ಸೃಷ್ಟಿಸಿ ಬಿಡುತ್ತಾರೆ. ಉದಾ : ನನ್ನಿ ಬಳ್ಳಿ (ಸತ್ಯ ಹಬ್ಬಿಸುವ ಬಳ್ಳಿ); ಕವಿಭ್ರಮರ ; ಎದೆಬೀದಿ ; ಹಂಗುಣೆಯ ವಿಷಗೂಳು ; ಅಳುಗಾನದೆದೆ ಸರವುಗಳ ; ಸೊದೆಶಮನ ; ಬನ್ನಗುಡಿಯೊಳಗಿದ್ದು ; ನನ್ನ ನೂರೆಂಟು ಕಂಟಕ ಕೋಂಟೆ ಕೊತ್ತಲ ; ಹೆಬ್ಬಲದ ನಗೆ ದುಡಿಸಿ; ಸಣ್ಣತನದುರಿನೇಣ; ಮೌಢ್ಯತೆಯ ತಲೆಯೊಡ್ಡು ಸಮರ ಸಮತೆಗಳ ರಣಭೇರಿ ಇತ್ಯಾದಿ. ಶಿವೇಶ್ವರರದು ರಭಸದ ಶೈಲಿ. ಸಾನೆಟ್ಟು ಅವರಿಗೆ ಪ್ರಿಯವಾಗಲು, ಸ್ವಲ್ಪದರಲ್ಲಿ ಸಾಂದ್ರವಾಗಿ ಆದರೆ ರಭಸದಿಂದ ಭಾವಾವೇಗವನ್ನು ಕಲ್ಪಿಸಿಕೊಡಬಹುದಲ್ಲ ಎಂಬ ಯುಕ್ತಿ. 'ಜನಶಕ್ತಿ'ಗಾಗಿ ಕೆಲವು ಸಲ ಅವಸರದಲ್ಲಿ, ಸಂದರ್ಭದ ಒತ್ತಡಕ್ಕೆ ಒಳಗಾಗಿ ಬರೆದಂಥವೂ ಇಲ್ಲಿವೆ. ಮತ್ತೆ ಕೆಲವು ಒಂದೇ ಭಾವಸಂದರ್ಭವನ್ನು ಬೇರೆ ಬೇರೆ ಬಗೆಯಲ್ಲಿ ಪ್ರಯೋಗಕ್ಕೆ ಒಳಪಡಿಸಿದಂತಿವೆ.

ಶಿವೇಶ್ವರರ ಸಾನೆಟ್ಟುಗಳ ಧಾಟಿ ಬಹಿರ್ಮುಖವಾಗಿರುವುದೇ ಹೆಚ್ಚು.

ಈ ಬುವಿಗೆ ಅಸದಳವು ನನ್ನಿಯಲ್ಲವೆ ಒಲವು ? ಇದು ನಮ್ಮ ಉದ್ಘೋಷ: 'ಬದುಕಿಸುವುದೆಮ್ಮೊಲವು ! ಎಂದು ಹೇಳುವ ಅವರು, ಒಳದನಿಯನ್ನೂ (ಪ್ರೀತಿ, ವಿಶ್ವಾಸದ ಹಾರ್ದಿಕ ಭಾವನೆಗಳನ್ನು) ಸಮೂಹದ ಜಾಗೃತಿಗೆ, ಜನಪ್ರಜ್ಞೆಯ ಅರಳುವಿಕೆಗೆ ಎತ್ತಿದವರು. ೧೯೪೭ ರ ಮೊದಲು ರಚಿಸಿದ ಸಾನೆಟ್‌ಗಳಲ್ಲಿ ದೇಶ ಸ್ವಾತಂತ್ರ್ಯದ ಹಂಬಲವಿದ್ದರೆ, ಸ್ವಾತಂತ್ರ್ಯಾನಂತರದ ರಚನೆಗಳಲ್ಲಿ ಸಮಾಜದ ತೀವ್ರ ಬದಲಾವಣೆಯ ಕರೆ ಇದೆ. ಜನತೆಗೆ 'ರಕ್ತ ಸಂದೇಶ' ಕೊಡುವ ಕೆಚ್ಚು ಮತ್ತೆ ಮತ್ತೆ ಪ್ರಕಟವಾಗಿದೆ. ಸ್ವತಂತ್ರ ಭಾರತದ ಸರಕಾರ ಬಂಡವಾಳಶಾಹಿಗಳ ಆಡುಂಬೊಲವಾಗುತ್ತಿದ್ದ ಸನ್ನಿವೇಶಕ್ಕೆ ಕವಿ 'ಧಿಕ್ಕಾರ' ಹೇಳುವಾಗ ದನಿ ಕೆರಳಿದೆ.

'ಲೇಖನಿಯ ಉದ್ಘೋಷ–
ಕೆರಡು ಬಗೆದರೆ ನಿಮ್ಮ ಜೀವಕೆಲ್ಲಿಯ ಚಿರತೆ !
–ಪುಣ್ಯಭೂಮಿಗೆ ಕುಂದು–ಮಣ್ಣುಪಾಲೀ ಘನತೆ !

ಸ್ವಪ್ನ ಸಂದೇಶ, ಸಂಕ್ರಾಂತಿ, ಮಾರ್ಕ್ಸಿಂಗಾರ್ಕಿ, ಮೀಟ್ ಮೈ ಪೀಪಲ್ ಕವಿತೆಗಳಲ್ಲಿ ಕವಿ, ಬಹಿರಂಗ ಕರೆಯನ್ನು ಕೊಡುವ ರೀತಿಯೇ ಪ್ರಧಾನವಾಗಿದೆ.

ಶಿವೇಶ್ವರರ ಮೃದು ಮಧುರ ಆಪ್ತಭಾವವನ್ನು ಹೊತ್ತ ಸಾನೆಟ್‌ಗಳು ಅಂತರಂಗವನ್ನು ತೆರೆದಿಟ್ಟಿವೆ. ಮಮತೆಯ ಶೃತಿ, ವಾತ್ಸಲ್ಯ ವಾರಿಧಿಯ ನಗೆ ಮಗಳೆ ನರ್ಸು ; ನವಿಲೂರ ತಾಯಿಗೆ ; ಬಾಪೂ–ಇವು ಭಾವಗೀತೆಯ ಮಂದ್ರ ಶೃತಿಗಳಿಂದ ಕೂಡಿವೆ. ಸಾನೆಟ್ ರೂಪದಲ್ಲಿ ಶಿವೇಶ್ವರರು ಅಂದು ಸಾಧಿಸಿದ ಯಶಸ್ಸು ಇಂದಿಗೂ ಅಭ್ಯಾಸಕ್ಕೆ ಮತ್ತು ಅನುಭೂತಿಗೆ ಉತ್ತಮ ಮಾದರಿಯಾಗಿವೆ.

'ಗಾಂಜ್ಬಡ್ಕನ ಪದಗಳು'

ಜಿ. ಪಿ. ರಾಜರತ್ನಂರ 'ಎಂಡ್ಕುಡ್ಕರತ್ನ' ನಿಂದ ಸ್ಫೂರ್ತಿ ಪಡೆದಿರಬಹುದಾದ ಶಿವೇಶ್ವರ, ಐದು 'ಗಾಂಜ್ಬಡ್ಕನ ಪದ'ಗಳನ್ನು ಬರೆದಿದ್ದಾರೆ. ವಿಡಂಬನೆಯ ಧಾಟಿಯ, ಪಕ್ಕಾ ನವಿಲೂರ ಆಡುಮಾತಿನ ಈ ಪದಗಳಲ್ಲಿ ಶಿವೇಶ್ವರ ತಮಗಿದ್ದ ಸಾಮಾಜಿಕ ಕಾಳಜಿಯನ್ನೇ ಬಿಂಬಿಸಿದ್ದಾರೆ ಹಳ್ಳಿಯಲ್ಲಿ ಮನೆ ಮಾಡಿದ ಮೂಢ ನಂಬಿಕೆಯ ಹಾವಳಿ, ಸಾವಕಾರ ಜನರಿಂದ ಆಗುವ ಬಡವರ ಶೋಷಣೆ–ಇಲ್ಲಿ ತೀವ್ರ ಟೀಕೆಗೆ ಒಳಗಾಗಿವೆ. ಗಾಂಜಾದ (ಮತ್ತು ತರಿಸುವ ಮಾದಕಪದಾರ್ಥ) ಚಿಲ್ಮಿ (ಗಾಂಜಾ ಹಾಕಿದ ಕೊಳವೆ) ಯನ್ನು ಎಳೆಯುವಾಗ ಹೊರಡುವ ಹಾಡುಗಳಿಂದ ಒಂದು ದೊಡ್ಡಹಬ್ಬವೇ ತನಗಾಗುವುದೆಂದು ಹೇಳುವ ಕವಿ,

ಮೈಸೂರ್ಕ್ ಇದ್ದಂಗ ಒಬ್ಬಾಂವ ಅರ್ಸ
ನಮ್ಗೊಬ್ಬ ಅರ್ಸ ಗಾಂಜಿ

ಎಂದು ಗಾಂಜಾಸೇವನೆಯಿಂದ ತನ್ನಲ್ಲಿ ಹುಟ್ಟುವ ಉನ್ಮಾದದ ಧೈರ್ಯವನ್ನು ಕವಿ ಸಮರ್ಥಿಸಿಕೊಂಡ ರೀತಿ ಮನೋಜ್ಞವಾಗಿದೆ. ದಮನಗೊಂಡ ಬಡವನ ಸಿಟ್ಟು,

ಅಸಹನೆ, ನ್ಯಾಯದ ಕಲ್ಪನೆಗಳು ಸುಪ್ತ ಮನಸ್ಸಿನಲ್ಲಿ ಉಳಿದಿರುತ್ತವೆ. ಅವನ್ನು ಗಾಂಜಾ ಸೇವನೆಯ ನೆಪದಲ್ಲಿ ಬಹಿರಂಗಕ್ಕೆ ತಂದು ನಿಜದ ಸೂಜಿಮೊನೆಯ ಮಾತುಗಳಿಂದ ಚುಚ್ಚುವ ಕಲಾತ್ಮಕ ಪ್ರಯತ್ನ ಇಲ್ಲಿ ಸಾರ್ಥಕವಾಗಿದೆ. ಬಡವರ ಹಾಗೂ ದುಡಿಯುವವರ ಪ್ರತಿನಿಧಿಯಾದ 'ಗಾಂಜ್ಬಡ್ಕ', ದೇವರ ಬಗ್ಗೆ ನುಡಿಯುವ ಈ ಮಾತು ನಿಷ್ಠುರವಾಗಿರುವಷ್ಟೇ ವಸ್ತುನಿಷ್ಠವಾಗಿದೆ.

ಎಲ್ಲಿತನ್ಕ ದೇವರ್ಗಿಲ್ಲೋ
ಬಡವರ್ನ್ ಎತ್ತೋ ಗುಣ
ಅಲ್ಲೀತನ್ಕಾ ನಮ್ಗೆಲ್ಲೀದೋ
ದೇವರ್ನ್ ಹೊಗಳೊ ಋಣ !

''ಕಾಲಕ್ ತಕ್ಕಂಗ್ ಬದ್ಲಸ್ತೇವಿ ಜಗತ್; ಜನ್ರೇ ಕೇಳಿ'' ಎಂದು ಆರಂಭವಾಗುವ ಬದ್ಲಾಪ್ಣಿ ಪದ್ಯ, ಸಿದ್ಧಲಿಂಗಯ್ಯನವರ 'ಹೊಲೆ ಮಾದಿಗರ ಹಾಡು' ಸಂಕಲನದ (೧೯೭೬) ಪದ್ಯಗಳ ಜತೆ ಹೋಲಿಕೆ ಬೇಡುತ್ತದೆ.

''ಜಾಡಿಸ್ಸಿ ಒದ್ರ, ಗಡಿ ಭದ್ರ, ಆಗೋದ್ ಎಲ್ಲಾ ಎದ್ರ ಇಂದಿನ್ ಬಾಳು, ಮುಂದಿನ್ ಕೂಳು—ಇದ್ದದ್ ಕಂಟೀನ್ ಕೀಳು'' ಎನ್ನುವುದು ಕವಿಯ ದಿಟ್ಟ ಹಾಗೂ ದಿಟ ನಂಬಿಕೆ.

ಹೇಳೋರ್ ಎಷ್ಟಂತ ಹೇಳ್ತಾರಣ್ಣ
ತಿಳ್ಕೋ ನಿಂದಿನ್ ನೀನು
ನಿನ್ಗ ಹೊರ್ಸಿದ್ ಹೊರೀ ಒಗದ್ರ
ಗಟ್ಟಿ ಆದೀತ್ ಬೆನ್ನು.

ಎಂಬ ತೀರ್ಮಾನದ ಕರೆ ಕೊಡುವಾಗ 'ಗಾಂಜ್ಬಡ್ಕ'ನ ಸಿಟ್ಟು, ವೈಚಾರಿಕ ಆಯಾಮ ಪಡೆಯುತ್ತದೆ.

ಸಲಾಂ ಮಾಡಿದ್ರ ಹಲ್ಗೀ ಹಿಡ್ಸಿ
ಬಯ್ತಾರ್ನ್ಸಡುಗಾಡ್ದಲ್ಲು !
ಬಾಯ ಕಾಣದೀರ್ ಸಾಯ್‌ಬ್ಯಾಡ್ ಇನ್
ಬಾರಸ್ ಕಾಳ್ಗದ ಕಣೆ;
ಸಹಾಯ ಸಿಗದೀರ್ ಸಾಯ್‌ಬ್ಯಾಡ್ ಇನ್
ನಿನ್ಗಿನ್ ನೀನೆ ಹೊಣೆ.

ಶಿವೇಶ್ವರರು 'ಜನಶಕ್ತಿ'ಯ ಆಂತರ್ಯವನ್ನು ಕೆಣಕುವುದು ಹೀಗೆ. ರೈತರೂ ರೈತ ಕೂಲಿಕಾರರೂ ಜಮೀನ್‌ದಾರೀ ಪದ್ಧತಿಗೆ ತಿರುಗಿ ಬೀಳಬೇಕೆಂದು ಸ್ಪಷ್ಟವಾಗಿ ಕರೆಕೊಡುವಾಗ, ವರ್ಗಪ್ರಜ್ಞೆಯ ನೋವನ್ನು ತೋರಿಸಿಕೊಡುತ್ತಾರೆ; ನೋವೆ—ಕ್ರೋಧವಾಗಿ, ಶೋಷಣೆಯಿಂದ ಬಿಡಿಸಿಕೊಳ್ಳುವ ಕೆಚ್ಚು ಹೆಚ್ಚಿಸಬೇಕೆಂಬ ಭಾವ ಈ ಪದಗಳಲ್ಲಿ ಸೊಗಸಾಗಿ ಹೊಮ್ಮಿದೆ.

ಭಾವಗೀತೆಗಳು

ಶಿವೇಶ್ವರರ ಮೂವತ್ತಾರು ಭಾವಗೀತೆಗಳು ಇಲ್ಲಿ ಸಂಗ್ರಹವಾಗಿವೆ. ಹದಿಹರಯದಲ್ಲೇ ಅಂದರೆ ೧೯೪೨–೪೪ರಲ್ಲೇ ಕವಿತೆ ಬರೆಯಲಾರಂಭಿಸಿದ ಸೂಚನೆಗಳು ಇಲ್ಲಿವೆ. 'ಸಾನೆಟ್'ಗಳಲ್ಲಿರುವ ಪ್ರಖರತೆ, ರಭಸ, ಇಲ್ಲಿಲ್ಲ. ಇವುಗಳ ರಚನೆಯ ಮನೋಭಾವ ಮೃದುವಾಗಿದೆ; ವ್ಯಕ್ತಿನಿಷ್ಠವಿದೆ; ಅಂದಂದಿನ ಹಾರ್ದಿಕ ಅನುಭವಗಳನ್ನು ದಾಖಲಿಸುವ ಪ್ರಶಾಂತ ಚಿತ್ತ ಇಲ್ಲಿದೆ. ನಿಸರ್ಗ, ಹಳ್ಳಿಯ ಪರಿಸರ, ಕುಟುಂಬ, ಸ್ನೇಹವರ್ಗ, ಹಳ್ಳಿಗರ ಮುಗ್ಧ ಸಂವೇದನೆ ಈ ಭಾವಗೀತೆಗಳಲ್ಲಿ ವಸ್ತುವಾಗಿದೆ. ಛಂದೋರೂಪಗಳಲ್ಲಿ ವೈವಿಧ್ಯವಿದೆ. ಪ್ರಯೋಗಶೀಲತೆಯೂ ಶಿವೇಶ್ವರರಿಗೆ ಸಾಧ್ಯವಾಗಿದೆ. ಶರಷಟ್ಪದಿಯಲ್ಲಿರುವ 'ಕೋಗಿಲೆ' ಪದ್ಯವು ಕಾವ್ಯದಿಂದ ಬದುಕಿಗೆ ಆಗಬೇಕಾದುದೇನು ಎಂಬ ಹಾರೈಕೆ, ಹೊಸತನದಿಂದ ಗಮನ ಸೆಳೆಯುತ್ತದೆ.

'ನರಕವಿಗಳ
ಹೃದಯಸ್ಥಳ–
ಕಿಂಬಾಗಲಿ, ಕೆಂಗಾಯನಾ ।'

ಎನ್ನುವಲ್ಲಿ ಶಿವೇಶ್ವರರು ಹೃದಯದ ಮಾರ್ದವತೆ ಮತ್ತು ಬುದ್ಧಿಯ ಸಮತೆ ಎರಡನ್ನು ಹದವಾಗಿ ಬೆರೆಸುವ ಜಾಣ್ಮೆ ತೋರುತ್ತಾರೆ. ದೇಶ ಸ್ವಾತಂತ್ರ್ಯದ ಬೆನ್ನಲ್ಲೇ ಉಂಟಾದ ಕೋಮುಗಲಭೆ, ಜಾತಿ ವೈಷಮ್ಯಗಳು ಸಾರ್ವಜನಿಕ ಜೀವನವನ್ನು ಅಸಹನೀಯ ಗೊಳಿಸಿದ ಸಂದರ್ಭದಲ್ಲಿ, ನವಿಲೂರಿನ ಈ ಕೋಗಿಲೆ, ಕೆಂಗಾಯನ ಹೊರಡಿಸಿದ್ದು ಒಂದು ಸಕಾಲಿಕ ಪ್ರತಿಕ್ರಿಯೆಯೇ. ಗ್ರಾಮೀಣ ಜೀವನವನ್ನು ತನ್ನ ಉಸಿರಾಗಿ ಮಾಡಿಕೊಂಡ ಈ ಕವಿ, ಹಳ್ಳಿಗರ ನುಡಿ ಬೆಡಗನ್ನು ಕಾವ್ಯಾಭಿವ್ಯಕ್ತಿಗೆ ಬಳಸಿಕೊಳ್ಳಲು ಎಷ್ಟೂ ತಿಣುಕಾಡಿಲ್ಲ. ತ್ರಿಪದಿ, ಚೌಪದಿಗಳಲ್ಲಿ ಹರಿಬಿಟ್ಟ ಭಾವಗಳು, ಸನ್ನಿವೇಶದ ವರ್ಣನೆಗಳು ಸುಭಗತೆಯಿಂದ ಓದಿಸಿಕೊಳ್ಳುತ್ತವೆ. ತಾಯಿ, ಹೆಂಡತಿ, ಗೆಳೆತನಗಳನ್ನು ಕುರಿತ ವೈಯಕ್ತಿಕ ಭಾವಗೀತೆಗಳನ್ನಲ್ಲದೆ, ಪ್ರಣಯ,ಶೃಂಗಾರದ ಆಂತರಿಕ ರಾಗಗಳಿಗೂ ಶಿವೇಶ್ವರ ಕವಿತೆಯ ರೂಪ ಕೊಟ್ಟಿದ್ದಾರೆ. 'ಯಾವಕಾರಣ' ಕವನದ ಭಾವಾಭಿವ್ಯಕ್ತಿಯಲ್ಲಿ ನಾಟಕೀಯ ಸೊಗಸಿನೊಂದಿಗೆ, ನುಡಿಗಟ್ಟಿನ ಸಹಜತೆಯೂ ಮೇಳವಿಸಿ, ಭಾವಗೀತೆಯ ನವೀನ ಅನುಭವ ಉಂಟಾಗುತ್ತದೆ.'ಕಾಳಿ', 'ವಿಜಯೀಭವ', 'ವೀರ ಕಹಳೆ', 'ಕುರುಡು ಬೆಳಕಿಗೆ' ಕವನಗಳಲ್ಲಿ ಕ್ರಾಂತಿಯ ಕಹಳೆಯನ್ನೂದುವ ವೀರತನದ ಕೆಚ್ಚು ಪ್ರಕಟವಾಗಿದೆ. ದೇಶದಲ್ಲಿ ಸ್ವಾತಂತ್ರ್ಯದ ಮಹಾ ಚಳುವಳಿಯ ಜತೆ ಜತೆಗೇ, ಸಾಮಾಜಿಕ ದಾಸ್ಯದ ವಿರುದ್ಧವೂ ಹೋರಾಡುವ ಪ್ರಜ್ಞೆಯು ಶಿವೇಶ್ವರರಲ್ಲಿ ಉರಿಯುತ್ತಿತ್ತು. ಭಾವಾವೇಶ ಪ್ರಧಾನವಾದ ಈ ಭಾವಗೀತೆಗಳಲ್ಲಿ ವೈಚಾರಿಕತೆಯೂ ಪ್ರಖರವಾಗಿರುವುದು ಗಮನಿಸಬೇಕಾದ ಅಂಶ.

ಜೀವನವನ್ನು ತಾತ್ತ್ವಿಕವಾಗಿ ಕಾಣುವ ಒಳನೋಟವೂ ಶಿವೇಶ್ವರರಿಗೆ ಸಹಜವಾಗಿ ಮೈಗೂಡಿದೆ. 'ಜೀವನ–ಪ್ರೇರಣೆ', 'ಸ್ವಪ್ನ ಪೂಜೆ'ಯಂತಹ ಭಾವಗೀತೆ

ಗಳಲ್ಲಿ ಅದು ಹೃದ್ಯವಾಗಿ ಕಾಣಿಸಿಕೊಂಡಿದೆ. ''ಇನ್ನೊಂದೀsssಟು ಪಲ್ಲೆ'' ದಾಂಪತ್ಯದ ಸಿಹಿ–ಕಹಿ ಹಂಚಿ ಉಣ್ಣುವ ಅನುನಯದ ಧಾಟಿಯಲ್ಲಿರುವ ವಿಶಿಷ್ಟ ಪದ್ಯ. ಭಾವಗೀತೆಯ ರೂಪ ರಚನೆಯಲ್ಲಿ ಸಾಕಷ್ಟು ಪ್ರಯೋಗಶೀಲತೆಯನ್ನು ತೋರಿಸುವ ಶಿವೇಶ್ವರ, ಆದರ್ಶ ಹಾಗೂ ವಾಸ್ತವತೆಯನ್ನು ದೂರ ಇಡದೆ ಎರಡನ್ನೂ ಅರಗಿಸಿ ಕೊಂಡು ರಚಿಸಿದ ಈ ಗೀತೆಗಳು ಅವರ ಕಾವ್ಯಜೀವನದ ಸಿರಿಸಂಪತ್ತಿನ ಆಸ್ತಿಯಂತೆ ತೋರುತ್ತವೆ.

ಹಾಡುಗಳ ಸಂಗ್ರಹ-ಗದ್ಯದ ಕೃಷಿ

ನವಿಲೂರು, ರಾಯಾಪೂರ, ಗಾಮನಗಟ್ಟಿ, ಉಣಕಲ್ಲು, ಸತ್ತೂರುಗಳನ್ನು ಮೇಲಿಂದ ಮೇಲೆ ಸುತ್ತಾಡಿ, ಕೃಷಿಕರ, ಕಾರ್ಮಿಕರ ಹಾಡುಗಳನ್ನು ಕೇಳಿಸಿಕೊಳ್ಳುತ್ತಿದ್ದ ಶಿವೇಶ್ವರ, ಅವೆಲ್ಲವನ್ನು ಲಿಪಿರೂಪಕ್ಕಿಳಿಸಿ ಪತ್ರಿಕೆಗಳಿಗೂ ಕಳಿಸಿ ದಾಖಲಿಸಿದ್ದಾರೆ. ಮನೆಯಲ್ಲಿ ತಾಯಿಯಿಂದ ಹಾಡಿಸಿ ಬರೆದುಕೊಂಡದ್ದೂ ಉಂಟು; ಈ ಜಾನಪದ ನಿಕ್ಷೇಪದಲ್ಲಿಯ ಕಾವ್ಯದ ಖನಿಜ ಗಟ್ಟಿಮುಟ್ಟಾಗಿದೆ. ತ್ರಿಪದಿರೂಪದಲ್ಲಿರುವ ಪದಗಳೇ ಹೆಚ್ಚಾಗಿರುವುದು ಇಲ್ಲಿಯ ವಿಶೇಷತೆ. ಕೋಲುಪದ, ಸುವ್ವಿಲಾಲಿಗಳೂ ಕೆಲವಿವೆ. ಲಿಪ್ಯಂತರವನ್ನು ಶಿವೇಶ್ವರರು ಅತ್ಯಂತ ಪ್ರಾಮಾಣಿಕವಾಗಿ ಮಾಡಿದ್ದು ಇನ್ನೊಂದು ವಿಶೇಷತೆ. ಹುಬ್ಬಳ್ಳಿ–ಧಾರವಾಡ ಪರಿಸರದ ಜಾನಪದ ನಂಬಿಕೆಗಳು; ಪ್ರಾದೇಶಿಕ ನುಡಿಗಟ್ಟುಗಳು ಇಲ್ಲಿ ದಟ್ಟವಾಗಿ ಕಾಣಿಸುತ್ತವೆ. ಒಂದು ಭಾವ ಅಥವಾ ಒಂದು ವಸ್ತುವನ್ನು ಕುರಿತ ತ್ರಿಪದಿ ಸರಣಿಯನ್ನು ಕೇಳಿಸಿಕೊಂಡು, ಅವಕ್ಕೆ ತಲೆಬರೆಹ ಕೊಟ್ಟು, ಸಂಕಲನರೂಪ ಕೊಡುವ ಶಿಸ್ತಿನ ಹವಣಿಕೆ ಎದ್ದುಕಾಣುತ್ತದೆ. 'ವಿಧವೆ'ಯ ಕುರಿತಾದ ತ್ರಿಪದಿಗಳನ್ನು ಸಂಗ್ರಹಿಸಿದ್ದುದು ಗಮನಾರ್ಹವಾಗಿದೆ. ಜಾನಪದ ಜೀವನವನ್ನು ಶಿವೇಶ್ವರ ಎಷ್ಟು ಪ್ರೀತಿಸುತ್ತಿದ್ದರೆನ್ನುವುದಕ್ಕೆ ಅವರ ಲೇಖನಗಳಲ್ಲಿ ಉದಾಹರಣೆಗಳಿವೆ. ೧೯೫೦ರ ಮುಂಚಿನ ಈ ಜಾನಪದಗೀತ ಸಂಪತ್ತು ದಾಖಲೆಗೆ ಹಾಗೂ ಅಧ್ಯಯನಕ್ಕೆ ಅತ್ಯಂತ ಸಮರ್ಪಕವಾಗಿದೆ. ಈ ಸಾಹಿತ್ಯವನ್ನು ಶಾಸ್ತ್ರೀಯವಾಗಿ ಸಂಕಲಿಸಿ ಪ್ರಕಟಿಸುವ ಅವಕಾಶ ಮಾತ್ರ ದೊಡ್ಡಮನಿಯವರಿಗೆ ಲಭ್ಯವಾಗಲಿಲ್ಲ.

ಶಿವೇಶ್ವರರ ಗದ್ಯ, ಪತ್ರಿಕಾಮಾಧ್ಯಮಕ್ಕೆ ಅನುಗುಣವಾದದ್ದು. ಸಣ್ಣಕತೆ, ಅನುವಾದಗಳಲ್ಲಿ–ಸ್ವಾನುಭವದ ಕಲ್ಪನೆಗಳೇ ಇವೆ. 'ಜನಶಕ್ತಿ'ಗಾಗಿ ಅವರು ಬರೆದಿದ್ದ ಲೇಖನಗಳಾವವೂ ನಮಗೆ ಸಿಕ್ಕಿಲ್ಲ. ಸಿಕ್ಕಿರುವ ಲೇಖನ–ಕತೆಗಳನ್ನು ಗಮನಿಸಿದರೆ, ದಿನಚರಿಯ ಬರೆಹಗಳಾಗಿ ಇವು ತೋರುತ್ತವೆ. 'ರಾಜಮಾ' ಕತೆಯಂತೂ ಅವರ ಹೃದಯದ ತುಡಿತಗಳ ರಸಸ್ಯಂದಿಯಾದ ಒಂದು ವರದಿ. ಕವಿಯಾಗಿ ಬಿಚ್ಚಿಕೊಂಡ ಶಿವೇಶ್ವರ, ಗದ್ಯ ಬರಹಗಾರನಾಗಿ ವಿಪುಲವಾದುದೇನನ್ನೂ ಮಾಡದೇ ಉಳಿದರು. ಈ ಸಂಕಲನದಲ್ಲಿ ಏಕತ್ರವಾಗಿರುವ ಶಿವೇಶ್ವರ ದೊಡ್ಡಮನಿಯವರ ಸ್ವರಚಿತ ಸಾಹಿತ್ಯವು ಪ್ರಗತಿ ಶೀಲ ಕಾಲಾವಧಿಯ ಸೃಜನಶೀಲ ಚೇತನದ ವಿಶಿಷ್ಟ ಕೊಡುಗೆ ಎಂಬುದಂತೂ ನಿಜ.

ಶಿವೇಶ್ವರ ದೊಡ್ಡಮನಿ : ಜೀವನ – ಸಾಹಿತ್ಯ

ಭಾಗ ಒಂದು ಸಾನೆಟ್‌ಗಳು

*

''ಜೀವಿಸುವುದೇತಕೋ ನೋವಿನಿತದೇತಕೋ
ಜೀವಕಳೆ ಕಸಿದುಂಡ ನೈರಾಶ್ಯಕಮಿತ ಬೆಳೆ.''
ಸಾಕು ನೋವಿನ ಕಾವು ತಿಳಿದಂತೆ ನಮ್ಮ ಇಳೆ.
ಇಲ್ಲಿ ಜಂಜಾಟ, ಕಟ್ಟಿಕೋ ಹೃದಯ ಕೋ–
ಟೆಯನೆನ್ನನಾಸರೆಗೆ ಕರೆ, ಬರುವೆ, ಕೊಳ್ಳಿಕೋ
ರಕ್ತ ಶಕ್ತಿಯನೀವ; ಬಗೆ ಹೇಳು ಜೀವ ಎರವೆ ?

*

ಚೆಂಬೆಳಕು (೧)

ಮಾತು–ಮೌನ, ಗಾನ–ಪವನ ಪರಿಪರಿಯುಪಭಾವನೆ,
ಸರ್ವ–ದೃಶ್ಯ, ಪರ್ವ–ಹಾಸ್ಯ ಆಶ್ರಯವನೆ ನೀನೆನೆ ;
ಕಾರ್ಯಭಾರ, ಕಾಲ–ಸಾರ, ನನ್ನಿಬಳ್ಳಿ ಕುಡಿ ಕೆಳೆ,
ಸಾಲುಗೊಂಡ ಬಯಕೆವಿಂಡು–ಕಲ್ಪವೃಕ್ಷ ಹೊಡೆಗಳೆ ;
ನಿತ್ಯ ನೆಳಲು; ತಾಪ ಮಳಲೆ ?–ತಂಪಿಗೆ ಮನ ತಾಗಿದೆ
ನವ–ನಯ ನಯನೋತ್ಕಲೆ ಧವಳ ಬೆಳೆಯೆ ಬೀಗಿದೆ ;
ಅನಂತಶಾಂತ ಅಂತಿಮಹಂತ ಗುರು ಸಾಧನೆ ಸಾಹಸ
ಅಣುಕಣ ಮೈಮಹಿಮೆಯಂತರಾಳಕೊಲಿದ ಹುಮ್ಮಸ !

ಕಂಬ ಬೇಡ–ಕಟ್ಟೆ ಕೂಡ, ಪ್ರಣತಿ ತೈಲವೇತಕೆ ?
ಇಳೆ–ಕಪ್ಪಿಗೆ, ಜನ–ತಪ್ಪಿಗೆ, ಎದೆಕೋಟೆಯ ಕುಹರಕೆ–
ಸಂಭವಿಸುವ ದುರ್ಜಾಡ್ಯವ ಇಲ್ಲಾಗಿಸು; ಕೊಡು ಹರಕೆ ;
ಅಸುವಾಗಿರು ಯಶವಾಗಿರು ಸಚರಾಚರಮಾ ಕೆಲಕೆ ;
ನಾ ಬಲ್ಲೆನು ಇದನೊಲ್ಲೆನು–ನೀಗದೆ ಈ ತಮ–ತಳಿಕೆ ?
ಬಿಜಯಂಗೈ–ಸೋಜಿಗಗೈ ! ಕಳೆತುಂಬಿಸು ಚೆಂಬೆಳಕೆ !

ಜೀವನ, ಜುಲೈ ೧೯೪೮

□□

ಕವಿ ಕೆಲಸ

ಕವಿಕೆಲಸ ಮಾಡಿ ಬುವಿಹಿತ ಕೂಲಿ ಬೇಡುವೆವು
ಕೊಳ್ಳಿ–ಲೇಖನಿಕ್ಕೈಯ, ಒಲವಿನೂರ್ಜಿತ ಹೃದಯ
ದುಡಿಮೆ ಸುಡುಗಾಡು ಫಲ ಪಡಿಪಾವು ಆದಾಯ
ಬೇಕು, ಬೇಡಿನ್ನೊಂದು–ಹಸಿದಿರಲು ಹಸು–ನೀವು

ಕರುಳಿನೊರತೆಯ ನೀರ ಹಣಿಸಿರಿನಿತೇ ಸವಿಯು
ಬರೆಸುವುದು ನೆಲಚಿತ್ರ, ಕವಿಮನಕೆ–ದುರ್ಬಲೆಯ
ಚಾಚದಿರಿ–ಶನಿಗಾಲ ತಾಂಡವಕೆ ವ್ಯಥೆಯ ಭಯ
ಕಂದಾಯ ಕೊಡುವುದೇ–ಇದು ಎಂಥ ಹಿರಿಯ–ಕಲೆಯು ?

ರಣಖಡ್ಗಧಾರೆಯೋ ಕಿಡಿಯ ತಡೆಗಳ ತೇರು
ಕ್ರಾಂತಿಮಾರಿಯ ಉರಿಯೋ ನಮಗಲ್ಲ ಮೂಲ ಮನೆ
ಹಾಡುವೆವು ಹಡೆದ ಬಡ ಒಡಲಗುಡಿ ಗಾನವನು
ಗಾಯತ್ರಿ–ಗರುವೆಂದು, ಪರಿಬಯಕೆ ನಿಮ್ಮ ಮರುದನಿಗೊಡಿರಿ

ಎದೆಯುಳ್ಳ ಜೀವಿಗಳೇ ಸಾಕುವಿರಾ
ನಿಮ್ಮ ಉಪವನಕೆನಿತು ಬೇಕಿಂಥ ಕವಿ ಭ್ರಮರ ?

೫–೪–೧೯೪೮

□□

ಕವಿತೆಗೆ

ನಿನ್ನ ನನ್ನೂರ ದಾರಿಯ ತುಂಬ ತುಳುಕಾಡಿ ಬಿಕ್ಕಿಸಿದೆ
ಹಲವು ದಿನಗಳ ಉಳಿಕೆ ಕಂಬನಿಯನುಕ್ಕಿಸಿದೆ
ಕಲಸಿ ಬಾಳಿನ ಹೊಳಪು ಬಣ್ಣನಯ
ಬಣ್ಣನೆಯ ಸವಿಸ್ಮೃತಿಯ ಹುಡುಕಿ ಸಡಗರ ಬೇಡಿ
ತೊಟ್ಟೆ–ತೊಡಿಸಿದೆ, ಎನಿತೊ ಹೂ ಬೆಡಗು ನಿನ್ನ ಮುಡಿ
ಸಾರುತಿರೆ–ಛೀ ಎಂದೆ ; ನಿನ್ನ ತನ್ಮಯತೆ ಬಯ–
ಲಂಬರಕೆ ಇನಶಶಿಯು ಸುತ್ತಿರಲು ಒಲವು ದಯ
ಧ್ವನಿಬೆಳಕ ನೀಡಿದುದ ಮನಕರಗಿ ಹಾಡಿ ಹಾಡಿ !

ಬರೆಯೆ ನಾನಿನ್ನೊಲ್ಲೆ–ಬಂತೇನು ? ಬಗೆಗೆಟ್ಟ–
ಬಹು ಜೀವದಿರುವಿಕೆಯ ತೀಡುವೊಡೆ–ತಿದ್ದುವೊಡೆ
ನನ್ನ ಕೈ ಸಣ್ಣ ಸಲ್ಲದು ದುಡುಕು–ನಿನಗೆ ಎಡೆ
ಕೊಡಲುಂಟು ಅಲ್ಲಿ–ಆ–ವೀರ–ಕೈ–ಎದೆ ಪಟ್ಟ ;
ಮೊಮ್ಮಗನ ಮದುವೆ ಮೆರವಣಿಗೆ ಕೇರಿಯದಾಂಟೆ
ಬಲಹೀನ ಮುದಿಯಜ್ಜಿಗದು ಕಾಣಬಹುದುಂಟೆ ?

೬-೪-೧೯೪೮

ಕಣ್ಣಿಗೆ

ಮಾಯಲೊಲ್ಲದ ನೋವೆ–ಕಾವು ಕಟ್ಟಳೆ ಬಾವೆ
ಗಡಸುಗುರುಡಿನ ಗವಿಯತಳಿರು–ತೋರಣವಾಗಿ
ತೊಳ ತೊಳಗಿ ಬೆಳಗುವೆಯಾ ? ಬವಣೆಯಾಶ್ರಮಯೋಗಿ
ನಿನ್ನ ತತ್ವವ ಹರಡು–ಮೂಡಲಿ ಪರದೆಯ ಹವೆ

ಕಮನಿಸಲಿ–ನನ್ನಸುವು–ಇರುವಂತೆ ನಾನಿರುವೆ,
ಹೂಗಳೆ ನನ್ನನು–ತೆಗಳೆ ನಾನಿನ್ನ–ಚಿರಬಾಗಿಯಾಗಿಸಿದೆ
ಇದ್ದರೇನೆ ಚಳಿಗಾಳಿ ಕಡುವಾಗಿ
ನನ್ನವನ ಕಗ್ಗನಗೆ–ಕೈ ಕಡಕೊಂಡು ತರುವೆ

ಜೀವ ಜೀವಕ್ಕೊಂದು ಉಪಚರಿತೆಯೆನುವ ತಿರೆ–
ಯಾಳವನು ಅಳೆದಜ್ಜದಿಬ್ಬನುಡಿಯಾಟದಲಿ, ಏನಿಲ್ಲ ?
ಬಾಯಿ ಮುಚ್ಚಿದ ಬಾಳ ಮೂಕ
ಅರಗಿಸುವೆ ನಿನ್ನ ಉರಿ, ಹೊತ್ತಿರುವೆ ನಿನ್ನ ಹೊರೆ

ಜೀವ ವೃಕ್ಷವನುಳಿವ ಸವಿಯ ಬೀಳ್ ಕೊಳ–ಹಣ್ಣೆ
ಏನೆಂದು ಬುದ್ಧಿಸಲಿ ನಿನ್ನಾಣತಿಗೆ ಕಣ್ಣೆ ?

೫–೬–೧೯೪೮

□□

ರಾಜಮಾ

ನಿನ್ನ ಎಡೆ ನಾಡಾಸೆ ನನ್ನಯಶ ನುಡಿಯಾಸೆ,
ನಿನ್ನ ಗುಡಿಸಲುಕಂಬ–ಕೋಟೆಗೊಂಡವು–ನನ್ನ
ಎದೆ ಬೀದಿ ಮಹಿಮೆಯಲಿ, ಕಣ್ಣು ಹಿಂಗುವ ಮುನ್ನ
ಬಾ ಎನ್ನು–ಓ ಎನ್ನು ; ಕಂಬನಿಯ ಹಿರಿಯಗಸೆ
ಬಾಗಿಲಕೆ ಹಾಡತೋರಣ ಕಟ್ಟಿದೋ, ದುರುಳದೆಸೆ
ಯಾಸರೆಯ ನಿಟ್ಟನೆಡೆ ಸಾಗಿಹುದು ಜನದ ಗುಣ
ನಿನ್ನೊಂದೆ, ಮುಕ್ಕುನಗಿಸುವ ಮಹಾಶಬ್ದಗಣ
ಮೂಢಗರುವಿಕೆಗಳಿವು ತರಲಿ–ಓ ತಾಯಿ ಬೀಸೆ......!

ರಾಜಮಾ, ಬಗೆಯೇಣಿ ತುಂಡಾಯ್ತು ತುಣುತುಣುಕು
ಆಶೆ–ಅಂಬುಧಿ ಇಂಗಿ ಮುಂಗಾಲ ಹಂಗುಣಿಯ
ವಿಷಗೂಳು ಬೇಡೆಮಗೆ......ಕಳೆದ ಸಿರಿ ಹಮ್ಮಿಣಿಯ
ದೀರ್ಘಯಾತ್ರಿಕ ನೆನೆದು, ಗೋಳಕೀರ್ತನೆ ಅಣಕು
ದನಿಗೆ ಬೆಪ್ಪಾದಂತೆ ನಮ್ಮ ಮತಿ, ಸರಸತಿಯ
ದೊರೆಯಜ್ಜಿ ಹಾಡು ಕೇಳುವೇ ನಮ್ಮ ನೆಲದ ಕತೆಯ !

೨೧–೩–೧೯೪೮

□□

ಸರೋಜಿನಿಗೆ (೧)

ವೇಗ, ವೇಗ ಸುವೇಗ, ಕಾಲುಗಾಡಿಯ ಗಾಲಿ
ಜೀವ–ಹವೆ–ನಮ್ಮೊಲುಮೆ ವರ್ಚಸ್ವಿನರ್ಚನೆಗೆ,
ಚರ್ಚೆ–ಮೂರ್ಛೆಯ ಮೌನ ಮಂತ್ರತತಿ ಪರ್ವನಗೆ

ನೆಲದ್ಹಂಗು ಹಿಡಿವಂತೆ ನೆಗೆನೆಗೆದು ನಿನ್ನ ಬಳಿ
ಸಾಮೀಪ್ಯವೊಂದೆ ಇಂದೀ ಇಳೆಯ ಗೊತ್ತುವಳಿ

ಎಂದು ಸೈತರುವಾಗ, ಅಲ್ಲಿ ತಬ್ಬಲಿ ಕೂಸು–
ಬಾಗಿಲಿಕ್ಕಿದ ಮನೆಯ ಮುಂದೆ ಎಳೆಮೈಯ ಹಸು–

ನಾಡಿ ಬೇಯಿಸುತ ಈ ಜಗಕೆ ಬೆರಗಾಗಿ; ಹುಳಿ–
ಗೊಂಡೆ, ಎದೆಯೊಡೆದೆ : ತನ್ನತನದೆದೆಗೆರಗಿ : 'ಸವಿ'

ಏನು ? ಹೇಳಿಕೊಡಿ ! ಚಿಂತನೆಯನೆರೆ ಜನಕೆಲ್ಲ
ಪ್ರಶ್ನಿಸುತ; ಕಂಗೆಟ್ಟು – ತಾಯಿ 'ಅಮರ'ಳು......ಇಲ್ಲ

ತಂದೆಯೊಬ್ಬನೆ–'ಎಲ್ಲ !' ಶಾಲೆಯಲಿ ; ಈ ಜೀವಿ–
ಶೈಶವದ ಸೆಣಸಾಟ–ನಮ್ಮ ಹೊಸ ನಾಡ ರಜ–
ತೋತ್ಸವಕೆ ದೀಪ ಬೆಳಗುವ ತಾಯಿ–ಹಾ–ಸರೋಜ– !

□□

ಸರೋಜಿನಿಗೆ (೨)

ಕಂಬನಿಯ ನಿಲುಗೊಂಬು ಮೊಳಗೆ, ನಾ ನನ್ನ ಮನ–
ತನುವುಂಡ ಉಮ್ಮಳದ ಉರಿವಿಸಿಲಿನೂರ್ಧ್ವ ಕಥೆ–
ಯನುಕಂಪದಧ್ಯಾಯವೆ ?–ಅಕ್ಕರತೆ
–ಯಭಿವೃದ್ಧಿಯಭ್ಯುದಯದಭ್ಯಾಸ ಕಡಲ ಕಣ ;
ಆರ್ತಗ್ರಂಥಾವೃತ್ತಿ–ಪತ್ತು–ಬೆಳೆಯಳಿದ ದಿನ–
ನಮ್ಮೆಣಿಕೆಯುದ್ಗವನ, ತಂತಾನೆಯಾಗಿ ವ್ಯಥೆ–
ಗಿದಿರಾಗಿ, ಬೆದರಾಗಿ, ಕಾವು ಕೂಗಿನ ಸರಿತೆ–
ಯಾಗೆ, ಹೌಹಾರುವುದು ಬೇಗೆ–ಹೊಗೆ–ಮೊಗ ಹಗಣ !

ನಂಬಲುಂಟೇ ಬಾಳ್ ?–ಮುಂಬರಿಯಬಹುದೊಮ್ಮೆ,
ತುಂಬುಹುಮ್ಮಸಹುರುಳು ಇಷ್ಟ ಬಗೆ ದಟ್ಟೈಸಿ ;
ಹುಂಬು–ಹುಡಿ–ಈಗಿರುವು–ತೋಟಿಗನ ಶ್ರೇಷ್ಠಸಸಿ
ರುಚಿವಟ್ಟು ಕೆಟ್ಟಂತೆ ; ಇರುವಳು ಕೊ ? –ಓ ಕಡಿಮೆ
ಋಣಕಿಲ್ಲ ; ಬಾ ಗುಣದ ಕಣ್ಮನೆಗೆ, ಬಲವಿಲ್ಲ
ಬರಲು ; ಅಭಿಸಾರ ?–ಕಾವ್ಯದಡಿಕರೆ ತರುವುದಲ್ಲ——!

□□

ಮೂಜಗಕೆ ಮಾದರಿಯು....(೧)

ಬಾಳುಭಾಗ್ಯದ ನಡುವಿನಡ್ಡಗೋಡೆಗೆ ಶಿರವ
ಭಾವ ಕಹಿಗೊಳ್ಳುತಿರೆ ನಾನಪ್ಪಳಿಸಿಕೊಂಡೆ
ಎದೆ ಮನವ ಭೇದಿಸುವ ಹೃದಯಕೊಳೆ ಸಾಧಿಸುವ
ಕಂಬನಿಯ ಒಡಕು ಹೊಳೆ ಒರಟುತನವನು ಕಂಡೆ

ಮನೆ ಮನದ ಒಣ ಗಲಭೆ ? ಉಳಿಬಾಳ ಬಗೆ ಕಸಬೆ ?
ಬಿಡುಗಡೆಯೆ ?–ಹಾತೊರೆದೆ, ಹಾಡಿನೆಳೆ ಸಿಗದಾಯ್ತು!
ಒಲವಿನ ಮಹೋನ್ನತಿಯ ನಯದ ನಗೆ, ಸೊಗದ ಸಭೆ
ವಿಶ್ವದೆಲ್ಲೆಡೆಯಲ್ಲು ಕೂಡಿ ಸಡಗರವಾಯ್ತು!

ಮೊಗಕೆ ಮರಣದ ಛಾಯೆ, ಆಸೆ–ನಶಿಸುವ ಮಾಯೆ–
ಜೀವ ಜಪ್ಪಿಸಲೆಂತು ತಿಳಿವಿನೆಡೆ ? ಜಾಗೃತಿಯ
ಚಾಟು ತಪ್ಪಿತು ಎಂದೆ, ನನ್ನ ನಾನೇಕೊಂದೆ
ತಳಮಳವೆ ತುಂಬಿಹುದು, ತಲೆ ಸಿಡಿದೊಡೆದು ನೊಂದೆ

ತಂಗಿ ಇಂತಿರೆ ಉರಿಯು, ಒಲವೆ ನಂದಿಸಿತದನು
ಓ, ಮೂಜಗಕೆ ಮಾದರಿಯು ನಮ್ಮದೀ ಒಲವು !

೧೫-೮-೧೯೪೭

□□

ಮೂಜಗಕೆ ಮಾದರಿಯು..........(೨)

ದನಿ ಹೊನಲ ದೋಣಿಯಲಿ ಮನ ತೇಲುತಿದೆ ಏಳು
ಗಳಿಸಿದ್ದೆ ನಾನೆನಿತೊ ವ್ಯಥೆಯುಸಿರ ಕಥೆ, ಕೇಳು–
ನಗೆ ಭಂಗಕೆದೆ ದಂಗು, ಕಂಗೆಟ್ಟ ತಲೆಗುಂಗು
ಹರುಷ ಹಂಗಿನದೆಂದೆ, ಬಿನದ ಬಿರುಸಿನದೆಂದೆ
ಎದೆ ಸಂದಿಗೊಂದೆಯಲಿ, ಸಂದೇಹನುಡಿ ಡಂಗು–
ರವ ಸಾರಿ, ಈ ಜೀವಕೊಂದು ಕುಂದನು ತಂದೆ
ಮಳೆಗರೆಯುತಿರೆ ಭೂಕಳೆಯ ಬಳಿದೊಳೆಯ ಹತ್ತಿ
ಮಣ್ಣು, ಕೃಷಿಕನದೆಂತು ನಿಲ್ಲುವನು, ತಲೆ ಎತ್ತಿ?

ಇಂತೆಲ್ಲ ಬಗೆದಿದ್ದೆ–ಬನ್ನಗುಡಿಯೊಳಗಿದ್ದು
ಒಲವಿನಿಂಬಿನ ಬಳಿಗೆ ಸಾರಿದಳು ಈ ಸದ್ದು
ಇನಿತೊಂದು ಹೂಗೊನೆಯು, ಒಲವಿನೆದೆ ಸೊದೆವನಿಯು
ಈ ನಮ್ಮ ಜೀವನಲತೆಗೆ ಸಿರಿತರುವುದೆಂದು
ಕಂಡೆನೀ ಚಣ ತಂಗಿ, ಜೀವನುಡಿಯುವದಿಂದು
ಓ, ಮೂಜಗಕೆ ಮಾದರಿಯು ನಮ್ಮದೀ ಒಲವು.

೧೬–೮–೧೯೪೭

□□

ಜಾನಪದ ಸಾಹಿತ್ಯವನು ನೆನೆದು

ಹೆಣ್ಣುಮಕ್ಕಳ ಬಯಕೆ ತಮ್ಮಾದರ್ಶ ದರ್ಶನಕೆ
ಬಲಿಯುತಿರೆ ಈ ನಾಡು ಸಹಿಸದೋ—ಇದೊ ನೋಡು—
ಸೋತ ಸೊರಗಿನ ಹರವು, ಭೀತಿಯಾತನೆ ಕುರುಹು
ಸೊದೆಶಮನ ದುರ್ದಮನ, ಅಳುಗಾನದೆದೆ ಸರುವು—
ಗಳ ಹೊರೆ ಹೊರುವುದೊಂದೆ ಹೆಣ್ಣೆ ಸಲ್ಲುವ ಬಿಜ್ಜೆ
ಯೆಂದವರ ಹೀಗಳೆದು ಕಾಲ್ಗೆ ಗೋಳಿನ ಗೆಜ್ಜೆ
ಕಟ್ಟಿ ತಣಿಯುವ ಜನಕೆ ಬಿಡುಗಡೆಯ ಹೆಗ್ಗಳಿಕೆ
ಬಲುದೂರ, ಸಂಸ್ಕೃತಿಯ ಗಡಿಪಾರು ಬನ್ನಕೇಡು !

ಇದು ತಾಯ ಹರಕೆನುಡಿ, ನಾಡೊಲುಮೆಯಾಸೆಗುಡಿ—
ಗೆಳಸದೆದೆನಿನದ ರಣಕಹಳೆ ದನಿಯೊಡನಾಡಿ,
ಬಾಳ ಪರಿಪೂರ್ಣತೆಗೆ, ನಮ್ರತೆ ಸಾಧನೆಸಾಲಿಗೆ—
ಗುರಿ ತೋರುತಿದೆ ಕೇಳಿ ಸಾಕು ಕೊಳೆ, ಸುಖ ಬೆಳೆಗೆ
ನಾ ಮಿಡಿದ ಕಂಬನಿಯನೀಂಟಿ ಮನ ಮಾಡುವಿರ ?
ಸೋದರರಿರ, ಹೆಂಗುಲಕೆ ಸಲ್ಲಿಸುವ ಹೊನ್ನತೇರ ?

೨೧—೮—೧೯೪೭

□□

ಮೀಟ್ ಮೈ ಪೀಪಲ್
(Meet my People)
(ದೇವೇಂದ್ರ ಸತ್ಯಾರ್ಥಿಯವರ ಪುಸ್ತಕ ಓದಿ)

ಇದೊ ಇವರು ನನ್ನವರು, ನನ್ನಿಯಿಂದಿಳೆ ಬಾನು
ತುಂಬುವರು, ಚೆಂಬಾಳು ಹೊಂಭಾವ, ಹಿರಿ ಅಸುವಿ–
ನುತ್ಸಾಹ–ಪ್ರೋತ್ಸಾಹ ಸಂದೇಶದಿಂದ, ಅನು–
ದಿನ ನಾಡು–ದುಡಿಮೆಯನು–ವೀರಕೇಸರಿ ಠೀವಿ–
ಯನ್ನಾಂತು, ಶೃಂಗಾರ ಸಂಭ್ರಮದ ಬೆಸುಗೆಗಳ
ಸಂಗೀತ, ಸೌಂದರ್ಯ ಸೌಭಾಗ್ಯ, ಭೂಮಿ–ಕೊಳ,
ಒಂದನೂ ಬಿಡದಂತೆ ಸಮರ್ಥಾರ್ಥ ಸಮಸ್ತ
ನೈಪುಣ್ಯದೊಡಗೂಡಿ ಹಾಡುವುದಿವರ ಚಿತ್ತ!

ಅಕ್ಕರಿಗರಲ್ಲ, ಬಲಭಾವಪಡೆ, ಕಡು ಸ್ಮರಣೆ
ಸುವಿವೇಕ, ಸುವಿಶಾಲ ನುಡಿಯ ಜೋಡಣೆ ಜಾಣ್ಮೆ;
ಜೀವ ಕಲೆ ಹದದಾಸೆ ಎದೆಯೊಳಿರೆ ಶರಣಾಗಿ ಈ ನನ್ನ
ಜನಪದಕೆ, ಕರೆಯುವೆನಿದೋ ಕೂಗಿ
ಇಲ್ಲಿ ಮನೆವನಬಿನದ, ಅಲ್ಲಿ ಕಣರಣಕೊಲಿದ
ಇವರಮೃತ ದನಿರಾಗರಥ ವೀಧಿಯುದ್ದ ಮುದದಿ ಸುಳಿದಾಡು ಸುಹೃದ

□□

ನಡುರಾತ್ರಿ—ಕನಸಿನಲಿ—ಆ ಕವಿಯ—ಕೊನೆಯ ನುಡಿ

''ಸುಡು !—ಜೊನ್ನ ?—ಹೆಬ್ಬನ್ನ ತಬ್ಬಿದೆದೆಯೋ—ಖಿನ್ನ,
ಕಿಟಕಿ ಕೀರ್ತಿಯ ಲತೆಯ ಕುಡಿನೆರೆಯೊಳಾನಿಲ್ಲಿ
ನಿಂದಿಹೆನು ನೆಲೆದಪ್ಪಿ ಓ, ಒಳಗಿರಿಸಿ ಕೊಲ್ಲಿ ;
ತಡಹೊಲ್ಲ, ಕದತೆರೆಯಿರೋ, ಏಳಿ—ಶಿವ, ಚೆನ್ನ ;
ನಡುಗುದನಿ ಹಾರುತಿದೆ ಹರಣ—ಪಣೆ—ಕೇಳಣ್ಣ—
ಕವಿನಾನು—ಹೋ, ನಿಮ್ಮ ತೆಕ್ಕೆಯಲಿ ಮೈ ಚೆಲ್ಲಿ
ಸಾಯುವೆನು, ಹನಿನೀರು, ಬಲುಸವಿಯ ಒಲುಮೆಯಲಿ—
—ಎರಡೆಳ್ಳು;—ನಾಲ್ಕುಗರಿ......ಸಾಕಿನಿತೆ.......ನಾ ಧನ್ಯ........''

ತಂಗಿಯರು ಆರತಿಯನೆತ್ತಿದರು,—''ಶುಭಮಸ್ತು
ಸ್ಥಿರಮಸ್ತು? ನಿನ್ನ ಕೃತಿ—ಇಳೆಗೆ ಬಲಿ ಸಂಪತ್ತು?''
ಮರಳಿದೆವು ಊರದಾರಿಯ ಮಸಣದೆದೆಗಿತ್ತು;
ಮೌನದಲಿ, ಅಳುವ ರವಿ ಚರಮನುಡಿ—ಬಡವಾಯ್ತು:
''ಇವನೊರೆದ ಬೆಲೆಸೂಕ್ತಿ—ಹೊಸನಾಡಿಗಿದೊ ಯುಕ್ತಿ,
ಹಿರಿದಿವನ ನೆಲಭಕ್ತಿ—ಇವನುಸಿರು ಜನಶಕ್ತಿ!''

□□

ಜೀವನುಡಿ

ನಮ್ಮುಬ್ಬೆ ಒಲುಮೆ ಪ್ರಭೆ, ಇದೊ ಉಕ್ಕಿ ಹರಿಯುವಳು
ಇರುಮೆ ಇಕ್ಕೆಲ ಬಳಸಿ, ಅಕ್ಕದಿಕ್ಕಿನ ಗುಡಿಯ
ನನ್ನ ನಾಡಿನ ಘನ್ನ ನುಡಿಪಡೆಯ ಮುನ್ನಡೆಯ
ಮಾನೆಲೆಯ ಮಾರ್ಗದಲಿ, ತಾಮ್ರಪಟ–ತಾಳೆಗಳು
ಶಿಲೆಯ ಶಾಸನ ಲಿಪಿಯ ತಪಗೈಯ್ದು ಬರೆಸುವಳು–
ಜೀವನುಡಿ ; ನಂಜುಳಿವ ಮುಂಜಗದ ಪೀಳಿಗೆಯ
ಜೀವನ ವಿಜೃಂಭಣೆಯ ಬಲ ಬಯಕೆ ಸವಿತಿಳಿಯ
ಅರಿಕೆ ಹರಕೆಯ ಹೃದಯ ಹಿರಿಮೆಗೊಪ್ಪುವ ಬಳಲಿಕೆ.

'ಓ' ಎಂದು ಬೆರಗಾಗಿ 'ಭೋ' ಎಂದು ಶಿರವಾಗಿ
ಓದುವರು ಓ ಸರಿಸಿಕೊಳ್ಳಲೆದೆ ಭಾವಗಳ
ಪಯಣಿಗದು, ಹಣತೆ ಹೂಗಳ ಸಲಸಿ ತಮ್ಮವಳ
ಬಡವದನಿ ಬೆಳಕು ಗುರಿಗೊಳುವಂತೆ ತಲೆದೂಗಿ !

ತಣ್ಣೆಳಲು ಉರಿಹೊತ್ತು ಬೆಳಗು ಬೈಗೆನ್ನದೆಯೆ–
ಓ ನನ್ನಂತೆ ನಿನ್ನಂತೆ ಕವಿ ಕರ್ಮದೆದೆಯೆ !

□□

ನನ್ನವರಿಗೆ

ನನ್ನ ನೂರೆಂಟು ಕಂಟಕ ಕೋಂಟೆ ಕೊತ್ತಲವ
ಕೆಡವಿ ಹುಗಿಯಲು ನಿಮ್ಮಕೈಕೊಂಡೆನಲ್ಲದೆಯೆ
ನಿಮ್ಮರಿವಿಗಿರುವಂತೆ ಬಗೆಸಲಸಿ ಬಗೆದೊರೆಯೆ
ಏನನೆಸಗಿದೆನಯ್ಯಾ ಕಾಣೆ ನೀ ಬಾಳ್ಗೆ ನವ–
ರಂಗು, ಸಂಗತಿಯಾಸೆ ಫಲಿಸಿ ಹಿಂಗಲಿ, ಕಾವ
ರುಂಟೆಂದೆ, ಗಂಟಲುರಿಯುರುಳು ಭಯ ಕತ್ತಲೆಯೆ ?–

ನೆನಪಾಗಿ ಹಗಲಿರುಳು ಚಿಂತಿಸುವ ನಿಮ್ಮ ದಯೆ
ಬೆಳೆದೆನ್ನನಗಲಿಸದೆ ಇದೆಯಾಯ್ತು ಕಿರಿಭಾವ–
ಸ್ವಾರ್ಥಿಯೆಡೆಗಿಷ್ಟು ಗುಟ್ಟುದಟ್ಟೆಸಿ, ದೃಷ್ಟಿಯ
ಧರ್ಮ ತತ್ವ ಸಣ್ಣದು, ಮನಕಿನಿತೆಲ್ಲಿ ಹಿರಿದು ?
ನೆನೆದೆನೇ ಪಾಲ್ಗೊಳಲು........ಒಳ್ಗುರಿಯ, ಹಾತೊರೆದು

ನಿಮ್ಮ ಹವಣಿಕೆಗರಲಿ ಸೇರಿ ಸಮಭುಜವೀಯ–
ಲಸಮರ್ಥ, ಮನ್ನಿಸೆನ್ನುವುದು ಅಹಿತ, ನನ್ನಶತ–
ತಪ್ಪುತಡೆ ಒಪ್ಪಿಸಿದೆ, ಮತಿನೀಡಿ ಅನವರತ.

□□

ಸಂಕ್ರಾಂತಿ

ಬರಲಾರೆನಾದೊಡೇಂ, ಬರೆಯಲಾರೆನೆ ತಮ್ಮ?–
ಇರುಳಿಗೊಪ್ಪಿದ ಜೊನ್ನ, ಎದೆಯನಪ್ಪಿದ ಚೆನ್ನ
ಸ್ಫೂರ್ತಿಗೊಡುತಿರಲೆನ್ನ ನಿದ್ದೆ ನುಂಗುವ ಮುನ್ನ
ಬಾಳು ತಿಳಿವಿನ ಸಾಕ್ಷಿ, ಮಾಡಲೇನನು ಬೊಮ್ಮ
ಚಿತ್ತವನ, ಚಿಗುರೊಡೆಯ, ಚೈತ್ರಶ್ರೀ ಮುನ್ನಡೆದು
ಜೀವಜಯ ಧ್ವನಿಗೈಯ್ಯೆ–ಧ್ಯೇಯದುಯ್ಯಾಲೆಯಲಿ
ಬೇಕು ನೀ, ಎದೆತಣಿಪ ಒಲವಿನಾಸರೆಯಲ್ಲಿ !
ಸಂಗಾತಿ–ಸಿರಿಗೌರಿ–ತಂಗೊಡೆಯ ಬಿಗಿವಿಡಿದು.

ಬದುಕು ಬಂಧನವೆಂಬ ಬಗೆ ಹಬ್ಬೆ, ಬರಿ ಬೊಬ್ಬೆ–
ಓ, ಹಬ್ಬವಿದು–ಹೊನ್–ಸಮಯಕೀ ನುಡಿ ಸಲ್ಲ
ಕಹಿಯ ಆಂದೋಲನಕೆ ನಲ್ಲೆ ಸವಿ ನುಡಿ ಬೆಲ್ಲ
ನಿರುಕಿಸುವೆ, ನಾ ಬಲ್ಲೆ, ಪ್ರೇಮದಾಟಕೆ ಕೊಬ್ಬೆ
ನಿನ್ನ ಮೈಮನದ ಬಿನದ ಚಣಚಣಕೆ ಕೆಳೆಕಂಡು–
ಪುಷ್ಟಿಗೊಳ್ಳಲಿ ಜೀವ ! ಕೋ, ಇದು ಭಾವ–ತುಂಡು.

□□

ಮಾಕ್ಸಿಂ ಗಾರ್ಕಿ

'ಚಣಚಣದ ಗಂಡುಸಿರ ಸಾಕ್ಷಿಗೊಟ್ಪ್ರಾಣಿಗೊಳು :
–ನಿನ್ನಿರವು ಎದೆಮನದ ದಾರಿಗುರಿಹುಟ್ಟುಗುಣ
ನಾಡಿನೇಳ್ಗೆಗೆ ಸೊತ್ತು, ಧ್ಯೇಯಧ್ಯಾನದ ಜಾಣ–
ದೊಡಲನುಡಿ, ಅಳುಗೋಳ ಕಡಲನೆರೆ ನಿರ್ವಿಣ್ಣ
ಬಾಂಧವರ ಬಾಳ ಮೇಲ್ಮೆಗೆ ಮುಡುಪು, ಬರೆವಣ್ಣ
ಉಣ್ಣವರ ಕಣ್ಣೀರ ಕಲಸಿ, ಅಳಿಯುವ ಮುನ್ನ
ಅಜ್ಜ ಕಜ್ಜವಗೈವ ಬಿಜ್ಜೆಗಲಿ' ಇದು ನಿನ್ನ
ವೀರನುಡಿ ಸೂಜ್ವಲತೆಯಾ ಲೇಖನಿಯ ತಿರುಳು.

ನೆಲಮಮತೆ ಮುನ್ನೀರಿನೆದೆಯ ಕ್ರಾಂತಿಯ ನೌಕೆ
ದಡಸಾರುವಂತೊಸಗೆ, ಸತ್ವಸಲಹೆಯ ಕೊಟ್ಟ
ಕೆಂಗೆಚ್ಚಿನೆದೆಯಾಳ, ಸಮರವಾಹರ ದಿಟ್ಟ
ನಿನ್ನ ಕೆಳೆ ಹೆಬ್ಬೆಳಕು ಚಿರ ಅಮರ, ಜನಪದಕೆ
ಸಮತೆ ಸಂಗರ ಹಿರಿಮೆ ಪ್ರಗತಿ ಧ್ವನಿ ದೃಷ್ಟಾರ
ಓ ಗಾರ್ಕಿ, ಓಜಸ್ವಿ, ರಕ್ತನಮಸ್ಕಾರ !

೧೯–೨–೧೯೪೮

□□

ಬಾಪೂ

ದುರ್ಧರ್ಮ–ವಿಷಮತೆಗೆ ದಾಸ್ಯ ಬವಣೆಯ ಕತೆಗೆ
ಹೇಸಿ, ಶ್ರೀಯುತ–ಸಮತೆ, ನಮ್ರತನ ಅಕ್ಕರತೆ
ಸಾಧನೆಯೆ ಮಾನವತೆ, ಗುರಿಯು ಜೀವನ ಘನತೆ
ಈ ಸತ್ಯನುಡಿ ಲೋಕದೆಣ್ದೆಸೆಯ ಮೂಢಬಗೆ–
ಗುಪದೇಶ ; ನಿನ್ನ ಎದೆಹೃದಯ ದಯ ಮಮತೆ ನಗೆ
ಮಾತುಮತಿ ಔದಾರ್ಯ ದಿನನಿತ್ಯ ಸುಸ್ಥಿರತೆ–
ಗೊಂಡ ದಿವ್ಯದಿಟ ಕಡಲರಸು ಮಾಣಿಕದಂತೆ
ಜಗನಶಿಸುವನ್ನೆಗಂ ಬಾಗುವುದು ಭಾರತಿಗೆ.

ವಿಶ್ವ ಮಾತೆಯ ಮುಖದೊಳಿಂದು ಕಂಬನಿಗಂಗೆ
ನಮ್ಮ ಮೃತ ಸಂಸ್ಕೃತಿಯ ಹಿಮಶೈಲ, ನನ್ನಿಗನೆ
ಸತ್ಕರ್ಮ ಧ್ವಜನೀನು, ನಿನ್ನಮರ ಕರುಣೆ ಹೊಣೆ
ಈ ನೆಲದ ಮುದ ಬಿನದ ವೀರತನ ಸುಸಂಪೂ–
ರ್ಣತೆಗೆ, ಮೀಸಲಾಗಿರಲಿಳೆಬಾಳ ತಿಳಿವಿಂಗೆ
ನಿನ್ನ ಚೇಯ ಶಕ್ತಿಗೆ ನಮೋ, ಹರಸು ಬಾಪೂ !

□□

ಸ್ವಪ್ನ-ಸಂದೇಶ

''ನಾಡಬಂಧನದ ಚಿತೆಯನ್ನ ಹುರುಪಳಿಸಿ ವ್ಯಥೆ-
ಗಾಯ್ತು ಹೋಣೆ, ಇಂಬಿಲ್ಲ ಬಾಳಲೀ'' ಸಟೆ ಕಿರುಚಿ
ಹಣೆಗೆ ಚಿಂತೆಯ ಕೈಯನಾನಿಸುವ ಹೇಡಿ-ಕಥೆ
ಹೇಳುವೆಯ ? ಹೇಳಲಿನ್ನೊಮ್ಮೆ ನೀ ಬಾಯ ಬಿಚ್ಚಿ
ಕೂರಲಗನೊಡತರುವೆ ; ನಿನ್ನಳ್ಳೆದೆಗೆ ಜಡಿದು
ಹೆಚ್ಚಿಸುವೆ ಕಲಿತನದ ಹಿರಿಮೆಯನು-ನಿನ್ನಮನ
ಮುನ್ನಡೆಗೆ, ಬನ್ನದೆಡೆ ಬಳಿಸಾರ್ವ ಕುನ್ನಿತನ
ನೀಗಿಸಲು, ಸಾಗಿಸಲು ಬಿಡುಗಡೆಯ ಗಡಿಯ ಹಿಡಿದು.

ಹುಟ್ಟು-ಹೋಣೆ ನೆಲೆಯ ತಿಳಿ, ಜೀವನಕೆ ಕಪ್ಪುಬಳಿ-
ಯುವ ಪಾಠ ಪಠಿಸಿದೊಡೆ-ಕೇಡೊಂದೆ ಅದರಗುರಿ.

ನಾಡಗುಡಿ, ಧ್ಯೇಯನುಡಿಗೆರವಾಗಿ ಬಗೆಲಹರಿ-
ಗೆಡೆಗೊಡಲು, ತವಕಿಸಲು-ಬುವಿ-ಬಾಳು ಬರಿಗಾಳಿ.

ನಂಬು-ನನ್ನಿಯನಿನ್ನು ; ರಕ್ತಾಗಲಿ ಒಸಗೆ
ನಿನ್ನಿರವು ಶೋಭಿಸಲಿ-ತಣಿಸೆನ್ನನೊಮ್ಮೆ ಕೊನೆಗೆ !

□□

ಗಾಯತ್ರಿ ಮಂತ್ರವೀ ಒಲುಮೆದನಿಯೊಂದಣುವು

ತನ್ನವನ, ತಾ ನೆಟ್ಟ ರಸಗಬ್ಬ, ತಲೆಗೆಡಕ
ತೋಟಿಗನು, ಬಲಿವ ಮುನ್ನವೆ ತುಂಡುತುಂಡರಿಸಿ
ವಿಭ್ರಮೆಗೊಂಡು, ವಿಕಟ ನಗೆನಕ್ಕು ಉರಿಗಳೆವ
ವರ್ತನೆಯ ಮನ–ಭಾವ ನಿನ್ನದಿದೆ, ನನ್ನಸುವ
ಕೆಳಮಟ್ಟಕೆಳೆತಂದೆ, ನೀನೆ ಹೊಣೆ, ಓ ಜೀವ
ಎಳೆಬಾಳಿನೊಸಗೆ ಹೊಂಗಳಿಗೆಗಳ ಜತೆ ಕಸವ
ವರ್ಧಿಸಿದ ಆ ದಿನದ ದ್ರೋಹ ಕಥೆಯಭ್ಯಾಸಿ–
ಯಾಗುವುದೆ ಅನ್ಯಾಯಕೆಡೆ–ದುರ್ದೆಸೆಯ ದಶಕ.

ನವಿಲೂರಿನೆಡಬಲದ ಕೋಟಿಕೋಟಿಯ ಹೆಜ್ಜೆ
ದೂರದಂತರದೊಲುಮೆ ಬಾನುಲಿಯ ಸವಿಬಿಜ್ಜೆ–
ಯೊಂದಾಣತಿಯ ವಹಿಸು, ಆ ದಿನದ ವಿಷನಾಶ
ಕೊನೆಯ ಎಚ್ಚರ ನಿನಗೆ, ಸಾಕು ಆ ಸಹವಾಸ ;
ಗಾಯತ್ರಿ ಮಂತ್ರವೀ ಒಲುಮೆದನಿಯೊಂದಣುವು
ಎಂದು ತಣಿದಿಹ ನಿನಗೆ ತರವೆ ತಳಮಳವು ?

೧೯–೯–೧೯೪೭

□□

ನಮ್ಮ ಒಲವು

ನಿದ್ದೆ ಬಾರದ ಜೀವದೆದೆಯ ಸವಿ ಬಿನ್ನಹಕೆ
ಮನ್ನಣೆಯ ಕರುಣೆ ಕೃಪೆದೋರು, ಶಾಂತಿಯ ನೆರೆಯ
ನೆನಪುಂಟೆ ?–ನಿನ್ನ ಬಗೆಕಡಲೊಡಲ ಪೆರ್ದೆರೆಯ
ಉತ್ಕ್ರಾಂತಿಯಬ್ಬರಕೆ ನಯಸಾಮ್ಯತನವಿಕ್ಕಿ ;
ಎಳೆಬಾಳ ಬಯಕೆಗಳು ಫಲಕಂಡು, ನಗೆಯುಂಡು
ತಣಿವಿಗಿಮ್ಮಡಿಯಾಗಿ, ತನಿದಿನಕೆ ತವಕಿಸಿದ
ಭಾವಗೆದ್ದಿದೆ, ಮಮತೆ ಮೆಲ್ಲುಲಿ ಮಹೋತ್ಸವದ
ಪುಣ್ಯಗುಡಿ–ತಲೆಬಾಗಿ ನಿಲ್ಲು–ಕಾಣಿಕೆಕೊಂಡು.

ಎನಿತೆನಿತು ವಿಷನಿಮಿಷ ? ಮನಕೇನು ಕುದಿರಭಸ ?
ಬಗೆ ಬಿಚ್ಚು–ಬಾ ಇಲ್ಲಿ– ಹಾಳು ಹೃದಯದ ಕಿಲುಬು
ಬಾಳ ಕಿರಿ–ಗುರಿ–ದಾರಿ ನಿನ್ನದಿರೆ, ನಮ್ಮ ಹೊಸ
ಹಿರಿಯೊಲವು ಜೀವದೊಸಗೆಯ ಲತೆಗೆ ನಗೆ ಹಬ್ಬು–
ವಂತೆನಗೆ ಸಂಸ್ಕೃತಿಯ ಬಲಕೊಡುವುದನುದಿನವು
ಬಾ, ಮೂಜಗಕೆ ಮಾದರಿಯು ನಮ್ಮದೀ ಒಲವು.

□□

ಧಿಃಕಾರ !

ಹನಿಯ ಗಾತ್ರದ ನಿಮ್ಮ ಗುಣಕೆ ಹೆಗ್ಗಡಲಿಂದು
ಸನ್ಮಾನಿಸಲಿ ಜನರೆನುವ ಬುದ್ಧಿ ಜೀವಿಗಳೆ
ಒಳಗಣ್ಣ ಎವೆ ಮುಚ್ಚಿ, ಹುಲುನುಡಿಯ ಬಗೆಕೊಚ್ಚಿ
ಮೆದುಳು ಮಂಕಾಗುವೊಲು ಹುಚ್ಚುದುಡಿತಕೆ ಹಚ್ಚಿ
ನಿಮ್ಮ ನೀವರಿಯದೆಯೆ ನಾಡುನುಡಿಗಳ ಕಹಳೆ–
ಯೂದಿದರೆ ಯಾವ ಫಲ ? ಜಡಿಮಳೆಯು ಹೊಡೆ ಎಂದು
ಜಂಪಲಿಕ್ಕಿದ ಮನೆಯ ತೆರ ನಿಮ್ಮ ಮನ–ಕಂಡಿಹಿರ ?
ಸಂಸ್ಕೃತಿಯ ಪ್ರತಿಬಿಂಬವೇ ನೀವು ?–ಧಿಕ್ಕಾರ.

ಒಲವನಣಕಿಸಿ ಒಡಲಕರುಳು ಕೆಣಕಿಸಿದವರೆ–
ಒಲವು–ನನ್ನಿಗೆ ಉನ್ನತಾರ್ಥ ನೀತಿಯ ಪಹರೆ
ನಶ್ವರತೆಗೆಡೆಯಲ್ಲವಿದು ಮಹೇಶ್ವರ ಸದೃಶ ;
ತಾಯ ಎದೆ ಸಂದೇಶ, ಲೇಖನಿಯ ಉದ್ಘೋಷ–
ಕೆರಡು ಬಗೆದರೆ ನಿಮ್ಮ ಜೀವಕೆಲ್ಲಿಯ ಚಿರತೆ ?–
ಪುಣ್ಯಭೂಮಿಗೆ ಕುಂದು–ಮಣ್ಣುಪಾಲೀ ಘನತೆ !

□□

ವಿಜಯದಶಮಿ

ಇದು ಬದುಕು, ಇನಿದಿದರ ಅರ್ಥ–ವೈಭವ–ಸರಣಿ
ತನಿಭಾವ, ತಣಿದುಸಿರು ; ಬವಣೆಗೊಂಡಿದೆ ಧರಣಿ
ನೂರಾರು ಕಂಬನಿಯ, ಕುಸಿದು ಕುಗ್ಗಿದ ದನಿಯ
ರಕ್ತದುರಿ, ಎದೆಗುದಿಯ ನೀಗಿ ಮಂಗಳದುದಯ
ಸವಿಯರಸಿಕೊಂಡುಂಡೆವಿಂದು ಸಂಮೋದದೆಡೆ
ನೆರೆದ ಸಾಗರದಗಲದಮೃತಚಣದಮರಪಡೆ
ಹೆಬ್ಬಲದ ನಗೆದುಡಿಸಿ, ಧ್ಯೇಯ ಸಾಧನೆ ಕತೆಯ
ಸಾವಿರ ಸಿವುಡು ಕಟ್ಟಿದುವಿದೋ ನಮ್ಮ ಹೃದಯ !

ವಿಶ್ವಕೆ ಚಿರಂತನದ ಬೆಳಕೀವ, ದಿನನಿತ್ಯ
ನಾಡನೂತನ ಸತ್ಯದೊಸಗೆಗತ್ಯಾಗತ್ಯ–
ವಾಗಿ ಮಾನವಕುಲಕೆ ಒಂದುತನದೋರಣದ
ಒಲವಿನೆದೆ ಸೊದೆನದಿಯ ಪುಣ್ಯತೀರದ ಸುಮ್ಮದು
ಬಿನದ ಭೂವಿಯ ಬಯಕೆ–ಹಿಂಡು ಮುನ್ನಡೆವಾಗ
ಘನತೆಗೇರಿದ ದಿನವೆ, ನಿನಗೆ ಹೊಸ ಹರುಷ ಯೋಗ !

೨೭–೧೦–೧೯೪೭

ನವಿಲೂರ ತಾಯಿಗೆ (೧)

ಉದಯ ರವಿ ಮೇದಿನಿಯ ಮೃದುಮೈಗೆ–ನಗೆ ತೆಕ್ಕೆ
ಚೆಲುಗೈಯ ಚೇತನೆಯ ಚೆನ್ನ ಚಿತ್ರಾವಳಿಯ
ಬಣ್ಣ ಭಾಗ್ಯದ ಸ್ವರ್ಣ ದೀಪ್ತಿ ಸಂಭಾವನೆಯ
ಸಲಿಸಲು, ಅಶ್ವಸ್ಥ ವೃಕ್ಷದೆಲೆ ಮರ್ಮರಕೆ
ನವಿಲೆದ್ದು ನಿನ್ನೂರ ಹಿರಿಯ ಪ್ರತಿನಿಧಿ ಕಾಣ್ಕೆ
ಸೊಗಕೂಗಿನಿಂ ಬೆಳಗ ಸ್ವಾಗತಿಸೆ ; ಕವಿಹೃದಯ
ಕಲ್ಪನೆಯ ಪಿಕ–ನಾಕ ದನಿಗಿನಿಯ ಬಲ ನೆರೆಯ

ಕಡವೀಯ ಹೊರಟಂತೆ ಉಲಿಯುತಿರೆ ಶುಭಮಿರ್ಕೆ
ಮನೆಮನವನೆಚ್ಚರಿಸಿ, ನಿಶೆವೆಣ್ಣನೆಚ್ಚರಿಸಿ ;
ಮಿಡಿಮಾವು ಹಣ್ಣಾಗಿ, ಜೀವ ಜಸಕಣ್ಣಾಗಿ;
ಜಗ ಸುಖಿಸಲೆಂದೆನುವ ಹರಕೆ ಹಾಡಿನ ಜೋಗಿ–
ಹೂಬಳ್ಳಿ–ಹೊಲಗಳ್ಳಿ ಮೊಗ್ಗೆ ಸೌರಭ ಬೆರೆಸಿ;
ಕೆನೆಕಡೆವ, ಕಲ್ಲೆಡೆಯ, ಅರಳಮುಡಿ ನಿನ್ನಡಿಯ
ಮಕ್ಕಳಿಗೆ ಹಾಡ ನೀಡಾ ತಾಯೆ, ತೆರೆದು ಉಡಿಯ !

'ಜೀವನ' : ಸೆಪ್ಟೆಂಬರ್ ೧೯೪೮

□□

ನವಿಲೂರ ತಾಯಿಗೆ (೨)

ಅಲ್ಲಿಂದ ಇಲ್ಲಿಗೂ ಇಲ್ಲಿಂದ ಅಲ್ಲಿಗೂ
ಭಾವಹೊಳೆ, ಸ್ಮೃತಿದೋಣಿ ಸೃಜಿಸಿ ನೀನಂಬಿಗನ
ಹೋಲಿ ಹೋಹೋ ಎನ್ನು, ಹುಟ್ಟಿಕಡೆ, ತೆರೆಗಾನ–
ಧ್ಯಾನನೆಲೆಗೊಳುವಂತೆ–ನಿನ್ನೆಳೆಯ ''ಗಾಗೂ.......
........ಧ್ವನಿಗೆ'' ಹೊಸಹುಟ್ಟು ಹೊಸಕಟ್ಟನುಣಿಸುವೆನು ಮಗು

'ಏತಕೇನೋ ತಿರೆಯೆ ತಣಿವಾಗಿ ಕಾಣದಿದೆ'
ಈ ನುಡಿಯ ಸುಡು, ಸಲ್ಲ; ಪಲ್ಲವಿಪ ಮರ ಬೋಧೆ
ನೆಳಲನಗೆತನಕೊಡುವೆನೆಂದವ್ವ, ಈ ಬೆಳಗು

ನಿನ್ನ ಕರುಳಿನ ಕುಡಿಯ ಮಂಟಪದ ಮೊಗ್ಗೆವೊಗ–
ದೆರೆದು, ಸುಖಸುವಾಸನೆ ಬೆರೆಸಿ, ಹುಣ್ಣಿವೆಯ ಪೂ–
ಜೆಗಿದೋ ಹಣ್ಣು ಕಾಣಿಕೆಕೊಂಡು, ನಿನ್ನ ದಯಗೋಪು–
ರದ ಕಳಸಸಿರಿರೂಪವನು ತನ್ನ ತಿಳಿಸೊಗ
ಜೊನ್ನದೆದೆಯಲ್ಲಿರಿಸಿ, ನಿನ್ನಡಿಗೆ ಬಾಗಿ, ಹಿರಿ
ಹರಕೆ ಬೇಡುತಿಹುದೌ ತಾಯೆ, ನೀಡು ನಾಡ–ಗುರಿ !

□□

ವಾತ್ಸಲ್ಯವಾರಿಧಿಯ ನಗೆಮಗಳೆ ನರ್ಸು !

ರೋಗರುಜಿನದ ಹುಟ್ಟು, ಹುಣ್ಣುಘಾಯದ ಪೆಟ್ಟು
ತನುಮನವ ಘಾಸಿಸಲು ಗೋಗರೆದು ತಲೆಕೆಟ್ಟು
ಆಸ್ಪತ್ರೆಯಾಸರಕೆ–ಉಲ್ಬಣದ ಉರಿ ಸೋಂಕೆ
ತರ್ಪಣವಕೊಡುವಾಸೆ ಚಿಂತೆ ಚಿತೆ ಬೇಸರಕೆ.
ಕೇಣಕೇಕೆಯನಿಡಲು ಬವಣೆ ಗರ್ಜನೆ ಸಿಡಿಲು
ಬೆಂದೆದೆಯ ಹೋಳುಗೈದಂದಗೆಡುತಿರೆ ಬಾಳು–
ತಂಗುವವು ಜೀವಿಗಳು ಬಳಗಮನೆ ನೆಲೆಬಿಟ್ಟು
ಅಂಗಾಂಗ ಬಲ ಬಯಕೆ ಬೆಂಬಳಿಸೆ ಬಾಯ್ಬಿಟ್ಟು.

ಸರ್ಜನನೆ, ಡಾಕ್ಟರರೆ ? –ಬರಿಯ ಸಂಚಾಲಕರು.
ತಾಯ್ತನದ ಕರುಣದುಪಚಾರ ದಯ ಸವಿನುಡಿಯ
ಪಡೆದ ಕಲೆ ದುಡಿತದೊಳೆ ಸಂತೃಪ್ತಿಯೆಂದಿಡಿಯ–
ಬದುಕುಗೆಲ್ಲುವ ಹವಣೆ, ಹೃದಯ ಹಂಬಲ ತೇರು
ಎಳೆವ ಗುಣ ಸಮ್ಮಿಳನ ಸಂಭಾವ ಸಂದರ್ಶ–
ನಿಧಿ ವಾತ್ಸಲ್ಯವಾರಿಧಿಯ ನಗೆ ಮಗಳೆ–ನರ್ಸು !

□□

ಪ್ರತಿಕ್ರಿಯೆ

ನನಗಿಲ್ಲ ನನಗಿಲ್ಲ ಈ ವಿಷಮ ವಾಕ್ಫಲದ
ಓಹೋ–ವಾ ವ್ಹಾ! ಮೆಚ್ಚು, ನಾ– ನೀನು, ಅವರಿವರು
ಎಂದು ಬೇರ್ಪಡಿಸುವುದೆ ಹದ–ಹೀನ ಹೃದಯಗರು–
ವಿಕೆ ಗೊರಕೆ ಹೊಡೆವಂತೆ, ಹಸುಳೆಗುರೆ ನಿಗಿ–ಕಾದ
ಕಲ್ಲೆಸೆವರೇ, ಕರುಣಿ–ನಾಲಗೆ–ನಗೆಯ ನಾಲ್ಕು ನುಡಿಕೇಳುವೊಡೆ
ಮನನೋವೆ?
ಮಾನ ಕಿವಿ ಮುಚ್ಚುವುದೆ ?
ಪೆರ್ಮೆ ಧರ್ಮ ದಯವೆ ? ಶರಣ–ಭವಿ–
ಗಳನರಿತ ವಚನಗುಳಿ, ಇದಕಿಲ್ಲ ಈ ಬದುಕು.

ನಿನ್ನ ಧ್ಯೇಯದ ಬೀಜ ಮೊಳಕೆಯೊಡೆಯಿತೆ ಕಾಣು–
ಕೇಳು, ಹೌದೇ ಎಂದು ; ಕಲ್ಪನೆಯ ಕಲ್ಪತರು
ತುದಿಯೇರಿ ಕುಳಿತೆನೆನೆ, ನಿನ್ನ ನೆಲೆ ಕಂಡವರು
ತಣಿವರೆ ? ಮಣಿವರೆ ? ಸಣ್ಣತನದುರಿನೇಣು
ಕೊರಳಕೊಯ್ವುದು– ಹಲವು ನೂರುಂಟು ಇಂಥ ಕಥೆ
ಕೀರ್ತನೆಯ ಪದುಳ ನುಡಿ ಬಾಳಿಗವು ಹೊರತೆ–ಹೊರತೆ ?

ರಚನೆಯ ಆರಂಭ : ೨೬ ಮಾರ್ಚ ೧೯೪೮
ಕೊನೆಗೊಂಡದ್ದು : ೪ ಎಪ್ರಿಲ್ ೧೯೪೮

□□

ಮಮತೆಯ ಶೃತಿ

ಬಾಳಿನೊಸಗೆಯ ಕೇಳಿ, ಮನೆಗೆ ಹಾಡಿನ ಬೇಲಿ
ತಾಯ ಮಡಿಲಲಿ ಕುಳಿತನಾಲಿಸಲೊಬ್ಬ ಕಂದ ;
''ನಗೆ ಸಂತೆ, ಸವಿ ಅಮಿತ ; ಕಾಣುಮಗು– ಜೀವ ಬಲಿ
ಕೊಡು, ಏಳು ; ಜನ ನುಡಿಗೆ ತಾಯ್ ಒಳಮಾತಿನಂದ
ಕಲ್ಲ ತೆಕ್ಕೆಯ ಹಿಟ್ಟನೊಡಲಿನುದ್ಯಾನದಲಿ
ಜಗದೆಲ್ಲ ಹೂವರಳಿ ಕಂಪಿಟ್ಟು–ಗಟ್ಟಿ ಗಂಧ ;
ಆಣತಿಯ ಕೊಂಡಿತ್ತು–ಆಸೆ–ಎದೆ, ಹುರುಪು ಬಲಿ–
ಯುತಲಿರಲು, ಹೋಲಿಕೆಗೆ ಹುಡುಕಾಟ ಕವನ ಛಂದ ;

ತಾಯ ಕಂಡಿಕೆ–ಸುತ್ತಿಗುಣ್ಮುವೆಳೆದನಿ ಮಾನ
ಮಾನವಮಿ, ಕವಿಚೂತವನ ಚೈತ್ರ ಷಟ್ಪದಿಯ
ಸಲ್ಲಾಪ ಸನ್ನಿಧಿಯ ಉನ್ನತಿಗೆ ಸರಿ ನಿಲುವೆ
ಸಹಜ ನುಡಿ ; ಸಂಜೆ ನಿಶೆ–ಮಂಜು ಉಷೆ–ಪವನವನ
ಮಾತುಕತೆ, ಮಮತೆ ಶೃತಿ ಇಳೆಯಸುಸ್ವರವೆಲ್ಲ
ಈ ಹಾಡ ಮೈ ತುಂಬಿಕೊಂಡಿಹವು–ಸಾವು ಇಲ್ಲ !

□□

ಮೂಜಗಕೆ ಮಾದರಿಯು ನಮ್ಮದೀ ಒಲವು (೩)

ನೆಲ ಮುಗಿಲು ಜಲದಗಲವೇತಕೊ ಸಾಲದಿದು
ನಮ್ಮೊಲವಿನೀ ಮೂರು ಹಿರಿಯ ಅಕ್ಕರ ಬರೆಯೆ
ಕಾವ್ಯದೊಡಲೂ ಕಿರಿದು ಎದೆ ಮನಸ್ಸು ವ್ಯೆ ಅರಿದು
ಅರೆ ನಿಮಿಷ ಈ ಒಲವ ಬಚ್ಚಿಡಲು ಬಗೆಯುವೊಡೆ
ಕರುಣೆ ಇಂಬಿನ ರೀತಿ, ನಗೆಯ ನಂಬುವ ನೀತಿ
ಇನ್ನೆಂದೊ ? ಮುಂಬರುವ ನವಭಾರತದ ಜ್ಯೋತಿ !
ಕನಸಸೆಲೆ ಬವಣೆಕೊಲಿ, ನೇಹ ನೆಲೆಯುಯ್ಯಾಲೆ
ಆತ್ಮಾನುಸಂಧಾನಕಿದೊ ನಮ್ಮೊಲವು ಕಹಳೆ.

ಕಂಠ ತುಂಬುವದೊಮ್ಮೆ, ಮೌನದೊಡೆತನವೊಮ್ಮೆ
'ಒಣಹಗರಣವನುಳಿದು ಒಂದೊಂದು ಚಣ ನಮ್ಮ
ಮನದಾಳವನ್ನಳೆದು ಬೇರ್ಪಡಿಸಿಕೊಳಿಕೊಳೆಯೆ'–
ನೆಂದು ಯುಗಜಗಕೆಲ್ಲ ಕೂಗಿ ಹೇಳುವುದೊಮ್ಮೆ
ನಾಡಗುಡಿ ಹೇಳುತಿದೆ: ''ನಿಮ್ಮೊಲವೆ ನನಗೆ ಬಲ
ಓ ಮೂಜಗಕೆ ಮಾದರಿಯು ನಿಮ್ಮದೀ ಒಲವು''

□□

ಕುವೆಂಪುವಿಗೆ

ನನ್ನ ಮನಕೆ ಹೊದ್ದೆನೊಮ್ಮೆ ನಿನ್ನ ನುಡಿಯ ವಸನ
ನಂಜು–ಪಂಜು, ಚಿಂತೆ–ಕಂತೆ, ಅಳಿದುವೆಲ್ಲ ಬೆಸನ
ನಿನ್ನ ಬಾಳ ಸವಿಯ ಬೆರಸಿ ಉಂಡೆ ಬನ್ನದನ್ನ
ಬಲವು ಬಂತು–ಕಾವ್ಯದ–ಪಡೆಗೆ ಕೂಡಲಣ್ಣ

''ಸಿಡಿಲಬುತ್ತಿ ರಕ್ತಗತ್ತಿ ನವಿಲ್ಗುಣಿತವೊಂದೇ–
'ನನ್ನ ಗಿರಿಯ ಶಿಖರ ಹತ್ತಿ ವಿಶ್ವವಿಹರಿಸೆಂದೆ'
ನಿನ್ನನೊಮ್ಮೆ ಕಾಣಲಿಲ್ಲವಾದೊಡೇನು ಕೊರತೆ ?
ನನ್ನ ಗೆಲವು–ಗೈಮೆಗೆಲ್ಲ ಪರಮ ಗುರುವೆ ದೊರೆತೆ.

ಜೀವ, ಭಾವ, ನೇಹ, ಧ್ಯೇಯಗಳನು ಕೂಗಿ ಕರೆದು
ಚಿತ್ರ ಕಂಡು ಕೈಯ ಮುಗಿದೆ, ಹೃದಯ ಹೂವು ಸುರಿದು ;
ಅಂದಿನೆನ್ನ ಹಿಗ್ಗಿದೆದೆಯ ಹಾಡುತಿರುವುದಿಂದು
ಜಗವು ಕುಗ್ಗೆ ಕವಿಯೆ ಸೊದೆಯನುಣಿಪ ದೇಶಬಂಧು
ವಿಶ್ವಕವಿಯೆ ನನ್ನ ಜಗವ ಹೊಕ್ಕು ನಿರುಕಿಸೇನಿದೆ ?
ನೀನೆ ಸೂರ್ಯ, ಚಂದ್ರ, ಚಿಕ್ಕೆ, ನಿನ್ನ ನನ್ನಿ ತುಂಬಿದೆ.

□□

ರಕ್ತ ಸಂದೇಶ

ಎಣೆಮೀರಿ ಹೊಣೆಮೀರಿ ಕರುಣೆ ಸ್ಮೃತಿಗತಿಮೀರಿ
ಪರಪಾದಪೂಜೆಗಳ ನೀಗಿದಿರಿ ; ದಾಸ್ಯ ಹದ–
ಬೆದೆ ಹರವುಗಳಿಗೆ ಭಾಷ್ಯವ ಬರೆದು ಸಂವಾದ
ಹೂಡಿದಿರಿ, ವರ್ಣ ಮೇಲ್‌ಕೀಳುಗಳ ಮದದೊಗರಿ–
ನಲಿ ಮನ ಹುಗಿದು ಸಮರ ಸಮತೆಗಳ ರಣಭೇರಿ–
ಯನು ಮಸಣದೊಡಲಿಗೆ ನಲಿಸಿ ಬಿಡುವಿನಬ್ಬರದ
ಜಲಪಾತದುಗಮಸ್ಥಾನದೆಡೆ ಪಾಡುವವರ ಬೆದ–
ರಿಕೆಗಂಜಿ, ಮೌಢ್ಯತೆಯ ತಲೆಯೊಡ್ಡ ಕಟ್ಟದಿರಿ

ಸಹಿಸೆನಾನಿದನಿನ್ನು; ನಿಮ್ಮ ಮನ ಕೊಳೆಸೋಂಕಿ
ಹೇಡಿತನ, ಹೈರಾಣ, ವೈಭವಕೆ ತಣೆತಣೆದು
ನಾಯಬಾಳ ಸ್ವಾಗತಿಸೆ ; ನನ್ನ ದರ್ಪವ ನೆನೆದು
ವೀರಕುರುಹಾಗಿ ಬಾಳ, ನಾಡಿನೆದೆಯಲಿ ಬೆಂಕಿ
ರಣನುಗ್ಗಿ ತಣಿಸೆನ್ನನದಕುಗ್ಗಿ–ಎದೆ ಸೀಳಿ
ಇದುವೆನ್ನ ಸಂದೇಶ ಕೇಳು, ಮೌನವ ತಾಳಿ.

□□

ನಮ್ಮ ಉದ್ಘೋಷ

ಮನಮಸಣ, ಮೇಣೆದೆಯು ಪಾಷಾಣ, ಬಗೆವಗುಣ
ನಗೆಗಣಕೆ ಒಣನಿಗ್ಗರದ ಜಿಗಿಜಿಗಿಯ ತೆಕ್ಕೆ ;
ಮುದವೆಲ್ಲಿ ? ದುಗುಡಗಾಣದಲ್ಲಿ ಮೈರಕ್ತನೆಣ
ಕರಗಿತೆನ್ನುವಕಾಲವಿನ್ನಿಲ್ಲ ; ಇದೋ ನಕ್ಕೆ :
ಒಲವಿನಾಸರೆಯ ಜಸ–ಭ್ರಮಿತ ಜೀವನದ ಕಸ
ಉಡುಗಿ, ಬೇಗುದಿ–ಬೆಡಗು–ಕಿಚ್ಚನಾಹುತಿಗೊಂಡು
ಸಂಸ್ಕೃತಿಯ ಉಚ್ಚಹೊಸ ಶ್ವಾಸದಾಸೆಯ ಸಾಸ–
ಕೆಡೆಗೊಟ್ಟು ನೀಗಿಸಿತೆಮ್ಮ ಬಾಳಕೊಳೆಜೊಂಡು.

'ಜಲ್' ಎನುವೆ ಏನದೆಯೆ ? ಕ್ಷುದ್ರಛಿದ್ರವ ಮನಸೆ ?
ಇಲ್ಲಿಲ್ಲ ತೃಪ್ತಿಮಿಗೆ ಭದ್ರಬಾಳುವೆ ಸೊಗಸು ;
ಶತಜೀವ ನಮ್ಮ ಸವಿಯೊಲವಿನಂಬುಧಿಗೆ ತುಸು
ವಾದರೂ ಕಂಬನಿಯ ಹೊನಲಹನಿ ಸೇರಿಸಲು
ಈ ಬುವಿಗೆ ಆಸದಳವು ನನ್ನಿಯಲ್ಲವೆ ಒಲವು ?
ಇದು ನಮ್ಮ ಉದ್ಘೋಷಃ 'ಬದುಕಿಸುವುದೆಮ್ಮೊಲವು' ;

□□

ಒಳದನಿ

ಕಬ್ಬವೆನ್ ಹಬ್ಬವೆನ್, ನಿಬ್ಬೆರಗು ಬೊಬ್ಬಿ ಎಸೆ,
ಒಲುಮೆನಿಧಿ ಒಸಗೆ ವಿಧಿ, ಕ್ರಾಂತಿಕಣ ಬಾಳ ಬೀದಿ ;
ಏನೆಂದರೂ ಒಪ್ಪು, ನಾನಿನ್ನ ಎದೆಯ ಬದಿ–
ನಿಂದು ಹಲಹವಣಿಕೆಗೆ ನನೆಯಿರಿಸಿ ಹೂಗೊನೆಯ
ಸಿರಿಬೀರಿ, ಮರೆಯುತಿಹ ಚವರಿಯಂ ಬೀಸುವೆನು.
ಆ ಗಾಳಿ, ಕೊಳೆಯಳಿಸಿ ತಿಳಿವಳಿಕೆ ನೆರೆನೀಡಿ
ಚಣಕೊಮ್ಮೆ ಕೇಡಳಿಸಿ ಕೆಳೆಯಬಯಸುತಬಹುದು ;
ಬೇರೆತನಕಾಂಬೆಯಾ ?–ಸಮರಸ ನಾನು ನೀನು.

''ಜೀವಿಸುವದೇತಕೋ, ನೋವಿನಿತದೇತಕೋ
ಜೀವಕಳೆ ಕಸಿದುಂಡ ನೈರಾಶ್ಯಕಮಿತಬೆಳೆ''
ಸಾಕು ನೋವಿನ ಕಾವು ; ತಿಳಿದಂತೆ ನಮ್ಮ ಇಳೆ–
ಇಲ್ಲಿ ಜಂಜಾಟ ; ಕಟ್ಟಿಕೋ ಹೃದಯ ಕೋ–
ಟೆಯನೆನ್ನನಾಸರಗೆ ಕರೆ, ಬರುವೆ ; ಕೊಳ್ಳಿಕೊ
ರಕ್ತಶಕ್ತಿಯನೀವ ; ಬಗೆಹೇಳು ಜೀವ ಎರವೆ ?

□□

ಭಾಗ ಎರಡು:

ಭಾವಗೀತೆಗಳು ಹಾಗೂ ಗಾಂಜ್ಬಡ್ಕನ ಪದಗಳು

*

ಮಾಗಿಯಲಿ ಮಾವೇಕೆ ಫಲಿಸಬಾರದು, ಎಂದು
ಜಗವ ಕೇಳಿದರೇನು ಹೇಳಬಹುದು ?
ಕಾವ್ಯಕಲ್ಪನೆಯುಂಟು, ನಿನ್ನೆದೆಯ ಪಡೆವಂದು
ಬಳಸಿಕೋ ಬಾಳನ್ನೇ ಆಳಬಹುದು.

*

ನವಿಲೂರು ನಕ್ಕಿತ್ತು

ಹುಟ್ಟಿದೆನು, ಸಾಕಿತಿಳೆ ಮೂರು ವರುಷ
ನಿನ್ನ ನೆನೆಯುವುದೊಂದೇ ನನ್ನ ಕೆಲಸ
ಕಡೆಗೆ ನೀ ಜಗಕಿಳಿದೆ ನನಗೆ ಹರುಷ

ನೀ ಹುಟ್ಟಿದರೆ ಚಣಕೆ ಮಾವನಾಳು—
''ಮಗಳೆನಗೆ—ನಿನಗಿಂದು ಸೊಸೆಯಾದಳು
ತಂಗಿ ; ಬಾ ನಿನ್ನ ಕಂದನ ನೆನೆಯುತಿಹಳು''

ತಾಯ ಕನಸಿಗೆ ಗೆಲವು—ನೀನು ಹೆಣ್ಣು
'ಹೆಸರಿಡಲು' ಸಾಗಿದಳು ತಾಯಿ, ನಾನು
ಅವಳ ಕೈಕೂಸಾಗಿ ಕಂಡೆ ನಿನ್ನ !

ನವಿಲೂರಿನೊಂದುಮನೆ, ಅತ್ತ—ಹೊರಸು
ನೀ ಅಲ್ಲಿ ಮಲಗಿದ್ದೆ, ನನ್ನ ಮನಸು—
ಕಣ್ ಸೀರೆ ಸವಿಯೆಂದೆ—ನಿನ್ನ ಬೆಲಸು !

ಕನಸಾಗಿ, ಕೂಸಾಗಿ ನೀನು ಕಂಡೆ
ಮೊದಲ ನೋಟಕೆ ನೀನೆ ''ನಲ್ಲ'' ಎಂದೆ
ನವಿಲೂರು ನಕ್ಕಿತ್ತು ನಮ್ಮ ಮುಂದೆ.

□□

ಮಡದಿಗೆ

ವರುಷಕೊಮ್ಮೆ ಪಂಚಿಮೆ
ನಿನಗೆ ಉಂಡಿ–ಉಡುಗೊರೆ
ಸಿರಿಯ ಗೌರಿ ಹುಣ್ಣಿಮೆ
ನಿನಗೆ ದಂಡೆ–ಹೂ ಹೊರೆ

ಹೆಸರನಿಟ್ಟ ಹಕ್ಕಿಗೆ
ಕುಸುರು ಮೊಗ್ಗು ಕುಪ್ಪಸ
'ಬರುವೆಯೆಂದೊ ಬಳಕೆಗೆ ?'–
ಬಳಗ ಬಿಡುವ ಉಬ್ಬಸ !

ರುಚಿ ನೋಡಿ ಹತ್ತಾರು
ಒಲುಮೆ 'ನಡತಿ'
ನೀನಗಲಿರುವೆಯೊ–
ಮೆಚ್ಚಿನೊಡತಿ ?

ಮಾತು ಬಲ್ಲ 'ಮಲ್ಲಿಯೂ'
ಮುಗುದೆಯಾಗ ಬಲ್ಲಳೆ ?
ಮಾತು ಕೊಟ್ಟ ನಲ್ಲೆಯು
ಸೋತು ಹೋಗಬಲ್ಲಳೆ ?

□□

ಉಷೆ

ತೋಳ್ತೆಕ್ಕೆಯಲೆತ್ತಿದ ನಲ್ಲೆಯು ನಗೆ
ನಗುತಿದ್ದಳು ಬೆಳಕಿನ ಉಷೆಯು
ದಿಗಂತ ಕಾಂತಿಯ, ನೀರ್ವನಿ ಸಂತೆಯ
ಸಿರಿಯಾಸನ ಹುಲ್ಲಿನ ಹಸೆಯು

ಆದಿತ್ಯನ ಆರಾಧನೆ ಮಾಡುವ
ಹಾಡುತಲಿದ್ದನು ಕವಿಯು
ನಗೆಗಣ್ಣಿಗೆ-ಹೊಗೆಮುತ್ತಿಗೆ
ಹಾಕುತಲಿದ್ದಿತು ಬಾಳಿನ ಬುವಿಯು

ಅರಳದ ಮೊಗ್ಗೆಯ ಬಳಿಸಾರಿದ
ಭೃಂಗದವೊಲು ನಿನ್ನೀ ಜೀವನವು
ಈ ಪರಿ ಕಿವಿಯಲಿ ನಿಡುದನಿಯನು
ತುಂಬಿತು-ಕುಳಿತೆಡೆ-ತಾವು

ಭಾಷೆಗೆ ನಿಲುಕದ ಜೀವದ ಭಾವನೆ
ನೈರಾಶ್ಯದ ಗಡಿ ಮುಟ್ಟಿತ್ತು
ಉಷೆ-ನಿಶೆಗಳ ನಡುವಿನ ಸಿರಿರಾಜ್ಯದ
ಸ್ವಪ್ನ ಧ್ವಜವನು ನೆಟ್ಟಿತ್ತು!

೧೭-೪-೧೯೪೪

□□

ಕೋಗಿಲೆ

ಮನ ಮೃದಂಗ
ಕವನ ಸಂಗ–
ದಾಸೆ ನನಗೆ ಕೋಗಿಲೇ
ಚಿಂತೆ ಭಂಗ
ಮಾಡಿ ಅಂಗ–
ಹಗುರಗೊಳಿಸು ಕೋಗಿಲೇ ॥ ೧ ॥

ಹಾಡು ಇನ್ನು
ಕಾಡು ಮಣ್ಣು
ದಿಗಿಲಾಗಲಿ ಈ ಮನಾ
ನನ್ನಿಯಾಂತ
ನಿನ್ನ ಶಾಂತ
ಕಂಠಕಮರ ಧೋರಣಾ ॥ ೨ ॥

ವನವಸಂತ
ಸಿರಿಯನಂತ
ಕುಸುಮಾಗಮ ದರ್ಶನಾ
ಕೊಲೆಯ ನೀತಿ
ಭಯದ ಭೀತಿ
ನೀಗುವಂತೆ ಯಾತನಾ ॥ ೩ ॥

ಹಲ ಪಕ್ಷಿಯ
ಕಾವ್ಯಾಕ್ಷಿಯ
ಎದೆಯುಕ್ಕಲಿ, ಹೊಸತನಾ
ನರ ಕವಿಗಳ
ಹೃದಯಸ್ಥಳ–
–ಕಿಂಬಾಗಲಿ ಕೆಂಗಾಯನಾ ॥ ೪ ॥

ಲೂಟಿ ಮರಣ
ಜಾತಿ ಹರಣ
ಮರೆಯುವಂತೆ ಜಗಜನಾ
ವಿಷದ ಹೊನ್ನು
ಏತಕಿನ್ನು–
ಹಾಳಾಗಲಿ ದುರ್ಭಾವನಾ ॥ ೫ ॥

□□

ಸುಸ್ವಾಗತ

ಬಿದಿ ಸಾರಿಗೆ ಎದೆ ದಾರಿಗೆ–
ಕಣ್ ಸುತ್ತಲೂ ಗೋಳು
ಕಂಡರಿದೆಯ ? ಉಂಡರಿದೆಯ–
ಕಸವಿಲ್ಲದ ಸವಿಗೂಳು ?

ನೂರು ವರುಷ ಬಾಳಿಗೆಂದು
ಅರೆಚಣ ಮೈಮರೆತೆಯ ?
''ಬಾಳತುಂಬ ಹರುಷ ಬರದು''
ಎಂಬ ದಿಟವ ಕಂಡೆಯ ?

ಸ್ವಪ್ನದ ಈ ಸವಿ ಬಾಳಿಗೆ
ಮರೆಯಾಗನು ತಂಗದಿರ
ಬಾರಿಲ್ಲಿಗೆ ಬುವಿಯುಳುವಿಗೆ
ಕಿವಿಸೋತಿರೆ ನಗೆಗುವರ.

ಕನಸಿನಬ್ಬೆ ಸುಧೆಯ ನೀಡಿ
ನಿನ್ನೆದೆಯ ತಣಿಸೆ ಹಾಡ ಹಾಡಿ
ನಗೆದರ್ಶನಗೈವಳು–
ಮುಗಿಲಟ್ಟಕೆ ಒಯ್ವಳು.

ಭಾವನೆಗಳ ಹಿಂಡು–ದಂಡು
ಬಾನೊಡೆಯಗೆ ತಿಳಿದುಕೊಂಡು
ಕನಸ ಕರುಣಿಸೆನುವವು
ಮನವ ತಣಿಸು ಎನುವವು.

ಭೂಲೋಕದ ಮನಸಿಗಿಲ್ಲ
ಮೇಲ್ ಲೋಕದ ಕನಸು ಬೆಲ್ಲ
ಬಾರಿಲ್ಲಿಗೆ ಸಿರಿಮಲ್ಲಿಗೆ
ಬಾ ! ಬಿರಿವುವು ನಿನ್ನಲ್ಲಿಗೆ.

ಹೀಗೆನುವಳು ಕಾವ್ಯಾಂಗನೆ
ಕುಣಿದಾಡುವ ಚಂಗ್ ಚಂಗನೆ
ಕನಸಿದರೆ ಮನವು ಹಗುರು
ಮಾಗಿಯ ಒಣ ಬನಕು ಚಿಗುರು.

□□

ನಲ್ಲೆಗೆ

ನೀನೊಂದು ನಗೆಹಣ್ಣು ನಿನ್ನೆದೆಯ ಬಗೆಮಣ್ಣು
ನನ್ನ ಜೀವನವನುಳಿಸಿ ಬೆಳಸಲೆನ್ನು
''ತಿಳಿಗಣ್ಣು ಒಳಗಣ್ಣು–ಬಾಳಬರಡಿಗೆ ಹಣ್ಣು''
ಅರಿತಿದನು ಅನುದಿನವು ಸವಿಯನುಣ್ಣು
.......................ಕದಕಿದ್ದ ಕಿರುಗಣೆಯು ತಪ್ಪಿದಂಗಾದೀತು
ಹುಟ್ಟು ಕೂಸಿಗೆ ಕುಣಿ ಎರವಾದಂಗ
ಮೆತ್ತೂವ ಹುದಲಾಗ ಕಡ್ಡಾ ಕಲಸೀಧಾಂಗ
ಕುದಿವ ನೆತ್ತರದಾಗ ಸುಧೆಗಲಿಸು !
ಎರೆಯ ಮಣ್ಣ ತಂದು ಎಳೆಯ ಹುಡುಗೆವೊಂದು
ಕರ್‍ರ್ಯಾನ್ನ ಕಣ್ಣೀನ ಚರಗೀನ
ಬೆಳಗಿದಂಗಾದೀತ ಕೆಳದಿ, ಬಾಳಿನ ಹುಡದಿ
ಆರಂಭವಾದರ ಮನೆತಾನ ! ‖ ೧ ‖

ನಿಬ್ಬಣಕೊಂದಾರ ಅಬ್ಬರದರಿವಿರಲಿ
ಹಬ್ಬಕೊಂದಿರುವಂಗ ಎಲೆಬಾಳಿ,
ನಿಬ್ಬರಾದರ ಹೊಟ್ಟೆ, ಅಬ್ಬ ! ವೈದ್ಯರ ಪಟ್ಟಿ
ಬರುವಂಗ–ಅಪಿತೆಪ್ಪಿ ಸುಳಿಗಾಳಿ
ಕಾಟದ ಕಾರಣ ದಿನ ದಿನಾ ನಡೆದಾರ
ಕಡದ ಕಾಡಿನಂಗ ನಗೆ ಹೀನ
ಕಟ್ಟೀದ ತೋರಣ ಹುಚ್ಚಿ ಉಚ್ಚೀದಂಗ
ಎಚ್ಚರ ಎಳಗನ್ನಿ, ಬಗೆ ಊನ
ನೀರ ದಾರಿಲ್ಲದ ಒಣಗು ತಪ್ಪೀಯಂಗ
ನಮ್ಮ ಬಾಳಿದಾಂತ ಕಳೆಕಳೆದ
ನೊಗಬೇಕ ? ನಗಬೇಕ ? –ಬಾಳೀಗೆ ಏ ಬಾಲಿ,
ಸುಗ್ಗಿ ಮಾಡ್ಡಂಗಾರ ಬೆಳೆಬೆಳೆದ ! ‖ ೨ ‖

ಕುಡಿಗಣ್ಣ ಕುಲಕೆಲ್ಲ ಬಡಹೆಣ್ಣ ನೆಲಕೆಲ್ಲ
ಒಡೆಯನೆಂಬವನೊಬ್ಬ ಬರತಾನ
ನುಡಿಯದ ತುಟಿಗೆಲ್ಲ ನಡುಗೂವ ನಡಕೆಲ್ಲ
ನಗೆನಾಡ ಸಿರಿತಾನ ತರತಾನ ;
ಹದಿನಾಲ್ಕು ಲೋಕದ ಜೊನ್ನದಂಗಳಗಂಡ
ಹದದ ಮುಗುದರ ಕೂಡ ಬೆರೆತಾನ

ಮುದವುಕ್ಕಿ ನಲಿಯೂವ ಮದುವೆ ಮಕ್ಕಳ ಕೂಡ
ತೀರ್ಥದ ತೇರೀಗೆ ಇರತಾನ
''ಬೇಟದೂಟದತಾಟಿನಗಳೊಂದ ಬಿಟ್ಟೀರಿ
ಮುಂಗೈ ಕಟ್ಟಿಗೆ ಕಾದು ನಿಂತಾನ,
ಬೆಂಡು ಬೆತ್ತಾಸದ ದಂಡೆಯ ಕಟ್ಟೀರಿ
ಅಂಗಜನ ನಾಲಗೆಗೆಂತಾನ'' ! || ೩ ||

ಬಂಗಾರ ಯಾತಕ್ಕ ಮಂಗಳದ ಸಂಗಕ್ಕ ?
ತಂಗಾಳಿ ಬೀಸೀತು ತನತಾನ
ತಂಗಳವ ನುಂಗಿದರು ಹರುಷ ಸಾಗರದುಕ್ಕು
ಏರಿ ಬರುವದು ಮಾಡಿ ಗುಣಗಾನ !
ನಡೆನಲ್ಲೆ ನುಡಿನಲ್ಲೆ ಕುಡಿನಲ್ಲೆ–ರಸನೆಲ್ಲಿ–
ರಸಗೊಳದ ಒಸಗೆಯನಳವಿಲ್ಲೆ
ಸಡಗರದ ಮಿಡಿಹೂವ ಪಡೆದಂಥಋತುರಾಜ–
ನಾಳೂವ ತರುಗಳ ತಳದಲ್ಲೆ !
ನಂದೀಸಿ ಕುಂದೀಸಿ ಕಂದೀಸಿ ವ್ಯಾಕುಲದ
ಬಾನ ನಡುವಿಗೆ ಬರದ ತಂಗದಿರ
''ಒಲುವ ಗೆಲುವಿರಾ ?–ಪೇಳಿ ಮಾಡುವೆ ಗೋಕುಲವ
ನಿಮ್ಮ ನಾಡ'' ಎನುವ ನಗೆಗುವರ || ೪ ||

ಇಂಪು ಹಾಡ ತಂದೇ–ತಂಪಿನಾರತಿ ತಂದೆ
ಸಂಪೀಗೆ ಮುಡಿಹೆಣ್ಣ ಕಪ್ಪೂರವ
ಹಚ್ಚೆಂದೆ, ಬಿಚ್ಚೆಂದೆ–ಬಾಳಿನೊಗಟವಿದೆಂದೆ
ಕೇಳ್ ! ಗಾಳಿ ಬಿದಿರುಗಳ ಸಂಪು ರವ !
ಕಣ್ಣೆರದ ಮನುಜರಿಗೆ ಕನ್ನಡಿಯ ಬೆಲೆಗುರುತೆ ?
ನುಣ್ಣಗ ಕುಡಿಯೊಮ್ಮೆ ಮನದೊಲಿವ,
ಬೆಣ್ಣೆ ಕಡೆಯುವ ಮುನ್ನ ಮಜ್ಜಿಗೆಗೆ ಕಾಣ್ ಕೊರತೆ
ಅಡುಗುವುದೆಂತಾಗ ಒಡಲದಾಹ ?
ಒಡನಾಡಿ, ಇಕೊನಾಡಿ–ದುಡುಕುವದು–ದುಗುಡಕ್ಕೆ
ಪಡೆಗಳೆದ ಅರಸನ ಎದೆಯಂತೆ,
ನಿಟ್ಟುಸಿರ ಬಿಡುತಿಹುದು ಜೀವದ ಜೀವಾಳ
ಎಳೆಯ ರಾವ ತೊಗಲೀನ ತಿದಿಯಂತೆ || ೫ ||

ಮುದ್ದೀನ ಮುದ್ದುಂಡ ಮುಂದಲೆಯ ಮುಂಗುರುಳ
ಚಪ್ಪರವ ಹಾಕು ! ಬಾ, ಎದೆ ಮನೆಗೆ,
ಕಾಂತೀಯ ಸಂತೆಯ ಸಂತಸದ ಸಾಗರದ
ಕಣ್ಣ ಕಿಡಿ ಕೆಂಗು ಹಚ್ಚಿ ಬದಿ–ಬದಿಗೆ !
ಬಾಳಿನಾಟವ ಹೀರಿ ಬೆಳ್ಳಿ–ಬೆಳಕನು ತೋರಿ–
ದೆಳೆದುಟಿಯ ಸವರೆ ಗಲ್ಲಕ್ಕೆ
ಚುಕ್ಕಿರಾಜ್ಯವನಾಳಿದಾಟಕ್ಕೆ !
ಬೆಳ್ಳೀಯ ಕಂಗಳ ತಿಂಗಳ ಮಂಗಳ
ಸಿಂಗಾರದಂಗಳವನೇರಿರಲಿ ‖ ೬ ‖

ಸಲ್ಲು–ಸಲ್ಲೀಗೊಮ್ಮೆ ಹೊಲ್ಲಬಾಳಿನಗುಲ್ಲು
ಕಳೆಯ ಕೊಂಡರೆ ನಲ್ಲನರಳುಗಳೇ ?
ಬೆಲ್ಲದ ಪೆಂಟೀಗೆ ಹೊದಿಕೆ ಹಾಕಿದ ತಟ್ಟು–
ಮಾಯವಾದರೆ ಜೋರು–ಸೋರುಗಳೇ !
ನಲ್ಲೆ ನೀ ಬಲ್ಲಂತೆ ಬೆಣಚುಗಲ್ಲೆದೆ ಬಾಳು
ಹರ್ಮ್ಯವಾದೀತೆಂದೆ ಹೊಗೆಯರಸಗೆ
ಚೆಲ್ಲಾಟ–ಚೆಲುಬೆಳಕು ಚೆಲ್ವೂರದು ಹಬ್ಬದಿರೆ
ನೋಟಕರಾದೇವು ನೋವ್–ಉಸಿರಿಗೆ !
ಸಂಭಾರ ಸೋಂಕದ ಆಡಂಬರದಂತಾಗಿ
ಬಾಳ–ಸಂಧ್ಯಾಕಾಲ ಮಂದಾಗದೇ ?
ಕುಂಬಾರ ಕೆಡಿಸೀದ ಗಡಿಗೀಯು ಸರಿಯಾಗಿ
ಬಾಳೀನ ಸವಿ–ಗವಿ ಹಿಂದಾಗದೇ ? ‖ ೭ ‖

ಬಾಳೀನ ಬೆಳಗೀಗೆ ಸುಡುಗಾಡ ಸಿದ್ಧಾದೆ
ಹಾಲಕ್ಕಿ ನೀನಾಗಿ ಬರೆಯ ಬಾರ,
ದುಃಖದ ಮಳೆಗಾಲ ಮನಿಮ್ಯಾಲ ನಡೆದೀದೆ
ಬೆಳಕಿಂಡಿ ಮುಚ್ಚೊಣು ನೆರವ ತಾರ !
ಫಲಿಸೀದ ಪೇರೂ ಗೊನೆಗಂಡ ಬಾಳೀಯ
ನಡುವೆ ಮಲ್ಲಿಗೆಯೊಂದು ಇದ್ದಾಂಗ
ಮನೆಯ ಮಕ್ಕಳ ನಗೆಯ ಕರುಹೀನ ಬಾಗಿಲದ
ತೋಳೀನ ತಳಥಳಾ ತಳಿರ್ದಾಂಗ,
ಕುಡಿಗಣ್ಣ–ನಗೆಹಣ್ಣ ಸಿರಿನಿರಿಯ ಉಡಿ–ಹಣ್ಣ
ನಲ್ಲಗ ತಿನ್ನೀಸಿ ಮನ್ನೀಸ ಬಾ,
ಮಡಿಹೂವ ಮೂಸೀಸಿ ''ಮುದವೆಂದು'' ಬಾ ! ‖ ೮ ‖

□□

ನಮ್ಮೊಲುಮೆ ಕನಸ ತೋರು

ಮಲ್ಲಪ್ರಭೆಯ ಮಡಿಲಲ್ಲಿ ತಾಯಿ, ನಾನಿಲ್ಲಿ, ದಾರಿ ದೂರ ;
ಬಳಿಸಾಗಲಾರೆ ; ದನಿಕೇಳಲಾರೆ ; ಕಂಬನಿಯ ಹೊನಲ ಪೂರ
ಮತ್ತೆ ಕುತ್ತ ಈ ಜೀವ ವೈರಿ ಕಣ್ಣಿನಲಿ ಕಾಳ ಹಬ್ಬು
ದೇಹಕೊಂದು ಹೋಲಿಕೆಯೆ ಸಾಕು ಶೂಲಂಗಿ ಬೆಂಡು ಕಬ್ಬು

ತೂಗುದೀಪದುರಿ ತಾಪ, ಸಾಲದಿದೆ ಮಿಣುಕು ಮೇಣಬತ್ತಿ
ಇರುಳ ಗರ್ಭದಲಿ ಹೊರಳಿ ನರಳುತಿರೆ ಹೊಟ್ಟೆ ಬೇನೆ ಹತ್ತಿ
ನಿನ್ನೆ–ಇಂದು–ನಾಳೆಗಳ ಬಾಳನಾವರಿಸೆ ಕುರುಡು ಕಳೆಯು
ಎದೆಯ ಸೀಳಿ, ಆಹುತಿಯ ಕೇಳಿ ಮೂದಲಿಸುತಿಹುದು ಇಳೆಯು.

ಕಲ್ಪನೆಯೆ ? ಕನಸೆ ? –ಮನಶಕ್ತಿ–ಬಲಿಸೆ, ಈ ತುಂಟತನದ ತಣಿವು
ಗಂಟಲವ ಬಿಗಿದು, ನಾಲಗೆಯ ಕೊರೆದು, ಬಿಕ್ಕಿಸುವುದಿದರ ಗುಣವು
ನೆನವು ನವೆಯುತಿದೆ, ಮನವು ಸವೆಯುತಿವೆ, ಹಗಲಿರುಳ ತಳಿಕೆ ಬಿಡದು;
ಭಾವಶೂನ್ಯಭ್ರಮೆ ತುಂಬಿ ತುಳುಕುತಿದೆ ಅಡ್ಡಹಾದಿ ಹಿಡಿದು.

ಮರೆತರೊಂದು ಬಗೆ, ನೆನೆದರೊಂದು ಬಗೆ, ಸಿಗದು ಮನೆಯ ನೆಲೆಯು
ಕರುಳಕಡಿವ, ಬಾಳಾಸೆ ಸುಡುವ ನಗೆ ನಕ್ಕಿತಂತೆ ಒಲೆಯು
ಸಹಿಸಬೇಕೆ ? – ನವಿಲೂರ ಕಣಕದುರಿ ಮೂರು ಮೈಲು ದಾಟಿ
ಕಿಡಿಯ ಕಾರಿ ವೀರಾಟವಾಡುತಿದೆ ಜೀವ ಸಿರಿಯ ಲೂಟಿ

ದಿಕ್ಕುದಿಕ್ಕಿಗೊಂದೊಂದು ಜೀವ ಓ, ತಂಗಿ, ತಮ್ಮ, ಅಣ್ಣ ;
ಚಿತ್ತ ಚೀರಿ, ಮೈ ಬೆವರಿ–ಕಮರಿ ಕತ–ಕತನೆ ಕುದಿವ ಸುಣ್ಣ
ಈ ಹವೆಯು ಘೋರ, ಈ ಎದೆಯು ಭಾರ, ನಿರಿನಿಟಿಲು ರೆಪ್ಪೆ–ಹುಬ್ಬು;
ದಿನದಣಿಯೆ ದುಡಿದ, ಮಾದಕವ ಕುಡಿದ, ಮೈಜಾಡ್ಯದಂಥ ಮಬ್ಬು

ಆಳಲ್ಲ ನೀನು ಅಗಲಿಕೆಗೆ ಎಂದು ಮಲ್ಲಿಗೆಯ ಮಮತೆ ಮಾತು
ಇರುಳ ಹತಿಗೆ ಇದೊ ತಾಳ ತಪ್ಪಿಸಿವೆ ನರನಾಡಿ ಸೋತು–ಬಾತು ;
ಜೇಂಗೊಡವ ಕಂಡು, ಬಟ್ಟಲವ ಕೊಂಡು ಕೈಚಾಚುವನಿತಲ್ಲಲ್ಲಿ
ಕನಸೊಡೆಯುವಂತೆ ಭಾವನೆಯ ಕಂತೆ, ಇನ್ನುಳಿದುದೇನು ಇಲ್ಲಿ ?

ನಮ್ಮ ಒಲುಮೆ–ಧ್ವನಿ–ಜೀವ–ಗುರಿಯ ನಿನ್ನಮೃತ ರಾಗದಲ್ಲಿ
ನನ್ನಾಸೆಗಾಗಿ, ಕತ್ತಲೆಗೆ ಬಾಗಿ, ನನ್ನೊಲುಮೆ ಕನಸ ತೋರು
ಮರೆಯುವೆನು ನೋವ ಕಣ್ಣೀರಿಯ ಸಾವ, ಎಳೆಯುವೆವು ಒಲುಮೆ ತೋರು
ರಸಸ್ಮೃತಿಯ ತುಂಬಿ ಕತೆಹೇಳು, ಕಾವ್ಯಾಕ್ಷಿ ಬಂದು ಇಲ್ಲಿ

□□

ನೀಗೀತೆ, ಮಂಕುಮಾಟ ?

ಇಚ್ಛೆಗಿಲ್ಲ ಸ್ವಚ್ಛಂದ ಲೀಲೆ ಅನುತಾಪದಾಜ್ಞಗನುವು
ಅರ್ಥಸುಟ್ಟು, ಅರಳದೆಯೆ ಉಳಿದ ಸುಣಬರುಲಿಯಂತೆ ಮನವು
ಭಾವಸಿರಿಯ ಪೇಟೆಯಲಿ ಇಡಲು ಇದಲ್ಲವಯ್ಯೊ ತಾಣ
ನಗೆ ಬೆಲೆಯ ಕೊಡದು–ಕೇಳಿದರು ತಡೆದು, ನಿಷ್ಫಲವು ನನ್ನ ಹರಣ

ಗೊನೆಮುಳ್ಳುತುಳಿದ ಮರಿಯಾಡಕಾಲನಂತೆನ್ನ ಉರಿವ ಹಣೆಯು
ಬಾಳಿನಾವ ಕೊಳೆ–ಸಂದಿಸೇರಿತೋ ತಿಳಿಯೆ, ಜೀವ–ಹೊಣೆಯು
ಯುಗದಾದಿಯಿಂದ ತಾವರೆಯನೆಂದು ಕಂಡರಿಯದೊಂದು ಕೊಳವು
ಜಗದದೆಯೊಳಿದ್ದರದಕಾವ ಬೆಲೆಯೊ–ಆ ಬೆಲೆಯ ಬಾಳ ಉಳಿವು

ಕೊರತೆಯೊಂದು ಚಿರಸ್ಥಿರತೆಗೊಂಡು ಮರಮರಳಿ ಮರುಳುಗೊಳಿಸಿ
ಉಸಿರು ನಿಲಿಸಿ, ಉತ್ಸಾಹಕೆಡಿಸಿ, ನೆತ್ತರಿಗೆ ನೀರು ಹಣಿಸಿ ;
ಚೇತನೆಯ ಚೆಲುವ, ಎದೆಯೊಲವ, –ಬಲವನೊಮ್ಮೊಮ್ಮೆ ದೂರಮಾಡಿ
ಬೆನ್ನೆಲುಬ ಮಣಿಸಿ, ಬೆಂತರವ ಕುಣಿಸಿ ವ್ಯಾಪಿಸಿದೆ ವ್ಯಥೆಯ ಕೂಡಿ

ಜಗದ ಸುಪ್ರಖರಪ್ರಭೆ ಪ್ರಬಲಗೊಂಡು ನೆನ್ನೆದುರು ಬಾರದೇಕೆ ?
ಕತ್ತಲೆಯ ಕೋಟೆ ಕಡಿದುರುಳುವಂತೆ ಹೋರಾಟ ಹೂಡದೇಕೆ ?
ಇಷ್ಟೆಲ್ಲ ಬದುಕು ನಷ್ಟಕ್ಕೆ ಗುರಿಯು, ಇನ್ನೆಂತೊ ಮುಂದಿನಾಟ ?
ನಿಟ್ಟುಸಿರ ನೀತಿ ನಿರ್ನಾಮಗೊಳದೆ ನೀಗೀತೆ, ಮಂಕುಮಾಟ ?

ನೆನವಿಗೆಲ್ಲ ಆತುರದ ಆರ್ತದನಿ ರಸನಿಮಿಷದಾಸೆ ತವಕ
ನಿಲುಕದಿದ್ದರಿನ್ನಾವ ನಿಯಮದನುಸರಣೆ ಸಾಯುವನಕ ?
ಎದೆಕೊರಗಿಗಷ್ಟೆ ಬೆಂಬಲವಕೊಟ್ಟೆ ; ಸವಿನಯವ ಹಾಳುಸುರಿಸಿ
ಸಂತಾಪ ತೋರಿ, ಸಂಕೋಚ ಬೀರಿ, ಹಾಡುವೆಯ ಕೇಡ ಹರಸಿ ?

□□

ಜನಪದ ನುಡಿ–ಬೆಡಗಿಗೆ

ನಿಮ್ಮ ಪ್ರೌಢಕಲಾ ನಿಬಿಡ ನುಡಿಬೆಡಗಿಗೆ ಜೀವ
ಪೊಡಮಡುತಿರೆ, ಒಡನುಡಿಯಿತು ಇಂತೆದೆ ಬಡಭಾವ

ಹೂವುಜೇನು ಮಾವು ಜೊನ್ನ ಕೂಹೂಕಲೆಯ ಕುಸುರು
ಮೂಡಲ ಹಲತಳಕೆ ಬಣ್ಣ ಬಿಂಬದಹನಿ ಹಸುರು ;
ಕೆರೆಕಟ್ಟೆಯ ಹೊಳೆಬಟ್ಟೆಯ ಹೊಲಫಲಸಿಗೆ ಬಾಗಿ
ಬನಹಟ್ಟಿಯ ಝರಿತೊಟ್ಟಿಯ ಸಿರಿಸಂಪದ ತೂಗಿ ;
ಹಸುಗೂಸಿಗೆ ದಶದಿಸೆಗಳ ಒಲಿಸುವ ಶ್ರೀಜೋಗುಳ ;
ಹಸಿದೊಡಲಿಗೆ ಬೀಸುವಾಗ ನಾಡಬಯಕೆ ಮಂಗಳ ;
ಕರುಳಗತಿಗೆ ಋತುಮಹತಿಗೆ ನವನೂತನ ರಾಗ
ಜೀವಹತಿಗೆ ಬುದ್ಧಿ–ಮತಿಗೆ ಶುಚಿಯೋಚನೆ ಯೋಗ !

ಸಮಕಾಣಿಕೆ ಸಲ್ಲಿಸುವೆನೆ ? ಮನ್ನಿಸಿ, ಎದೆ ತೆರೆವೆ
ದೊರೆತ ಚಣವೆ ಸಮರ್ಪಿಸುವೆ ಅರಸುತಿರುವೆ ತರವೆ
ಅಳಿದ ಉಳಿದ ಕವಿಸ್ವರ ಹೃದಯ ಸಾರಸಂಚಯ
ತೀರ ಸಣ್ಣ ಸಂಭಾವನೆ ಎಂದು ಮತ್ತೆ ತನ್ಮಯ
ನಗುವ ಕೇಳಿ ಹಾಡಿರೇಳಿ ; ಉಷೆಗಾರತಿ ಧೂಪ
ಇಳೆ ಬೆಳಗುವ ರವಿಯ ಮನೆಗು ನಿಮ್ಮ ತೂಗುದೀಪ !

'ಕ್ಷಣಕ್ಷಣದ ಗಂಡುಸಿರ ಸಾಕ್ಷಿಗೊಟ್ಟಾಣೆಗಳು
ನಿನ್ನಿರವು ಎದೆಮನದ ದಾರಿಗುರಿಗುಟ್ಟುಗುಣ
ನಾಡಿನೇಳ್ಗೆಯ ಸೊತ್ತು, ಧ್ಯೇಯಧ್ಯಾನದ ಜಾಣ
ದೊಡಲನುಡಿ, ಅಳುಗೊಳ ಕಡಲನೆರೆ ನಿರ್ವಿಣ್ಣ
ಭಾಂಧವರ ಬಾಳಮೇಲ್ಮೆಗೆ ಮುಡುಪು, ಬರೆವಣ್ಣ
ಉಣ್ಣವರ ಕಣ್ಣೀರ ಕಲಸಿ, ಅಳಿಯುವ ಮುನ್ನ
ಅಜ್ಜಕಜ್ಜ ವಗ್ಯೆವ ಬಿಜ್ಜೆಗಲಿ ! ಇದು ನಿನ್ನ
ವೀರನುಡಿ, ಸೂಜ್ಞಲತೆ ಮಾಲೇಖನಿಯ ತಿರುಳು

ನೆಲಮಮತೆ ಮುನ್ನೀರಿಸಿದೆಯ ಕ್ರಾಂತಿಯ ನೌಕೆ
ದಡಸಾರುವಂತೆಸಗೆ, ಸತ್ವ ಸಲಹೆಯ ಕೊಟ್ಟ
ಕೆಂಗೆಚ್ಚಿನೆದೆಯಾಳಿ, ಸಮರವಾಹಕ ದಿಟ್ಟ
ನಿನ್ನ ಕೇಳೆ, ಹೆಬ್ಬೆಳಕು ಚಿರಅಮರ, ಜನಪದಕೆ.

□□

ಅಭಿಮಾನ

ಕಟ್ಟಿ ಹುಟ್ಟಿದ ಮನಿಯ, ಕಾಲಿಟ್ಟು ನೋಡೇನೆ–
ಬಿಟ್ಟೈತೆ ಬಿರಕ, ಬಿಗಿನಿಲ್ಲ, ಬಿಂದಿಗಿಯ
ಕಟ್ಟೇನೆ ಗುಚ್ಚ ಕಟ್ಟೇನೆ :

ಆರತಿಯ ಬೆಳಗೇನೆ ಪರುವತದ ನಾಡಯ್ಯ
ಪೀರೂತಿ ಬಂದ ಸರಿನಿಂದ ಮನ ಒಲದ
ಮಾದೇವನಂಥ....... ಮುದಿನಾಡ ....:

ರಾಟಿ ಹಮ್ಮಿಗ್ಗಿಯಂಗ, ಕೋಟಿಜನುಮಕ್ಕಿರಲಿ
ನಮ್ಮದೆನ್ನುವ ನಗಿತನವ : ಒಗಿತನವ
ಚಿಮ್ಮೂತ ಎದಿನೆತ್ತರದಂಗ :

ಸಂಜಿ– ಸೂರಜನಂಗ, ಪಂಜ ಪಾವನರಂಗ,
ಗಂಜೀಯನುಂಡ ಗಜಗಂಡ : ಮಕ್ಕಳಿಗೆ
ನಂಜವ್ವ–ನಾಡ–ಗಡಿನೆಂಬು

ಹಂಪಲ ಹಣ್ಣೀನ, ತಂಪ ಕೆಂಪ್ಹೂವೀನ
ಕಂಪೀನ ಗಿಡ ನನ್ನ ಮನಿಯ ಬೆಳಿತೆನ್ನೆ
ಹಂಪೀಯ ಗೋಪುರದುದ್ದ !

ಶುದ್ಧ ಸಿದ್ಧರ ಭೂಮಿ, ಗೆದ್ದ ಮದ್ದಿನ ಭೂಮಿ
ಮದ್ದೀನ ಮಕ್ಕಳ ಭೂಮಿ ಗದ್ದಿಗೆಯ
ಬುದ್ಧ್ಯಾಳ್ಳ, ಹೆದೆದೆರ ಭೂಮಿ' ?

ನೆತ್ತಿಗೆಣ್ಣೀಯಂಗ ಕತ್ತೀಯ ಒರೆಯಂಗ
ಹೊತ್ತೀನ ಸೂರೀದನಂಗ ನಮಗಣ್ಣ
ನುಡಿಬೇಕು ''ನಮ್ಮ ನಾಡಂಬು''

□□

ಯಾವ ಕಾರಣ ?

ಕೈಯ ಕೈ ಹಿಡಿಯುವುದು
ಮೈಯ ಮೈ ಮುಡಿಯುವುದು
ತುಟಿಗೆ ತುಟಿ ಕೂಡುವುದು–
ಯಾವ ಕಾರಣ ?

ಮೊಗವೊಂದರಲ್ಲಿ ಜಗ
ಝುಗ–ಝುಗ ಝುಗಿಸುವಾಗ
ಬಾಯ್ಗೆ ದೊಡ್ಡದೊಂದು ಬೀಗ
ಯಾವ ಕಾರಣ ?

''ಆಗಿದ್ದರೆ ನಾನು ಖಗ
ಸಂತತವು ನಿನ್ನ ಸೊಗ
ಅಚ್ಚಳಿಯದೆ ನನ್ನೊಳಗ''
ಯಾವ ಕಾರಣ ?

ಕಂಡರೊಮ್ಮೆ ತುಂಬ ಹಗಣ
ಉಂಡರೊಮ್ಮೆ ಕಣ್ಣೆ ಬಾಣ
ನಿನಗಾಗಿಯೆ ನಾನು ಚಾಣ
ಯಾವ ಕಾರಣ ?

ನಿನ್ನ ಕಾಯಿ ಕಂಡು ನನ್ನ
ಬದಲಿಸುತ್ತ ತನ್ನ ಬಣ್ಣ
ಆಗುವದೆ ತಾನು ಹಣ್ಣ
ಯಾವ ಕಾರಣ ?

ನೀನು ಎದುರು ಕಾಲಕೂಟ
ನೆನೆವಿಗೊಮ್ಮೆ–ನಡುಗಿನೋಟ
ಬಾಳು–ಬಾಳು ನಿನ್ನ ಕೂಟ
ಯಾವ ಕಾರಣ ?

ದಾರಿಯಲ್ಲಿ ಬುತ್ತಿಯಾಗಿ
ಕೈಯೊಳಗೆ ಹೊತ್ತಿಗೆಯಾಗಿ
ಬರುವೆ ಮತ್ತೆ ಮುತ್ತಿಗಾಗಿ

ಯಾವ ಕಾರಣ ?
ಇರುಳಿಗೊಂದು ಕನಸು ನೀನು
ಮರುಳುಗೊಂಡ ಮನಸು ನಾನು
ತಿಳಿಯಲಿಲ್ಲ ಯಾಕೊ– ಏನು ?
ಯಾವ ಕಾರಣ ?

ನನ್ನ ಹೂವಿಗೊಂದು ತುಂಬಿ
ನನ್ನ ನೇಯ್ಗೆಗೊಮ್ಮೆ ಕಂಬಿ
ನನ್ನ ಗೋಡೆ ನೀನು ಕುಂಬಿ–
ಯಾವ ಕಾರಣ ?

ನಿನ್ನ ಮೊಗ್ಗೆ ಅರಳುವುದು
ನನ್ನ ಬುಗ್ಗೆ ಪುಟಿಯುವುದು
ಮತ್ತೆ ಹಿಗ್ಗುಹಿಗ್ಗುವುದು
ಯಾವ ಕಾರಣ ?

ದಂಟು ನೀನು–ತೆಗೆದೆ ಗಂಟು
ತೆನೆಯೆಂದರೆ ನಾನೆ ಉಂಟು
ಓದಬೇಡ ನಿನ್ನ ಪಂಟು
ಯಾವ ಕಾರಣ ?

ಮುತ್ತಿನಂತೆ ದುಂಡಗಾಗಿ
ಮುತ್ತಿಗಿಂತ ಇನಿಯಳಾಗಿ
ಮತ್ತೆ ನಿಂತೆ ಇದಿರು ಬಾಗಿ
ಯಾವ ಕಾರಣ ?

ಎತ್ತೆತ್ತಲು ನೀನು ಮಲುಕು
ಕತ್ತಲಲ್ಲಿ ನಿನ್ನ ಬೆಳಕು
ಹಿತ್ತಲಲ್ಲಿ ನಿನ್ನ ಝುಳಕು–
ಯಾವ ಕಾರಣ ?

□□

ಕಾಳಿ

ಬಂದಳು ಕಾಳಿ
ಪುಂಡರ ಗೂಳಿ
ದಾಳಿಯ ನಿಟ್ಟಳು
ನೆರೆಮನೆ ಸುಟ್ಟಳು

ನೆಲ ನಡುಗಿತು
ಎಲ್ಲೊ ಉಡುಗಿತು
ಜಲ ಕಲಕಿತು
ಅದೊ ತುಳುಕಿತು

ಅಡಿಯಿಟ್ಟಳು
ಮುಡಿಬಿಟ್ಟಳು
ಭೂಮಿಯ ಸೋಸಿ–
ದಾಸ್ಯಕೆ ಹೇಸಿ
ಬಂದಳು ಕಾಳಿ
ಪುಂಡರ ಗೂಳಿ !

ನೆಲಮುಚ್ಚುವ ಬೆಳೆ
ಶೋಕಿಸುತಿದೆ ಇಳೆ
ಸಿರಿವಂತರ ಕಳೆ
ಬಡ ಕ್ರಂದನದೊಳೆ

ಬಡವರ ನೆತ್ತರ
ಕೂಡಲು ದುಸ್ತರ
ಅನ್ಯಾಯದ ಮಳೆ
ಸುರಿಯಿತು ಬಾಳ ಕೊಳೆ

ಕಂಡಳು ಕಾಳಿ
ಮೊರೆಯನು ಕೇಳಿ
ನಸು ನಕ್ಕಳು
'ಬಡಮಕ್ಕಳು !'
ಎಂದಳು ಕಾಳಿ
ಪುಂಡರ ಗೂಳಿ.

ಬಡವರ ರೋಳಿ
ನೆರಳುವ ರೋಳಿ
ರಣಚಂಡಿಯ ಮನೆ
ಮಾರಿಗೆ ಬೇಲಿ !

ತೀರಿತೆ ಅಳುವು ?
ಕಂಬನಿ ಸೆಳುವು
ಇಂಬಾಗಲಿ ಇದೆ
ದುಡ್ಡಿನ ಗೇಲಿ !

'ನಿಂತರೆ ಕಿಡಿದನಿ
ಕುಂತರೆ ಕಂಬನಿ
ಸಾವೇ ಸಿರಿಮನೆ
ಎಂದುದು ಬೇನೆ ?'
ಇದು ಬಡವರ ತಪ
ಕಾಳಿಗೆ ಕೋಪ

ಅರೆಚಣ ಮರೆಯದು
ಮರೆಯುವ ಕಿಚ್ಚಿದು
ತಿರೆಯೇ ಧರ ಧರ
ಕಿರುಚಲು ಬಡವರ

ಕಾಳಿಗೆ ಸುದ್ದಿ,
ಎನ್ನುತ ಗುದ್ದಿ,
ಸೊಕ್ಕನು ಕಕ್ಕಿಸಿ
ನೆತ್ತಿಯ ಕುಕ್ಕಿಸಿ

ಕೂಳಿಗೆ ಬಿಕ್ಕಿಸಿ,
ಏಳನು ಬೀಳಿಸಿ,
ನಾ ಮರೆವಾಗಲೆ,
ಬೀಳಿಗೆ ಬಾಳು
'ಬಡವರೆ ಬಾಳಿ'
ಜಿಗಿದಳು ಕಾಳಿ !

ಕಾಲೊಳು ಗೆಜ್ಜೆ
ಕುಣಿತದ ಹೆಜ್ಜೆ
ತಮವನು ಜಯಿಸಿ
ಜಗ ಝುಗ ಝುಗಿಸಿ

ಸಮತೆಯ ಬೆರಸೆ
ಅವಳಿಗೆ ಆಸೆ
ಅನಾಥರಜ್ಜಿ
ಕಾಳಿಯ ಬಿಜ್ಜೆ

ವಿಶ್ವವ್ಯಾಪಕ
ನಾಡೊಳು ನಾಕ
'ನೆಣವೇ ತುಪ್ಪ
ಹೆಣವೇ ಕಪ್ಪ'
ಎಂದಳೊ ಕಾಳಿ
ಗುಡುಗದೊ ! ಕೇಳಿ !

ಸಿಡಿಯಿತು ಗುಂಡು,
ಅಂಜಿತು ಗಂಡು
ನೋಡಿರಿ ಬಂಡು—
ಕುಣಿತದ ಚೆಂಡು !

ನಭದಲಿ ಗಲಭೆ
ನೆತ್ತರೊಳೆಲುಬೆ ?
ಕಿಡಿಗಂಗಳ
ಜಗದಂಗಳ—

ಕೆಂಪಾಯಿತೊ
ತಂಪಾಯಿತೊ
ತಾರೆಯ ಗೋಪುರ
ರುಂಡದ ನೂಪುರ
ಬಂದಳು ಕಾಳಿ
ಜಗದೆದೆ ಸೀಳಿ

‘ಎಲ್ಲಿದೆ ಶಾಸ್ತ್ರ ?
ಮುಂದಿದೆ ಅಸ್ತ್ರ
ಧರ್ಮವ ಬೋಧಿಸು
ಹಿಂಡುವೆ ನಿನ್ನಸು

ಸಾವಳಿಯಿತು ಬಾಳೆ
ನೋವಿಳಿಯಿತು ಕೇಳೆ
ಆದರೆ ಭಕ್ತ–
ಎಲ್ಲಕು ಶಕ್ತ ! ’
ಕೆಂಗೊಳದ ಬಳಿ
ಝೂಗಿದಳೋ ಕಾಳಿ

ನೆತ್ತರ ಗಂಗೆಯ
ಹರಿಸಿದಳೋ
ತೊಗಲಿನ ಅಂಗಿಯ
ಧರಿಸಿದಳೋ

ಹೊತ್ತೇರುತ್ತ ಅರೆ
ಪಂಜನು ಹೊತ್ತಿಸಿ
ತೂರಿದಳೊ–
ಮುಗಿಲೇರಿದಳೊ

ಪುಟಿಯಿತು ನೆತ್ತರ
ಅದೊ ಎಷ್ಟೆತ್ತರ ?
ಕಾಳಿಯ ನೃತ್ಯ
ಅನಂತ ಹತ್ಯ
ಕುಣಿಯುವಳೋ ಕಾಳಿ
ಅವತಾರವ ತಾಳಿ

□□

ನನ್ನ ಆಸೆ

ಮಳೆಗೆ ಹೊರಪನೂ ಕೊಳೆಗೆ ತೆರಪನೂ
ಕಾಯ್ತು ಕರೆಯಲಿಲ್ಲ
ಬೇಗೆ ಉರುಪಿಗೂ ದಾರಿ
ಅಂಜಿ ಕೊರಗಲಿಲ್ಲ.

ಮನದ ಮೌನದಾ ಕೊನೆಯ ಆಣತಿಗೆ
ಬಾಗಿ ಬಾನ ಪಯಣ
ಹೂಡ ಹೊರಟಿತೊ ಕೂಡ ಹೊರಟಿತೋ
ಬಾಳು ಬೇಡಿದವನ

ಹಳೆಯ ಹಿಂಗತೆಯ ಕೀಳುಹಾಳೆಗಳ
ಕಟ್ಟು ಬಿಚ್ಚಿ ಕಾದಿ
ದೆವ್ವ ಗಾಳಿಯಲಿ ತೂರಿ ಬಿಟ್ಟಿತೊ
ಸುಗಮವಾಯ್ತು ಹಾದಿ

ಕಳೆಯ ಜೀವಿಗಳ ತಿಳಿವಿನೋಲೆಗಳ
ಗುಟ್ಟನೆಲ್ಲ ಓದೆ,
ಬಾನ ಪಯಣಕೆ ಹೊನ್ನು ಏತಕೊ ?
ಹುಟ್ಟಿತೊಂದು ಗಾದೆ

ಹೊರಳಿ ಬರಲು ಮಿತಿ, ಮೊದಲು ಬಿಡಲು ತಿಥಿ
ಗೊತ್ತು ಮಾಡಲಿಲ್ಲ
ಯಾವ ದಿಕ್ಕಿಗಿದೆ ಶುಭದ ಶಕುನ ಪೊದೆ ?
ಕಂಡುಕೊಳ್ಳಲಿಲ್ಲ

ದಿಕ್ಕು ದಿಕ್ಕನೂ ತೆಕ್ಕೆಗೊಂಡಿತೊ
ನನ್ನ ಆಸೆಯಿಂದು
ಹಿಂಡು ಚುಕ್ಕೆಗಳ ಕಂಡು ಬೇಡಿತೊ
ಬೆಳಕ ನೀಡಿರೆಂದು.

ಜೊತೆಗೆ ಜೀವವನೆ ಕರೆದುಕೊಂಡಿತೊ
ವರದಿ ಬರೆಯ ಹಚ್ಚಿ
ಜೀವ ಸಮ್ಮತಿಸಿ, ಬಾಳಲೆಂತೊ

ತನ್ನ ಹಾಳೆ ಬಿಚ್ಚಿ.
ಆಸೆ ಜೀವ ಜೊತೆಗೂಡಿ ಮೋಡಗಳು
ವಿವಿಧ ಬಣ್ಣಗೂಡಿ
ಕರೆದು ಸತ್ಕರಿಸೆ ಒಸಗೆ ಹಾಡುಗಳು
ಪಯಣಕೆಲ್ಲಿ ಧಾಡಿ !.

ಪಯಣ ಸಾಗುತಿರೆ ಆಸೆ,
ಎಂತೊ ಏನೊ ನೆನೆದು
ಆಸೆ ಸೊಗ ಗಳಿಸಿ ಕೊಟ್ಟಿತೊ
ದೇವ ಲೋಕಕಿಂದು

ಆಸೆ ಹೇಳಿತೊ ಆಸೆಗೊಮ್ಮೆ ನಡು
ಬಾನಗೊನೆಯ ಹಿಡಿದು
ದೇಶ ದೇಶಗಳ ಜನ್ಮ ಜನ್ಮಗಳ
ಕಣ್ಣನೀರ ಕುಡಿದು.

□□

ಗಿರಿಯನೇರಲಾರೆಯ ?

ದೂರ ದೂರ ದೂರ ಗಿರಿಯ
ಕಂಡು ದುಗುಡವೇಕೆ ಕಿರಿಯ ?
ಗಿರಿಯನೇರಲಾರೆಯ ?
ಎಂತೆ ಇರಲಿ ತೆರೆಯ ಪರಿಯು
ಇರಲು ಜೀವಕೊಂದು ಗುರಿಯು
ಗಿರಿಯನೇರಲಾರೆಯ ? ॥ ೧ ॥

ಗಿರಿಯು ನೀನು ಕಂಡುದಲ್ಲ
ವಿಧಿಯು ತಾನೆ ತೋರಿತಲ್ಲ
ಅಳುಕು ಮತ್ತದೇತಕೆ ?
'ನನ್ನ ಬಾಳು ವಿಧಿಯ ಕೂಳು–
ನಾನು ವಿಧಿಯ ದುಡಿಯುವಾಳು'
ನಿನ್ನದಿದೆಯೆ ತೋರಿಸು ? ॥ ೨ ॥

ಕುರುಡಗಿರಲು ಊರೆಗೋಲು
ಮುಂದೆ ಇಡುವ ತನ್ನ ಕಾಲು
ನೀನು ಬಲ್ಲೆಯಲ್ಲವೆ ?
ಗಿರಿಯದೇನು ಕಿರಿಯದಲ್ಲ–
ನಿಜವು ! 'ಮನಕೆ ಹಿರಿಯದಲ್ಲ'
ಇಚ್ಛೆ ಇದ್ದರಲ್ಲವೆ ? ॥ ೩ ॥

ಉದಯ ಕಾಲ ಎದ್ದು ಸೂರ್ಯ
ಏರಲವನು ದೂರ ಗಿರಿಯ
ಬಣ್ಣದೂಟ ಕಣ್ಣಿಗೆ !
ತೊರೆಯಲವನು ಗಿರಿಯ ಮತ್ತೆ
ಏನು ಸಿರಿಯು ಅಲ್ಲಿ ಇತ್ತೆ ?
ತಿಳಿದು ನೋಡು ನುಣ್ಣಗೆ ॥ ೪ ॥

ವಿಧಿಗೆ ಜಗವು ತಿಂಡಿ ! ತಾಟು !
ನಾವು ಎಲ್ಲ ಅದರ ತುತ್ತು
ವಿಧಿಗೆ ಊಟವಲ್ಲವೆ ?
ಮುಗಿಯಲೊಂದು ಕೈಯ ತುತ್ತು
ಮತ್ತೆ ಒಂದು ಬಾಯ್ಗೆ ಬಿತ್ತು !
ದಿನದ ರೂಢಿಯಲ್ಲವೆ ? ॥ ೫ ॥

ಗಿರಿಯ ತುಂಬ ಮುಳ್ಳೆ ಉಂಟೆ ?
ಸುಗ್ಗಿ ! ಎಲ್ಲ ಹೊಲಕೆ ದಂಟೆ ?
ಮುಂದೆ ಸಾಗು ಅಡಿಯಿಡು !
ನೋಡು ಒಮ್ಮೆ ಸೌಂದರ್ಯ
ಮಾಯವಾಗ ಬೇಕು ಧೈರ್ಯ
ಗುರಿಯನರಿತು ಅಡಿಯಿಡು || ೭ ||

ಗಿರಿಗೆ ಮತ್ತೆ ಬರಲು ಸೂರ್ಯ
ಆಯ್ತು ಕಾಗೆ ನಿನ್ನ ಕಾರ್ಯ !
ಸನಿಹದಲ್ಲಿ ಆದಿನ
ಗಿರಿಯೆ ಇರಲಿ ತೊರೆಯೆ ಬರಲಿ
ನಿನ್ನ ಮನಕೆ ಶಾಂತಿ ಇರಲಿ
ಕಾಡೆ ಆಯ್ತು ಸಿರಿವನ || ೭ ||

ತೆರೆಯೊ ನೀನು ಮುಚ್ಚು ಕಣ್ಣು
ಕಂಡುದೆಲ್ಲ ಅಹುದು ಹಣ್ಣು
ರಸವನೀಂಟಲಾರೆಯ ?
ನೀನು ಒಂದು ಸುಖವ ಬಿಟ್ಟೆ
ಹೂವಿನತ್ತ ನಿನ್ನ ಚಿಟ್ಟೆ
ಜಗವ ಮರೆಯಲಾರೆಯ ? || ೮ ||

ಬಣ್ಣಗಳನೆ ಹಣ್ಣು ಮಾಡಿ
ಹಿಡಿದು ತನ್ನ ಮರೆವ ಗುಡಿ
ಸುಗ್ಗಿ ನುಗ್ಗಿ ಬಂದಿತು
ಬಂದ ಸೊಬಗ ನೋಡಿ ನಲಿ
ಬೆಳಗಿಗರಳದೇನು ಕಲಿ ?
ಮನವು ಮಾತ ತಂದಿತು || ೯ ||

ಎಂತೆ ಇರಲಿ ತೆರೆಯ ಪರಿಯು
ಇರಲು ಜೀವಕೊಂದು ಗುರಿಯು
ಗಿರಿಯನೇರಲಾರೆಯ ?
ಕಾಡಿನಲ್ಲಿ ಕೂಡಿಕೊಂಡು
ನಿನ್ನ ಹಾಡ ಹಾಡಿಕೊಂಡು
ಗಿರಿಯನೇರಲಾರೆಯ ? || ೧೦ ||

□□

ವಿಜಯೀಭವ

ಕ್ರಾಂತಿಕಾಳಿಯ ಖಡ್ಗದಂತರವು ಕುತ್ತಿಗೆಗೆ
ಕಡಿಮೆಯಾಗುತ ಬಂತು
ಓ ಕಿರಿಯ, ನಿನ್ನ ಮನವೆಂತು ?

'ಕ್ರಾಂತಿಕಾಳಿಯ ಖಡ್ಗದಂತರವೆ ? ಆಳಿದಿಹೆನು
ತುಂಬಿಹೆನು ಈ ತನುವ
ನುಂಗಿ ಜಗದೆಲ್ಲ ಹಳೆನೋವ'

'ಚಂಡಿ ಎಬ್ಬಿಸಿ ಬಂಡು ಲೋಕದೂಟವನುಂಡು
ನಲಿವಂದು ನಗೆಮಾತೆ ?
ಚಿಲುಮೆ ಪುಟಿಯಿತು ಮತ್ತೆ ರಕ್ತದೊರತೆ ?'

''ಅಡಿತಲದ ಬುಡದಿಂದ ಮತ್ತೆ ತಲೆಮುಡಿಯತನ
ನೆತ್ತರವು ಒತ್ತಿ ಬರೆ
ಹಿರಿಯೆದೆಯ ಕಿರಿಯರಂಜುವರೆ ?''

'ನಿನ್ನೆದೆಯ ದನಿನಾಳ ಹರಿಯೆ ನೆತ್ತರದ ಹೊಳೆ
ಅಡಗಿದರೆ ಎಲ್ಲೊ ಕಿರಿಯ
ಹೊಳೆಗೂಡಿ ಧುಮುಕದಿರೆ ಎಲ್ಲಿ ವಿಜಯ ?'

''ವಿಜಯವೊಂದೇ ನಿನ್ನ ಉಸಿರಿಗಾಸರವೇನು ?
ಸೋಲಿರಲಿ ಗೆಲವಳಿಯೆ
ಸೋಲು 'ಗೆಲವಿದೆ' ಎಂದೆ ಬಿದ್ದ ಛಾಯೆ''

'ಸೋಲೆ ಬಲ ನನಗೆಂದು ಕಿರಿಯನುತ್ತರವಷ್ಟೆ
ಸಣ್ಣವರ ಕಣ್ಣೆಗಿನ್ನೆ–
ಲ್ಲಿಯದು ನಾಕವೆಂಬುವ ಲೋಕ ?'

ಮೂಕ ನಾನಲ್ಲೊಡೆಯ, ಕೇಳಿನ್ನು ಈ ನುಡಿ
ನುಡಿದಂತೆ ಅಡಿಯಿಟ್ಟು
ಬಡದನಿಗೆ ಕಿವಿಗೊಟ್ಟು

ನಾಕ–ನರಕಗಳನ್ನು ಮೂಲೆಗಿಟ್ಟು
ತನ್ನ ಲೋಕವ ಕಟ್ಟಿ

ಬನ್ನವನೆ ತುಳಿದೆ ತಟ್ಟಿ
ಮುನ್ನಡೆವ ಸಾಹಸವು ಕಿರಿಯ
ನಾಡೆ ಕಿರಿಯನ ಗುಡಿಯು
ಜಗವೆ ಕಿರಿಯನ ಪಡೆಯು

ದೇವ ದೈವಗಳೆಲ್ಲ ಅವಗೆ ಹುಡಿ
ದಾರಿಯಲಿ ತಡೆ ಬರಲು
ಜೀವವನೆ ಮುಡುಪಿಡಲು

ಕ್ರಾಂತಿಕಾಳಿಯ ಕೂಸು ಕಿರಿಯ ಸಿದ್ಧ
ಕಣ್ಮುಚ್ಚಿ ಬಾಳುತ್ತ
ಸಾವಿಗೌತಣವಿತ್ತ

ಹೇಡಿಯೊಲು ಬಾಳಲಹ ಕಿರಿಯನಿದನಲ್ಲಿ
ನಾಡ ಪಾವನಗೊಳಿಸಿ
ಸಾವ ಸೆರೆಮನೆಗಿಳಿಸಿ

ನೋವಿನಂಗನೆಗಿಂದು ಕಿರಿಯನಿವನಲ್ಲ
ಹಿರಿಯನೆಂಬಭಿಮಾನ—
ಮುರಿದು ಮೂಲೆಗೆ ಕಿರಿಯ

ನಿನ್ನ ನುಡಿಕೇಳಿದೊಡೆ ನನಗೆ ಹೊಸಜೀವ
ನಿನ್ನ ಕೈದಾನಕ್ಕೆ
ಹರಕೆಯೀವನು ಹಿರಿಯ
ಸಂತತವು ಹೋರಾಡು, ವಿಜಯೀಭವ.

□□

ವಿರಹಿಣಿಯ ಕನಸು

ಕಂಡುಂಡ ಸಿಹಿ–ಕಹಿಗೆ ಜೇನ–ಲೇಪಿಸಿ ಕನಸೆ
ಇಂದಿನಿರುಳಲಿ ಬಂದು ನನ್ನ ನಗಿಸು
ಗೋಮಳೆಗರೆದಾಗ ಬಾಳ–ಸಸಿ–ಬೇರಿನಿಸು
ಹೊರಗಾಯ್ತು, ಅದಕೊಮ್ಮೆ ಮಣ್ಣೇರಿಸು !

ನನ್ನ ಬಾಳಿನ ಗಿಡದ ಹಣ್ಣಸಿಪ್ಪೆಯನೆಲ್ಲ
ಸುಲಿದಾಗ ವಿಧಿಗೈಮೆ ದೀನೆ ನಾನು,
ಎಲೆ ಕನಸೆ, ನಲ್–ಮಾತ ಸಲಿಸಿ ದೂರದ ನಲ್ಲ
ಬಳಿಸಾರಿ ಒಲಿದಂತೆ ಉಸುರೆಯೇನು ?

ಬೀಳು ಭೂಮಿಯು ಬೆಳೆಯ ಸೊಕ್ಕಿ ಬೆಳೆಸುವವೊಲು
ನನ್ನ ಜೀವದ ಸುಖವನೊಮ್ಮೆ ಬೆಳೆಸು
ಮಾಗಿ ಮರಗಳ ಪೈಪೋಟಿ ಕಳಚಿ ಬೀಳುವವೊಲು

೮–೧೧–೧೯೪೪

□□

ಬರಗಾಲ

ಬಂಗಾಲದ ಕಂಗಾಲದ ನೆನವಿಗೆ
ಮುಂಗಾಣುವ ಮನೆ–ಮನ ಹಾಳೋ
ವಿಶ್ವ–ವ್ಯೋಮದ ಮುಳುಗಿದ ಮುಕುಟದ
ಕವಿ ರವಿಯಾ ಮನೆಗೀಗೋಳೊ ?

ನೆಲದಮ್ಮನ ತಲೆಹಿಕ್ಕಿದ ಮಾನವ ಕಕ್ಕಿದನೋ
ಮಣ್ ಮುಕ್ಕಿದನೋ
ತನ್ನೊಳು ಮಿಂದವರ ಕೊಂದಳು ಆ ಗಂಗೆ
ಸಾವುಗಳೋ–
ಒಣ ದೇಹಗಳೋ ಕಾಳಿಲ್ಲ ಕೂಳಿಲ್ಲ ಬಾಳಿಲ್ಲ

ಬರಿ ಮರಣ ಚಂಡಿಗೆ ಆಭರಣ ಸಾವು–ಸೇವೆಗಳೆರಡೆ
ಭಾರತದ ಭಾಗ್ಯಕ್ಕೆ–
ಸಿರಿಯನ್ನು ಉರಿ ನೆಕ್ಕೆ
ಕೋಲಾಹಲ ಹೊಲದೆಡಬಲ
'ಜಲ ? ಝಳ !'
ಮರಮರುಗಿ ಬಂದನೊ ಆ ಕಾಲ
ಕಾದದೀ ಮಕ್ಕಳನು ಖೇದವಿಲ್ಲದೆ ಕೊಂದು
ಹೆತ್ತಾಯಿ ಸುಖಿಸುವಳೊ ?

□□

ಎದೆಗುದಿ

ಎಂದು ಬಂತೊ ಏನೆಲ್ಲ ತಂತೊ ಅದರರಿವು ಅದಕೆ ಗುರುತು
ಹರಿದಾರಿಗುಂಟ ಮರ, ಬಳ್ಳಿ ಕಂಟೆಯೊಡನಾಟವಾಡಿ ಬೆರೆತು
ಹೆಜ್ಜೆ ಹೆಜ್ಜೆಗೂ ತನ್ನ ಉಜ್ಜರಿಗದ ಗುರಿಯೆಂದು ತಲೆ ಜಜ್ಜಿ
ಭೀತಿ–ಭೂತಗನ್ನಡಿಯನಿರಿಸಿತೀ ತಿರೆಯ ಎದೆಯಲುಜ್ಜಿ

ಮಧುಮಾಸ–ಸೊಬಗುಮರೆಮಾಚಿ, ಮೌನ–ಮೋಜುಗಳ ಮಜಲನೆರಸಿ,
ಕೊರಳುಸಿರಗಟ್ಟೆ, ತಣಿವೆಲ್ಲ ತಿಟ್ಟೆ, ಒಡಲುರಿಯ ಉರುಸುಮೆರೆಸಿ,
ಜಂಜಾಟ–ಜಡವೊ, ದುರ್ದಿನದ–ದೃಢವೊ, ಚಂಚಲತೆ ಗೆಲವೊ ಅರಿಯೆ
ದುಃಸ್ವಪ್ನ ಫಲವೊ, ದುಃಖಾಗ್ನಿ ಫಲವೊ, ಹೆಸರಿಲ್ಲ ಹುಡುಕಿ ಕರೆಯೆ.

ಹದಮೀರಿ ಕಿಚ್ಚು ಹೆಚ್ಚಾಗಿ, ಹಾಳು ಹುಚ್ಚಾಯ್ತು ಸಹಿಸೆ ಸಾಕು
ನನ್ನೆದೆಯ ಕಡಿದು, ಬೇಗುದಿಯ ಹಿಡಿದು, ಹೊರದೂಡಿ ಹೊಲಿಯ ಬೇಕು
'ಇದ್ದಂತೆ ಇರು !'–ಸಿದ್ಧಾಂತ–ಬುದ್ಧಿ–ಸಾರುವುದು ದುರಳ ಸುದ್ದಿ
ಮನದಿರುವು ಇಂತು ಮುಳುವಾಯ್ತು ತನಗೆ ಒಳಗೊಳಗೆ ದುಗುಡ ವೃದ್ಧಿ

ಸೊಗಸು ನಗೆಯ ಬೆಲೆ–ಕಲೆಯ ಹೊನ್ನಸಂಪುಟದ ಕಾವ್ಯ ಕನಸೆ ?–
ವಿಧಿ ಅಟ್ಟವರಿ ಕೊನೆಮುಸುಕನೆಳೆದು ಬಳಸುವುದು ಅಣಕ ಭಾಷೆ
ಸಂಕ್ರಮಣಕೊಮ್ಮೆ ಸಂತೃಪ್ತಳಾಗಿ ನಸುಕಿನಲಿ ಹೊಯ್ದು ದೋಸೆ
ತಾಯಿ ನನ್ನ ಬೆನ್ನಲ್ಲಿ ಬಡಿದುದೂ ವ್ಯರ್ಥ–ಕರುಳಿನಾಸೆ.

ದಾರಿ ಇಕ್ಕೆಲದಿ ಸೊಕ್ಕಿ ಬೆಳೆದ ಹೊಲದೆಸೆಗೆ ಕಪ್ಪುರೋಗ
ಬಡಿದಾಗ ರೈತ ಗೋಣಗುಟ್ಟ ಸುಗ್ಗಿ–ಹಣ–ಕಳೆಯೆ ಅಳಲು ರೋಗ
ಮಾತು–ಮತಿಯ, ಈ ಬಾಳಕತೆಯ ಜತೆ ಬೇಡಲಹುದು, ಒಲ್ಲೆ–
ಬಾಯ್ದೆರೆಯಲಾರೆ, ಮುಂಬರಿಯಲಾರೆ, ಎದೆಗುದಿಯನೇನ ಬಲ್ಲೆ ?–

□□

ನಾ ನಿನ್ನ ಮಗನಲ್ಲ

ಓ ತಾಯೆ, ನಾ ನಿನ್ನ ಮಗನಲ್ಲ, ಅವನ ಪ್ರೇತ.
ಮಾಡುವೆನು ಅವನುಳಿಸಿದೆಲ್ಲ ಜೀತ
ಅವನ ನಗೆ—ಗುಣ ನನಗೆ ಇಲ್ಲವೆಂದರೆ—ಉಚಿತ
ಅವನು ತೋರಿದ ಗುರಿಗೆ ನನ್ನ ಸೆಳೆತ.

ಎಂದಾಯಿತಿವನ ಕೊನೆ ? ಯಾರೊಡೆದರವನ ತಲೆ ?
ಏನ ನುಡಿದನು ಕೊನೆಯ ಗಳಿಗೆಗೆನ್ನುವೆಯ ?
ಹೇಳಲಸದಳವು ಹೊಲ್ಲ—ಮೃತದೊಳಗೆಲ್ಲ
ಹೊರೆಹೊತ್ತು ನಿಂತುದನು ಕಂಡೆ ಬನ್ನ—ಭಯ

ನಾಟಕದ ನಡುವೆ ಸ್ಫುಟನುಡಿಮರೆತ ನಟನಂತೆ
ಗಳುಪಿದರೆ ವಿವರವೇ—ವಿರಸ ಚಿಂತೆ ?
ನೀನು ಬಣ್ಣಿಸಿದೆಲ್ಲ ದಾರಿಯಲಿ ಆಡಿಇಡಲು
ಬವಣೆಯೇ ದಿನದಿನವು ಬಲಸೊಕ್ಕಿತಂತೆ

ನೀನೆಟ್ಟು ಜೋಪಾನ ಮಾಡಿದೆಳೆ ಕರಿ—ಬೇವು
ಆಡು ಕಡಿದಳಿದುದಕೆ ಮರುಕತಾಳಿ
ಚೈತ್ರ ಮಾಸದ ಮೊದಲ ದಿನ ತನ್ನ ಮರಿಬೆಕ್ಕ
ಮುಂಗಲಿಯು ಘಾಸಿಸಿದ ಬಗೆಯ ಹೇಳಿ

ಗಿಡ ಬೆಕ್ಕುಗಳಿಗೆಲ್ಲ ಬಾಳ ಹೋಲಿಕೆ ತೋರಿ
ಉಸಿರು ಮುಗಿಸಿ, ನನಗೆ ಜೀವಕೊಟ್ಟು.
ನಾನು ಹೊರಗಿನ ದೆವ್ವವೆಂದು ಕಡೆಗಣಿಸದಿರು
ಮಂತ್ರ ತಂತ್ರಕೆ ಹೇಳಬೇಡ ಗುಟ್ಟು

□□

ಕುರುಡು ಬೆಳಕಿಗೆ (೧)

ಏಟು ಏಟು ಎದೆ–ಬೆನ್ನಿಗೇಟು, ವಿಧಿಮಾಟಗೈಯ ಏಟು
ಕುರುಡು ಪೆಟ್ಟು, ತಲೆಯೊಡೆದು ಹೋಳು ಸೀಳಾಗಲೆಂದು ಕೆಟ್ಟು,
ತಲೆಮಾರ ಪಯಣ ಗುಣ ಚಿರಂತನದ ಋಣ ಡೊಂಬರಾಟ ಹೂಡಿ–
ಮನದಟ್ಟು, ಮುರಿಯಿತೋ ಬಗೆಬಿಟ್ಟು, ಅದುರಿತೊ ಹಾಳು ಹೃದಯ
ಮೋಡಿ, ಏನೇನೂ ಭಿಕ್ಷೆಬೇಡಿ.

ಇಳೆಯೆದೆಯ ಮೇಲೆ ತಿಳಿಜೊನ್ನಲೀಲೆ ಕಣ್ಣಿಲ್ಲ ಕಾಣಲೊಲ್ಲೆ
ಬಹುಸನಿಹ ತೀರ ಸೌಂದರ್ಯಸಾರ ನಾನೆಂತು ನೋಡಬಲ್ಲೆ ?
ಇದು ಯಾವ ದೀಕ್ಷೆ, ಇದು ಎಂಥ ಶಿಕ್ಷೆ, ಇದು ಯಾವ ಪೀಡೆ ಪಿಡುಗು ?
ಅಲ್ಲೊಂದು ಶಕ್ತಿ–ಇದು ಅದರ ಸೂಕ್ತಿ, ನಿನಗಿಲ್ಲ ಬಾಳು ಬೆರಗು
ಕಡೆಗು ಕಡೆಗು ಕಡೆಗೂ

ಕಿರುಗಾಳಿಯೊಡನೆ ಬರಿಧೂಳಿಯೊಡನೆ ಹಿರಿ ಕಾಳು ಬಾಳಿನೊಡನೆ
ಮಿಡು ಮಿಡುಕಿ ದುಡುಕಿ ಹುರುಳಿಲ್ಲದಂಥ ಹಿರಿ ಬೆಳಕ ನೊಂದ ಹುಡುಕಿ
ಬಾಯಿ ಬಿಡುವ ಬವಣೆ ;
ಈ ನೋವಿನುರಿಯ ನಾಲಿಗೆಗೆ ಸಿಲುಕಿ ಕರಿಕಾಗಲಿಲ್ಲ ಕೊರತೆ
ಬಚ್ಚಬಯಲ ಸೆಣಸಿನಲಿ ತುಂಬ ಹರಿಸಿತ್ತು ತಮದ ಒರತೆ
ಅದಕನಂತ ಚರಿತೆ.

□□

ಕುರುಡು ಬೆಳಕಿಗೆ (೨)

ಭಾವಜೀವ ಸಾರ ಸ್ವರ
ಅದರ ಮಹಿಮೆ ನೂರು ತೆರ :
ತಾಜಮಹಲ ರಚನೆಯ ಮರ
ಕಲೆಗು ಮಿಗಿಲು, ಭದ್ರಸ್ಥಿರ.

ಕಡಲು, ಬಾನು, ಭಾನು, ಸಿಡಿಲು
ಮೂಡಲ ಮನೆ, ಪಡುವಲ;
ನೆಲಕೆ ಜಲಕೆ; ಯುಗಕೆ ಜಗಕೆ
ಹಿಮಾಲಯಕೆ, ತಾಳಲಯಕೆ

ಕಟ್ಟಿಕವನ ತೊಟ್ಟಿಲ
ಭಾವ ಉಸಿರು ಕೊಟ್ಟಿತಲ !
ಅದುವೆ ಹೆಸರನಿಟ್ಟಿತಲ !
ಸರ್ವಸ್ವವು ಅದರ ಫಲ.

ಭಾವನೆಯನು ದಿಗಿಲುಗೊಳಿಸೆ
ಇಳೆಯೊಳಿಲ್ಲವೇನೂ
ಭಾವಕೊಲಿದು ತಲೆಬಾಗಿಸೆ
ತವಕ, ಬಾಗು ನೀನೂ

ಭಾವದೆಣಿಕೆ ಗೊತ್ತು–ಗುರಿ
ಕವಿಗಲ್ಲವೆ ಐಸಿರಿ ?
ತಾಯಿಯೆದೆಯ ಕರುಣೆ–ಗಿರಿ
ಮಾತ್ರಭಾವಕುಪಮೆ ಸರಿ.

ಇಂಥ ಭಾವಕಿಂಥ ನೋವು
ಕ್ಷುಲ್ಲಕ ಕಸರೂಪವು ;
ಕುರುಡು ಬೆಳಕೆ ನಿನಗೆ ಬೇಕೆ
ನನ್ನಿಯ ನವದೀಪವು ?

ನೋಡು, ಹಾಡು, ನುತಿಸು, ಬೇಡು
ದೀಪದೊಲುಮೆ ಕಾಂತಿಯು
ನಮಿಸು ನಾಚು; ಅಸುವ ಚಾಚು
ಚಿರಪ್ರಶಾಂತ ಶಾಂತಿಯು.

□□

ಕುರುಡು ಬೆಳಕಿಗೆ (೩)

ಕಟುಕಠೋರ ಸ್ಮರಣೆ ಹೆಚ್ಚಿ
ಸತ್ಯದೆದೆಯ ಬಗಿದು ಬಿಚ್ಚಿ
ಒಡಲ ಕರುಳ ಕುದಿಗೆ ಚುಚ್ಚಿ
ಮೈ ಮನಸಿಗೆ ಉರಿಯಹಚ್ಚಿ
ಕಿಡಿಯ ನುಡಿಯನಾಡುವೆ–
ಬನ್ನ–ಖಿನ್ನ ದುಗುಡವೆ.

ನಾನು ಹೌದು ನನ್ನ ವಶ
ನಿನ್ನದೇಕೆ ನನಗೆ ಯಶ ?
ನಿನ್ನ ನುಡಿಯೆ ಕರ್ಕಶ
ನಿನ್ನ ಗುರಿಯೆ ನಾಶ–ವಿಷ.
ನಿನ್ನ ನೂರು ಲಯ ಲೇವಡಿ–
ಗಲ್ಲ ನಾನು ಚಾವಡಿ.
ನೀನೆ ಕಣ್ಣು ಕಪ್ಪಡಿ–
ನನ್ನ ಮೀರಿ ನೂರ್ಮಡಿ. !

ನಿನ್ನತನಕೆ ನೀನೆ ಮೆಚ್ಚಿ
ಗಹ ಗಹಿಸುತ ಹರಟೆ ಕೊಚ್ಚಿ
ಹೃದಯವನ್ನು ಕಡಿದು ಕಚ್ಚಿ
ಕುರುಡಿನಂಗ ಮಸೆದು ಚುಚ್ಚಿ
ನನ್ನನೇನು ಮಾಡುವೆ ?
ನನಗೆ ನನ್ನ ಹಾಡಿವೆ.

ಕೃತಕ ನೆನಪು ಹೊಲ್ಲ–ಹುಳಿ
ನೀನು ಇಲ್ಲವೆಂದು ತಿಳಿ
ನನ್ನ ನೀನು ಅಲ್ಲಗಳಿ
ಬೇಡ ನನ್ನ ಬೆಂಬಳಿ
ಬಲ್ಲೆ ನಿನ್ನ ಬಳುವಳಿ

ನನಗೆ ನಿನ್ನ ಮುಸುಕು ಮುಚ್ಚು
ಎದೆ ಹರಣವ ಹರಿದು ಉಚ್ಚು
ನಿನ್ನತನದ ಒರೆಗೆ ಹಚ್ಚು

ಕಣ್ಣೀರಿನ ಕೆನೆಯ ಕೆಚ್ಚು
ನಿನ್ನನಡ್ಡಗಟ್ಟುವೆ
ನಿನಗೆ ಗೋರಿ ಕಟ್ಟುವೆ

ಬಣ್ಣಗಳಿಗು ಬದುಕು ಎಂಟು
ನಿನ್ನದೆಲ್ಲ ಹಾಳು ಪಂಟು
ನೆತ್ತರ ಕೊಳ ಕಮಲದೇಂಟು
ಮುರಿಯುವ ನಿನ್ನಾಸೆ ಕುಂಟು
''ನನಗೆ ಸೋಲುಸೋತೆ ಸೋತೆ''
ಇದೇ ನಿನ್ನ ಕೊನೆಯ ಕತೆ.

ನಾನು ನಿನ್ನ ದೂರದೂರ
ದಾರಿಗಿದೋ ಬಹಿಷ್ಕಾರ
ಸಲ್ಲ ನಿನಗೆ ಪುರಸ್ಕಾರ
ನಿನ್ನದಿಲ್ಲ ಸುಸಂಸ್ಕಾರ
ನನ್ನ ಬಾಳು ಸಮರಾಂಗಣ
ಬೇಡ ನಿನ್ನ ಬಂಧನ

□□

ತಪ್ಪದೀ ತೊಳಲಾಟ (ತಾಯಿಯ ಕನಸು ಕೇಳಿ)

ನಮ್ಮ ಮನೆಯಂಗಳದಿ ಉಪ್ಪು ನೀರಿನ ಭಾವಿ
ಸವಿನೀರದೆಷ್ಟು ಕಡ, ದೊರೆಯಬಹುದು ?
ನಮ್ಮ ಮನೆ ಕತ್ತಲೆಯು ದಿನದಿನವು ಹೆಚ್ಚುತಿರೆ,
ಕಲ್ಲೆಣ್ಣೆ ದೀಪವೂ ಎರವಾಗಲಿಹುದು.

ಹೆಬ್ಬಯಕೆಯೊಳದಲಿ ಮಾಯಮಬ್ಬಿನ ಚಿಂತೆ
ಹರುಷಕೊರತೆಯದಿನ್ನು ಮೇಲೆಗುಣಿತ
ಸಾವಡರಿ ಬರುವಂದು, ಭಾವ–ಭ್ರಮೆಯಳಿವಂತೆ
ತಮಣಗೊಂಡೀತೇನು ಬವಣೆ–ಕುಣಿತ ?

ಒಂದೊಂದು ಚಣದ ಋಣ–ಕತೆಯ ಹಣೆಯಲಿ ಕೆತ್ತಿ
ಜಗಕೆ ತೋರುವುದೆಲ್ಲ ಹುಚ್ಚು ಸೆಳೆತ ;
ರವಿಗೆ ಬುವಿಗೆಲ್ಲ ಬೆಳಕು ಬೀರುವ ವೃತ್ತಿ ?
ಕವಿಗೇಕೆ ಹೊಸತನದ ಆಸೆ–ಅಮಿತ ?

ಇರುವನಿತು ಕಿರುತಾಣದಲ್ಲಿ ಹೊರಳಾಡುವದು
ನೂರೆಂಟು ಜನುಮಕೂ ಲೇಸು ಲೇಸು
ಕಸಿವಿಸಿಯ ಕೈತೆರೆಗೆ ಎಳೆದೊಯ್ವ ಈ ಧರೆಗೆ
ತಲೆಘಾಸಿಗೊಳಿಪ ಗುಣ ಹೊಕ್ಕು–ಹಾಸು

ಚಿತ್ತ–ಭಿತ್ತಿಯತುಂಬ ನಂಬುಗೆಯ ಗುರಿಕಂಡೆ
ಭಿಕ್ಷುಕರ ಕನಸೆಂತು ಫಲಿಸಬೇಕು ?
ಯುಗವಳಿದು ಯುಗಬರಲಿ, ಹಗಲು, ಇರುಳೋ ಇರಲಿ,
ಈರುಳ್ಳಿ ಜಜ್ಜಿದರೆ ಸಹಜ ಕಾಕು.

ಮಂಗಳಕೆ ಮೊಳಗುತಿರೆ ವಾದ್ಯ, ಮುಗಿತಾಯಕ್ಕೆ
ಬೇಸರವ ನುಡಿದಂತೆ ನಡುವೆ ಕಣಿಯು,
ಕರುಣೆ ಸೆಲೆ ಸೆಲೆಬತ್ತಿ ಎದೆಹರವ ಹಿಡಿದೊತ್ತಿ
ನಡುಗುತಿದೆ ಬಲಗುಂದಿತೆಂದು ಒಳದನಿಯು

ಹೃದಯ ಪರಿವರ್ತನೆಯ ಒಲುಮೆ ಸಂಕೀರ್ತನೆಯ
ಉದ್ಗ್ರಂಥ ಕೊನೆಯಲ್ಲಿ ಮಗುಡ ಪುರವಣಿಯೆ ?
ಓದುವುದೆ ಮುಖ ಕಿವುಚಿ ? ಮನಕೆ ಮಣ್ಣನ್ನೆರಚಿ ?
ತಪ್ಪದೀ ತೊಳಲಾಟ ಮರುಗು ಕೊರಗುಣಿಯೆ.

□□

ತಾಯಿಗೆ

ಹಲವು ಬಯಕೆಗಳ ಮಧುರ ಮಮತೆ ಸವಿಕರುಳ ಸುಧೆಯನೆರೆದು,
ಆ ಸುಗ್ಗಿಯಾಗಿ ಮೂರಾರುವರುಷವೆಂದೆಂದು ಎದೆಯ ತೆಗೆದು
ಆ ದಿನದ ಸಿರಿಯ ಘನಹರುಷ ಹಿಗ್ಗಿನಿನಜೀವನವಗೊಟ್ಟು
ಆ ತಂಗಿ ಒಲಿದು, ಕೈಮಾಡಿ ಕರೆದುಳಿದಿತ್ತೆಲ್ಲ ಚಿತ್ತವಿಟ್ಟು.

ಲಕ್ಷೋಪಲಕ್ಷ ನಿಟ್ಟುಸಿರ ಪಡೆಯ ನಿನ್ನೆದೆಗೆ ಕಾವಲಿರಿಸಿ
ನಿಸ್ತೇಜಗೊಂಡ ಕಣ್ಣಿನಲಿ ನಿತ್ಯ ನೆತ್ತರಿನ ಕೊಳೆಯ ಹರಿಸಿ
ನೆರಳುನೆರಳಿನೊಳೆ ದೈತ್ಯ ದಳ್ಳುರಿಯ ದರ್ಪರಾಜ್ಯ ನಡೆಸಿ,
ನಿನ್ನನಿಂದು ಈ ಗತಿಗೆ ತಂದ ನವಿಲೂರ ಮನೆಯ ನೆನೆಸಿ ;

ಅಳಬೇಡ ತಾಯೆ, ಮನದಲಿ ಚಿಂತೆ ಸೆಲೆಯೊಡೆದಿತೆನ್ನಬೇಡ
ಸಾಯುವಾಸೆ ಬಲು ಹಿರಿದು, ಹಿಂಗದಿದೆ ಪೊರೆಯಿಟ್ಟರೆನಿತೂ ಕೂಡ ;
ಹೊಸ ಕನಸ ಹುಡಿಮಾಡಿ ಹೋಳಿಯಾಡುವುದು ಹುಯಿಲು ಎಂದು
ಉಸಿರಬೇಡ ಈ ಅಳಲುನುಡಿಯ ಆ ತಂಗಿಗಾಡುವಂದು.

ದುಃಖರೇಖೆ ನಿನಗೇಕೆ ಮುಖಕೆ ? ಹೌಹಾರಬಹುದು ನೋಡಿ
ಜಡದನಿಯಕೇಳಿ ವಿಷವಾಗಿ ತುತ್ತು ಸತ್ತಾವು ರಕ್ತನಾಡಿ ;
ದರ್ಶನದ ತವಕ ತನಿಗೊಳುವನಕ ನಗೆ ನೋಟ ಸಾಕೆ ? ಬಳಿಕ
'ಇದು ನನ್ನ ಕತೆಯು.......' ಹೊರಹೊಮ್ಮದಿರಲಿ, ಜರೆದಾಳು ಬಾಳು–
ಬೆಳಕು

ಎಳೆತನದ ದಶಕ, ಹಳೆಮಾತಿನೊಸಗೆಮನೆ ನೆನೆದು ನುಡಿದು ನಕ್ಕು
ಬೀಸು ತಾಯೆ ಹೊಸಹಾಡುಹಾಡಿ ಬೆಳಗೀತು ಪ್ರಭೆಯ ದಿಕ್ಕು
ಈ ತಮ್ಮ ಚೆನ್ನ, ಈ ತಂಗಿ ಪ್ರಭೆಯ, ಈ ಶಿವನ ಒಲಿವು–ಉಲಿವು
ಒಡಮೂಡಲಲ್ಲಿ–ನುಡಿಬೆಡಗಿನಲ್ಲಿ, ನಮ್ಮಿರುವಿಗಾದ ಗೆಲವು.

ಕಾವ್ಯದುಗಮ, ನಿಶ್ಚಿಂತನಿಯಮಕೀ ಒಲವು ಸಾಕ್ಷಿ–ಕಣ್ಣು
ನನ್ನುಳಿದ ಜೀವ, ನನ್ನಾಸೆಭಾವಕೂ ಒಲವೆ ಬಲವು ಎನ್ನು ;
ಇಂತಿವರ ಜೀವಅಸು, ಇಂತೊಲುಮೆ ಸೊಗುಸು, ತಾಯೊಡಲು ತಣಿಸಿತೆನ್ನು
ನೀ ಕುಡಿವ ಹೊಳೆಯ ಜಲ, ನೀನಡೆವ ದಾರಿ ನೆಲ ಬೆರಗುಗೊಳ್ಳಲಿನ್ನು.

ಹೋಗುತಾಯೆ, ಆ ಅವ್ವಗೊಮ್ಮೆ ನಮ್ಮೊಲುಮೆ ಸವಿಯನುಣಿಸು
ಆ ಮಲ್ಲಪ್ರಭೆಗೆ, ಆ ಮಳಲು–ಹವೆಗೆ ನಮ್ಮೆದೆಯ ಹಾಡು ತಿಳಿಸು
ಕಿವಿಗೊಟ್ಟು ಕೇಳು ಆ ಹೊನಲ ಮರುದನಿಯ ನಮಗೆ ಬಂದು ಹೇಳು
ಹರಸು ತಾಯೆ ನಮಿಸುವೆನು, ನೀನು 'ತುಂಬಿರುವದೆನ್ನ ಬಾಳು !'

ಅಳಿದುಳಿದ ವಿಷ ನೋವಿನುರಿನೆನವಿಗಿದೋ ತಾಯೆ
ಹೃದಯ ಹುರುಪಳಿಸುತಿದೆ, ದುರವಸ್ಥೆಯಾಸರೆಯ
ಕರ್ಬೊಗೆಯ ಕಾರುತಿದೆ, ಕಣ ಹನಿಯೂ ಬೆರೆತು
ಕಮರೊಡೆದು ನಾರುತಿದೆ, ಸ್ಯೆರಣೆಯನುಳಿದು ಭಯ ;

ಭಾವದುಪವನಕುಳಿವೆ ? ನಯನಲ್ಗಂಪು–ನಯ–
ನೋತ್ಸಾಹ–ನೆರೆತಪ್ಪಿ, ಮೊಗವೆತ್ತಲೊಂದಿನಿತು
ಆಸೆಯಾಗದು ಮನಕೆ ಈ ಬವಣೆ ಬಂಡಾಯ–
ಈ ಜೀವ ಕಾಣಿಕೆಯ ಕೊಡಲೊಲ್ಲೆ–ಸೋಲು ಸವಿಯೆ ?

೨೯–೮–೧೯೪೭

□□

ಏಕೆ ?

ಏಕೆ ನನ್ನ ಒಲುಮೆಗಿಲ್ಲ–
ದಾಯ್ತು ಹಿರಿಮೆ, ಓ ಪ್ರಭು ?
ಏಕೆ ನನ್ನ ಕರ್ಮಕಿಲ್ಲ–
ಸ್ವಯಂ ಧರ್ಮ, ಓ ಪ್ರಭು ?

ಏಕೆ ನನ್ನ ಜೀವನ–
ಬಯಸುತಿಹುದು ನೋವನು ?
ಏಕೆ ನನ್ನಜೀವನ–
ನುರಿಸುತಿಹುದು ಕಾವನು ?

ಏಕೆ ನನ್ನ ಧ್ಯೇಯವು–
'ಬಾಳಗುಡಿಯ ಗೋಡೆಯ
ಕೆಡವಿಸೆಂದು' ಬುವಿಯನು
ಬೇಡುತಿಹುದು, ಓ ಪ್ರಭು ?

ಏಕೆ ನನ್ನ ಹೇಹವು–
ತೊರೆಯುತಿಹುದು ನೇಹವ ?
ಏಕೆ ನನ್ನ ದಾಹವು–
ಮರೆಯುತಿಹುದು ಪೇಯವ ?

ಏಕೆ ನನ್ನ ಬದಿಗಿದೆ–
ಬಿದಿಯ ಕೋಲು–ಗುದಿಗೆಯು ?
ಏಕೆನಗೆ ಒಗ್ಗದಿದೆ–
ತಿರೆಯ ಜೊನ್ನ ಬಿದಿಗೆಯು ?

ಏಕೆ ನನ್ನ ಮನಸಿದು
ಸಾಕು ಮಾಡಿ ಕನಸನು ;
ಕಾಡುತಿಹುದು ನಿಶೆಯನು–
ನೀಡಲೆಡರು–ಹಸೆಯನು ?

ಏಕೆ ನನ್ನ ತಿಳಿ ಎದೆ–
ಸ್ವಾಗತಿಸಿತು ಅಳಿವನು ?
ಏಕೆ ನನ್ನ ಇಳೆಗೆದೆ–
ಕೊಳ್ಳುತಿಲ್ಲ ಕೊಳೆಯನು ?

ಏಕೆ ನನ್ನ ಚಿತ್ರಕಿಷ್ಟು–
ಬವಣೆ–ಕುತ್ತ, ಓ ಪ್ರಭು ?
ಏಕೆ ನನ್ನ ಸೃಷ್ಟಿಗಿಲ್ಲ
ನೆಟ್ಟ ದೃಷ್ಟಿ, ಓ ಪ್ರಭು ?

□□

ಕರುಣೆಸೊಡೆಯ ಒಸಗೆಯ

ಯಾವ ನೆನವು ನಗೆಗಳಿಸಿಕೊಳ್ಳಲಿದೆ ?
ಗಳಿಗೆ–ಗಳಿಗೆ ಕುತ್ತ
ಬಗೆಯ ಬಲವನೇ ಬಳಸಿಕೊಳ್ಳಲಿದೆ ವಿಧಿಯ ಉಗ್ರ ಚಿತ್ತ
ಎದೆಯ ಮನೆಗೆ ಗೋಳ–ಮಳೆಯ ಕಳೆಯಕೊಳೆ
ಹಾಕಿತೊಮ್ಮೆ ಮತ್ತು

ಬಾನ ನಿರುಕಿಸಲು ಮೇಲೆ ಕಿಂಡಿಗಳೆ ?
ಬೇಗೆಯುಸಿರ ಛತ್ತು
ಯಾವ ಕಾಲವೋ, ಯಾವ ಜಾಲವೋ ?

ಎಳೆದು ನನ್ನ ಕತ್ತ
ಯಾವ ಕೊಲೆಗೋ, ಯಾವ ಗೇಲಿಗೋ
ಒಯ್ದು ಅಪ್ಪಿಸುತ್ತ

ತಾನೆ ತಣೆಯುತಿದೆ, ಮೌನ ಮಣೆಯುತಿದೆ
ಮನದ ಕೊರಗಿನೆಡೆಗೆ
ಧ್ಯಾನ ಕಾಯ್ತು ಕೊನೆ, ಕಂಡುಕೊಳ್ಳುವೆನೆ
ಗುರಿಯ ನೆರೆಯ ಕಡೆಗೆ ?
ನಿದ್ದೆ ಜೇನಿನಲಿ ತೇಲಿ, ಬಾಳಿಗೊಲಿ–
ದಾಡುವಾಗ ಜೀವ

ಹೇಯತನದ ಬುವಿ ತೋರಿ ಕಾಳಗವೆ
ತುಂಬುತಿಹುದು ನೋವ
ಒಲವಿನಗಲಿಕೆಗೆ, ಬಾಳ ತೆಗಳಿಕೆಗೆ

ನೂರು ನೂರು ಹರಕೆ
ಜಗದ ಕೊಡುಗೆ ನಿಧಿಯಾದ ಕಸದ ವಿಧಿ–
ಮುಗಿಸಲಿಲ್ಲ ಪೊರಕೆ !

ಬೇರೆ ನೆಲದ ಪರಿ ಎಂತೋ ? ಬಂತು ಬರಿ
ಮನೆಯ ಸುತ್ತ ಹುತ್ತ–
ಹೊರಗೆ ಹಣಿಕಿದರೆ, ಬೇಡಿಯೊಡೆವ ದೊರೆ
'ಬೆನ್ನಿಗೆಂದ ಬೆತ್ತ'

ಕುದಿಯನಳಿವ ಬಗೆ ಸೊಗವನಾಳ್ವ ನಗೆ
ಉಳಿಸು–ಜೀವದೊಡೆಯ
ಆರಲೆದೆಯ ಧಗೆ, ಮತ್ತೆ ಏಕೆ ಹೊಗೆ ?
ಕರುಣೆಸೊಡೆಯ–ಒಸಗೆಯ ;

□□

ನನ್ನ ಮುರುವು

ಬಳಗ–'ಮರಿ'ಗಳಿಗೆಲ್ಲ
ಜೋಡೊಂದೆ ಮುರುವು*
ಬಡತನದ ಮನೆಗೆಲ್ಲಿ
ಇನ್ನೊಂದರರಿವು ?

ನಿನ್ನ ಕಿವಿ ಚುಚ್ಚಿಸಲು
ಪಂಚಾಂಗ–ವೇಳೆ
ಗತಿಯೆಂದಳಮ್ಮನೂ
ನಿನ್ನ ಮುರುವುಗಳೆ

ಪತ್ತಾರ ಮನೆಗೊಯ್ದು–
ರೆಮ್ಮಿಬ್ಬರನ್ನು
ಮುರುವು ಚುಚ್ಚುತಿರುವಾಗ
ಅಳಲಿಲ್ಲ ನಾನು

ಪತ್ತಾರ ನಗೆಜಾಣ
ನನ್ನೆದೆಯನರಿತು
ಜನಕೆ ಹೇಳಿದನಣ್ಣ
ನಮ್ಮನ್ನು ಕುರಿತು–

''ಕಿವಿಮಾತು ಹೇಳುವವು
ಹೆಂಡತಿಗೆ ಮುರುವು
ಅದಕೆಂದೆ ನಗುತಿಹನು–
ದೂರಟ್ಟಿ ಅಳುವು!''

*ಮುರುವು : ಕಿವಿಯನ್ನು ಚುಚ್ಚಿಸಿಕೊಂಡು ಧರಿಸುವ ಬಂಗಾರದ ತೆಳ್ಳಗಿನ ತಂತಿ.

□□

ಒಂದುಸುರಲಿಲ್ಲ

ದೂರದಾಟವ ಮುರಿದು
ಮುಗುಳುನಗೆ ಸಭೆ ಕರೆದು
ನಮ್ಮೊಲುಮೆಯ ನಿಲುವಳಿಯ
ಮುಂದಿಟ್ಟೆ ನೀನು.

ಜನ್ಮ–ಜಾತ್ರೆಯ ಬಯಕೆ–
ಗಿರುವ ಮುಂಬನು ಜೋಕೆ–
ಗೊಳಿರೆಂದು ನಗೆ–ಕುಲಕೆ
ಮೊರೆಯಿಟ್ಟೆ ನಾನು

''ಎದೆ ಮನೆಯ ಒಡಕೆಲ್ಲ
ನಿನ್ನ ಕೈ ಸಾರಣೆಗೆ
ಮುಗಿಯಬಹುದೇ ?'' ಎಂದು
ನಾ ಕೇಳಲಿಲ್ಲ.

''ಜಗಕಿರುವ ರೂಢಿಯನೆ
ನಾ ಕಲಿತುಕೊಳ್ಳುವೆನೆ ?
ಬಾಳ–ತಿರೆಗೆಲ್ಲಿ ಬೇನೆ ?''
ಒಂದುಸುರಲಿಲ್ಲ.

□□

ವೀರ ಕಹಳೆ

ಕೂಗುತಲಿದೆ ಕೇಳೆಲೊ, ಅದೊ ಕಹಳೆ
ಕಣ್ದೆರೆ ಎಲ್ಲೊ ಎಚ್ಚರ ನಾಳೆ
ನಿನ್ನೀ ಕಿರಿಯೆದೆ ಸಾಲದು ಬಾಳೆ
ಹೆಚ್ಚಿಸು ಕೆಚ್ಚನು–ಸಿಡಿಲಮಳೆ

ನೆಲ–ಜಲ–ನಭ ಎತ್ತೆತ್ತಲು ಹರಡಿವೆ
ರಣ–ಚಂಡಿಯ ಮನೆಯೊಡವೆಗಳು
ಹೆತ್ತಾಯಿಯ ತಲೆಗೂದಲು ಕೆದರಿವೆ
ನಾವೇ ಬೇಡಿಯ ಹೇಡಿಗಳು

'ಕ್ರಾಂತಿಯ ಬಾಲವ ಬರೆಯುತ ಶಾಂತ–
ಮುನ್ನುಗ್ಗುವಳೋ ಗುಣವಂತಿ.'
ಹೀಗೆನ್ನುತ ಯುಗಸಂದುವು 'ಕ್ರಾಂತಿ ?'
ಮತ್ತೇನಿದೆ ? ಇದೆ ಬರಿ ಭ್ರಾಂತಿ.

ಮುಳುಗುವ ಏಳುವ ನೇಸರು ನೆತ್ತರ
ಕಾಡುವ ನೇತಕೆ ಓ ಕುವರ ?
ರಕ್ತಸ್ನಾನವ ಮಾಡೆಲೊ ವೀರ
ಆ ದಿನವೆ ಸ್ವಾತಂತ್ರ್ಯದ ಹಾರ.

ಕಾಲನ ಸೇವೆಯ ನೀ ಮಾಡದಿರೆ
ನಾಡಿಗೆ ಬಲ ಓ, ಎಲ್ಲಿಯದೊ ?
ಸೋಲೆ ಗೆಲವೆನ್ನುತ ನೀ ಕುಳಿತರೆ
ಹಣೆಗಣ್ಣೇ ಉರಿ ಕಾರುವದೊ !

ಜಂಭವ ಕೊಚ್ಚಿದೆ–ದಾಸ್ಯವು ಹೆಚ್ಚಿದೆ,
ನಿನ್ನಯ ಮೇಲಿದೆ ನಾಡಹೊಣೆ ;
ಏತ–ಕೆ–ಬೆಚ್ಚಿ–ದೆ ? ನಾಲಿಗೆ ಕಚ್ಚಿದೆ–
ಹೊಸಯುಗ ದೇವತೆ ದಾಸ್ಯವೆನೆ.

ಕಾಡಿನ ಗಡಿ ಭೂ–ನಾಡನು ದಾಟಿತು
ಮಾಡುವುದೇನೆಲೆ ಹುಲ್ಲು–ಹಗೆ ?
ಕೊಳ್ಳಿಯನಿಡದಿರೆ ಅನರ್ಥವಾಯ್ತು
ಹಬ್ಬಲಿ–ಭುಗಿಲೆನ್ನುವ ಬೇಗೆ !

ಬಿದ್ದಿದೆ ಮಣ್ಣೊಳು ವಿಜಯದ ಮಾಲೆಯ
ಹೆಣೆಯುವ ಸೂಜಿಯು ತುಕ್ಕಾಗಿ–
ಅರಸೆಲೆ ! ಬಿರಸೆಲೆ–ಬಿಡಿಹೂಗಳ ನೀ
ತಾಯಿಯ ಕೊರಳಿಗೆ ಮನಕರಗಿ !

ಭಾರತ–ಮಾತೆಯ ಮಗುವೇ, ಮುನ್ನಡೆ
ಜಗ ನಡುಗಲಿ ಕೆ–ಚ್ಚೆ–ದೆ ನೋಡಿ !
ಹರಿಯಲಿ ಬಂಧನ–ಪರದಾಸ್ಯವ ತಡೆ
ಒಡೆಯಲಿ ಜನಸಾಗರ–ಕೋಡಿ !

ದಾರಿದ್ರ್ಯದ ದಾರಿಯ ನೀ ಮುಚ್ಚಿ–ಸು,
ಮಾರುದ್ರಗೆ ನೀ–ಸಿರಿಕುವರ !
ಮುಚ್ಚಿದ ಬಾಯನು ತೆರೆಯಲಿ ನೀ ತುಸು
ನಿನಗಿದೆ ಕಾಳಿಯ–ಅವತಾರ !

□□

ಜೀವನ – ಪ್ರೇರಣೆ

ಸಂತಸವು ಸುಖಬೇಡ–
ಬೆರೆತು ದುಃಖವು ಕೂಡ
ಹಿಡಿಯಲೆಲೊ ಸಂಗು
ಬಾಳಿಗಿದೆ ರಂಗು–

ಬಾಳಲ್ಲ ಸುಖದ ಕಥೆ–
ಯಾದರೂ ದುಃಖ ವ್ಯಥೆ–
ಗಿತ್ತು ಕೂಗೊಂದನ್ನು
ಬಾಳಲಿದೆ ತಿಳಿ ಜೊನ್ನ

ಜೀವನದ ಸಾಗರಕೆ
ಸುಖದುಃಖವಿಕ್ಕೆಲಕೆ
ಕಟ್ಟೆಕಟ್ಟಿದರಿಹುದು–
ಒಟ್ಟುಸೊಗಸೆಂಬುವುದು !

ಸಂತತವು ಸುಖಬೇಡ
ಬೆರೆತು ದುಃಖದ ಕೂಡ
ಹಿಡಿಯಲೆಲೊ ಸಂಗು
ಬಾಳಿಗೂ ರಂಗು !

□□

ಸಣ್ಣ ಸಣ್ಣ ಪದ್ಯಗಳು

*ವೈದ್ಯ–ಗುರು (ತಂದೆ–ಮಗನಿಗೆ)

''ತಣ್ಣೀರ್ ಮಿಂದರೆ–ಮಗು, ನೆಗಡಿ
ಅಡುವೆಯಾ ಥೂ–ಕಿಡಿಗೇಡಿ–!
ಓಡುವೆಯ ಏ, ಪ್ರೇತ–ಭೂತ ?
ತುಸುವೇ ತಿನ್ನು........ಮೈಯಲಿ ವಾತ''
–ನಾ ಸಣ್ಣವನಿರೆ ಹೇಳಿದ ತಾತ !

*ಯುಗಾದಿ

ಬಂದಿತು ನೊಂದಿತು ಇಂದು ಯುಗಾದಿ
ನಾಡ ಕಂಟಕದ ಕುಬುದ್ಧಿಯ ಬೂದಿ
ಯುಗಪುರುಷನ ನಾಸಿಕದಲಿ ಹೊಕ್ಕು–
ವಿಶ್ವದ ದೊರೆತನ ದಕ್ಕಿಸಿತು,
ಬಡ ನಮಗೆದೆ ವಿಷ–ಮುಕ್ಕಿಸಿತು.

*ಕನ್ನಡ ಶೈಲಿ

'ಇಪ್ಪತ್ತೊಂರಷದ ಹಿಂದ......?'
''ತಪ್ಪು ಪ್ರಯೋಗದಿಂದ !''
ಆದರ......ನಿಮ್ಮುಂದಿಂದ–
ಆ ನಮ್ಮ ಕಾಲದ್ದಂದಾ ಚೆಂದಾ–
ಬೆಳಸಿಕೊಳ್ಳೊ ದುಂದಾ ! ?
ಅದನ್ ನೀ.....ಕನ್ನಡಮ್ಮನ ಕಂದಾ''

*ಅವ್ವ–ಅಪ್ಪ

ಅವ್ವಾ–ಅಪ್ಪಾ ಪೂಜೆಯ ಹೊರತು,
ದೇಶ, ಭಾಷೆಯನು ಕುರಿತು
ಮಾಡರು ಆಡರು ಧರ್ಮವ ಮರೆತು.......
ದೇವರ ಬಾಯಲ್ಲಿಯೆ ನಾ ಕುಳಿತು
ಉಪದೇಶಿಸಿದರೆ ನಾಡಿಗೆ ಒಳಿತು.

*ತನ್ನಂತೆ

'ತನ್ನಂತೆ ಪರರ ಬಗೆದಡೆ......
ಇದನರಿವರಿಲ್ಲದೊಡೆ
ಬರದೆಯೇತಕೆ......?
ವ್ಯರ್ಥ ಹೇಳು.....
ಸರ್ವಜ್ಞ !

*ದುಡ್ಡಿನ ಹೇಸರಗತ್ತಿ

ಹುಲುಗಲ ಗಿಡದಡಿಯಲಿ ಬಡವ
ಬಿಚ್ಚಲು ಬೆಳಗಿನ ಬುತ್ತಿ
'ಎದ್ದೊಡನೆಯೆ ತಿನ್ನುವದೀ ಕತ್ತಿ' !
ಉಬ್ಬಿಸಿ ಕೊಬ್ಬಿದ ಗಂಟಲು–ನಡವ
ಒಂದಂತು ದುಡ್ಡಿನ ಹೇಸರಗತ್ತಿ!

*ಕುಂಟಿ

ಟಿಕೆಟ್ ಕೊಂಡು ಕುಳಿತಳು ಕುಂಟಿ
ಮೋಟರು ಹೊರಡುವುದಿತ್ತು;
ಬಂದನು ಆಫೀಸರು......... ''ಏ ಅರ್ಜಂಟೀ–
ಗಲೆ ಮೀರಿದೆ ಹೊತ್ತು........!''
'ಇಳಿಯದಿದ್ದರೆ'........ಆ ಗಾಡಿಗೆ ಹತ್ತು!

*ಕವಿಯ ದಾನ

ರೊಡ್ಡ, ಕುಡ್ಡ, ಕುಂಟ ಊನ ;
ನಾನು ಕೊಡುವ ದುಡ್ಡಿದು–
ಏನು ಆಹಾ–ದೊಡ್ಡದು ?
ಕೇಳು ಕಲಸುವೆ ಹಾಡು ಕ್ರಾಂತಿಗಾನ
ಬೇಡ ನಿನ್ನನು ನೀನೆ ಹಳಿವ ಮೌನ !

*ನಮ್ಮ ರಕ್ತ

ಕೃತಕ ನೀತಿಗಳು ಸಾಯಲಿ ಹೇಸಿ ;
ನಮ್ಮ ರಕ್ತವೇ ನ್ಯಾಯವ ವಹಿಸಿ,
ಬೇಕಿದ್ದರೆ ಓ ಬಾಳಿಸಲಿ,
ನಮ್ಮ ರಕ್ತವೇ ಜೀವವ ಮಥಿಸಿ
ಬೇಡಿದ್ದರೆ ಹಾಳಾಗಿಸಲಿ !

*ಸೆಂತತ ಶೂರ

ಬರೆವುದರಲ್ಲಿಯೆ..........ಶ್ರೀ.........ಸಂತತ ಶೂರ........
ಮಾಡುವ ಬಡವರ ಪೂಜೆ.................
ಹಿಡಿಯುವ ಬೆಂಕಿಯ ಪಂಜು...............
ಎದ್ದೇಳೆನ್ನುವ ಬುದ್ಧಿ ಅಪಾರ............
ಏಳೆನ್ನಲು ನಡುಗುವ ಕೂರ.............

ಹಲವು ಮುಖದ ಚೆಲುವಾ !

''ಓದಿದಲ್ಲಿ ಒಲವು ಬಲವು–
ನಿಮ್ಮ ಕಾವ್ಯ ವಿಮುಖ''
ಎನ್ನುವೆಯಾ ವಿಮರ್ಶಕ ?
ಪಡೆದು ನೋಡು ಅಂಥ ಬಲವ–
ಹಲವು ಮುಖದ ಚೆಲುವಾ !

ಕನಸು

ನಮ್ಮಮ್ಮನ ಕೌದಿಯ ಹೊದ್ದಿದ್ದೆ–
ಸಹಸ್ರ ಸಾಲಿನ ಕವನವ ಗೆದ್ದೆ ;
ನಿದ್ದೆಯೆ ತೀರಿತು ನಾ ಮೇಲಿದ್ದೆ ;
ನಗರವಾಸಿ ನುಡಿದನು–''ಓ ಪೆದ್ದೆ
ಇಷ್ಟೊಂದೇತಕೆ ಹಿಂದಕೆ ಬಿದ್ದೆ ?''

ಕವಿಯ ಡಮರು

ಕವಿಯ ಕೈಯಲೊಂದು ಡಮರು
ಬಡಿದು ಮೈಗೆ ರಕ್ತ– ಬೆಮರು
ಹೊರಗೆ ಬಾರಲೊಲ್ಲರು–ನೆರೆಯ ಅಂಜು ಬಿರುಕರು
ಕಿವಿಯು ಹರಿವುದೆಂಬರು !

□□

ಇನ್ನೊಂದೀSSSSSಟ ಪಲ್ಲೆ

ಇನ್ನೊಂದಿSSSSSಟ ಪಲ್ಲೆ ನೀಡೆ ನಲ್ಲೆ
ಮುಗಿಯುವುದೀ ಊಟ
ಇನ್ನೊಂದೀಟರಲಿ ನೀಡೇ ನಲ್ಲೆ
ಕೈ ತೊಳೆಯುವ ಆಟ !

ಬನ್ನದ ಬಾಯಕಲ್ಲಿ
ಹಸಿವ ಹಿಂಗಿಸಲಿಲ್ಲ
ತಡೆಯೊಡ್ಡಿತೆ–ನಲ್ಲೆ !
ಗೋಳಿನಾಳಿನ ಸೀರೆ
ಸುರಿದುಕೊಳ್ಳುವ ಸಾರೆ
ನಾ ನೀಡ ಬಾ ಪಲ್ಲೆ !

ತಿಂದು ಕಕ್ಕುವ ನೀತಿ
ಮುಂದೆ ಬಾಳಿಗೆ ಒಡತಿ ;
ಈ ದಿನವೇ ನಲ್ಲೆ ?
ನೀನು ಮಾಡಿದ ಪಲ್ಲೆ
ನನ್ನೊಡಲಿಗೆ ಅಲ್ಲೆ
ನಿನಗೂ ಪಾಲಲ್ಲೆ !

ಇನ್ನೊಂದೀಟ ಪಲ್ಲೆ
ನೀಡೆ ನಲ್ಲೆ
ಮುಂದೌತಣದೋಲೆ ;
ಹಿಂದಿಂದೆಲ್ಲ ಬಲ್ಲೆ
ನಾಳೆ ನಲ್ಲೆ
ವಿಧಿಗಾಕಡೆ ಜೋಲಿ !

ಗೋಳ ನೀಡುವ ದೇವ
ಬಾಳ ತಿರುಗಣೆ ಮಡುವ
ತಿರುಗಿಸತಿರಲಲ್ಲೆ
ನಾವು ಕಾಣಲು ಸೊಗ
ಅವನಾಗುವ ಡೂಗ
ತಿರುಗಣೆ ತೀರ್ಥನಲ್ಲೆ !

ಇನ್ನೊಂದೀಟ ಪಲ್ಲೆ
ನೀಡೆ ನಲ್ಲೆ
ಮುಗಿಯುವುದೀ ಊಟ
ಇನೊಂದೀಟರಲ್ಲೆ
ಬಾಳೆ ನಲ್ಲೆ
ಸಗ್ಗ ಹಿಗ್ಗಿನಕೂಟ

□□

ಜೀತದಾಳು

''ವಿಧಿಯೆ, ನನ್ನ ಬದಿಗೆ ನೀನು
ಉಸುರು, ಇರುವೆಯೆಂತು–ಏನು ?
ಜೀತದಾಳು ಬಡವ ನಾನು–
ಪರರ ಮನೆಗೆ ಹುಟ್ಟು–ಜೇನು''

''ನಸುಕು ಮುಸುಕ ತೆರೆಯುತಿಹುದು
ಹಕ್ಕಿ–ಕಕ್ಕಿ ಕಾರುತಿಹುದು ;
ಕಾಲುಮುರಿದ ಕೆಲಸ ಎದುರು
ಕುಂಟಿಹೋಯುತ ! ನನ್ನ ಬೆದರು ?''

''ಹಿರಿಯರೆಲ್ಲ ಮೆರೆದು ನನ್ನ
ಜೀತಕೊತ್ತಿದಾಗ ಬನ್ನ
ನನ್ನ ಬೆನ್ನು ಕೆತ್ತಿತಿನ್ನು–
ಕಿಚಿಕಿಚಿ ಬಿಚಿ ನನ್ನ ಅನ್ನ !''

''ಜೀತದಲ್ಲಿ ಜಯವ ಕಾಣೆ
ಗೆಯ್ಮೆಯಲ್ಲಿ ! ಗೆದ್ದುತರುವೆ !
'ಜೀತ ನಿನ್ನ ಮೇಲೆ ಹೊಣೆ
ಏತಕಿನ್ನು ?' ಇದೊ ಘೋಷಣೆ !'

''ಸತತ ನೀನು ವ್ಯಥೆಯ ಕಂಡು
ಹಂಬಲಿಸಿದ ನುಚ್ಚನುಂಡು
ಹಿಂದೆ ತಿರುಗಿ ನೆನೆಯುತಿರಲು
ನಿನ್ನ ತಲೆಗೆ ನನ್ನ ಕಾಲು''

''ನಿನ್ನ ಬಾಳಿಗಿಲ್ಲ ಬೆದರು
ನಿನ್ನ ಬಾಳು ಅಳುವಿನವರು
ಎಂದೊ ಏನೋ ಸಂದ ಮಾತು
ಎಷ್ಟು ಸಲಕೆ ನೆನೆಯೆ ಹಿತ ?''

''ಅಳುವುದೊಂದೆ ಬಾಳ್ವೆಯಾಗೆ
ಕಸದ ಹಕ್ಕಿಗಣ್ಣ ಬೇಗೆ !
ಏಳು–ಗೀಳ ಬೆರೆಸಲಾರೆ
ಸಿರಿಯ ನೆನಪ ಮರೆಸಲಾರೆ !''

''ನೂರಕೊಂದು ಜನಕೆ ವಾತ
ಯಾರ ಜೀವಕಿಲ್ಲ ಜೀತ ?
ಅಳುಕಿದವನು ಬಾಳಸೋತ
ಬೀಳ್ಕೊಡುವೆನು ಸುಪ್ರಭಾತ !''

□□

ಮೌನಗೊಳ್ಳು

ಆದರ್ಶ ತುಂಬಿರಲಿ, ಹೃದಯನುಡಿ ಇಂಬಿರಲಿ
ಶ್ರೇಷ್ಠತಮ ಸಂಸ್ಕೃತಿಯ ಸಂಧಾನವಿರಲಿ ;
ಕೊರಳ್ ಬಿಕ್ಕಿ ನೊಂದರೂ ಎದೆಯುಕ್ಕಿತೆಂದರೂ
ಮನ–ತಣಿವಿಗಾಡದಿರು ತಾಳ್ಮೆ ಇರಲಿ.

ಬೇಡ ಕಿರಿಕಿರಿ ಸದ್ದು ಮೌನವೊಂದೇ ಮದ್ದು
ಕಣ್ಣೀರ ಸೆಳೆತದಲ್ಲಿ ಜಾರಿಬಿದ್ದು ;
ಬಾಯ್ದೆರೆಯಲೆಳಸಿದರೆ–ಪ್ರಜ್ಞೆಯೊಡೆತನವಳಿದು–
ಜಗ ಅಣಕವಾಡೀತು ಜೀವ ಹೊಡೆದು.

ಇನಿದನಿಯ ಕೊಳಲೆಂದು ಹಗಲಿರುಳು ಊದಿದರೆ
ಕೇಳಿ ಬೇಸತ್ತವರು ಕೆರಳಬಹುದು;
ಚೆಲುವನವಲೋಕಿಸಲು ಗಿರಿಶಿಖರವೇರುತಿರೆ
ಬಲಹೀನ ಕವಿ ಕೆಳಗೆ ಉರುಳಬಹುದು.

ಈ ರಕ್ತ ಈ ಶಕ್ತಿ ಬಾಳಗತಿ ಆಸಕ್ತಿ
ಹುಳಿಗೊಳ್ಳಲೇನಂತೆ ? ಸಹಿಸಬೇಕು,
ಹಲವು ಹಂಬಲ ನೀಗಿ–ಒಲವು ಮರೆತರಿತಾಗಿ
ಜೀವ ಗೋಳಿಡಲೇನು ಮಾಡಬೇಕು ?

ಮನ ಮುದುಡಿಕೊಂಡರೂ, ಕರುಣೆ ಬಡಬಡಿಸಿದರು
ತುಟಿಯನಲುಗಿಸಬೇಡ–ಮೌನಗೊಳ್ಳು ;
ರೂಢಿ–ನೀತಿಗು ನಿಯಮವಿದೆ, ನೋಡು–ನಿನ್ನೆದುರು
'ನಿಂತ'–ಗಾಡಿಯು ಹೊಡೆಯಬಹುದೆ ಸಿಳ್ಳು ?

ಮಾಗಿಯಲಿ ಮಾವೇಕೆ ಫಲಿಸಬಾರದು ಎಂದು
ಜಗವ ಕೇಳಿದರೇನು ಹೇಳಬಹುದು ?
ಕಾವ್ಯ ಕಲ್ಪನೆಯುಂಟು, ನಿನ್ನೆದೆಯ ಪಡೆವಂದು
ಬಳಸಿಕೋ–ಬಾಳನ್ನೇ ಆಳಬಹುದು.

□□

ದೇವೇಂದ್ರ ಸತ್ಯಾರ್ಥಿ

ಹಬ್ಬಿರಲು ಈ ನುಡಿ,
ಕಾಳಗದೆದೆಗಿಂಥ ಕಿಡಿ
ಸುಗ್ಗಿ ಬರಿಯ ಬನದ ಉಡಿ
ನೆಲದಾಯಿಯ ಮೈ ಮುಡಿ
ಹಾಡಿದುದು ಈ ಬಗೆ
ಇನಿತುಕ್ಕಿತು ಅವರ ನಗೆ
ಎನಿತಿದ್ದರು ಲೆಕ್ಕಿಸರವ್ವ–
ರೊಡಲಿನ ಬಿರುಬೇಗೆ

ಜನಪದ ನುಡಿಯಬ್ಬಿಯ
ಮೈದಡವಲು ಸತ್ಯ–
ಹಳ್ಳಿಗಾಡ ದನಿಯದೀಪ
ಎದೆಬೆಳಕಿಗೆ ನಿತ್ಯ
ಊರುನಗರ ಉಳಿಯಲಿಲ್ಲ
ಭಾರತ ಸಂಚರಿಸಿ
ಸಂಸ್ಕೃತಿ ನೆಲೆ, ಸಗ್ಗದ ಕಲೆ
ತೋರಿದೆ ಸಂಗ್ರಹಿಸಿ

ಧ್ಯೇಯವಿರಲುಪಾಯಕೇನು
ಕೊರತೆ ದಾರಿನೂರು ;
ಬಡಬಗ್ಗರ ನುಡಿಸಡಗರ
ವಾಣಿಗೆ ಹೊಂದೇರು
ಅವರೊಸಗೆಯ ಚಿರಗೊಳಿಸಲು

ನಿನಗಾಯಿತು ಹುಟ್ಟು
ಗುರಿಕಂಡೆಯೊ ಆ ಬಲವಿಗೆ
ಜೀವನ ಮುಡಿಪಿಟ್ಟು
ನಿನ್ನ ಹೊಣೆಯ ಸಮರ್ಪಣಕೆ
ಸಂತೃಪ್ತಳು ಸರಸ್ವತಿ
ತಲೆದೂಗಿದೆ ; ಮುದವೇರಿದೆ
ಇದೋ ವಂದನೆ ಸತ್ಯಾರ್ಥಿ

□□

ಸ್ವಪ್ನ ಪೂಜೆ

ಸ್ಮೃತಿಯ ಸಂಸ್ಕೃತಿಯ ಸಂಭ್ರಮದ ಸ್ವಾಗತ ನಿನಗೆ–
ಬಾ ಸ್ವಪ್ನವೇ ಒಮ್ಮೆ ಬಂದು ಹೋಗು
ಸಂತಾಪ, ಸಂಕಷ್ಟ, ಸಂಕೋಚ, ಮೂಢಬಗೆ–
ಇನಿತೆಲ್ಲವನು ತಿಂದು ತೇಗು–ನೀಗು !

ಬಾಳು ಕೊರಗಿದರೇನು, ಭಾವ ಸೊರಗಿದರೇನು ?
ನಿನ್ನ ಒರವಿಗೆ ಬರಡು ಬನ್ನವೃಕ್ಷ
ಗೇಲಿ–ಗೊಂದಲ–ಗೊಡವೆಗಳ ನಡುವೆ ಸಿಲುಕಿಹೆನು–
ಗತಿ ನನಗೆ, ಹಿತ ನನಗೆ ನಿನ್ನ ಪಕ್ಷ !

ನಾಗರಿಕ ರೋಗಿಯರ ವೈದ್ಯ ಬರಬಹುದು,
ಗ್ರಾಮ–ರೋಗಿಗೆ ಕಾಳಜೀರಿಗಿಯೆ ಹಿರಿದು ;
ಗೋಣು ಮುರಿಯುವ ಗೊಡ್ಡು ಆಟಗಳ ತೊರೆದು–
ನಿದ್ದೆಗೊಳಗಾಲೇ ? ಓ, ನಿನ್ನ ಕರೆದು !

□□

ಗಾಂಜ್ಬಡ್ಡಕನ ಪದಗಳು

ಉತ್ರಕೊಡ್ಬಾ ಗೆಳೆಯ

ದೇವ್ರ ಸೇವಾ ಮಾಡೂ ಮಾವಾ
ಕಂಡ್ಕೊ ಬಡವನ್ ಬಾವಾ ?
ನಿನ್ಗೂ ಏತೇನ್ ಹೆಚ್ಯಾಕ್ ಹ್ಯಾಂವಾ
ಬಡ್ವನ್ ಮನೀ ತ್ಯಾಂವಾ ?

ಜಗತ್ ಕಾಣೂ ಒಳ್ಗಣ್ ನಿನ್ಗ
ಇದ್ದಂಗ್ ಕಾಣೂದಿಲ್ಲಾ
ಜಗತ್ ಕಾಣೂ ಒಳ್ಗಣ್ ನಿನ್ಗ
ಇದ್ದಂಗ್ ಕಾಣೂದಿಲ್ಲ

ಬಡವ್ರ ಇಷೇಕ್ ನೀ ಹೆಂಗಂದ್ರೆ
ಗುಡ್ಡಕ್ ಇದ್ದಂಗ್ ಮುಲ್ಲಾ
ದೊಡ್ಡೊಡ್ ಮಾರೀಗ್ ಮಣೇ ಹಾಕಿ
ಇಡಾಕ್ ಬರ್ತೀ ಬಲಿ ?

ಗುಡ್ನ ಸೆಟ್ಟೀನ್ ಬೆನ್ನೀಗ್ ಕಟ್ಟಿ
ತುಳ್ದೀನ್ ಬಡ್ಕನ್ ಇಲಿ
ದೊಡ್ಡವ್ರ ಅಂದ್ರ ಬಾಲಾಬಡ್ಯೂದು
ತಿರ್ಗೇತೇನ್ ನಿನ್ನ ತಲಿ ?

ಬಡವರ ಇದ್ರೀಗ್ ನಿಲ್ಬಾಡುಡದ
ಪುಟೀತ್ ಪುಣ್ಯದ್ ಶೆಲಿ
ದೇವರ್ ಭಕ್ತ ನೀ ಹೇಳ್ದಿಂಗ
ಬಡವರ್ದ್ ಕದ್ಯವರು ಸೆಟ್ರು

ತಿಳ್ದೂ ಹಂತೌರ್ನ ದೇವ್ರು ಮಂಗ
ಬದಕಾಕ್ ಯಾತಕ್ ಬಿಟ್ರು ?
ಬಡವರ್ ಹೊಟ್ಗೆ ರೊಟ್ಟಿಲ್ಲದ್ದು
ಮಾಡಿದ ಪಾಪೇನಲ್ಲಾ

ನಿಮ್ಮ ಸಾವ್ಕಾರ್ ಕದ್ದೂ ಕದ್ದೂ
ಇಲ್ದಂಗ್ ಮಾಡ್ಯಾಕ್ ಬಲ್ಲ

ಬಡವರ್ ಗಳ್ಕೀನ ಕದ್ದವ್ರು ಸೆಟ್ರು
ಇದೇನ್ ದೊಡ್ದೊಂದ್ ತಪ್ಪ ?

ಒಕ್ಲಾವ್ ಬಲ್ಲಂಗ್ ಮಾಡಿಲ್ಲೆ ಹ್ವಾರೆ
ದೇವ್ರು ಹಾಕಿದ ಉಪ್ಪ
ಪ್ರೀತಿ ನೀತೀನ್ ಹೇಳೊ ಇದ್ದುಳ್ಳಣ್ಣಾ
ಕಂಡೀ ಒಳ್ಳೇರೀತಿ

'ಪಾಪದ್ ಭೂಮ್ಗೋಳ್ ಬಡವ್ರೆ' ಅಂದ್ಯಾ ?
ಎಷ್ಟೆಷ್ಟ ಸಾವ್ಕಾರ್ ಪುಣ್ಯ !
ಬಡವ್ರ ಕೊಲ್ಲಾಕೆ ದೇವ್ರೇ ಅಸ್ತ್ರ
ತೊಟ್ಟಾನ ಕಂಡ್ಕೊ ಕಣ್ಗೆ

ಬಡವ್ಗ ಹೋರ್ಸೀ ಪಾಪದ್ ಹೊರೀ
ಹಾಕೇನ್ ತೆಲೀಗ್ ಗುದ್ನಿ
ಪುಣ್ಯೇದ್ ಭೂಮಿಗೆ ದೇವ್ರಿಂದ್ಲೆ
ಆಗ್ಯಾವ್ ಹೊಲ್ಲದ್ ಗೆದ್ಲಿ

ಪುಣ್ಯದ್ ದೀಪಾ ಹಚ್ಯಾರ್
ನೆತ್ತರ್ ಭಟ್ಟೀ ತಗ್ದು
ಪುಣ್ಯೇಕ ಉಂಬ್ಳಿಕೊಟ್ರೆ ಇದ್ದವ್ರು ?
ತೋರಸ್ ಎಲ್ಲೇತ್ ತಗ್ದು

ಬಡವರ್ ಪಾಪ ನೀತೀನ್ ಬಲ್ಲೆ ?
ನಿಮ್ರೊಕ್ಕದ ಪ್ರೀತಿ ರಾಜಿ
ಅದ್ಕ ಬಾಯಾಗ್ ಕಾಣ್ತಾವ್ ಅಲ್ಲಿ
ಬೇಗಳ್ದು ಬೆಂಡು ಬಾಜಿ

ಎದ್ರೇನಾರಾ ನಾಡಾಗ್ ಬಂಡು
ಆದೆಲ್ಲಾ ದೇವರ್ ಕಡ್ಡಿ
ನೀನ ನೋಡು ದೇವರ್ ಚೆಂಡು
ಹಾರ್ಸೀರ್ ನಮ್ಗಿಲ್ ಅಡ್ಡಿ

ದೇವರ್ ಗುಡೀದ ಕಸಾಹೊಡೆವ್ರು
ಸಾವ್ಕಾರ್ ಯಾಕ್ವಾ ಎಣ್ಣಾ ?

ಬಡ್ವನ್ ನಡ್ತೀಗೆ ಸಿಟ್ಟೇನ್ ದೇವ್ರು ?
ಅಂವ್ಗ ಬಳ್ದೇವ್ ಬಿಣ್ಣಾ

ಬಡ್ವರೇ ಜಗತ್ ಹುಟ್ಸಿದೆ ಮಾಂವಾ
ಅವ್ನೆ ಎಂಥಾ ದೇವಾ
ಅವ್ನೇ ತಿಳ್ದಿಲ್ ಬಡ್ವನ್ ಸೇವಾ
ಅದ್ಕs ಹಳಿಯೂ ಹ್ಯಾಂವಾ

ರೀತಿ ನಡ್ಸ್ಯಾಗ್ ಬಡವ್ರು ಮೇಲು
ಸಾವ್ಕಾರ-ಸೆಟ್ಟರಕ್ಕಿಂತ
ಆದ್ರೂ ಅವರ್ಗೇ ಯಾತಕೆ ಸೋಲು ?
ಅನ್ನಾ ಹಾಕ್ತಾರಂತs

ದೊಡ್ಡೊಡ್ ಮಾತ್ಗೊಳ್ ಆಡೊ ಯುಕ್ತೀ
ಬಗ್ನೀತ್ ಬಡವನ್ ಶಕ್ತಿ
ಬಡವರ್ ದೇಶಕ್ ಸುತ್ನೋರ್ ಹಾಕಿ
ಆಮ್ಯಾಗ್ ತೋರಸ್ ಭಕ್ತಿ

ಜಗ್ದಾನ್ ಹೊಲ್ಸಿನ್ ಕಡಿಂದ್ ಮುಚ್ಯಾವ್
ಹೊಲ್ಸಿನ್ ಎರ್ಡು ಕಣ್ಣು
ಆರಿಲ್ ಕಾಣ್ದೆ ಒಳ್ಗs ಹೆಟ್ಯಾನ್
ತಿಳ್ವಿನ್ ನೂರಾರ್ ಕಣ್ಣು

ದೇವರ್ ತಪ್ಪೀನ್ ಬಡವ್ರು ಮಾಡಿದ್ರ್
ಆಗ್ತಿತ್ ಲೋಕಕ್ ಪ್ರಳಯ
ಹಳೀ ಬ್ಯಾಂಡದ್ರ ನಾವೇನ್ ಆದ್ರ
ಉತ್ರ ಕೊಡ್ತಾ ಗೆಳ್ಯಾ

ಎಲ್ಲೀ ತನ್ಕ ದೇವರ್ಗಿಲ್ಲೋ
ಬಡವರ್ನ್ ಎತ್ತೋಗುಣ
ಅಲ್ಲೀತನ್ಕಾ ನಮ್ಗೆಲ್ಲೀದೋ
ದೇವರ್ನ್ ಹೊಗಳೊ ಋಣ ?

□□

ಗಾಂಜಿ

ಮುಂಜೇಲಿಂದ ಚೆಂಜೀತನ್ಕ
ಹಳವಂಡ ಗಾಂಜಿಗಾಂಜಿ
ಗಾಂಜಿ ಇಲ್ದಿದ್ರೆ ಕ್ವಾರಿಲ್ಲಮಿಕ ?
ಅದ್ರಂಗ ನಮ್ದು ಪುಂಜಿ

ಮಿದ್ಳು ಗಿದ್ಳು ಅಂತಾರಲ್ಲ
ಅದೆಲ್ಲಾ ಗಾಂಜೀ ಪಾಲು
ಈದ ಎಮ್ಮೀದ್ ಕೆಚ್ಲಾ ಇಲ್ಲಾ ?
ಅದ್ರಾಗೆ ಇದ್ದಂಗ್ ಹಾಲು

ಒಂದ್ಹೊಟ್ಟೆ ಸೇಂಗಾ, ಆದ್ರಂಗೆ ನಮ್ದು
ಇದೆಲ್ಲ ಉತ್ತಮ ಹೌದು
ಆದ್ರ ಹೊಟ್ಟ್ಯಾಗ ಒಂದs ಒಂದ್ಕಾಳು
ಅದ್ರಂಗ ಚಿಲ್ಮ್ಯೇ ಕೇಳು

ಅಸ್ಪತ್ರಿ ಮುಂದ್ನ ದೊಡ್ಡ ಬಾಗ್ಲಂಗ
ಹಂಗ ಚಿಲ್ಮೀಗೆರ್ಡೇ ಬಾಯಿ
ನಾವ ಹೊಂದೂದ ಅದೆಲ್ಲಾ ಗುಂಗ
ನಮ್ಮ ಬದ್ಕಿನ್ ಬಾಗ್ಲ ಸಿಪಾಯ

ಮಂಗ ಮುಟ್ದಂಗ ಸೀತಾಪ್ಯಾರ್ಲಾನ್ನ
ಕೆಡ್ಕನೂದ್ ಮುಟ್ಡೊ ನಮ್ನ
ಬಲೀಗ್ ಕಟ್ದವ್ರ ಮೇಲಕಮ್ಕೊನ
ಹೋಗೀ ಮುಟ್ಟಿದಂಗ ಕಣ್ಣ

ಕೆರ್ಯಾಗ ಕೂಡ ಮುಣ್ಗುಸುವಾಗ
ಸಪ್ಪುಮಾಡ್ದಂಗ ಡಬ್ಡಬ್ ಡಬ್ಬಿ
ನಾವ್ಗೊಳ್ ಚಿಲ್ಮಿ ಎಳ್ಯೂವಾಗ
ಹಾಡ್ಗೊಳಿಂದೆಲ್ಲ ದೊಡ್ಡೂಂದ್ಹಬ್ಬ !

ಮೈಸೂರ್ಕ್ ಇದ್ದಂಗ ಒಬ್ಬಾಂವ್ ಅರ್ಸ
ನಮ್ಗೊಬ್ಬ ಅರಸ ಗಾಂಜಿ
ವುಗಾದ್ದಂದತ್ತರೂವಂಗ್ ವಹ್‌ವಾ
ತರತ್ಕೈತಿ ಹರ್ಸ ಗಾಂಜಿ

'ಗಾಂಪ್ಪಡ್ಕ'

□□

ಬಡವ್ರು

‘ಉಪ್ಪಿನ್ ಕಾಯ್ನ ಕಂಡುಂಡ್ ಅಣ್ದ್
ತಿಳಿಲಿನ್‌ಕಿಂತ ಗೊಟ್ಟ
ರುಚಿ ಹತ್ತೈತಿ’ ನಿನ್ನ ಈ ಮಾತು
ನಿನಗ ತಿರಗತ್ತೈತ್ ಮಾತು

ರೊಕ್ಕ್ ಇರ್‌ವ್ರುವ್ನ ಊದ ತಾಟ್ಗೆ
ಬಡವ್ನ ಉಪ್ಪಿನ್ ಕಾಯಿ
ಇನ್ನೇನ್ ಸಿಕ್ತಿ ತುಂಬಾ ಹೊಟ್ಗೆ
ಚಪ್ಪಸಗೊಂತ ಬಾಯಿ

ರೊಕ್ಕ್ ಇದ್ವಾಂವ್ ಆದರ್ ನೋಡು
ಹಲ್ಗೀ ಬುಡ್ಕೀನ್ ಕಂಟಿ,
ಬಡವಾ ಚರ್ಮ! ಕಾಡೀ ರೆ ಕಾಡು
ಆಗ್ತೀ ಒಮ್ಮೆ ಕುಂಟ

ನೆರದದ್ ನಮ್ಗ ಹರ್‍ಕೊಂಡ್ ಬಿದ್ರು
ಎಲ್ಲಾ ಸಾವ್ಕಾರ್ ಮಂದಿ
ಬೇಕಾದ್ ಮಾಡ್ರಿ ಹೋಕೊಂಡ್ ಹೋಗ್ರಿ
ಒಮ್ಯಾರ್ ಹೊಗ್ಸೇವ್ ಸಂದಿ

ಬಡವರ ನಮ್ನ ಒದ್ದೊದ್ ತುಳ್ದು
ನಿಂತ್ರೂ ಕಾಲಾಗ್ ಕೆಡವಿ
ನಮ್ಮಂಗ್ನಿವ್ರು ಬಿಡವಲ್ರ್ಯಾಕ್ ?
ಮತ್ಯಾಕ ನಮ್ಮದೇ ಗೊಡವಿ ?

ಬದಕಿನ ಬಯ್ಲಾಗ ನಾವಿಂದೆ ಬದ್ಕೀನ್
ನೆನಸೀರ್ ಮೈಯಾಗ್ ಮುಳ್ಳು,
ನಮ್ಮೂದ್ ಮುಳ್ಳೇ ನಿಮ್ಗ ಹೂವಾದ್ರೆ–
ಖರೇವ್ ಎಲ್ಲಾ ಸುಳ್ಳು !

ಬಡವರ್ ನಡುವೆ ಒಡಿಯಾರ್ ಬಾಳವಿ
ಚೆಂದಾಗೇತಿ ಇಂದ

ಬಡವರ್ ಕಾದೂ ಕಾದೂ ಇದ್ರೆ
ಇಬ್ಬರ್ ನಡುವೆ ದುಂದ

‘ತಾಳೀದ್ರೆ ಮುಂದ ಬಾಳೀತ್’ ಅಂತ
ಕುಂಡ್ರಾಕ್ ಹೊತ್ತಿಂದ್ ಇಲ್ಲಿ
‘ಮೆರದದ್ಕ ಬರ್ದೆ ಇರ್ದೇನ್ ಅಂತ ?’
ಅಂದ್ರಿಸಾ ಆದೀತ್ ಎಲ್ಲ

ಬಡವ್ರು ನಾವು ತರವ್ರು ಸಾವು
ಸಾರಿ ಹೇಳ್ತೇವ್ ನಿಮ್ಗ
ನಿಮ್ಮ್ಯ ಮಣ್ಣಾಗ್ ನಮ್ಮೂದ್ ಹೂವು
ನಮ್ಮ ಚಳೀಗ್ ಆಗ್ತೀರ್ ಕಾವು
ಆಳ್ಹೀರ್ ನಮ್ಗಿಲ್ ಬಾವು

‘ಗಾಂಜ್ಯಪ್ಪ’ ೧೦-೬-೧೯೪೪

□□

ಬದ್ಲಾವ್ಣಿ

''ಕಾಲಕ್ ತಕ್ಕಂಗ್ ಬದ್ಲಸ್ತೇವಿ
ಜಗತ್; ಜನ್ರೇ ಕೇಳಿ'',
ಇದೇ ಅಣ್ಣಾ ಇಂದಿನಿಂದ ಕೂಗು
''ಬಾಳ್ತೀರ್ ಹೆಂಗೋ ? ಬಾಳ್ರಿ
ನಡುದಾರೀನ್ ಮಾಡೀರಡ್ಡಗ್ಲ
ಆಗೂದ್ ಯಾರ್‍ಗೆ ಹಿತಾ ?
ಬರೇವ್ ನಿಮ್ದು ಇದ್ರೇನ್ ಒಡ್ಲ ?
ನಿಮ್ದ ಏನೂ ಇಲ್ಲೊತ್ತಾ ! ೧

ಕುಂತ್ರೇನ್‌ಕಾಲ ನಮಗೇ ಮೂಲ
ನಿಂದ್ರಾಕ್ ಯತ್ನಾ ಮಾಡು,
ಬೇಡೊದ್ ಸಾಕು, ಬಲೀನ್ ಹಾಕು
ಸೇಡಿನ್ ಎದೀಂ ದೂಡು
ಬದಕೊದ್ ಬ್ಯಾಡೋ ಸುಮ್ನ ವೆರ್ಥ
ತಿಳ್‌ಕೋ ಬಾಳಿನ್ ಅರ್ಥ
ಕಸವಿಲ್ದಿದ್ರು ಸುಮ್ಮನೇ ಕಿರ್ಚು
ಆಗ್ತೀ ಅಡ್ಡೀ ಚಿರ್ಚು ೨

ಹರೂ ಚೂರೀನ್ ಮಂಡ ಮಾಡಿದ್ರೆ
ಏನಾತ್ ಇಂದಿನ್ ಸುಧಾರ್‍ಣಿ !
ಬದ್ಲಾವ್ಣಿ ಆಗ್ವಂಗ ಆತು
ಏರಿದ್ರ ಏನಾತ್ ಧಾರ್‍ಣಿ ?
ಬೇಡಿರ್ ಹೆಸ್ರು ಕೊಡೂದ್ ತಿರ್‍ಕ
ದುಡದ್ರೂ ಮನಿ ಮುಕ್ಕ
ಮನ್ಸುಗ್ದೊಂದೆ ಹೊಡದ್ ಗೊರ್‍ಕಿ
ನಮ್ಯಾತೇಕಾತ್ ಬೆರ್‍ಕಿ ! ೩

ಜಾಡಿಸ್ಸಿ ಒದ್ರ, ಗಡಿ ಭದ್ರ
ಆಗೊದ್ ಎಲ್ಲಾ ಎದ್ರ
ಇಂದಿನ್ ಬಾಳು, ಮುಂದಿನ್ ಕೂಳು
ಇದ್ದದ್ ಕಂಟೇನ್ ಕೀಳು
ಹೇಳೋರ್ ಎಷ್ಟಂತ ಹೇಳ್ತಾರಣ್ಣಾ ?
ತಿಳ್ಕೊ ನಿಂದನ್ ನೀನು
ನಿನ್ನ ಹೊರ್‍ಸಿದ್ ಹೊರಿ ಒಗದ್ರ
ಗಟ್ಟಿ ಆದೀತ್ ಬೆನ್ನು. ೪

ಕೂಳಿನ್ ಕಾಳ್ಗ

ನೆಳ್ಳಾಗೆ ಕುಂತಾರ್ ಬಳ್ಳೀನ್ ಹಬ್ಸಿ
ಕೂಳೀಗ್ ಬಂತು ಕೊರ್ತಿ
ಕುಂಟೂ ಹೊತ್ಗೋಳ್ ನಮ್ಗೀಗ್ ಬಂದ್ವು
ಅದದ್ಕವ್ರು ಸಾರ್ತಿ
ಕೈಯಾಗ್ ಇಲ್ದಕ್ ಸ್ಯೆ ಅಂತ ಅಂದ್ರು
ಮ್ಯೆಕೈಗೇರೆ ಬೀಕು
ಸುಮ್ನೇ ಕುಂತ್ರನ ನೆತ್ತೀಗೆ ಇನ್ನ
ಕತ್ತೀದ್ ಏಟ ಗೆಳ್ಯ ?
ನೆಲ ಬೆಳಿದಿದ್ರೂ ಭೂಮೀದ್ ತುಂಬ
ನಡ್ದಾವ ನೆಗ್ಲಿ ಮುಳ್ಳು !
ಎಬ್ಸೀರ್ ಕ್ರಾಂತಿ ನಮ್ಗಿನ್ ಶಾಂತಿ
ಊಬಿನ್ ಕೂಳಿನ್ ಕಾಳಿ
ಸಾವ್ಕಾರ್ ತುಳ್ಸಿ ಕಟ್ಕೊಂಡ್ ಹಂತಿ
ತಕ್ಕೊ ಬೀಜದ್ ಬೆಳಿ !
ಇಂದೇ ತಂದಿದ್ ! ಇಂದೇ ತಿಂದ್ರು
ಮ್ಯೆಯ್ಗೇ ಹತ್ತುದಿಲ್ಲ
ನಿನ್ನೇದ್ ಇವತ್ಗೇ ಇರ್ಲಂತಂದ್ರು
ನಮ್ಯಾಲಿದ್ದೋರ್ ಹಲ್ಲ
ಬಡವರ್ ಬಳ್ಗಾಬೆಳೀ ಬೇಕ್ ಅಂದ್ರು
ಹೂಡ್ಬೇಕ್ ಕೂಳಿನ್ ಕಾಳ್ಗ
ನಮ್ಮನ್ ಹಿಡ್ದೂ ನಮ್ಮನ್ ಬಡ್ದು
ಕುಂತಾರ್ ಉಳ್ಳವರ ಮಕ್ಳು

ಸಲಾಮ್ಮಾಡಿದ್ರು ಹಲ್ಗೀ ಹಿಡ್ಸಿ
ಬಯ್ತಾರ್ಸುಡುಗಾಡ್ದಲ್ಲು !
ಬಾಯ ಕಾಣದೀರ್ ಸಾಯಬ್ಯಾಡ್ ಇನ್ನ
ಬಾರಸ್ ಕಾಳ್ಗದ ಕಣೆ ;
ಸಹಾಯ ಸಿಗದೀರ್ ಸಾಯಬ್ಯಾಡ್ ಇನ್ನ
ನಿನ್ಗಿನ್ ನೀನೇ ಹೊಣೆ

□□

ಭಾಗ ಮೂರು

ಲೇಖನಗಳು ಹಾಗೂ ಕತೆಗಳು

*

ಎನಿತೆನಿತು ಪಿಷನಿಮಿಷ ? ಮನಕೇನು ಕುದಿರಭಸ ?
ಬಗೆ ಬಿಚ್ಚು ಬಾ ಇಲ್ಲಿ ಹಾಳುಹೃದಯದ ಕಿಲುಬು
ಬಾಳ ಕಿರಿ ಗುರಿ ದಾರಿ ನಿನ್ನದಿರೆ, ನಮ್ಮ ಹೊಸ
ಹಿರಿಯೊಲವು, ಜೀವದೊಸಗೆಯಲತೆಗೆ ನಗೆ ಹಬ್ಬು-
ವಂತೆನಗೆ, ಸಂಸ್ಕೃತಿಯ ಬಲಕೊಡುವುದನುದಿನವು
ಬಾ, ಮೂಜಗಕೆ ಮಾದರಿಯು ನಮ್ಮದೀ ಒಲವು.

*

ಜಾನಪದ ಸಾಹಿತ್ಯ

ಸಂಗ್ರಹಿಸಿಟ್ಟ ಹಾಡಿನ ಕಟ್ಟುಗಳನ್ನೆಲ್ಲ ಬಿಚ್ಚಿ, ಅವೆಲ್ಲ 'ಹಾಳಾಗಿ ಮೂಳಾಗಿ' ಇರುವಾಗ ಈ ಬಗೆಯ ಬರವಣಿಗೆಗೆ ಕೈ ಮುಂದೆ ಸಾಗುತ್ತದೆ. ಬರೆಯುವಾಗ ಜೀವ ಕೈಗೆ ಸವಾಲು ಹಾಕುತ್ತದೆ ''ಅಂದು ಬರೆದುಕೊಂಡ ಹಾಡಿನಂತೆಯೇ ಇಂದು ಬರೆಯುವ ಲೇಖನದ ಅವಸ್ಥೆಯಾದರೆ ? ಆಗೇನು ಬಾಯಿಗಾನುವಿಯಾ ? ಬೊಬ್ಬೆ ಹೊಡೆಯಲು?'' ಎಂದು. 'ತಡೆ, ಜೀವ ಇಬ್ಬರೂ ಕೂಡಿಯೇ ಹಿಗ್ಗುವ ವೇಳೆ ಬಾರದಿರದು' ಹೀಗೆನ್ನುತ್ತ ತಡವರಿಯುತ್ತ ಮುನ್ನಡೆಯುವ ಕೈ ಜೀವನಕ್ಕೆ ಅಭಯದಾಸೆ ತೋರಿಸುವುದು–ಸಂಪಾದಕರಿಗೆಲ್ಲ ಕಾಗದ ಬರೆದು, ಉತ್ತರದೋಲೆಯನ್ನ ಮುಟ್ಟಲು ಕಾತರಗೊಂಡು, ಕೊನೆಗೊಮ್ಮೆ ನಿರಾಸೆಯಾದರೆ ಜೀವ ತಿಂಗಳು ತಿಂಗಳಿನವರೆಗೆ ಹೇಗೆ ಕೈತೋರಿಸುವುದು ? ನಾನಂತೂ ಆಗೆಲ್ಲ ನಿರ್ಗತಿಕನಂತೆ ಅಲೆದಾಡಿ ಬಿಡುವೆ. ಅಲೆದಾಟದ ಯೋಜನೆಯೇ ? ಮತ್ತೇನು ? ಅದೇ ಜೀವ ಹಾಗೂ ಕೈಗಳ ನಡುವಿನ ಕಲಹ ಪರಿಸಮಾಪ್ತಿಯ ಮಾರ್ಗವನ್ನರಸುವುದು. ಹೀಗೆಯೇ ಹೇಳುತ್ತ ನಡೆದರೆ, ಇದು ಲೇಖನವಾಗದೆಯೆ ನೀವೆಲ್ಲ 'ಸಾಕಿನ್ನು' ಅನ್ನುವಂತಾದೀತು. ಇದೋ ಬಿಟ್ಟೆ–ಗೊಡ್ಡು ಹರಟೆಯನ್ನ.

ಫೆಬ್ರುವರಿ ೪೬. ಮೊದಲನೆಯ ವಾರದ ಒಂದು ದಿನ–ಶನಿವಾರ ಮುಂ. ೧೨ ಕ್ಕೆ ಮುಗಿಯಬೇಕಾಗಿದ್ದ ಆಫೀಸು ೪ ಗಂಟೆಗೆ ಸಂಜೆ ಮುಗಿಯಿತು. ಬಳಿಕ ಚಹಾಪಾನ ನೆರವೇರುವುದರೊಳಗಾಗಿ ೪ : ಗಂ. ಬಸ್‌ಸ್ಟ್ಯಾಂಡ್ ತಲುಪುವನಿತರಲ್ಲಿ ೫ ಗಂ. 'ನಂದೊಂದ್ ಪಾಸ ಹಚ್ಚರೀ' ಎಂದು ಮೇನೇಜಿಂಗ್ ಏಜಂಟನಿಗೆ ಹೇಳಿದರೆ ''ಐದರ ಗಾಡಿಗೆ ಅಡ್ವಾನ್ಸ್ ಬುಕ್ಕಿಂಗ್ ಆಗೇದರಿ. ಉಣಕಲ್ಲವ್ರು ತುಂಬ್ಯಾರು. ಏಳು ಹೋಡೀತೈತ್ರಿ, ನೀವೆ ಮೋಟಾರನ್ಯಾಗ ಕುಂಡ್ರಬೇಕಾರ ಈವತ್ತ ಸಂತಿ ಸಂಬಾಳ್ಸಿಗೊಳ್ರಿ. ಇಲ್ಲರ್ಕ ನಿಮಗ್ಯಾರ ಇಷ್ಟ ತಡಸಾಕ ಹಚ್ಚತಿದ್ದರ್ರಿ ?''. ಇಷ್ಟುದ್ದ ಭಾಷಣ ಕೊಟ್ಟು ನನ್ನ ಬಾಯಿ ಗಪ್ಪು ಮಾಡಿದ. ಮನೆಗೆ ಬೇಗನೆ ಹೋಗುವ ಆಸೆ ನನ್ನನ್ನು ಕಾಡಿಸುತ್ತಿತ್ತು, ಕಾರಣವಿಷ್ಟೆ : ಪ್ರೇಮಚಂದರು ಮುನ್ನುಡಿ ಬರೆದ ಹಿಂದೀ ಕಾದಂಬರಿಯೊಂದು ಮನೆಯಲ್ಲಿತ್ತು: ಘರ್‌ಕೀರಾಹ (ಮನೆಯ ದಾರಿ) ಅದರ ಹೆಸರು. ಅದನ್ನೋದುವುದಕ್ಕಾಗಿ ನಾನು ಮನೆಯ ದಾರಿ ಹಿಡಿಯಲೆಳಸಿದ್ದು. ನನಗೊಂದು ಯುಕ್ತಿ ಹೊಳೆಯಿತು: ''ಹೀಗೇ ಒಳ್ಳೆಯ ಮಾತಿನಿಂದ ಉಣಕಲ್ಲಿನವರೆಗೆ ನಡೆಯಬೇಕು. ಅಲ್ಲಿಗೆ ಮುಟ್ಟಿ ಬೇವಿನಕಟ್ಟೆಯಲ್ಲಿ ತಳವೂರಿದರಾಯಿತು, ಜನ ಉಣಕಲ್ಲಿಗೇ ಇಳಿಯುತ್ತಾರೆ. ಅಲ್ಲಿ ನನಗೆ ಸ್ಥಾನ ಸಿಗುವುದು. ಗಂಟೆ ೨ ರೊಳಗೆ ಮನೆ ಮುಟ್ಟುವೆ. ಇಲ್ಲಿಯೇ ಹುಬ್ಬಳ್ಳಿಯಲ್ಲಿ ಕುಳಿತರೆ ಮನೆ ಮುಟ್ಟಲು ರಾತ್ರಿ ೯ ಗಂಟೆಯಾದರೂ ಆದೀತು...'' ಕೊನೆಗೆ ಅದೇ ಯುಕ್ತಿಯ ದಾಸನಾಗಿ ಹೆಜ್ಜೆ ಸಾಗಿಸಿದೆ. ತನ್ನ ಸಣ್ಣತನಕ್ಕೆ ಸಲ್ಲದ ಹಂಚಿಕೆಯನ್ನೆಲ್ಲ ಜೀವ ಹಾಕಿಕೊಳ್ಳುತ್ತಿತ್ತು, ದಾರಿಯಲ್ಲಿಯ ವಾಹನಗಳ ಓಡಾಟದ ತೊಂದರೆ 'ಜೀವದ ಸಲ್ಲದ ವೃತ್ತಿಗೆ' ಕೊನೆ ಕೊಡಲು ಸಹಾಯ ಮಾಡುತ್ತಿತ್ತು ಮನಸ್ಸಿನಲ್ಲಿ ತಳಮಳ. ತಳಮಳದ

ಮೇಲಾಟ ನಡೆಯಿಸುವ ಆಸೆಗಳ ಸುಳಿದಾಟ ಬೇರೆ. ಹೇಗೋ ದಾರಿ ಸಾಗಿತ್ತು. ನಾನು ಹೀಗೆಲ್ಲಾ ಅಲೆದಾಡುವಾಗ ನಾನು 'ಸಂಗ್ರಾಹಕ' ಎನ್ನುಕೊಳ್ಳುವಷ್ಟು ಕೂಡ ಮೈಮೇಲೆ ಅರಿವಿರುವುದಿಲ್ಲ. ಮೇಲಾಗಿ ನನ್ನದೇನು ಗುರ್ರು ಹಾಡುವವರಿಗೆ ? ನನ್ನನ್ನು ನೋಡಿದೊಡನೇ ಹಾಡಲು ಅವರಿಗೇನು ಗರಜು ? ಏನೋ ತಾವೇ ತಿಳಿದು ತಮ್ಮ ಮನದ ಕೊಳೆಯನ್ನೆಲ್ಲ ಹೊರಗೆಡಿಸಲು ಹಾಡಿದರೆ ನನ್ನ ಕೆಲಸ, 'ನಾವು' ಹಾಡಿದುದನ್ನು ಬರೆದುಕೊಳ್ಳುತ್ತಾರಲ್ಲ ಎಂದು ಹಾಡುಗರು ಸಮಾಧಾನಪಟ್ಟುಕೊಳ್ಳದಂತೆ–ಬೇರೆ ನಾನು, 'ಗುಪ್ತಸಂಗ್ರಾಹಕ'ನಾಗಿ ಬಿಡುತ್ತೇನೆ.

ಹುಬ್ಬಳ್ಳಿ–ಉಣಕಲ್ಲುಗಳ ನಡುವೆ ಒಂದು ಮಸಣ ಭೂಮಿ ಇದೆ, ಟಾರ್ ರೋಡಿಗೆ ಹೊಂದಿ. ನಾನು–ಅಲ್ಲಿ ಬರುತ್ತಿದ್ದಾಗ ಯಾರೋ ಹಾಡುತ್ತಿದ್ದರು. ನೀವು ಬಹಳಸಲ ನೋಡಿರಬೇಕು ಹಾಡುತ್ತಿದ್ದರು ಎಂದು ನಾನು ಬರೆದರೆ ಮುಂದೆ 'ಯಾರೋ' ಬರಲೇಬೇಕು ಮಾತನಾಡಿಸಲು. ಹಾಡುವವರ ಹೆಸರು ಕೇಳುವ ಗೋಜಿಗೆ ನಾನು ಕೈ ಹಾಕುವದೇ ಇಲ್ಲ.

ಹಾಡುಗಾರನ ಧ್ವನಿಯ ಮೋಹಕ್ಕೆ ಸ್ಮಶಾನದಲ್ಲಿ ಗೋರಿ, ಕುಣಿಗಳಲ್ಲಿ ಕಾಲು ಚಾಚಿದ–ಇಲ್ಲವೇ ಕುಳಿತುಕೊಂಡ–ಇನ್ನಿಲ್ಲವೆನ್ನುತ್ತೇವಲ್ಲ, ಆ ಜನಕೂ ಕಿವಿಗೊಟ್ಟು ಕೇಳುತ್ತಿದ್ದರು. ತಮ್ಮ ಜೀವಮಾನದಲ್ಲಿಯೇ ಅವರೆಲ್ಲ ಈ ಬಗೆಯ ಹಾಡು ಕೇಳಿದ್ದರೋ ಇಲ್ಲವೊ ! ನಾನಂತೂ ಕೇಳಿದೆ.

ನಿಮಗೂ ಆ ಯೋಗವನ್ನು ಒದಗಿಸಿ ಕೊಡಲೇ ? ಅಪ್ಪಣೆಯೇ ? ಕೇಳಿರಿ.

□□

ಜನಪದ ಸಾಹಿತ್ಯದಲ್ಲಿ ಸೌಂದರ್ಯ–೧

ಕೆಲವು ದಿನಗಳಲ್ಲಿಯೇ ಜೀವನ ತನ್ನ ಅನುಭವವನ್ನು ಮರೆತಂತೆ ನಡೆಸುತ್ತದೆ. ಮತ್ತೊಮ್ಮೆ ಮರೆತುದನ್ನೆಲ್ಲ ತನ್ನ ಮುಂದಿಟ್ಟುಕೊಂಡು, 'ಇದು ಹೀಗೆ ಅಂದಾಯಿತು, ಆ ದಿನ ಅಷ್ಟೆಲ್ಲ ಮಾಡಿದೆ' ಎಂದು ಕಾಲದ ಅನುಕ್ರಮದ ಪಟ್ಟಿಯಲ್ಲಿ ಜೋಡಿಸಲೆಳಿಸುತ್ತದೆ. ಅದನ್ನೆಲ್ಲ ಹೀಗಾಗುವಾಗ ನಗೆಯೂ ವಿಪುಲ. ದುಃಖವೂ ಅಷ್ಟೇ. ಮರೆತುದೆಲ್ಲ– ಮರೆತುಕೊಂಡೇ ಮಾಯವಾಗಿದ್ದರೆ? – ಎಷ್ಟು ಹಾನಿಯಾಗುತ್ತಿತ್ತು. ಈ ರೀತಿಯ ವಿಚಾರ ಸರಣಿಯೂ ಬೇರೆ ಮೈ ಮನತಣಿಸುತ್ತದೆ, ನೆನಪು ಮೆಲಕು ಹಾಕಿ ಹಿಂದಿನ ಬಾಳಬಳ್ಳಿಯ ಬಾಳಕದ ಒಣದ್ರಾಕ್ಷಿಗಳನ್ನೆಲ್ಲ ಸವಿಯುವಾಗ.

೧೪–೧೨–೧೯೪೬. ಇಂದು ಯಾವದೋ ಒಂದು ಕವನವನ್ನೋದುತ್ತಿದ್ದೆ. ಕವನದಲ್ಲಿ 'ಸಂಕ್ರಾಂತಿ' ಎನ್ನುವ ಶಬ್ದ ಎರಡು ಮೂರು ಸಲ ಬಂದಿತು. ಅದೊಂದೇ ಶಬ್ದಸಾಕಾಯಿತು, ಎರಡು ವರುಷಗಳ ಹಿಂದಿನ 'ಮಕರ ಸಂಕ್ರಮಣ'ವನ್ನು ನನ್ನ ಮನೆದೆದುರು, ನೆನಪಿನ ಬೇಡಿ ತೊಡಿಸಿ, ತಂದಿರಿಸಿ ನಿಲ್ಲಿಸಲು. ಆಗ ನಾನು ಧಾರವಾಡದಲ್ಲಿ ಕೆಲಸ ಮಾಡುತ್ತಿದ್ದೆ. ನಮ್ಮೂರ ಗೆಳೆಯರೊಬ್ಬರು ಮತ್ತೊಬ್ಬರಾದ ಕಬ್ಬೂರಿನ ಗೆಳೆಯರೊಡನೆ ಸವದತ್ತಿಯ ನೆರೆಯಲ್ಲಿರುವ ಒಡಕು ಹೊಳಿಯ ಜಾತ್ರೆಗೆ ಹೋಗುವುದಾಗಿ ತಿಳಿಸಿ ನನ್ನನ್ನೂ ತಮ್ಮ ಗ್ರೂಪ್‌ನಲ್ಲಿ ಸೇರಿಸಿಕೊಳ್ಳುವ ಆಸೆ ತೋರಿಸಿದರು. ನನಗೆ ಆಫೀಸಿದೆ ; ಬರುವದಾಗುವದಿಲ್ಲ, ಎಂದರೂ ಕೇಳಲಿಲ್ಲ. 'ನೀನು ರಜೆಯನ್ನಾದರೂ ಕೇಳಲಿಲ್ಲ, ಮೊದಲು– ಕೊಟ್ಟರಂತೂ ಆಯಿತು. ಇಲ್ಲವಾದರೆ ನಮಗೆ ಬಿಟ್ಟಿದ್ದಲ್ಲ.' ಎಂದು ಮತ್ತೆ ಬಲಪಡಿಸಿದರು. ಅವರ ಆಸೆಯನ್ನು ಮಣ್ಣುಗೂಡಿಸಬಾರ ದೆಂದು, ನನಗೆ ಮನಸ್ಸಿಲ್ಲದಿದ್ದುದಕ್ಕೆ ರಜೆಗೆ ಬೇಡಿಕೆಯ ಕಾಗದ ಬರೆದೆ, ಬಿನ್ನವಿಸಿದೆ. ರಜೆ ಸಿಕ್ಕಿತು. ಮೂರುದಿನಗಟ್ಟಲೆ, ಮಲಪ್ರಭೆಯ ಮಕ್ಕಳಾಗಿ ನಲಿದಾಡಿದೆವು. ಆ ಬೆಳವಲದ ನಾಡಿನ ಬಹುಭಾಗವನ್ನು ಮೂವರೇ ಗೆಳೆಯರು 'ಸೈಕಲ್' ಸವಾರಿ ಮಾಡಿ ಸುತ್ತಾಡಿ, ಗುಡ್ಡಗಳನ್ನೇ–ಸಹ್ಯಾದ್ರಿಯ ತುಂಡು ಬೆಟ್ಟಗಳನ್ನೆಲ್ಲ ಮುಟ್ಟಿ, ಏರಿ ಏರಿ – ಕಣ್ಣು ಪ್ರದಕ್ಷಿಣೆಯನ್ನು ಹಾಕಿ, ತೃಪ್ತಿಯ ತೇಗು ತೇಕಿದೆವು. 'ಬೆಟ್ಟಕ್ಕಂಜಿ ಗಂಗೆ ಬೆಳವಲ ಹೊಗ್ತಾಳ' ಎಂದು ಮಲಪ್ರಭೆಯನ್ನು ಕೋಳಿ ಅಣಕವಾಡಿದಾಗ, ಮಲಪ್ರಭೆ ಗುಡ್ಡವನ್ನು ಇಬ್ಭಾಗ ಮಾಡಿ, ಕೋಳಿಯ ಪಕ್ಕಗಳನ್ನು ತನ್ನ ಎಡಬಲಕ್ಕೆ ತನ್ನ ಸಾಹಸದ ಸ್ಮರಣೆಗಾಗಿ ಇರಿಸಿದ್ದಾಳೆ. ಹೀಗೆಯೇ ನಾವು ಕೂಡ ನಮ್ಮೆದುರಿಗಿದ್ದ ಗೋಳಿನ ಬೆಟ್ಟವನ್ನು, ನಮ್ಮ ಮೂರು ದಿನಗಳ ಪಯಣ ಪರಿಣಾಮದಿಂದಾಗಿ ಉಗಮ ಹೊಂದಿದ ತೃಪ್ತಿ ನಗೆ, ಬಗೆಗಳ ಸಂಗಮ ಪ್ರವಾಹದ ಪ್ರಬಲ ಶಕ್ತಿಯೆಂದು ಒಡೆದು, ಚಿರಸ್ಮರಣೀಯವಾಗುವಂತೆ ಬಾಳಿನೆದೆಯ ದಿನಚರಿಯಲ್ಲಿ ಬರೆದಿಟ್ಟೆವು. ಜಾತ್ರೆಯಲ್ಲಿ ಎಷ್ಟು ಹಾಡುಗಳ ಜಾತ್ರೆಯಾಯಿತೋ, ನೆನೆಯಲಸಾಧ್ಯ.. ಅಲ್ಲಿ ಒಂದು 'ರೇಡಿಯೋ ಸೆಂಟರ್' ಇದ್ದರೆ ಆ ಹಾಡುಗಳ ಪ್ರಸರಣವಾಗುತ್ತಿತ್ತು, ನಾನು ಇಷ್ಟೆಲ್ಲ ಬರೆಯುವ ತೊಂದರೆ ಆಗುತ್ತಿರಲಿಲ್ಲ.

ನಾನು ಹೇಳಬೇಕಾದುದು ಇದೆಲ್ಲ ನೆನಪಿನ ಕಾಣಿಕೆ. ಗೆಳೆಯರೆಲ್ಲ 'ನೀನು ರಜೆಸಿಕ್ಕರೆ ಬಾ'; ನಾವು ಮೊದಲು ಹೋಗುತ್ತೇವೆಂದು ಹೋಗಿದ್ದರು. ಕಬ್ಬೂರಿನಿಂದ ನಮ್ಮ ಪಯಣ ಮುಂದುವರಿಯಬೇಕಾಗಿತ್ತು. ರಜೆ ಸಿಕ್ಕದಿನ ನಾನೂ ಕಬ್ಬೂರಿನಲ್ಲಿರುವ ಗೆಳೆಯರನ್ನು ಕೂಡಿಕೊಳ್ಳಲು ಸಾಯಿಕಲ್ ಏರಿ ಹೊರಟೆ. ಕಬ್ಬೂರನ್ನು ನಾನು ಮೊದಲು ನೋಡಿರಲಿಲ್ಲ. ಗೆಳೆಯ ಹೇಳಿದಂತೆ ಹಾರಿ ಬೀಡಿ–ಹೊಂಗಲದಲ್ಲಿ ಕೇಳಿಕೊಂಡು ಆ ಊರಿನ ದಾರಿಯನ್ನು ಹುಡುಕಿಕೊಳ್ಳುತ್ತ ಸಾಗಿದ್ದೆ. ಸಂಜೆಯಾಗುತ್ತಿತ್ತು. ಮಲಪ್ರಭೆಯು ಬಳಸಿಕೊಂಡ ನಾಡಿಗೆಲ್ಲ ಸಂಧ್ಯಾದೇವಿ ತನ್ನ ಬಾಳನ್ನು ಇಡಿಯಾಗಿ ಕಡಕೊಟ್ಟಂತಿತ್ತು. ಪ್ರಭೆಯು ದಂಡೆಗುಂಟ ಕೊರಕಲು ದಾರಿಯಲ್ಲಿ ಸಾಯಕಲ್ಲು ಓಡುತ್ತಿತ್ತು. ಬದಿಯ ದಾರಿಯನ್ನೆಲ್ಲ– ಸಂಜೆಯ ಮಾಟವನ್ನೆಲ್ಲ– ನಿರೀಕ್ಷಿಸುತ್ತಿದ್ದವು ಕಣ್ಣುಗಳು. ಪ್ರಭೆಯ ಕೆಲಬಲದ ಜಾಲಿಯ ಗಿಡಗಳನ್ನೇರಿ ಕುಳಿತು ಗಾನಗೈಯುತ್ತಿದ್ದ ಹಕ್ಕಿಗಳ ಕಂಠವನ್ನಾಲಿಸಲು ಕಿವಿಗಳೂ ಉತ್ಸುಕತೆ ತೋರಿಸುತ್ತಿದ್ದವು. ಇನ್ನೂ ಹರದಾರಿ ಕಬ್ಬೂರು. ಹೊತ್ತಿರುವದ ರೊಳಗಾಗಿ ಮನೆ ಸೇರಲಾಸೆ. ನನ್ನಾಸೆ ಸರಿಯಾಗಿರಲಿಲ್ಲವೆಂದು ತೋರುತ್ತಿದೆ. ಪ್ರಭೆ ನನ್ನನ್ನು ತಡೆದಳು–ಅದೋ ಅಲ್ಲಿ ನನ್ನ ರೈತ ಹಾಡುತ್ತಿದ್ದಾನೆ– ''ಕೇಳು ನೀನು ನನ್ನನ್ನು ಕಂಡ ಗುರುತಿಗಾಗಿ ಅವನ ಕಂಠಕ್ಕೆ ಹಾಡಲಾಣತಿಕೊಟ್ಟಿದ್ದೇನೆ–ಹೀಗೆಯೇ ಮುಂದೆ ಸಾಗಿದೆಯಾದರೆ ನನ್ನ ನೀರಿನಿಂದ ಬೆಳೆದ ಜಾಲಿಯ ಮುಳ್ಳನ್ನು ಕರೆದು ನಿನ್ನ 'ಸೈಕಲ್ ಟೈರ್' ಹರಿಯುವಂತೆ ಮಾಡಲು ಕಿವಿಮಾತು ಹೇಳುವೆ''. ಅವಳಾಸೆಗೆ ತಲೆಬಾಗಿದೆ. ಪ್ರಭೆಯ ರೈತ ಹಾಡುತ್ತಿದ್ದ, ಬರೆದುಕೊಂಡು. ''ಓ ಪ್ರಭಾ, ನೀನು ನನ್ನನ್ನು ನಿನ್ನ ದಂಡೆಗೆ ಹೊಂದಿರುವ ಹಳ್ಳಿಯೊಂದರಲ್ಲೇಕೆ ಹುಟ್ಟಿಸಲು ದೇವರನ್ನು ಬೇಡಲಿಲ್ಲ? ನನಗಿಷ್ಟು ನಿನ್ನ ದಯೆ ಇರುವಾಗ'' ಎಂದೆ. ''ಅದೆಲ್ಲ ಮುಂದಿನ ಜನ್ಮದಲ್ಲಿ, ಇಲ್ಲವಾದರೆ ಈಗೇ ನಾಯಿತು? ನಾನು ನಿನ್ನನ್ನು ಸ್ವಾಗತಿಸುತ್ತೇನೆ. ಬಾ, ನನ್ನ ನೆರೆಯೂರಿಗೆ''. ಎಂದು ನುಡಿದಳು ಪ್ರಭೆ. 'ಈಗಂತೂ ಹಾಡು ಕೇಳುವ ಪ್ರಭಾ. ಮುಂದೆ ಮಾತಾಡೋಣವೆಂದು ಸಂತೈಸಿದೆ. ಮಲಪ್ರಭೆಯನ್ನು ಪ್ರಭೆ ಆಗಲಿ' ಎಂದಳು– ನಾನವಳಿಗೆ ತಲೆಬಾಗಿದೆ.

ಕೇಳಿ– ಇದು ಪ್ರಭೆಯು ನನಗಿತ್ತ ಒಲುಮೆಯ ಕಾಣಿಕೆ :

ಜಪ್ಪಿಸಿ ಜಪ್ಪಿಸಿ ತಂದ್ಯೋ ತುಪ್ಪದು ಜ್ಯೇನಿನ್ಹುಟ್ಟು
ಮದ್ದಿನದಾಗ, ಮರಿಗ್ಯಾಕ ಇಟ್ಯೋ ? ॥ ೧ ॥

ಮರಿಮುಚ್ಯಾಕನಿಟ್ಯೋ ಮದ್ವ್ಯಾದಾಗ, ಮಡದ್ಯೋ–
ಬರಲ್ಯೆಂತಾವ್ಯೇನೋ ಹೊಲಕ್ವಾದ, ಅಣ್ಣಾ? ॥ ೨ ॥

ಜ್ಯೇನ್ಹುಟ್ಟಿಗಿ ನಿಮ್ಮ ಬಂವಿಕಿ ದ್ಯಾನಕು ಬಂದಾರಂದ್ಯೆ–
ಹನಿಹನಿ ಸೋರ್‍ಯೇ ಬರಿದಾದ್ಯೋ ಅಣ್ಣಾ ॥ ೩ ॥

ಬರಿಯ್ಯೇವದಾದ್ಯೋ ಸೊಸ್ಯೆಕೊಡುವ್ಯಿಸ್ಯೋತಾರ್‍ಯಣ್ಣಾ
ಕಂದ್ಯಾವ ನಿಮಜೀಂವಾ ತಿನ್ಲಿತಿಂದಣ್ಣಾ ॥ ೪ ॥

ಬಾಯಿಗ್ಯೊಯ್ನೆಕಿನಲ್ಲೊ, ಮೂಸ್ಲಾಮುಂವೆಕ್ಯನಲ್ಲೂ
ಮಲಪುರಿ ಹೂವ್ಪುಪ್ಪೋಮರಗ್ಯೇತ್ಯೋ ನೋಡೊ ॥ ೫ ॥

- ಮಾಡುವ್ಯೆನೀನು ಬರುನ್ಯೊಳಗೆ ಚಳಿಗ್ಯೋದಿ ರೊಟ್ಟಿನ ಮಾಡ್ಯೋ–
''ತುಪ್ಪಾಚ್ಯೇನೀನು ಹಚಗೋಣರ್‍ಯೇ'' ಅಂದ ॥ ೬ ॥

''ಹಚಗೋಣರ್‍ಯೇ ಅಂದ, ಹಚಡಾದಣ್ಣನು ಕೂಡ
ತಿನ್ನುತ್ತೀಗ್ಯೆಂದ ಪರಿತ್ಯೆರಿ ನಗಿ ಬಿಚ್ಯೇ'' ॥ ೭ ॥

ತುಂಬ್ಯಿಡು ಬಟ್ಟಲಾನಣ್ಣಾನಿನರ್‍ಯೆಂಜಿ ಕೈಗೆಕೊಡುವ್ಯೇ
ಮಾತ ನಿನತಂಗ್ಯೇ ನಂಬ್ಯೆರಾ ಸುಕಿನ್ಯಾದ್ಯೋ ॥ ೮ ॥

ದಾರ್‍ಯಿನೀನ್ಹಡದೂ ಹೋಗೋ, ಬಾಲ್ಯೋಳ್ಳಿ ಬರ ಹೊಂಟ್ಯೋ,
ನೆನೆಸ್ಯೇ ಬಿಕ್ಹತ್ಯೋ–ನಾವಾಡ್ಯಿರು ನುಡ್ಯಿನ ॥ ೯ ॥

ಕರ್‍ಯದೂ ತಾರಣ್ಹೋಗೊ, ಇದರ್‍ಯಿಗಿ ನನುಮಾತ್ಯೇಳಿ
ಒಲಿಗ್ಯೆ ್ಹಂಚ ನಿಟ್ಯೇ, ಒದರ್‍ಯೆ ಬಾರ್ಹೋಗ ॥ ೧೦ ॥

ಒದರ್‍ಯೇ ಬಾರ್ಹೋಗೋ ಚದರ್‍ಯಿರು ಜೀಂವಾ ನಿನ್ನೂ –
ಕಟ್ಟುದಂಗ ಚಕಮಾಕೀ, ಹೊತ್ವಾರೆ ಜ್ಯಾರೋ ॥ ೧೧ ॥

(ಕೆಲವೆಡೆ ಓದುವಾಗ '್ಯ' ಒತ್ತನ್ನು ಬಿಟ್ಟರೆ ಸರಿಯಾದ ಅರ್ಥವಾಗುತ್ತದೆ.)

ಕೇಳಿ ಕೇಳಿ ನನ್ನ ಜೀವಕ್ಕೂ ಬಿಳಿರೊಟ್ಟಿಯ (ಗೋಧಿಯ ರೊಟ್ಟಿ) ಕೂಡ ಮಲಪ್ರಭೆಯ ಹೂಜೇನನ್ನು ಸವಿಯಲಾಸೆಯಾಯಿತು. ಹೊತ್ತಾಗಿ ಅಡ್ಡದಾರಿ ಗೊತ್ತಾಗದೆ ಮತ್ತೆ ಯಾವುದಾದರೂ ಊರಿಗೆ ತಲುಪಬಹುದೆಂದು ಅವಸರಮಾಡಿದೆ. ಕಣ್ಣಿಗೆ ಜೇನ ತುಂಬಿದ ಬಟ್ಟಲವೇ ಕಾಣಿಸುತ್ತಿತ್ತು. ಅಣ್ಣ ಬಿಡಿಸಿತಂದು ಮುಚ್ಚಿಡುವ ಜೇನಿನ ರಹಸ್ಯ ತಂಗಿಗೆ ಗೊತ್ತಾಗುತ್ತದೆ. 'ನೀನು ನನ್ನ ಕೈಯಲ್ಲಿ ಕೊಡು, ನಾನು ಸೋಸಿ ಹಸನುಗೊಳಿಸಿಡುವೆ–ಬಟ್ಟಲು ತುಂಬಿ ತಿನ್ನುವದಿಲ್ಲ ಅಣ್ಣಾ ನೀವಿಬ್ಬರೇ ಸವಿಯಿರಿ. ನಾನು ಬಿಳಿಗೋಧಿಯ ರೊಟ್ಟಿ ಮಾಡಿರುವೆ. 'ನೀನು ಹೊಲಕ್ಕೆ ಹೋದ ಮಡದಿಯನ್ನು ಕರೆತಾ– ಇಗೋ ನಾನು ಒಲೆಯ ಮೇಲೆ ಹಂಚಿಟ್ಟು' ಎಂದು ಅಣ್ಣ ಅತ್ತಿಗೆಯ ಮೇಲಿನ ತನ್ನ ಆದರ ವ್ಯಕ್ತಪಡಿಸುತ್ತಾಳೆ ಇದೇ ಹಾಡಿನ ಮೂಲವೆಂದು ಹಾಡಿದವನೊಡನೆ 'ಇಂಟರ್‌ವ್ಯೂ' ಮಾಡಿ ತಿಳಿದುಕೊಂಡೆ.

ನಮ್ಮ ಮೂರು ದಿನದ ಪ್ರವಾಸದ ಮುನ್ನೆನಪಿಗಾಗಿ ಪ್ರಭೆ ನಮ್ಮ ನಾಡಿಗೆ ನೀಡಿದ ಉಡುಗೊರೆಯಿದು. ಮತ್ತೆಮತ್ತೆ 'ಪ್ರಭೆಯ' ಸುತ್ತ ಅಲೆದಾಡಬೇಕೆನ್ನುವ ಬಯಕೆಯಾಗುತ್ತಿದೆ. ಎಂದು ಬಿಡುವು ದೊರೆಯುವುದೋ ? ಜೀವನವೆಂದು ಮತ್ತೆ ಈ ಬಗೆಯಾಗಿ ತಣಿಯುವದೋ ಪ್ರಭೆಯ ಔತಣದೋಲೆಯನ್ನುಪಯೋಗಿಸಿ ?

''ಜಾತ್ರೆಗೆ ಹೋಗದಿದ್ದರೆ?– ಈ ಹಾಡನ್ನು ಪ್ರಭೆ ಅದೆಂತು ನೀಡುತ್ತಿದ್ದಳು ? '' ಎನ್ನುವ ಗುಟ್ಟಿನೊಂದಿಗೆ 'ರಜೆ ಕೊಡದಿದ್ದರೆ ನಮ್ಮ ಆಫೀಸರರು? 'ಪ್ರಭೆಯನ್ನೆಲ್ಲಿ ಒಮ್ಮೆಯಾದರೂ ಕಾಣುತ್ತಿದ್ದೇನೆ,' ಎನ್ನುವ ಸಮಸ್ಯೆ ಅಡಕವಾಗಿ ಹೋಗಿದೆ. ಹೊಯ್ದಾಟಕ್ಕೆ ಮನಸ್ಸಿನಲ್ಲಿ ಮೂಲೆಯ ಸ್ಥಾನವೂ ಸಿಗಲಾರದಾಯಿತು ಅಂದಿನ ಆ ಎರಡು ವರುಷಗಳ ಹಿಂದಿನ ಈ ಕತೆ ಜೀವನವನ್ನು ಎದುರುಗೊಳ್ಳುವಾಗ.

ನಾನು ಧಾರವಾಡದ ಕರ್ನಾಟಕ ಹಾಯಸ್ಕೂಲಿನಲ್ಲಿದ್ದಾಗ ನಮ್ಮ ಶಾಲೆಯ ಕೆಲವು ಗೆಳೆಯರು ಶಿಕ್ಷಕರೊಂದಿಗೆ ನಾನು ಕಂಡ ಮಲಪ್ರಭೆಯನ್ನು ಕಾಣಲು 'ಸೈಕಲ್' ಪ್ರವಾಸ ಮಾಡಿ ಬಂದರು. ಆಗ ನನ್ನ ಪಾಲಿಗೆ 'ಸೈಕಲ್' ಸಖ್ಯವಿರಲಿಲ್ಲ. ಮಲಪ್ರಭೆಗೆ ಇನ್ನೂ ಒಂದು ಹೆಸರಿದೆ 'ಒಡಕು ಹೊಳೆ'. ಮತ್ತೊಂದಿದೆ– 'ಮಲಪೂರಿ'. ಪ್ರಭೆ ಘಟ್ಟವನ್ನು ಸೀಳಿರುವ ತಾಣಕ್ಕೆ 'ನವಿಲುತೀರ್ಥ'ವೆನ್ನುತ್ತಾರೆ ನವನಾಗರಿಕರು. ನನ್ನಂತಹ ಹಳ್ಳಿಯವರೆಲ್ಲ 'ಮಲಪೂರಿ' ಎಂದು ಮುಗಿಸಿಬಿಡುತ್ತಾರೆ. ನಮ್ಮ ಶಾಲೆಯವರೆಲ್ಲ 'ನವಿಲುತೀರ್ಥ' ಎಂದೇ ಶಾಲೆಯ ಪತ್ರಿಕೆ 'ತೇಜಸ್ವಿ'ಯಲ್ಲಿ ಅಚ್ಚುಹಾಕಿಸಿದರು. ಇಂತು ಪ್ರಭೆ ಪ್ರಸಿದ್ಧಳಾದಳು.

ಅದೇ ನೆನಪು 'ನವಿಲೂರವ'ನಾದ ನನ್ನನ್ನು 'ನವಿಲುತೀರ್ಥ'ಕ್ಕೆ 'ಸೈಕಲ್ ಏರಿಸಿ ಓಡಿಸಿತು' ನವಿಲೂರು– ನವಿಲುತೀರ್ಥದ ಹೆಸರಿನ ಸಮರಸದ ಮಹಿಮೆಗೆ ಬೆರಗುಗೊಳಿಸಿ. ನಮ್ಮ ಊರಿಗೆ 'ನವಿಲೂರು' ಎಂದು ನಾಮಕರಣವಾಗಿದ್ದರೆ. ಒಡಕು ಹೊಳೆಯ ಆ ಸೌಂದರ್ಯವನ್ನೆಲ್ಲ ರೂಪಿಸುವಂತೆ ಮತ್ತೊಂದಾದ 'ನವಿಲು ತೀರ್ಥ'ವೆಂದು ಹೆಸರಿರದಿದ್ದರೆ ನಾನು ಆ ಹಾದಿಯ ಪಯಣಿಗನಾಗುತ್ತಿದ್ದೆನೋ ಇಲ್ಲವೊ ! 'ಏಕನಾಮ ಸದಾಪ್ರೇಮ' ಅಲ್ಲವೆ ?

'ಜೀವನ' ಮೇ ೧೯೪೭.

□□

ಜನಪದ ಸಾಹಿತ್ಯದಲ್ಲಿ ಸೌಂದರ್ಯ–೨

ಶ್ರಾವಣ ಮಾಸದ ಮಹಿಮೆ ಇತ್ತೀಚೆಗೆ ನನಗೆ ಘನರೂಪಗೊಂಡು ತೋರುತ್ತಲಿದೆ. ಕಾರಣಗಳಿಲ್ಲದಿಲ್ಲ, ಹಿಂದೆ ದಾರಿಗನಾಗಿ–ಅನಿರೀಕ್ಷಿತವಾಗಿ ನಾನು ''ಕಂಡ್ಯೇನ್ಯೋ ಗಣಿಯ ಕಂಡ್ಯೇನ್ಯೋ'' ಈ ಹಾಡನ್ನು ಸಂಗ್ರಹಿಸುವಾಗ ಶ್ರಾವಣದ ಸೆರಗು ಮುಂದೆ ಹತ್ತುವ ಅತುರದಲ್ಲಿತ್ತು. ನನಗೆ ನೆನಪಿದ್ದಂತೆ ಹೇಳುವದಾದರೆ–ನಾನು ಹುಬ್ಬಳ್ಳಿಯ ಶಾಲೆಗೆ ಉಂಡಿಯನ್ನು ಒಯ್ಯುವಾಗ ನನ್ನ ಮಿತ್ರರಾದ ಕೆಲ ಶಿಕ್ಷಕರು–''ಇವೇನ್ರಿ ? pre-ಪಂಚಮಿ ಉಂಡಿ ಅನ್ನೂವ್ಹಾಂಗ ಕಾಣಸ್ತೈತಿ'' ಎಂದು ನಗೆಯಾಡುವ ರೂಢಿಯಿಂದಾದ ನಗೆಮಾತಿನಿಂದ. ಈಗ ಮತ್ತೊಂದು ಮಹಿಮೆಯ ಮಹೋನ್ನತಿಯ ಸನ್ನಿವೇಶವನ್ನು ನೆನೆಯುವಾಗ ಬಾಯಿಬಲ್ಲಂತೆ ಹಾಡಿಬಿಡುತ್ತದೆ–'ಜಯ ಜಯ ಜಯ ಶ್ರಾವಣ ಜಯೋತ್ಸಾಹ ಕಾರಣ' ಎಂದು.

ಇದೇ ಶ್ರಾವಣಮಾಸ–ಅಗಸ್ಟ ೧೯೪೬. ೧೨ನೆಯ ದಿನಾಂಕ, ಮಧ್ಯಾಹ್ನದ ಮೇಲಿಗೆ ಧಾರವಾಡಕ್ಕೆ ಇಳಿದು ಒಡನೆಯೇ ಕರೆಯುತ್ತಿದ್ದ ನವಿಲೂರಿಗೆ ಓ ಕೊಟ್ಟಿದ್ದರೆ ಇದೆಲ್ಲ ಪುರಾಣದ ಇತಿಶ್ರೀ ಆಗಿಹೋಗಿರುತ್ತಿತ್ತು. ೫ನೇ ತಾರೀಕು–ಸೋಮವಾರ ಊರುಬಿಟ್ಟು, ಎಂಟು ದಿನಗಳಲ್ಲಿ ಎಂಟೆಂಟು ಊರುಗಳನ್ನೆಲ್ಲ ಸುತ್ತಾಡಿ, ಪುಣೆಯನ್ನೂ ಕಂಡುಬಂದ ನನಗೆ, ಅಲ್ಲಾವರ ಚಾಳದಲ್ಲಿ ಅರೆ ದಿನದ ವಿರಾಮವಾದರೂ ಬೇಡವೇ ? ಬಿಸಿಲಿಲ್ಲದ ಮಳೆಯಲ್ಲಿ, ಕೈಯಲ್ಲಿ ಕಾಲಿಗೂ ಅಡ್ಡಾಗುವ ಹಾಸಿಗೆ, ಪುಸ್ತಕ, ಅರಿವೆಗಳ ಚೀಲ ಹಿಡಿದುಕೊಂಡು ಮೂರು ಮೈಲು ನಡೆಯುವದೆಂದರೆ ನಮ್ಮಜ್ಜನಿಗೂ ಬೇಡಾಗುವಂತಹ ಇಚ್ಛೆ. ಇದಲ್ಲದೆ ನನ್ನನ್ನು 'Guest' ಆಗಿ ಬರಮಾಡಿಕೊಂಡಿದ್ದ ಗೆಳೆಯರ 'ಧಾರವಾಡ ಮುಟ್ಟಿದ ಕೂಡಲೇ' ಮಾಡುವ ಕೆಲಸಗಳದೆಷ್ಟೋ ನನ್ನ ತಲೆ ಬುರಡೆಯ ಸಂಪತ್ತಾಗಿ ಉಳಿದರೆ ? ಎಂದು ಚಿಂತೆ ಬೇರೆ, ಕೊನೆಗೊಮ್ಮೆ ದಾರಿಯಲ್ಲಿ ಅಡ್ಡಗಟ್ಟುವ ಗೆಳೆಯರು–ಚಹ, ಸಿಗರೇಟುಗಳ ಮಹಿಮೆಯ ಜಾಲದಿಂದ ಹೊರಬಂದು ಕಿಲ್ಲೆಯನ್ನು ಏರೇರಬೇಕಾದರೆ ಒಂದರ ಮುಂದೆ ಮತ್ತೊಂದಡಿಯಿಟ್ಟ ಎರಡು ಗಂಟೆಯ ಸಮಯ. ರೂಮಿನ ಬಾಗಿಲಿಗೆ ಕೈ ಇಲ್ಲದ (ನನ್ನೊಡನೆ) ಬೀಗ ಮುರಿದ ಕಿಟಕಿಯ ಮಹಾದ್ವಾರದಿಂದ ಚೀಲಕ್ಕೆ ಪ್ರವೇಶ ದೊರಕಿಸಬೇಕಾದರೆ ಐದು ನಿಮಿಷಗಳ ಕಣ್ಣಾಟದ ಕೊನೆಗಾಣುವಾಗ, ಇಷ್ಟೆಲ್ಲ ವಿಚಾರವಾದರೂ ನನಗೆ ರೂಮಿನ ಬಾಗಿಲನ್ನು ಈ ಸ್ಥಿತಿಯಲ್ಲಿರುವಾಗ ಕಾಣಬೇಕಾಯಿತೇ ? ಎನ್ನುತ್ತ ಎದುರಿನ ಹುಣಸಿಯ ಮರದಡಿ ಅಡಿಯಾಡುತ್ತಿದ್ದೆ ಗೆಳೆಯರನ್ನು ಉದ್ಧಾರಮಾಡುತ್ತ, ಆಗ ಹಿಂದಿನಿಂದ ತಂಬಿಗೆಯ ಗೆಳೆಯರು ಕೆಮ್ಮುತ್ತ ಪ್ರವಾಸದ ಕ್ಷೇಮ ಸಮಾಚಾರ ಕೇಳುವಾಗ, ''ನೀನೇನು ಗೆಳೆಯನೋ ? ಗಿಡದೊಡಲಿನ ಗಮ್ಮತ್ತಿನ ದೆವ್ವೋ ?'' ಎನ್ನುವಷ್ಟೂ ನನ್ನ ಪ್ರಜ್ಞೆಯ ಪರಿಸ್ಥಿತಿ ನಿದ್ದೆಗೆ ತನ್ನ ಗುತ್ತಿಗೆ ಒಪ್ಪಿಸುವದರಲ್ಲಿತ್ತು. ಇದೆಲ್ಲ ಮುಗಿದು ನಾನು ನನ್ನಷ್ಟಕ್ಕೆ ನಿದ್ರೆ ಹೋಗಬೇಕಾದರೆ ಮತ್ತರೆ ತಾಸು ಮರೆಯಾಯಿತು.

ಎದ್ದಾಗ ಐದು. ಇನ್ನು ಮೇಲೆ ತಿಮ್ಮನ ಸಾನ್ನಿಧ್ಯ. ಜವಳಿಯ ಪೇಟೆ ಸಾಧ್ಯವಾದರೆ ಮಾಳಮಡ್ಡಿ ಭಾಂಡಾರ ಎಲ್ಲ ಮುಗಿಸಬೇಕು–ಮತ್ತೆ ಊರಿನ ದಾರಿ ನನಗೆ ಇದಿಯಾಗಿರುವದೆಂದೇ ಭಾವಿಸಿಕೊಂಡು ಸುತ್ತಾಡಿ ಉಳಿದ ಎರಡಾಣೆಕೊಟ್ಟು ಮೋಟಾರು ಹಿಡಿಯಬೇಕೆಂದರೆ–ಗದ್ದಲೋ ಗದ್ದಲ. ಶ್ರಾವಣ ಸೋಮವಾರಕ್ಕೆಂದು ಧಾರವಾಡಕ್ಕೆ ಬಂದ ನಮ್ಮೂರಿನ ಮುದಿಕೆಯರೇ ಹೊರಡುವ ಎರಡು ಗಾಡಿಗಳ ಒಡತಿಯರಾಗಿ ಮೆರೆಯುತ್ತಿದ್ದಾರೆ ! ಸುಮ್ಮನೇ ಮೋಟರಿನತ್ತ ಹಣಕಿನೋಡಿದರೆ ಅಂಜುವ ಮಾತನ್ನಾಡುವ ಮುದಿಕೆಯ ಮುಖ ಏನು ಉಸುರಬೇಕು ?.

''ಎಲಾ ನನ್ನುಲಾಯಿ ತೂಗ್ಯಾಕಾಕ ಜಗಾ ಇಲ್ಲಿಲ್ಲ ಸುದೇಕ. ಮಡಸಾ, ಇನ್ನಯೆಲ್ಲಿಂದ ಒಳಗೆ ಡೊಕ್ಕೊಂತಿ ? ಬಂದರಾ ಬಾ ಇಲ್ಲೆ.''

ನಾನು ಆ ಮುದುಕಿ ಮಾತನಾಡುವಾಗ, 'Licenced passenger' ಆಗಿರಲಿಲ್ಲ. 'ಟಕೆಟ್ಟು ಇದ್ದಿದ್ದರೆ' ಎಂದು ಕಳವಳಪಟ್ಟುಕೊಳ್ಳುತ್ತ ಟಿಕೆಟ್ಟಿಗಾಗಿ ಆಸೆಪಡದೆ ಆಸೆಪಟ್ಟಿದ್ದರೆ ಊರು ಮುಟ್ಟುವಾಗ ಆರು ತಾಸಿನ ಸಪ್ಪೆ ರಾತ್ರಿಯಾಗುತ್ತಿತ್ತು. ಕಾಲುಗಳನ್ನು ಗುದ್ದಿಸುತ್ತ ಎರಡಾಣೆಯ ಸೇವೆಯನ್ನು ತನುಮನಕ್ಕೆ ಸಲ್ಲಿಸಿಕೊಂಡು ಊರಿಗೆ ಹೊರಟೆ.

ಧಾರವಾಡದ ಊರಿನ ದಾರಿಯನ್ನು ದಾಟುವಾಗಲೇ ಎಲ್ಲರೂ ದನಿಗೂಡಿಸಿದರು. ಇಷ್ಟೆಲ್ಲ ಆಗುವಾಗ ನನ್ನ ತಲೆಯಲ್ಲಿ ನಡೆಸುತ್ತಿದ್ದ ತಾಕಲಾಟ ಮಾಯವಾಗಿ ಏನೋ ನೆನಪಾಯಿತು–ಹಾಡಿಬಟ್ಟೆ.

'ನಾ ಇಲ್ಲಿ ಗಿಡದಾಗ ಕುಂತೀನಿ

ದಿನ–ದಿನಾ ನಿಮ್ರೊಟ್ಟಿ ತಿಂತೇನಿ'' –ನಾಯಾರು ? ಇಷ್ಟು ಹಾಡು ಮುಗಿಯುವ ದರೊಳಗಾಗಿ ಒಬ್ಬ ಒಗಟ ಒಡೆದು ಬಿಟ್ಟ ''ಕಾ ಕಾ ಕಾ ಗಿ''.

ನಾವು ಶಾಲೆಗೆ ಹೋಗುವಾಗ ಹುಡುಗರು ದಾರಿಯಲ್ಲಿ ಹಾಡುತ್ತಿದ್ದ ಹಾಡು ಸುಮ್ಮನೇ ನೆನಪಾದರೂ, ಎಳೆಯಂತೆ ಕಂಡರೂ ಅದು ಮುಂದೆ ನುಂಗಿದ ಹಚ್ಚಡದ ತುಂಬಿ ಎಷ್ಟೊಂದ ಪ್ರಣಯದ ಗುಟ್ಟಡಗಿದೆಯೆಂದರೆ ? ನನಗಂತೂ ''ನಮಗೆಲ್ಲ ಪ್ರಣಯಕ್ಕೊಳಗಾದ ಹುರುಳು ಜೀವನವೇ ? '' ಎನ್ನುವಂತೆ ಅನಿಸಿಬಿಡುವುದು. ನನ್ನ ಕೊಗ್ಗ ಧ್ವನಿಗೆ ಚೇತನಗೊಂಡು ಈ ಮಕ್ಕಳೆಲ್ಲ ಹಾಡಬಹುದೆಂದು ನಾನು ಬಗೆದಿರಲಿಲ್ಲ. ನನ್ನ ಚೀಲ ಹೊತ್ತುಕೊಂಡು ಗೆಳೆಯ ಹಾಡಲು ತೊಡಗಿದ :

ಆದಿಗೆ ಮೊದಲು ನಾನು–ಹೂಗಾರ ಸೋ

ದಿನಕೊಮ್ಮೆ ಪತ್ರಿ–ತರುವವ ಸೋ'

''ಇದೇನ ಬಿಡ್ಲೆ, ದೊಡ್ಡಾಟದ್ದ ಮತ್ತೊಂದ ಹಾಡಿದ್ದರ ಅದರಾ ಹಾಡು. ಕೇಳುಹಂಗಾದೀತ.'' ಮೇಲ್ದನಿಗೆ ಬೇಸರುಗೊಂಡು ನಾನೆಂದೆ.

''ನೋಡ್ಹಂಗಾರ. ಕೇಳೊ ಹಂತಾ ಹಾಡಾದರ ಕುಂಡರಬೇಕು. ಅಂದರ ಸಿಸ್ತ ಇಲ್ಲೆ ಆರಾಮು ಕುಂಡ್ರೂನು. ಆ ಕಡೆ–ಹೊಳ್ಳಿಮಿ ಮಂದೆಂತ ಗಾಮನ ಗಟ್ಟಿಗೆ ಬಂದಾರು. ಅವರೂ ಹಾಡ್ತಾರಂತ. ಅಲ್ಲಿ ಹುಡಗೂರು ಹಾಡ್ತಾರ. ಹಾಡ್ತೂನ ?'' ಎಂದನೊಬ್ಬ.

ಕುರುಡನಿಗೆ ಮತ್ತೇನು ? ಎರಡು ಕಣ್ಣುಕೊಟ್ಟಂತಾಯಿತು. ''ಅವರೆಲ್ಲಿ ಆದಾರಂತ ಹಾಡ್ಬೇಕಲೇ'' ಎಂದೆ.

ಆಣತಿಯ ದನಿಯಲ್ಲಿ ''ಎಲೇ ಗಿಡ್ಡಾ 'ನೆಲ್ಲಿಕಾಯಿ' ಹಾಡಹಾಡ್ಲೇ ಇನ್ನೊಂದ ಸಿಗರೇಟ ಕೊಡ್ತೆವಿ ನೋಡ'' ಎಂದ. ಗಿಡ್ಡರಲ್ಲಿ ದೊಡ್ಡವನಾದ ಮೇಲಿನ ಮಾತನಾಡಿದ ಹುಡುಗ ಅವರಲ್ಲಿಯ ಒಬ್ಬನಿಗೆ ಹೇಳುತ್ತ ಅವನ ಪರಿಚಯವನ್ನೂ ನನಗೆ ಮಾಡಿಕೊಟ್ಟ– ''ಎವ್ನ ನೋಡ್ಲಾ, ಮಗ, ಗಾಮನಗಟ್ಟಿಯಿಂದ ಉಳಿವಿ ಬಸಪ್ಪ ಬರೂದ ಏನ ತರಬಿತ್ತು'' ಎಂದು.

ಇನ್ನೂ ಕತ್ತಲಾಗಿರಲಿಲ್ಲ, ಇಟ್ಟಂಗಿಯ ಬಟ್ಟಿಯೆದುರಿನ ಬೈಲನಲ್ಲಿ ಜಾತ್ರೆಯ. ''ಪುಗ್ಗಿ'' (ನನಗೆ ಮಾತ್ರ ಪುಕ್ಕಟೆಯಾಗಿ ದೊರಕಿದುವು) ತಿನ್ನುವದಾದ ಮೇಲೆ ಗಾಮನಗಟ್ಟಿಯ ಗಿಡ್ಡ (ಹೊಳೆ ಸೀಮೆಯಿಂದ ಬಂದವ) ಹಾಡಲನುವಾದನು.

''ನೆಲ್ಲೀಗೆ ನಮ ಬಂವಿಕಿ, ನೆಲವೆಲ್ಲಾ ನಡಿಗ್ಯೇತಿ,
ಮನಿದಾಟ ನಾ ಬನ್ನಿ ತಿನಸ್ಯೇಳೊ'' ॥ ಪ ॥

ನಲ್ಲೆ–

''ನೆಲ್ಲೀಗೆ ನಮ ಬಂವಿಕಿ ನೆಲವೆಲ್ಲಾ ನಡಗ್ಯೇತಿ
ಮನಿದಾಟ ನಾ ಬನ್ನಿ ತಿನಸ್ಯೇಳೊ–
ಹೊತ್ತೀಗಿ ಚರಮಿಲ್ಲ ತಿನಸ್ಯೇಳೊ'' ॥ ೧ ॥

ಕುರುಬ–

''ಪಲ್ಯೇಕ ನಮ ಬಂವಿಕಿ, ಪರಿಯಾಣ ಒಡ್ಯೇನಿ
ತಂಗಳ ರೊಟ್ಟೀಗೆ ತಂದ್ಯೇನ ?–
ಮನಿದಾಟ ಬರುವಾಗ ತಂದ್ಯೇನ ?'' ॥ ೨ ॥

ನಲ್ಲೆ–

''ಪರಿಯಾಣ ನಮಗ್ಯಾಕ ? ಪರಿ ಅಡಗಿ ತರ್‍ಯುವೀನ್ಯೋ
ನಾಳಿ ನಮ ಸಂಗಕ್ಕೆ–ಹರಿಯನ್ನೆ–
ಹೊತ್ತೀಗಿ ಚರಮಿಲ್ಲ ಹರಿಕಿನ್ನೆ'' ॥ ೩ ॥

ಕುರುಬ–

''ನಾಳೆ ನೀ ತಂದಾರ ನಾಳೆ ನಾ ತಿನಸ್ಯೇನೆ
ನನಗ್ಯಾಕ ನಿನ ಚಿಂತಿ–ನಡಿಯೆನ್ನೆ–
ಮನಿದಾಟಿ ಇಲ್ಯಾಕ ಬಂದೆನ್ನೆ ? '' ॥ ೪ ॥

ನಲ್ಲೆ–

''ಇಲ್ಲಿಗಿ ನಾ ಬರದಿರಕ ಮತ್ತೆಲ್ಯೋ ಹೋಗಾಲಿ ?
ಚಳಿಚಳೀ ನೀರೋ ಚಳ್ಳಂಡ್ಯೊ–
ಬರುತಾವೋ ಬ್ಯಾಗನ್ನರಿಯೇಳೋ ! '' ॥ ೫ ॥

ಕುರುಬ–

''ಹಾಸೀಗಿ ಹಾಸ್ಯೇತಿ ಕಾಯಿ ಗಿಡದ ಬುಡಕ
ಏಸನ್ನು ಲೆಕ್ಕಿಲ್ಲ ತಿನಹೋಗ–
ಬೇಸ್ಯೆಲ್ಲ ಬಂವಿಕೀಗೆ ತಡವ್ಯಾಕ ?'' ॥ ೬ ॥

ನಲ್ಲೆ–

''ಕಲ್ಲ ತಾಗಿದ ನೆಲ್ಲ ನಾಹೆಂಗ ತಿಂದ್ಯೇನ್ಯೋ ?
ಬಲ್ಲ ಕುರಿಗಾರವನ ಹರಿ ಏಳೋ–
ಬಲ್ಲಂತ ಬಾಲೀಗೆ–ನೀ ಏಳೋ'' ॥ ೭ ॥

ಕುರುಬ–

''ಮನಸಾಗಿ ಮನಗಿನ್ನೆ ಮಲ್ಲೀಗ್ಯೆಂತವಳನೀ
ತಡಿ–ಚಣಾ–ಕುರಿಲಿಕ್ಕ ಎದ್ಯೇನ್ಯೇ–
ಇನ್ನ ಚಣ ಹೊತ್ತೀಗೆ ಎದ್ಯೇನ್ಯೇ ! '' ॥ ೮ ॥

ನಲ್ಲೆ–

ಕುರಿಲಿಕ್ಕ ಮುಗ್ಯರೊಳಗ ಹರದಿತೊ ಕತ್ತಲಾ
ನೆರದಾವೊ ಕುರಿಹಿಂಡ ದಡ್ಯೆಂದ–
ಕರಿಗಾರ, ಲೆಕ್ಕನಿರಲ್ಯೇಳೋ'' ॥ ೯ ॥

ಕುರುಬ–

''ಲೆಕ್ಕಾ ನಾ ಬಿಡುವ್ಯೇನಿ ಲಕ್ಕಸಮಿಗುಲದವಳ
ಲಕ್ಕ–ಲಕಾ ಅನ್ನು ನಗಿ ನಕ್ಕ–
ಎಬಸ್ಯೇಳ ಹರದ ಕೊಡವ್ಯೇನ'' ॥ ೧೦ ॥

ನಲ್ಲೆ–

''ಒಂದ ನೆಲ್ಲೀಕಾಯಿ, ಬಂದೇನೆ ಬಂವಿಕೀಗೆ
ಚೆಂದಲ್ಲೊ ರಾಯ ಭಲೆ ನಿಮಗ–
ಹರಿ ಏಳರಿ ಬಂದು ಏಸ್ಯೇನ್ಯೋ !'' ॥ ೧೧ ॥

ಕುರುಬ–

''ಬಗರಿ ಮಲಿಮುಚ್ಯೇತೆ ಟಗರೀನ್ನೆಜ್ಜಿ ಕುಬಸಾ
ಚಿತ್ತಾರದ ಕಡಗ ಕೈ ಮುಂದ–
ತಾ ಬಾರ ನೆಲ್ಲಿ–ಜೆಲಿ ಜೆಲ್ಲಿ'' ॥ ೧೨ ॥

ನಲ್ಲೆ–

''ಬಂದ್ಯೋತ್ತಿಗ್ಗಿ ಹೇಳಿದರ ತಿಂದ ತಿರಗತಿನ್ನೆ
ಹಿಂಗ್ಯಾಕರೀರಾಯ ನಿಮ ಆಟ ? –
ಒಂದ ಸಾಕನ್ನೆ ಜ್ಯೋಕ ? '' ॥ ೧೩ ॥

ಕುರುಬ–

''ಒಂದಾರ ತಿಸುವಂತೆ ಎಡ್ಡಾರ ತಿನುವಂತೆ
ಹರತನ್ನಿ ಹಿಡಿಯ ದೊರಿ ಹೆಣ್ಣಾ–
ಕುರಿನಡಿವೆ ಬಾರ ಕೊಳಲಾಟ'' ॥ ೧೪ ॥

(ಸೂಚನೆ : ನುಡಿಯ ಎರಡನೆಯ ಸಾಲುಗಳನ್ನು ಎರಡು ಸಲ ಅನ್ನಬೇಕು.)

ಹಾಡು ಕೇಳಿ ಬರೆದುಕೊಂಡು ಉಳಿದ ಎರಡು ಸಿಗರೇಟುಗಳನ್ನು ಮುಗಿಸಿ ದಾರಿಗೆ ಬಂದೆವು. ಊರೂ ಬಂದಿತು. 'ಹಾಡಿದ ಹುಡುಗರು ತಮ್ಮೂರು ಮುಟ್ಟಬೇಕಾದರೆ ಇನ್ನೂ ತಾಸು ಬೇಕು ಪಾಪ' ಎಂದುಕೊಂಡೆವು. ಬೆಳದಿಂಗಳು ಬುವಿಗಿಳಿಯಲು ಹೊಂಚು ಹಾಕುತ್ತಿತ್ತು, ಹುಡುಗರೆಲ್ಲರೂ ತಮಗೆ ನೆನಪಿದ್ದ ಒಂದೊಂದೇ ಸಾಲನ್ನು ಎಳೆದುಕೊಂಡು ಸಾಗಿದ್ದರು. ನನಗೆ ಮತ್ತೇನೊ ನೆನಪಾಯಿತು. ಮೂರು ವರುಷದ ಹಿಂದಿನ 'ನಮ್ಮ ಬಾಳನ್ನು' ಪರೀಕ್ಷಿಸ ಹೊರಟು ಕೊನೆಗೆ ಒಂದು ನಿಟ್ಟುಸಿರು ಬಿಟ್ಟೆನಾದರೂ 'ನೆಲ್ಲಿಯಕಾಯಿಯ ರಸದೊರತೆ ನನ್ನೆದುರು ತನ್ನ ಶೆಲೆಯನ್ನು ಹಚ್ಚಿಸುವುದರಲ್ಲಿಯೇ ಇತ್ತು, ಕೊಳಲಾಟ ಮುಗಿಯದಂತೆ ಸಾಗಿತ್ತು, ಇನ್ನೊಮ್ಮೆ ನಾವು ನೆಲ್ಲಿಯ ಕಾಯಿ ತಿನ್ನುವಾಗ ಕುರುಬ ದಂಪತಿಗಳ ಚಿತ್ರವ ನಮ್ಮ ಮುಂದೆ ಮೂಡಿದರೆ ಸಾಕು. ಮತ್ತೇನನ್ನು ಬಯಸಲಿ ?

'ಜೀವನ' ಅಕ್ಟೋಬರ್ ೧೯೪೭.

□□

ರಾಯಾಪೂರದಲ್ಲಿ ಸಂಗ್ರಾಹಕ

ನುಡಿಯ ಭಕ್ತರೇ,

'ಜನಪದ ಸಾಹಿತ್ಯ ಕೀ ಜಯ್' ಎನ್ನಿರಿ, ಮೊದಲು ಒಕ್ಕೊರಲಿನಿಂದ. ಆಮೇಲೆ ಸಂಗ್ರಾಹಕನ 'ಸಲಾಂ' ಸ್ವೀಕರಿಸಿರಿ, 'ಸಲಾಂ–ರೂಢಿ' ನಾನು ಹುಬ್ಬಳ್ಳಿಯ ಹಾಯ್ ಸ್ಕೂಲಿನಲ್ಲಿ* ಕಾರಕೂನನಾಗಿದ್ದಾಗ ಬಿತ್ತು, ಇನ್ನೂ ಮರೆಯುವುದಾಗಿಲ್ಲ, ಹೇಗೆ ಮರೆಯಲಿ ?– ಅಲ್ಲಿ ನಾನು ಕೆಲಸ ಮಾಡುವ ಯೋಗ ಒದಗದಿದ್ದರೆ ರಾಯಾಪುರದ ಹಾಡುಗಳ ಅರಿವು ನನಗಾಗುತ್ತಿರಲಿಲ್ಲ.

'ನವಿಲೂರೆಲ್ಲಿ ? ರಾಯಾಪುರವೆಲ್ಲಿ ? ಏನು ದೊಡ್ಡಮನಿಯ ಹುಚ್ಚು ? ಎಂದೆಲ್ಲ ನಗೆಯಾಡಬೇಡಿ. ರಾಯಾಪುರ ನವಿಲೂರಿನಿಂದ ಮೂರೇ ಮೈಲು ದೂರ. ಅಪ್ಪಿ ತಪ್ಪಿ ನಮ್ಮೂರಿಗೆ ಬರುವಿರಲ್ಲ,–ಆಗ ನಿಮಗೆ ರಾಯಾಪುರದ ದರ್ಶನ ಮಾಡಿಸುತ್ತೇನೆ.

೧೦–೧೫–೧೯೪೬. ನವಿಲೂರು ಬಿಟ್ಟು ಮುಂಜಾನೆ ವಾಯುವಿಹಾರಕ್ಕೆಂದು ಹೊರಟೆ, ರಾಯಾಪುರದತ್ತ, ಬೆಳಗಿನ ವಾತಾವರಣಕ್ಕೆ ಮೆಚ್ಚಿ ರಾಯಾಪುರವನ್ನೂ ಮುಟ್ಟುವಷ್ಟು ದೂರ ನಡೆದಿದ್ದೆ. ಸನಿಹದ ಹೊಲದಲ್ಲಿ 'ರಸಿಕ 'ನೊಬ್ಬ ಹಾಡುತ್ತಿದ್ದ. ಮೋಟಾರ ಪಾಸ ಬುಕ್ಕು ಜೇಬಿನಲ್ಲಿತ್ತು. ಮಸಿ ಕಡಿಮೆಯಾಗಿ ದಳದಳ ಇಳಿದು ಬರುವಂತಹ ಸ್ಥಿತಿಯಲ್ಲಿದ್ದ Pen ನ್ನೇ ಉಪಯೋಗಿಸಿ ಬರೆದುಕೊಂಡೆ. ಹಾಳೆ ಬರೆಯುವಾಗ ಒಡೆದು ಹೋಯಿತು. ಇಂದು ತಿರುಗಿ ಹಾಡು ನಕಲು ಮಾಡುವಾಗ, ನನಗೆಷ್ಟು ತೊಂದರೆಯಾಗಿದೆಯೋ ನೀವೇ ಊಹಿಸಿ. ಹಾಳೆಯ ಒಡಲ ಗುಟ್ಟನ್ನು Research ಮಾಡಿದ್ದಕಾಗಿ ನನಗೆ ನೀವು 'Fees' ಕೊಡುವುದಿಲ್ಲವೇ ? ನಾನಂತೂ ಬಿಡುವುದಿಲ್ಲ.

ಜೀವನದ ಆಸರಕ್ಕೆ ಹಾಡುಗಾರನಿಗೆ– ಮೊದಲು ಹಾಡಿದವ–ಹೆಣ್ಣು ಜೀವನದ ನೆರವಿಲ್ಲ. ತಾಯಿಯೇ ? ತಂಗಿಯೇ ? ಮಡದಿಯೇ ? ಇಲ್ಲ–ಒಬ್ಬರದೂ ಇಲ್ಲ. ಹುಟ್ಟಿನಿಂದಲೂ ಈ 'ಇಲ್ಲ' ಎನ್ನುವ ಕೊರವನಿಗೆ. ದಿನವಿಡೀ 'ಉಳಿದವರು ಜೀವನವನ್ನು ನಂದನವನದ ಮಟ್ಟಕ್ಕೇರಿಸುವ' ಬಗೆಯನ್ನು ಅವನು ಕಂಡು, ಬಹಳವಾಗಿ ಹೈರಾಣಗೊಳ್ಳುತ್ತಿರುವನಾದರೂ 'ಹಾಗೆ ಇಲ್ಲ–ಹೀಗೆ ಇಲ್ಲ' ಎಂದು ತೋಡಿಕೊಳ್ಳುವುದರಲ್ಲಿಯೇ ತೊಡಗಿದ ಅವನ ಕದಡಿದ ಜೀವನ, ನುಡಿಗೆ ಬೆಡಗಿತ್ತು ಹಾಡಿ ಕೊಂಡಿದೆ–ಕೇಳಿ :

''ಕಳ್ಳೀ ಸಾಲ್ನೊ ್ಯಲದಾಗ ಸುಣ್ಣ್ಯಳ್ಳೀ ಬಿತ್ತೀರೋ
ಕಲ್ನಾರ ಬ್ಯೇಲೋ–ವಾರ್‍ಯಾಗ ಹಾದ್ಯೋ
ಕರ್‍ಯಕೊಂತ ನನ್ನ ಗುಡ್ಡದ ಕೆರಿ ದಾಟ್ಯೋ
ಗಂಟ್ಹೊಂತು ಗೊಂಡೋ–ಬರನ್ನಿಲ್ಲೋ ಬಾಲ್ಯೋ'' ॥ ೧ ॥

---

*. ಅಂಜುಮನ್ ಎ ಇಸ್ಲಾಂ ಹೈಸ್ಕೂಲು, ಸ್ಟೇಶನ್ ರಸ್ತೆ (ಸುದರ್ಶನ ಟಾಕೀಜಿನೆದುರು) ಇತ್ತು. ಶಿವೇಶ್ವರ ಇಲ್ಲಿ ಮೂರು ತಿಂಗಳು ಕಾಲ ಗುಮಾಸ್ತೆಯಾಗಿದ್ದರು.

(ಅವಸರದಲ್ಲಿ ಮರೆತುಬಿಟ್ಟೆ, ಕ್ಷಮಿಸಿ, ನುಡಿಯೊಂದರ ೨–೩ನೆಯ ಸಾಲುಗಳನ್ನು ಎರಡೆರಡು ಸಲ ಎಳೆದು ಹೇಳಿ)

'ಚ್ಯೆಂಜಿಕ್ವೀರೀ ಹೂವೋ, ಮುಂಜ್ಯೇಲ್ಯಕ್ಕೀ ಹೂವೋ
ಕಡ್ಲೋನಗಿ ಬಣ್ಣಾದ್ಹೂವಳ್ಳೀದಾಗೋ–
ಪಡ್ಲ ದಿಕ್ಕಿನ್ಯಾಗೋ ಹೂವಳ್ಳುವಾಗೋ–
ಮನಿಗೆ ಕರಕೊಣ್ಣೊ ಮಡದ್ಯಿಲ್ಲೋ ಜನಮಾ' || ೨ ||

'ಹರಿಹೊತ್ತಿನ್ಯಾಳೇವ್ಕ ಹೊಚ್ಚಲಾ ಹಾವುವಾಗೋ
ಬಾಗಲಾ ತೋಳುವೂವು ಎಳಿದ್ಯೋಳಿನವ್ಯೋ–
ರ್‍ಯೇಶಿಮಿ ತೊಟುಗೊಂಡೋ–''ನವ್ಲ ಗರಿ ಕುಬ್ಸೋ
ದೂರಿ ನೋಡನ್ನಾಕ್ಯೋ''–ಸರಿ ನಾರ್‍ಯಿನಿಲ್ಲೋ || ೩ ||

'ಬಂದ್ಯೇನೋ ಮಗ'ನನ್ನು ಮನಿಯ್ಯಾಗ್ತಾಯಿನ್ನಿಲ್ಲೋ
ತಂದ್ಯೇಸ್ಯೆಂದಾರೋ–ಆಟ್ಟಡಗಿನಿಲ್ಲೋ–
ಕೇಳ್ಯೇನನ್ನಾಕೋ'–ಬಳಿ ಸಪ್ಪಾನಿಲ್ಲೋ–
ಚಾಳೀಯ್ಯೊನದಾಗೋ–ಬದಕಾದ್ಯೋ–ಮುಳವಾ || ೪ ||

'ಹೂವ ತಾರಣಯ್ಯಾ, ಅಮ್ಮಾ–ಅವ್ವನ ಮುಂದೋ
ತಂಗೀ ನಸ್ಟೆಸರ ಹೇಳ್ಯಿ ಮಡದ್ಯೀಗೋ–
ಯಾತದು ತ್ವಾಟಾದ ಚಿಂತ್ಯಾಕ'ನುವಂತಾ
ತಂಗೆವ್ವಾನಿಲ್ಲೋ–ಕಂಗಾದ್ಯೋ–ಜನಮಾ || ೫ ||

ಹ್ಯೆಂಗಾರಾ ಹಿಡಕೊಣ್ಯೋ–ನುಂಗ್ಯಾಡೋದಿನಕೊಮ್ಮೆ
ಲೋಕದ್ಹಂಗಿರುವೂ–ಬಿಗಿದುಕ್ಕಾ ಜನಮಾ.
ಜ್ಯಾತೂರಿ ಊರಾದ್ಯೋ ಇನ್ಯಾದ್ದ್ಯೇದ ದಿನಕೋ–
ಕಣ್ಣೀನ್ಹನಿಯಾಕೋ–ನಿನಗ್ಯಿಂಥ ಜನಮಾ ? || ೬ ||

ಇದನ್ನೆಲ್ಲ ಬರೆದುಕೊಳ್ಳುವಾಗ್ಯ ನನ್ನ ಕಣ್ಣುಗಳಲ್ಲಿಯೂ ನೀರು ತುಂಬಿತು–ನನಗೂ ಅಕ್ಕ ತಂಗಿ ಇಲ್ಲವೆಂದು ನಿಟ್ಟುಸಿರೆಳೆದೆ. ಊರಿಗೆ ಮರಳಿ ಬರುವಾಗ–ಮೂರು ದಿನ ಊಟಕಟ್ಟಿಕೊಂಡು ತಿರುಗಿದರೂ ದೊರೆಯಲಾಗದಂತಹ ಹಾಡು–ಆಕಸ್ಮಾತ್ತಾಗಿ ದೊರೆತ ಉಬ್ಬಿನ ಪರಿಣಾಮವಾಗಿ ನಾನೂ ಹಾಡಿಕೊಂಡೆ :

'ನೋವ ತುಂಬ ಇಡು, ನೂರು ಜನ್ಮಕೊಡು,
ಓ, ಅಳಿಸಲೆನ್ನ ಗೋಳು–
ಇಲ್ಲಿ ಹಾಡುವರು– ನನ್ನ ನಾಡವರು
ನಾ ತುಂಬಿಕೊಳುವೆ ಬಾಳು'.

ದೇವರು ನನಗೆ ನೂರು ಜನ್ಮಕೊಟ್ಟಾಗ, ನನ್ನ ಹಾಡು ಸಾರ್ಥಕವಾದೀತು. ಹೋಗಲಿ ನನ್ನ ಹಾಡು ನನಗಿರಲಿ. ಮೇಲಿನ ಹಾಡು ಕೇಳಿದಿರಾ ? ಹಾಡುಗಾರನಿಗೆ ಧನ್ಯವಾದಗಳನ್ನರ್ಪಿಸಿರಿ—ನನಗೆ ಬೇಡ—ಏಕೆನ್ನುವಿರಾ ? ನಾನು ಸಂಗ್ರಹಿಸಲೆಂದೇನೂ ಅಂದು ಇಟ್ಟುಕೊಂಡಿರಲಿಲ್ಲ. ಅದಕ್ಕೇ ಕೇಳುತ್ತೇನೆ—ನಾನು ಮಾಡಿದ 'ಕಸರತ್ತು' ಏನಿದೆ ? ಎಂದು.

ಹರಕೆ ಕೊಡಿರಿ, ಬರುತ್ತೇನೆ—ಮತ್ತೆಲ್ಲಿಯಾದರೂ ಜನಪದ ಸಾಹಿತ್ಯದ ಬಾವುಟ ಏರಿಸಿ.

''ಇತಿ, ಇತಿಮಿತಿಯ'' ಸಂಗ್ರಾಹಕ.

'ಜಯಂತಿ' ಆಗಸ್ಟ, ೧೯೪೭.

□□

ಸಣ್ಣಕತೆ

ರಾಜಮಾ

ದಿನದಿನವೂ ಕೊರಗುತ್ತಿರುವ ಈ ನನ್ನ ಆಸೆಯ ಹೊನಲು ಗಂಗೆಯ ಗತಿಯಾಂತು ನುಡಿಗಡಲಿಗೆ ಕೂಡಲೆಂದು ಹರಿಯುತ್ತಿದೆ : ಹಳ್ಳಿಗರ ನೈಜರೀತಿಯ, ಮಹಾಮತಿಯ ದೀಪಗಂಬಗಳನ್ನು, ನುಡಿಗೊಲಿದವರು ಆ ಹಿರಿ ನೀರನಿಧಿಯುದ್ದಗಲಕ್ಕೂ ಹೃದಯ ಕೌತುಕದ ನೌಕೆಯನ್ನೇರಿ ಸಂಚರಿಸುವಾಗ, ಬೆಳಕೀಯಲು ಅಮಿತ ಸಂಖ್ಯೆಯಲ್ಲಿ ನಿಲ್ಲಿಸುತ್ತದೆ.......ಈಗಿನ ನನ್ನ ಹವಣಿಕೆಗೆ ಈ ನೆಲ ಹರಕೆಯ ಆಸರೆ ಕೊಡಲಿ... ಸಾಕು.....ಹಳ್ಳಿಯ ಸಂಜೀವಿನಿಯಂತಹ ಹಾಡುಗಳನ್ನು ಸಂಗ್ರಹಿಸುವುದೊಂದೇ ನನ್ನ ಆಜನ್ಮದುದ್ಯಮವಾಗಿರಲಿ....ಇದನ್ನುಳಿದು ಇನ್ನೊಂದುತನ ನನಗೆ ಸೇರದು...

ಎಂದಿನಿಂದಲೋ ಹೀಗೆಯೇ ಪೂಣ್ಕೆಗೊಳ್ಳುತ್ತಿದ್ದ ನನ್ನ ಬಗೆ ಒಮ್ಮೆ ದಿಗಿಲುಗೊಳ್ಳಬಾರದಾಗಿದ್ದ ರೀತಿಯಲ್ಲಿ ದಿಗಿಲುಗೊಂಡಿತು.

ಜೀವ ಆಗ ರೊಚ್ಚಿಗೆದ್ದು, ಹುಚ್ಚಿಗೆದ್ದು, ಬಡಬಡಿಸುತ್ತಿತ್ತು.

'ಕಿವುಡ ಕಿಚಡಿ ಬೇಡಿದರ, ಗೌಡ ಹಚಡಾ ಕೊಟ್ಟನಂತ !'

ನುಡಿಯ ಸೇವೆಯನ್ನು ಮಾಡಿ ಹಳ್ಳಿಯ ಗೌಡರಂಥ ಸ್ಥಾನಮಾನಗಳನ್ನು ಗಳಿಸಿಕೊಂಡ ಸಾಹಿತ್ಯದ ಜನಕರಿಗೆ, ನನ್ನ ಹಸಿವನ್ನು ಅರಿಯಲಾಗಲಿಲ್ಲ ; ನನ್ನ ಭಿಕ್ಷೆಯ ರೂಪದ ಮಾತುಗಳಿಗೆ ಪ್ರತಿಯಾಗಿ ನಾನು ಅವರಿಂದ ಪಡೆದುಕೊಂಡ ಮಾತುಗಳು ನನ್ನ ಕಿವಿಯನ್ನು ಗಡಚುಗೊಳಿಸಿದವು.........ಮೈಗೆ ಅಂಜಿಕೆಯ ನಂಜು ಬೆರೆಸಿದವು.

ಅವ್ವ, ಮೂರು ವರುಷದ ನನ್ನ ಸಂಗ್ರಾಹಕನಾದ ಗುಣವನ್ನು ವಿಮರ್ಶಿಸಿ, ನೂರಾರು ಸಿಟ್ಟುಸಿರುಗಳೊಂದಿಗೆ :

''ಮೂಳಾ, ನಿನ್ನ ಹಣ್ಯಾಗ ನೌಕರೀ ಮಾಡಾದ ಬರದೈತಿ ; ಮುನ್ನೂಽಡಿಂದ ನನ್ನ ಮಾತು ಕೇಳಬಾರ್ದ್ಽ ?''

ಎಂದು ನನ್ನ ಕೈಗೆ ನೌಕರಿಗೆ ಅರ್ಜಿ ಬರೆಯುವ ಆಣತಿಯಿತ್ತಳು...... ಸಂಗ್ರಾಹಕ ನಾಗಿಯೇ ನಾನು ಗಳಿಸಲಾರೆನೆಂಬುದನ್ನರಿತು........

ನಾನು ಚಿತ್ರಿಸಿಕೊಳ್ಳುತ್ತಿದ್ದ ಕಡಲು ಬತ್ತಿ ನೈರಾಶ್ಯ ತನ್ನ ನಿಗ್ಗರದ ಬಾವುಟವನ್ನೆತ್ತಿ 'ನನ್ನಡಿಯ ಪೂಜೆ ಗೈ' ಎಂದಿತು. 'ನೀನು ಹೀಗೇಕಾದೆ ?' ಮೂಕತನ ನನ್ನನ್ನು ವಿಕಟ ದನಿಯಿಂದ ಪೀಡಿಸತೊಡಗಿತು. ಮನಸ್ಸು ಯಾರು ಯಾರನ್ನೋ ಕಟುವಾಗಿ ಟೀಕಿಸುತ್ತಿತ್ತು. ನನ್ನ ಕಣ್ಣಿನ ಕನಸು ನನ್ನಾಸೆಗೆ ಕ್ಷಮಿಸೆಂದು ಕೈಯೊಡ್ಡಿ ಬೇಡಿಕೊಳ್ಳುತ್ತಿತ್ತು.

1944 ರ ಮೇ ಮೊದಲ ದಿನ–ಸರಕಾರ ಅಂದು ನನಗೆ 'Rationing Enumerator' ಎಂದು ತನಗೆ ತಿಳಿದಂತೆ ನಾಮಕರಣ ಮಾಡಿತು. ಈ ಸುದ್ದಿಯನ್ನು ಕೇಳಿದ ತಾಯಿಗೆ ಅಂದು ಸಮಾಧಾನವಾಗಲಿಲ್ಲ. ಒಂದೇ ಒಂದು ಆಳುನುಡಿಯೊಡನೆ : ''ನಿನ್ನ

ಹಡದಾಂವಾ ಇಲ್ಲಿ ತನ್ನಾ ಬದಕಿ........'' ಸರಕಾರವನ್ನೋ......ಇನ್ನಿತರರನ್ನೋ ಶಪಿಸಿದಳು. ಆ ಶಾಪದ ಸಹಸ್ರ ಪ್ರತಿಗಳನ್ನು ಎಸೆದೆ.......ಯಾರೂ ತೆರೆದು ಓದಲಿಲ್ಲ.

ನನ್ನ ದಿಕ್ಕು ತಪ್ಪಿತು. ನವಿಲೂರನ್ನು ಸುತ್ತುಗಟ್ಟಿದ ಹೊಲ ಹಳ್ಳಿಗಳು ನನ್ನ ಪಾಲಿಗೆ ಎರವಾದವು. ನನಗೊಂದು ಕುತ್ತಾಗಿ ಪರಿಣಮಿಸಿ ಈ ರೇಶನಿಂಗ್ ಕೆಲಸ ನರನಾಡಿಗಳನ್ನು ಹಿಂಡಲೆಳಸಿತು. ಬೇಡಾದ ಬಾಳಿಗೂ ಓಗೊಟ್ಟು ಅಡ್ಡದಾರಿಯನ್ನೇ ಹಿಡಿದೆ. ಅದೇ ಮೊದಲು, ಅದೇ ದಿನ, ಅಸಹಾಯಕನಾಗಿ ಸಂಗ್ರಹದ ಹೊಣೆಗೆ ಎರಡು ಬಗೆದೆ, ಗೋಗರೆದೆ.

ನನ್ನ ಗುರಿಯ ದಾರಿಯ ತುಂಬ ಚೂಪುಗಲ್ಲುಗಳು.....ಗೊನೆಮುಳ್ಳುಗಳು–

'ಯಾರಿರಿಸಿದರು ಕಾಡಿನ ಒಡಲಿಂದಿಲ್ಲೀಗೆ ತಂದು ?'

ಮೌನ–ಚಡಪಡಿಕೆಗೆ ಯಾವ ತೃಪ್ತಿಯೂ ತಾಗಲಿಲ್ಲ–ಬಾಗಲಿಲ್ಲ.

ಈ ಮಿಡಕಿನೊಂದಿಗೆ ಮತ್ತೊಂದು ವಿರಸ–ಜಸಕತೆ ಜತೆ ಬೇಡಿತು. ಅದಕ್ಕೂ ಎದೆ ಸೀಳಿ, 'ಇದೋ ಇಲ್ಲಿ–ನಿನಗೂ–ತಾಣ ಬೇಕಷ್ಟಿದೆ. ಬಾ ; ಒಳಸೇರು !' ಎಂದೆ, ಔತಣವಿತ್ತೆ.

ಧಾರವಾಡದಲ್ಲೆಲ್ಲ ತಿರುಗಾಡಿ ಮನೆಮನೆಯ ಜನಗಣನೆ ಮಾಡುವ, ಡಾಂಬರಿನಿಂದ ಬಾಗಿಲುಗಳಿಗೆ ನಂಬರು ಹಾಕುವ ನಮ್ಮ ಕಾರ್ಯ ಪ್ರಾರಂಭವಾಯಿತು. ಅನ್ಯಮನಸ್ಕನಾಗಿ ಕೆಲಸ ಮಾಡುವ ನನ್ನನ್ನು ಅಧಿಕಾರಿಗಳು ಹಾಗೆಂದು, ಹೀಗೆಂದು ಹೀಗಳೆಯಲಾರಂಭಿಸಿದರು ಒಂದು ವಾರದೊಳಗಾಗಿಯೇ.

ಹತ್ತೊಂಬತ್ತು ವರುಷದ ತನ್ನ ಮಗ, ತನ್ನೆದೆಯ ಬೇಗೆಯನ್ನು ನೀಗಿಸಿಕೊಳ್ಳಲು, ತನ್ನ ನೋವುಗಳನ್ನು ಮಾಗಿಸಿಕೊಳ್ಳಲು, ಮತ್ತೊಂದು ಬೇರೆ ಯಾವ ವಿರಕ್ತಿಯೂ ತೋಚದೆ, ದಿನದಿನಕ್ಕೆ ಹೆಚ್ಚಿದಂತೆ, ತಾಸಿಗೆ ಎರಡು ಮೂರು ಸಿಗರೇಟ್ ಸೇದುವ ಕಲೆ ಕಲಿತುದನ್ನು ತಾಯಿ ಕಾಣಬೇಕಾಯಿತು.

''ನೀನಿನ್ನು ನನಗೆ ಹೊರತಾದೆ....''

''ನೀನು ಹುಟ್ಟಿದ ಮನೆ ಬೆಳಗಲಾರೆ..''

''ಬಾಳಲಾರೆ.....''

''ನೀನು ನನ್ನ ಕೈಮೀರಿದೆ....''

ಇದೇ ಪಲ್ಲವಿಯ, ಇದೇ ಪರಿವಿಡಿಯ, ಉದ್ಗ್ರಂಥವೊಂದು ನಾನೆಷ್ಟು ಓದಿದರೂ ಮುಗಿಯದಂತಾಗಿ ತಾಯಿಯ ಬೃಹತ್ ಭಾಷೆಯಿಂದ ನೆರವು ಪಡೆದು ನವಿಲೂರ ಮನೆಯಲ್ಲಿ ರೂಪುಗೊಳ್ಳುತ್ತಿತ್ತು.

ಆದರೂ ''ಯಾವದರಾ ಕೆಲಸಿರ್ಲಿ ಒಪ್ಪುಡತ ಮೀರಿತೆಂದ್ರೆ ಕಠೀಣಾ. ಮತ್ತ ಮುಂದ ಮಾಡೂದು'' ಎಂದು ಹೇಳುವ ತಾಯಿಗೆ, ಮತಿಗೆಟ್ಟಂತಾದ ನನಗೆ ನಗೆಯುಳಿಸಿಕೊಡುವ ಹಂಚಿಕೆ ತೋರುವ ಚಿಂತನ ಇತ್ತು ಮನೆ ಮಾಡಿಕೊಂಡು.

ಇವು ನನ್ನ ಹುಸಿದಿನಗಳು– ಈ ದಿನಗಳನ್ನು ಪಚನಿಸಿ ನಾನು ಏನನ್ನೂ ಸಾಧಿಸಲಾರೆ. Rationing Enumerator ಆಗಿ, ಹುಟ್ಟು ಗುಣವನ್ನು ಕಟುಕನಂತೆ ಮೆಟ್ಟಿ, ಹೃದಯ

ಗುಡಿಗೆ ತೊತ್ತಳಿದುಳಿಯುವ ತೊಡಕುಗಳ ತೋರಣ ಕಟ್ಟಿ; ನಾನು ಏನೂ......
ಇಲ್ಲ.....ಬದುಕಿಗೆ ಕತ್ತಲೆ ಅವರಿಸಲಿನ್ನು ಬಹಳ ದಿನ ಬೇಕಿಲ್ಲ..ಅದಕ್ಕೆಂದೇ ಕತ್ತಲೆಯ ಕುರುಹಾಗಿ ನಾವು ಬಳಸುವ ಡಾಂಬರಿನ ಹನಿಗಳು ನನ್ನ ಅರಿವೆಯ ಮೇಲೆ ಬಿದ್ದು ಬಿದ್ದು ಮುಖಕ್ಕೆ ಕಪ್ಪು ಬಳಿಯುವಂತಾದಾಗ ಇವೇ ಸಿಂದಿಯ ಕುಂಚದಿಂದ–ಸರಕಾರ ಗುತ್ತಿಗೆ ಹಿಡಿವ ಇದೇ ಕೈಯಿಂದ....ಹಿಂದೆ ಸಂಗ್ರಹಿಸಿದ ನುಡಿಗಳನ್ನು ಮನೆಮನೆಯ ಚೌಕಟ್ಟಿಗೆ ಬರೆದುಬಿಡಲೆ ? ಎನ್ನುವಂತಾಗುತ್ತಿತ್ತು. ಚಣ ಚಣಕ್ಕೂ Supervision ಮಾಡುತ್ತಿದ್ದ Senior Inspector ರ ಸುಳಿದಾಟ ನನ್ನ ಬಯಕೆಗೆ ತಡೆಯೊಡ್ಡುತ್ತಿತ್ತು.

ನನ್ನ ಇತಿಮಿತಿಯನ್ನು ನಿರೀಕ್ಷಿಸುತ್ತಿದ್ದ ಕಣ್ಣು ನನ್ನನ್ನು ಅಣಕಿಸಲು ಉದ್ಯುಕ್ತವಾದವು. ಅಕರಾಳ ವಿಕರಾಳತೆಯ ಅಂತರಾಳ ಬೆಂತರಕುಣಿತ ನಡೆಸಿತು.

ಉದಯರವಿಯೊಂದಿಗೆ ಕೆಲಸಕ್ಕೆ ಪ್ರಾರಂಭವಾದರೆ ಉದಯಚಂದ್ರನ ಬರವನ್ನು ಕಂಡೇ ನಾವೆಲ್ಲ ಮನೆ ಸೇರುತ್ತಿದ್ದೆವು. ಒಂದೊಂದು ದಿನ ಆಫೀಸಿನಲ್ಲಿಯೇ ಇರುಳು ಕಳೆಯಬೇಕಾಗುತ್ತಿತ್ತು. ಮಾಡುವ ಕೆಲಸ ಬಹಳಿರುತ್ತಿರಲಿಲ್ಲ. ಆಫೀಸರಿಗೆ ಹೊಸ ಯೋಜನೆಯ ಹದಗಾಣುವುದೇ ಬಿಗಿಯಾಗಿ ಬಂದಿತ್ತು.

ಅನಿಯಮಿತ ಚಟುವಟಿಕೆಗಳ ಪರಿಣಾಮವಾಗಿ ನನ್ನ ಸಹೋದ್ಯೋಗಿಗಳ ನೌಕರಿಗೆ ಬೇರೆ ಬೇರೆ ಬಗೆಯ–ಮೊದಲಿದ್ದ–ರೋಗಗಳೇ ಬಲಿಯತೊಡಗಿದವು–ನನಗೆ ಹುರುಕು ತನ್ನ ಮುದ್ರೆಯೊತ್ತಿತ್ತು.

ಅವ್ವನ ಸೋಲರಿಯದ ಕಣ್ಣಿಗೆ ನನ್ನನ್ನು ಈ ಸ್ಥಿತಿಯಲ್ಲಿ ಕಾಣುವ ಆಸೆಯಿರಲಿಲ್ಲ. ಒಂದೆರಡು ವಾರದ ಅವ್ವನ ದೀರ್ಘ ವಿಚಾರದ ಫಲವಾಗಿ ನನಗೂ ಒಂದು ಹೊಸ ಯೋಜನೆ ದೊರಕಿತು. ಅವ್ವ ನನ್ನನ್ನು ಕೇಳಿದಳು:

''ಹಿಂಗ ರಣಾರಣಾ ಮಾಡಬ್ಯಾಡ ಸುಮ್ಮನ ನೀನಂದೂ, ನಿಂದೂ ಮನಸು. ನಿನಗೊಂದ ಹಂಚಿಕೀ ಹೇಳಲ್ಯಾ ?''

''ನನ್ನವೆಲ್ಲಾ ಹಂಚಿಕಿ ಮಣ್ಣಾಗ್ಗಿ...''

''ಹಂಗ ಸಿಟ್ಟಿನ ಕೂಡ ಓಡೂದಲ್ಲದು, ಕಿಂವ್ಯಾಗ ಹಾಕ್ಕೋ–ನಾ ಹೇಳೂದರಾ ಕೇಳ ಮೊದಲ......ಬರೇ ನಿನ್ನ ಹಟಾನ ಹಿಡೀಬ್ಯಾಡ. ಧಾರವೋಡ್ದಾಗ ಅಡ್ಯಾಡುವಾಗ ಯಾರ್‍ಯಾರ ಹಾಡ್ತಾರನ್ನೂದರ ಗುರ್ತ ಆಗೂದುಲ್ಲ ತೀರ. ಹಂತಾ ಮನೀ ನೋಡಿ ಇಟ್ಗೋ....ಕೆಲ್ಸ ಮುಗ್ದಿಂದ ಹೋಗಿಕೇಳಿ ಬರಕೋ....ಬೇಕಾದ್ರ ನಮ್ಮವ್ವ ಹೇಳ್ಯಾಳ ಹಂತೇಳು...ಯಾರೂ ಒಲ್ಯೆನ್ನೂದುಲ್ಲಾ ಮನಿಮುಟ್ಟ ಹೋಗಿ ಕೇಳಿದ್ರ.........''

''ಕೆಲಸ ಮುಗ್ಯೂದ ಇಲ್ಲಾ....ಮುಗದಿಂದರಾ ಎಲ್ಲೆ ಉಳೀತ್ತೈತಿ ಹೊತ್ತು?...''

''ನೀ ಏನ ಊರಿಗೆ ಬರಬ್ಯಾಡಾ. ಸಾಯಕಲ್ ಐತಿ. ದಿನಾ ಇಷ್ಟಮಂದಿ ದಾರೋಡ್ಕ ಎಡತಾಕ್ತಾರು...ಯಾರ್‍ಯರ ಕೈಯಾಗ ರೊಟ್ಟೀ ಕೊಟ್ಟ ಕಳಿಸ್ತೇನಿ....ಅಲ್ಲೇ ಇಧ್ಬಿಡು...ಅಂದ್ರರಾ ನಿನಗ ಮನಸ ತುಂಬತೈತಿ....ಚಂಡಾಳಿ ಗುಣಾ...ಪಂಟ

ಓದಬ್ಯಾಡಾ....ಇಷ್ಟನಕೀ ನನಗ ಹೊಳೀತು...ಹೇಳದ್ನಿ...ಇನ್ನ ಇಲ್ಲದ್ದ ಎಲ್ಲಿಂದ ಬರಬೇಕು....ನಾ ಏನರಾ...!''

ತಾಯಿಯ ಕರುಳಿನ ಕರುಣೆಯ, ಸಲಹೆ ಶಕ್ತಿಯ ನುಡಿಗಳನ್ನಾಲಿಸಿ, ನನ್ನ ಹೃದಯ ಹಗುರಾಯಿತು. One at a time ಅಲ್ಲ... Hitting two birds with one stone ಎಂದು ಹಿಗ್ಗಿದೆ.

ಅವ್ವನ ಅಮೃತವಾಣಿಯನ್ನೇ, ಅವ್ವನ ಧ್ಯೇಯ–ಧೈರ್ಯಗಳನ್ನೇ ಆಸರೆಗೆ ಕೊಂಡು ತಣಿಯಲೆತ್ನಿಸಿದೆ.

ಜೀವಕೊಟ್ಟ ತಾಯಿಗೆ ನನ್ನನ್ನು ಹೇಗೆ ಮುದಬೀದಿಯಲ್ಲಿ ಮುನ್ನಡೆಸಬೇಕೆಂಬುದು ಗೊತ್ತಿಲ್ಲದಿರುತ್ತದೆಯೇ ?

''ಇಲ್ಲ..ಬಿಡಬೇ....ನಾ ಈ ನೌಕರೀನ ಒಲ್ಯಾ..''

ಎಂದು ದನಿಯೆಳೆದಿದ್ದರೆ ಅವ್ವ ನೊಂದುಕೊಳ್ಳುತ್ತಿದ್ದಳು. ತಾಯಿಯ ಹಂಚಿಕೆಯ ಪಾಲನೆಗೆ, ನನ್ನ ಜೀವ ಮತ್ತೆ ಹುರಿಗೊಂಡಿತು.

ಅವ್ವ ಬೀಸುವಾಗ ಹಾಡುತ್ತಿದ್ದ ಒಂದೊಂದೇ ನುಡಿಗಳು ನನಗೆ ಬಲಗೊಡಲು ಮುಂದೆ ಬಂದವು. ''ಇದೋ ನೀನು ಹೀಗೆ ಹೆಜ್ಜೆಯಿಡಬೇಕು...ಅಲ್ಲಿ ಒಂದು ಮನೆಯಿದೆ...ಅಲ್ಲಿ ಹಿಂತವರು ಹಾಡುತ್ತ ನಿನ್ನನ್ನು ಕೂಗಿ ಕರೆಯುತ್ತಾರೆ...ಅಲ್ಲಿಗೆ ಹೋಗು'' ಎಂದವು. ಮಾರ್ಗದರ್ಶನದಲ್ಲಿ ನನಗೆ ನೆರವಾದವು.

ಮೇ 44-ಜುಲೈ 44-ಸರಕಾರದ ಸೊತ್ತಾಗಿ.....

ಮೂರು ತಿಂಗಳಿನಲ್ಲಿ ಎಷ್ಟೋ ಹಾಡು ಸಂಗ್ರಹಿಸಿದೆ. ಕಡಲೆದೆಯ, ಕಲ್ಲೆಡೆಯ ನಾಡ ತಾಯಿಯ ಹಾಡಿನ ತೊಟ್ಟಿಲಿನಲ್ಲಿ ಮತ್ತೊಮ್ಮೆ ಶೈಶವ ಸಂಭ್ರಮವನ್ನು ಕಂಡೆ. ಆ ದಿನಗಳ ನನ್ನ ಮನೋರಾಜ್ಯದ ರಾಜ್ಯಶ್ರೀ–ರಾಜಮಾ !

ಉಳಿದ ಹಾಡುಗಾತಿಯರನ್ನೂ ಮೀರಿಸುವ, ನನ್ನನ್ನು ಅರಿತು ಅಳಿದು ಹೋದ ತನ್ನ ಒಬ್ಬನೇ ಮಗನೆಂದು ನನ್ನನ್ನು ಭಾವಿಸಿ, ಸಂತಸದಿಂದ ಬರಮಾಡಿಕೊಳ್ಳುವ, ಹಾಡುವ ನುಡಿಯೊಂದೊಂದರಲ್ಲಿಯೂ ನಾಡು–ನುಡಿಗಳ ಸತೇಜ–ಸವಿಸ್ತಾರಗಳನ್ನು ಬಿಂಬಿಸುವ ಹೃದಯ ವೈಶಾಲ್ಯದ, ಕರುಣೆಯ ವೈಭವದ ವೈಖರಿಯ ವೈಜಯಂತಿಯ ರಾಜಮಾಳ ಕುಲಗೋತ್ರ ವಿವರಣೆ ಹೇಳಿದರೆ ನಾನು ಪಾಪಿ : ಮಾನವತೆಯ ಪಾವನತೆಗೆ ನಾನು ಅಡ್ಡಗಟ್ಟಿದಂತಾಗುವುದು. ಕುಲಸಂಚರನ, ಸೂತ್ರಧಾರಿಗಳ ಹೇಯ ಉಪಾಯಗಳನ್ನು ಸದೆ ಬಡೆಯುವ ಸ್ಪಷ್ಟೋಕ್ತಿಗಳನ್ನು ಆ ತಾಯಿ ಹಾಡುತ್ತಿದ್ದಳೆನ್ನುವಾಗ.

ರಾಜಮಾ–

ಜನಪದ ನುಡಿ–

ನಾನು–

ಬಾಳು ತುಂಬಿತು.

ನನ್ನ ಸ್ವಪ್ನಧ್ವಜಕ್ಕೆ ಆಗಸ ವಸನವಾಯಿತು : ನಾನದಕ್ಕೆ ಕೋಲಾದೆ, ವಿಶ್ವದ ಎದೆಯ ಮೇಳೆ, ಎಡರುತೊಡರುಗಳನ್ನೆಲ್ಲ ದೂರ ದೂರಕ್ಕಟ್ಟುತ್ತ ನನ್ನ ಸ್ವಪ್ನಧ್ವಜ 'ಜನಪದ ಸಾಹಿತ್ಯ' ಎಂಬ ನನ್ನ ಮನತುಂಬಿದ ಎರಡು ಶಬ್ದಗಳ ಏಳು ಅಕ್ಷರಗಳನ್ನೆಲ್ಲಾ ತನ್ನ ಮೈತುಂಬ ಮೂಡಿಸಿಕೊಂಡು ಹಾರತೊಡಗಿತು.

ಸಂಗ್ರಹದ ಕೊರಗು ಬಲಿಯಿತು. ಇದ್ದಷ್ಟು ಸಿಕ್ಕಷ್ಟು ಸಾಕಾಗಲಿಲ್ಲ ನನಗೆ. ಹಸುಗೂಸಿಗೆ ಅರೆಗುಟುಕಿನಷ್ಟು ಹಾಲುಣಿಸಿದಾಗ ತಾಯಿಯ ಮಡಿಲಿನಿಂದ ಕೂಸನ್ನು ಯಾರೋ ಎಲ್ಲಿಗೋ ಕರೆದೊಯ್ಯುವಂತಹ ಪಾಡು ನನ್ನದಾಯಿತು.

ಆಗಿನ ನನ್ನ ಬಳಲಿಕೆಯನ್ನು ಇಳಿಮುಖಕ್ಕೆ ತಂದ ಗೌರವ ರಾಜಮಾನ ಬಾಳಿಗೆ ಸಲ್ಲುತ್ತದೆ. ನಾನು ಆಕೆಯನ್ನು ಕಂಡ ಸಲವೂ ಒಮ್ಮೊಮ್ಮೆಗೂ ನಾವಾಡಿದ ಮಾತುಗಳು ನನ್ನ ಜೀವನಕ್ಕೆ ಬೆಳಕಾಗಿವೆ. ನನಗೊಗ್ಗದ ಕೆಲಸದ ನನ್ನ ಚಿಂತನೆಯನ್ನು ರಾಜಮಾ ನಿರ್ಮೂಲಗೊಳಿಸುತ್ತಿದ್ದಳು. ಆಕೆಯ ಧ್ವನಿಯಲ್ಲಿ, ಜೀವನದಲ್ಲಿ ಅಂಥ ಓಜಸ್ಸು ನೆಲೆನಿಂತಿತ್ತು, ಆಕೆಯ ನೆನವಿಗೊಮ್ಮೆ ನನ್ನ ಕೈ ಜನಪದ ನುಡಿಯ ಮಹಿಮೆಯನ್ನು ಚಿತ್ರಿಸಲೆಳಸುತ್ತದೆ. ಪ್ರತಿಸಲವೂ ನನ್ನ ಯತ್ನ ಮುಗಿತಾಯವಿಲ್ಲದೆ ಮುಂದುವರಿಯುತ್ತದೆ.

ನನ್ನ ಬಾಳಿಗೆ ರಾಜಮಾ ಒಂದು ಅನಂತ ಚರಿತೆಯ ಕಳೆ ನೀಡಿದಳು. ಆ ಕಳೆಬೆಳೆ ಕಾಣುವಂತಹ ನುಡಿಮಾಲೆಯನ್ನೂ ನಾಡ ದೇವಿಗೆ ಮುಡಿಸಿದಳು. ನನ್ನ ಚಿತ್ರ ನಮ್ಮೆದೆಯಲ್ಲಿ ಚಿರವಾಗಿರುವಂತೆ ಮಾಡಿದಳು.

ರಾಜಮಾನ ಮನೇಕಂಡದ್ದು ಮನಕಂಡದ್ದು ಅವ್ವ ಕಟ್ಟಿದ ಬುತ್ತಿಯನ್ನು ಆಕೆಯ ಮನೆಯಲ್ಲಿ ಬಿಚ್ಚಿ ಮೊದಲ ಬಾರಿಗೆ ಉಂಡದ್ದು ಜೂನ್ 44 ರ ಒಂದು ಮಧ್ಯಾಹ್ನ. ಅದೇ ದಿನ ರಾಜಮಾ ನನ್ನನ್ನು ತನ್ನ ಉಡಿಯಲ್ಲಿಟ್ಟುಕೊಂಡಳು.

ಧಾರವಾಡ ಸ್ಟೇಶನ್ ಎದುರಿಗಿರುವ ಟಾಂಗಾವಾಲಾರ ಗುಡಿಸಲುಗಳಿಗೆ ನಂಬರು ಹಾಕುವುದನ್ನು ಮುಗಿಸಿ, ಅದೇ ನಿಟ್ಟಿನ ರಾಜಮಾನ ಬಡಗುಡಿಸಲಿಗೂ ಹೋಗಿ ನಂಬರು ಹಾಕಿಯಾದ ಮೇಲೆ ನನ್ನೊಂದಿಗೆ ಬಂದಿದ್ದ ಇನ್ನೊಬ್ಬ ಗೆಳೆಯ ತನ್ನ ಮನೆಗೆ ಹೋದ– ಊಟದ ಬಿಡುವಿನಲ್ಲಿ.

ನಾವು ರಾಜಮಾನ ಗುಡಿಸಲಿಗೆ ಹೋದಾಗ ರಾಜಮಾ ಬೀಸುತ್ತಿದ್ದಳು, ಹಾಡುತ್ತಿದ್ದಳು. ನಾನು ನೇರವಾಗಿ ಒಳಗೆ ಅಡಿಯಿಟ್ಟೆ. ರಾಜಮಾ ನನ್ನನ್ನು ಸ್ವಾಗತಿಸಿದಳು. ಒಂದು ಪಕ್ಕದಲ್ಲಿ ಆಕೆಯ ಸೊಸೆ ನರಳುತ್ತಿದ್ದಳು– ಗರ್ಭಿಣಿಯಾಗಿರುವಾಗಲೇ ಅವಳನ್ನು ಆವರಿಸಿದ ಬೇನೆ ಸಣ್ಣದಾಗಿರಲಿಲ್ಲ, ಆಕೆಯ ಒಬ್ಬನೇ ಒಬ್ಬ ಮಗ ದೂರದ ದಾಂಡೇಲಿಗೆ ದುಡಿಯಲು ಹೋಗಿದ್ದ. ವಾರಕ್ಕೊಮ್ಮೆ ತಿಂಗಳಿಗೊಮ್ಮೆ ಧಾರವಾಡಕ್ಕೆ ಬರುತ್ತಿದ್ದ.

ಉರ್ದುವಿನಲ್ಲಿಯೇ ನಮ್ಮ ಮಾತುಕತೆ ಮುಂದುವರಿದಿತ್ತು ''ತನ್ನ ಸೊಸೆಯನ್ನು ತವರವರು ಹೆರಿಗೆಗೆ ಕರೆಯಲಿದ್ದಾರೆ. ಇನ್ನೂ ರೋಗ ಮರುಕಳಿಸಿ ಬರುತ್ತಲೇ ಇದೆ.

ಇಂಥವಳನ್ನು ಹೇಗೆ ಕಳಿಸುವುದು ?''....ಇವೇ ಮೊದಲಾಗಿ ರಾಜಮಾನ ಕರುಳು ಕುದಿಸುವ ಬೇಗುದಿಯ ಬೆರಕೆ ನುಡಿಯಾಗಿದ್ದುವು. ನಾವು ಊಟ ಮಾಡುವಾಗ ರಾಜಮಾನ ಕತೆ ಕೇಳಿದೆ.

ಅದು ಕ್ಷಾಮಕಾಲ. ರಾಜಮಾ ನಿಪ್ಪಾಣಿಯನ್ನು ಬಿಟ್ಟು ಧಾರವಾಡಕ್ಕೆ ಬಂದು ಒಂದು ವರುಷವಾಗಿದೆ...ನಡುವೆ ಮನಗುಂಡಿ–ಮನಸೂರುಗಳಿಗೆ ಏಳೆಂಟು ದಿನಗಳ ಮಟ್ಟಿಗೆ ಭತ್ತ ಮಾಡಲು ಹೋಗಿ ಮರಳಿ ಬರುವನಿತರಲ್ಲಿ ನೀರು ಹತ್ತಿದ ನೆವದಿಂದ ಎರಡು ಮೂರು ತಿಂಗಳ ನೆಲಹಿಡಿದದ್ದು, ಆಗಿನ ಈ ಮೂವರ ಕಷ್ಟಪೂರ್ಣ ಜೀವನ...ದುಡ್ಡಿಲ್ಲದಿದ್ದುದಕ್ಕೆ ಧೂಳೀಕೊಪ್ಪದ ಬೀಗರಿಂದ ಅವನ ಆರೈಕೆಗಲ್ಲ.... ಹೊಟ್ಟೆಯ ಹೊರೆಯನ್ನು ...ತುತ್ತನ್ನು ಉಣ್ಣಲು.... ಸಾಲ ಮಾಡಿದ್ದು...ಊರಿನಿಂದ ತಂದ ಎರಡು ಆಡಿನ ಮರಿಗಳನ್ನು ಕಡಿಮೆ ಕ್ರಯಕ್ಕೆ ಸಾಲ ತರುವ ಮುನ್ನ ಮನಕರಗಿ ಮಾರಿದ್ದು...ಚಳಿಜ್ವರ ಕಡಿಮೆಯಾದರೂ ಮಗ ಬಲಹೀನನಾಗಿ ತಿಂಗಳುಗಟ್ಟಲೆ ರಕ್ತ ತುಂಬುವಂಥ ಅನ್ನ ಸಿಗದೆ ಯಾವ ಕೆಲಸವನ್ನೂ ಮಾಡಲು ಬರದಂತಾಗಿ ಮನೆ ಹಿಡಿದದ್ದು...ಆಗ ರಾಜಮಾ ನಿರುಪಾಯಳಾಗಿ ಸಾರಸ್ವತಪುರದವರೊಬ್ಬರ ಮನೆಯಲ್ಲಿ ಕಸಮುಸುರೆಯ ಕೆಲಸಕ್ಕೆ ನಿಂತದ್ದು...ಅವರು ರಾಜಮಾನ ಮೇಲೆ ತುಡಿಗಿನ ಅಪರಾಧ ಹೊರಿಸಿ ಸಂಬಳ ಕೊಡದೆ ಕೆಲಸ ಬಿಡಿಸಿದ್ದು, ಬಳಿಕ ಊರಿನಲ್ಲಿ ಮತ್ತೊಬ್ಬರ ಮನೆಯಲ್ಲಿ ಕೆಲಸ...ಬಿಜಾಪುರದ ಮಗಳ ಮನೆಗೆ ನಾಲ್ಕೈದು ವರುಷಗಳಿಂದ ಹೋಗುವುದಾಗದೆ ದೂರದಿಂದಲೇ ಮಗಳ ಮುಖದ ಸಾಮಿಪ್ಯದ ಕನಸುಣಿ ಯಾದದ್ದು.....

ಇನ್ನೂ ಹಲವು. 'ಜಾಲಿಯ ಮರದ ಮುಳ್ಳೆಣಿಸಬಹುದೇ ?' ಎಂದಳು ರಾಜಮಾ, 'ಇಲ್ಲ' ಎಂದೆ, 'ಹಾಗೆಯೇ ನನ್ನ ದುಃಖದ ಮಾತುಗಳು' ಎಂದು ರಾಜಮಾ ತನ್ನ ಆ ದಿನದ ಪರಿಚಯಕ್ಕೆ ಮೊದಲು ಮಾಡಿದ್ದಳು.

ಅವ್ವ ಕಟ್ಟಿದ ಬುತ್ತಿಯಲ್ಲಿ ರೊಟ್ಟಿಯಿತ್ತು. ಖಾರ ಉಪ್ಪಿನಕಾಯಿ– ಉಳ್ಳೆಗಡ್ಡಿ– ಕಡಲೆಯ ಹಿಂಡಿ–ಸೊಪ್ಪಿನ ಪಲ್ಯ–ಇಷ್ಟೆಲ್ಲ ಇತ್ತು. ಅನ್ನ ಇದ್ದಿರಲಿಲ್ಲ– ಅಕ್ಕಿಯ ಅಭಾವ– ರಾಜಮಾನ ಸೊಸೆ ಅನ್ನ ಉಣ್ಣದೆ ತಿಂಗಳು ತಿಂಗಳುಗಳುರುಳಿದ್ದವಂತೆ. ಮಗನು ಕೂಲಿಯ ಭತ್ತ ತರಲು ಹೋದಾಗ ಸರಕಾರದವರು ದಂಡ ಹೇರುವನೆಂದು ಅಂಜಿಸಿ ಅವನ ದುಡಿತದ ಪ್ರತಿಫಲದ ಭತ್ತವನ್ನೂ ಕಸಿದುಕೊಂಡು ಕಳಿಸಿದ ದಾರುಣ ಕತೆಯನ್ನೂ ರಾಜಮಾ ಕಣ್ಣೀರು ಬೆರೆಸಿ ನನಗೆ ಹೇಳಿದಳು.

ಒಂದೂವರೆ ಗಂಟೆಗೆ ನಾನು ಮದಿಹಾಳ ಸೇರಬೇಕಿತ್ತು. ಆಫೀಸರರ ಹೇಳಿಕೆಯಂತೆ. ಮತ್ತೊಮ್ಮೆ ಹಾಡು ಬರೆದುಕೊಳ್ಳಲು ಬರುತ್ತೇನೆಂದು ಪೂರ್ವಸೂಚನೆ ಇತ್ತು.

''ರಾಜಮಾ– ನಾ ಹೋಗ್ತೇನಿನ್ನ'' ಎಂದೆ.

ರಾಜಮಾ ತನ್ನ ಗರ್ಭಿಣಿ ಸೊಸೆಯ ಬಯಕೆಯ ಊಟ ಹಿಂಗಿತು ಎಂದು ತನ್ನ ಮುಪ್ಪಿನ ನಾಲಿಗೆಯಿಂದ ನುಡಿದು ನನ್ನನ್ನು ಹರಸಿ. 'ಅಚ್ಛಾ ಬೇಟಾ' ಎಂದು 'ಬಾರೆ'ಂದು ಸಮ್ಮತಿಸಿದಳು.

ಸಾಯಕಲ್ ಹತ್ತಿದೆ. ಸ್ಟೇಶನ್–ಧಾರವಾಡದ ಒಂದು ತುದಿ–! ಮದಿಹಾಳ–ಮತ್ತೊಂದು ತುದಿ. ಎರಡೂ ತುದಿಗಳ ನಡುವಿನ ದಾರಿಯಲ್ಲೆಲ್ಲ ತಪ್ತಹೃದಯನಾಗಿ, ತಲೆ ತಿರುಗಿಸಿಕೊಳ್ಳುತ್ತ ಮಳೆಯ ಬರವನ್ನು ಸೂಚಿಸುತ್ತಿದ್ದ ಬಿಸಿಲಿನಲ್ಲಿ ಮದಿಹಾಳಕ್ಕೆ ಹೋದೆ. ದಾರಿಯಲ್ಲಿ 'ನಾನು ರಾಜಮಾಳನ್ನು ಬೇಗ ಕಾಣುವಂತಾಗಿ, ಸಂಗ್ರಹಿಸಬೇಕು–ರಾಜಮಾನ ಸೊಸೆಗೆ ತೀವ್ರ ಗುಣವಾಗಬೇಕು–ಮನೆಗೆ ಇಂದು ಹೋಗಿ ನವಿಲೂರ ತಾಯಿಗೆ ಈ ದಿನದ ಕತೆ ಹೇಳಬೇಕು' ಈ ವಿಚಾರ ಚಕ್ರ ನನ್ನ ಸಾಯಕಲ್ ಗಾಡಿಯ ವೇಗಕ್ಕಿಂತಲೂ ಹೆಚ್ಚು ವೇಗದಿಂದ ತಿರುಗತೊಡಗಿತ್ತು.

ಎರಡನೆಯ ಸಲ. ನಾಲ್ಕೈದು ದಿನಗಳ ನಂತರ, ಒಂದು ಮಂಗಳವಾರ ಆಫೀಸಿಗೆ ಸಂತೆ ರಜೆಯಿದ್ದುದರಿಂದ, ಇನ್ನೂ ಎರಡು ತಾಸಿನಷ್ಟು ಹೊತ್ತಿರುವಾಗ ರಾಜಮಾನ ಬಳಿಗೆ ಹೋದೆ. ಆಗ ಆಕೆಯ ಸೊಸೆ ಕಿತ್ತೂರಿಗೆ ಹೋಗಿದ್ದಳು. ಮನೆಯಲ್ಲಿ ರಾಜಮಾ ಒಬ್ಬಳೇ ಇದ್ದಳು. ಡಾಂಬರಿನ ಡಬ್ಬಿಯನ್ನು ಹಿಡಿದುಕೊಳ್ಳಲು ನಾಚುತ್ತಿದ್ದ ಗೆಳೆಯರು ಅದನ್ನು ನನ್ನ ಸಾಯಕಲ್ ಹ್ಯಾಂಡಲಿಗೆ ತೂಗುಹಾಕಿ ಬಿಡುತ್ತಿದ್ದರು.

ರಾಜಮಾನ ಗುಡಿಸಿಲಿನ ನಡುಗಂಬದಲ್ಲಿ ತಗಣೆಯ ಬಳಗ ಮನೆ ಮಾಡಿತ್ತು. ಮತ್ತೊಂದು ಜಾಜಿಯ ಸಂದಕಕ್ಕೆ ಗೆದ್ದಲು ಹತ್ತುತ್ತಿತ್ತು. ರಾಜಮಾ ಆ ಕಂಬಕ್ಕೆ, ಆ ಸಂದಕದ ತಳ ಭಾಗಕ್ಕೆ ಡಾಂಬರು ಹಚ್ಚಬಹುದೇ, ಉಪಯೋಗಿಸಬಹುದೇ ಎಂದು ನನ್ನನ್ನು ಕೇಳಲಾರದೆ ಕೇಳಿದಳು.

ಮಾತಿನಿಂದ ಉತ್ತರಿಸದೆ ರಾಜಮಾನಿಗೆ ಸುಮ್ಮನೆ ಕೂಡಲು ಹೇಳಿ ಕಂಬಕ್ಕೆಲ್ಲ ಡಾಂಬರು ಬಳಿದೆ–ಸಂದಕಕ್ಕೂ : 'ಇನ್ನೊಂದರೆ ತಾಸಿನಲ್ಲಿ ರಾಜಮಾ ಹಾಡುತ್ತಾಳೆ. ಬೀಸುವ ಕಲ್ಲಿಗೆ ಆ ತಾಯಿಯ ಡಾಂಬರ ಗುರುತಿನ ಕೈ ಸ್ಪರ್ಶಬೇಡ, ಎಂದು ನನ್ನ ಮನ ತನಗೆ ತಾನೇ ಹೇಳಿಕೊಳ್ಳುತ್ತಿತ್ತು.

ಆ ದಿನ ಸುಮಾರು ಮೂವತ್ತರಷ್ಟು ನುಡಿಗಳನ್ನು ರಾಜಮಾ 'ಸರಸತಿಯು ತಲೆದೂಗೆ', ಹಾಡಿದಳು : ನಾನು ಬರೆದುಕೊಂಡೆ.

ಬೀಸುವ ಕಲ್ಲಿಗೆ ಕೊನೆ ಮುಕ್ಕುಹಾಕುವಾಗ ರಾಜಮಾನ ಮೈ ಬೆವರೊಡೆದಿತ್ತು. ತಲೆಯ ಶ್ವೇತವರ್ಣದ ಕೂದಲು ಕಲ್ಲಿನ ಎದೆಯ ಮೇಲೆ ನಗೆಯಾಡುತ್ತಿದ್ದುವು. ಹಿಂಬದಿಯ ಅತ್ತಿಯ ಕೊಳ್ಳದಲ್ಲೆಲ್ಲ ರಾಜಮಾ ಹಾಡಿದ ನುಡಿಗಳ ಸಾಲು ಸಾಲೂ, ಅಕ್ಷರ ಅಕ್ಷರಗಳೂ ಪ್ರತಿಧ್ವನಿಗೊಳ್ಳುತ್ತಿದ್ದವು. ಹಕ್ಕಿಗಳ ಕಂಠದಲ್ಲಿ, ಹುಬ್ಬಳ್ಳಿ ಪುಣೆಯತ್ತ ಹೊರಟು ನಿಂತ ಗಾಡಿಯ ಕೂಗಿನಲ್ಲಿ ಅದೇ ಧ್ವನಿ ತುಂಬಿಕೊಂಡಿತ್ತು ಸಂಜೆಯ ರವಿ, 'ರಾಜಮಾ' ! ಇಂಥ ದಿವ್ಯ ಧ್ವನಿಯನ್ನು ನಾನೆಂದೂ ಆಲಿಸಿಲ್ಲವಲ್ಲ' ಎನ್ನುತ್ತ ರಾಜಮಾನ ಪ್ರಶಂಸೆ ಮಾಡದಿದ್ದರೆ ತನ್ನ ಮನ ತುಂಬದೆಂದು ಪಡುವಣ ದಿಕ್ಕಿನ ಮುಖದ ಮೇಲೆ ರಾಜಮಾನ ಹೆಸರನ್ನು ಹೊಂಗಿರಣಗಳಿಂದ ಬರೆದು, ಆ ತಾಯಿಯಿಂದ ಮುಳುಗಲಪ್ಪಣೆ ಬೇಡಿದ. ಆ ಹಿರಿ ಹೆಸರನ್ನೇ ನಾನು ಕಣ್ತುಂಬ ನೋಡಿ ಪಠಿಸುತ್ತಿದ್ದೆ.

ಹಾಡು ಮುಗಿಸುತ್ತ ಕಲ್ಲಿಗೆ ನಮಿಸುತ್ತ :

''ನೀನಿನ್ನೂ ಮೂರು ಮೈಲಿ ಹೊರಡಬೇಕು, ತಡವಾದೀತು, ಹೊರಡು : ಹುಟ್ಟುವ ಮೊಮ್ಮಗನೊಡನೆ, ಮಗ–ಸೊಸೆಯೊಡನೆ ನಾನು ಒಮ್ಮೆ ನಿಮ್ಮ ಊರಿಗೆ ಬರುತ್ತೇನೆ–ನಿಜವಾಗಿ–ನಿಮ್ಮ ಊರಿನ, ನಿಮ್ಮ ಮನೆಯ ಉಪ್ಪಿನಕಾಯಿ ತಿಂದ ನನ್ನ ಮೊಮ್ಮಗ ನಿಮ್ಮ ಊರಿಗೆ ಬಾರದಿರುವನೇ ?'' ಎಂದು ತನ್ನ ಭಾಷೆಯಲ್ಲಿ ನನ್ನನ್ನು ಬೀಳ್ಕೊಡುವಾಗ, ತಾನು ಕೊಳ್ಳದಿಂದ ತಂದಿದ್ದ 'ಇಸರು ಡಿಗ್ಯಾನ ಪಲ್ಯೆ'ಯನ್ನು ಮನೆಗೊಯ್ಯಲೆಂದು ನನಗಿತ್ತಳು. ಮತ್ತೆ ಮತ್ತೆ ಬರಲು ಹೇಳಿದಳು.

ಅಷ್ಟೊಂದು ವೇಗದಿಂದ, ಇನ್ನೂ ತನ್ನ ಸೊಸೆಯ ಹೊಟ್ಟೆಯಲ್ಲಿದ್ದ ಮೊಮ್ಮಗನನ್ನು ಕಾಣುವ ಆಸೆಯನ್ನು ಆಕೆಯ ವೃದ್ಧ ಕಣ್ಣುಗಳು ಹೊರಗೆಡುಹುತ್ತಿದ್ದವು.

ಮತ್ತೆ ಮುಂದಿನ ಮಂಗಳವಾರ ರಾಜಮಾನನ್ನು ನಾನು ಕಂಡು ಮತ್ತೊಂದು ಹತ್ತು ನುಡಿಗಳನ್ನು ಬರೆದುಕೊಳ್ಳುವ ಹೊತ್ತಿಗೆ, ಕಿತ್ತೂರಿನ ನೆರೆಯ ಹಳ್ಳಿಯಿಂದ ಧಾರವಾಡದ ಸಂತೆಗೆ ಬಂದವರೊಬ್ಬರು ರಾಜಮಾನನ್ನು ಕಂಬನಿಮನೆಯ ಕಣ್ಣುಗಳಿಂದ, ತಲೆ ಕೆಳಗೆ ಮಾಡಿ ನೋಡಿ ಹೇಳಿದರು.

''ನಿನ್ನ ಸೊಸಿ ಹಡದ್ಳು–ಆದ್ರ ನಿನ್ನ ಬಾಗೇವ ಇಲ್ಲಾ...ಮರುದಿವ್ಸ ಹುಡಾಗಾ ಜೀಂವಾ ಬಿಟ್ಟಾೞ ! ......''

ರಾಜಮಾನ, ನನ್ನ ಎದೆಯ ಹುಲ್ಲುಗಾವಲು ಸೀಮೆಯ ಸಿರಿ ಒಣಗಿದಂತಾಯಿತು, ಅದಕ್ಕೆ ಬೇಗೆ ಹಚ್ಚಿದಂತಾಯಿತು, ಆ ಬೇಗೆಗೊಂಡ ಕರಕು ನೆಲದ ಅಮಂಗಳ ವರ್ಣ ನಮ್ಮ ಮುಖದಲ್ಲಿ ಬಿಡಾರ ಬಿಟ್ಟಿತು.

ಆಗ ನನಗೆ ಉರ್ದು ಮರೆತಂತಾಯಿತು–ಸಂತೈಸ ಹೊರಟೆ.

'ರಾಜಮಾ, ನಿನಗಿನ್ನ ಇವತ್ತ ರಾತ್ರಿ ಇಲ್ಲಿರೂದು ಆಗೂದುಲ್ಲಾ ಬ್ಯಾಡಾ...ಅಳಕೊಂತ ಕುಂಡರತೀ...ಇಲ್ಲಿರೂದ ಬ್ಯಾಡಿವತ್ತ...ನಮ್ಮೂರಿಗೆ.....ಬಾ.'

ರಾಜಮಾ ಕೃಶದೇಹವನ್ನು ಮುದುಡಿಸಿಕೊಂಡು ಎಳೆಯ ಹಕ್ಕಿಯಂತಾಗಿ ಕುಳಿತಲ್ಲಿಂದ ಏಳಲಾರದಾದಳು, ಆ ದುಃಖವನ್ನು ಮರೆಸುವ ಕೆಲ ನುಡಿಗಳು ರಾಜಮಾನಿಗೆ ಬುದ್ಧಿ ಹೇಳಬಹುದಿತ್ತು......ಆದರೆ ದೀರ್ಘಯಾತನೆ ದೆವ್ವದಂತೆ ಅವಳೆದೆಯಿಂದ ಅವಳ ಬಾಳುದ್ದಕ್ಕೂ ಬಳಸಿಕೊಂಡ ನುಡಿಗಳನ್ನು ನುಂಗಲು ಬಾಯಿ ತೆರೆದಿತ್ತು.

ಆಗ ಅವ್ವನ ಮಾತು ನೆನಪಿಗೆ ಬಂತು.

''ಅಂವ (ನನ್ನ ತಂದೆ) ಸತ್ತಿಂದ ನಾಕ್ಕೈದ ವರ್ಷ ನನಗ ಹಾಡಾಕ ಬಾಯಿ ಬರಲೇ ಇಲ್ಲಾ, ಇನ್ನ ಆ ಹಾಡಾಗಿನ ಮಾತೆಲ್ಲಿಂದ ನೆನೆಪಿಗೆ ಬರಬೇಕು...? ಸುಡು ಗಾಡ...ಅಳಸೂವಂತಾವೂ ಹಾಡ ಇರತಾವಲ್ಲ.....ಅವಽ ಬಾಯಾಗ ಬರುತ್ತಿದ್ವು....''

ಸುದ್ದಿಯನ್ನು ಹೇಳಿದವರು ''ಕಿತ್ತೂರಿಗೆ ಕರಕೊಂಡ ಹೊಕ್ಕೇನಿ ಹೋಗ ತಮ್ಮಾ ಆಕೀನ.... ಬೆಲ್ಲಾ ಹೇರಿಕೊಂಡ ಬಂದ ಚಕ್ಕಡ್ಯಾಗ'' ಎಂದು ನನಗರುಹಿ ರಾಜಮಾನನ್ನು ಪೇಟೆಯತ್ತ ಕರೆದೊಯ್ದರು.

ನಾನು ನಫಿಲೂರಿಗೆ ಹೋಗುವಾಗ ದಾರಿಯ ಇಕ್ಕೆಲದಲ್ಲೆಲ್ಲ ರಾಜಮಾನ ಮೂರ್ತಿ ನನ್ನ ಕಣ್ಣಿಗೆ ಕಾಣುತ್ತಿತ್ತು...ರಾಜಮಾನ ಮೊಮ್ಮಗ ಬೆಳೆದು ದೊಡ್ಡವನಾಗಿದ್ದರೆ ಇದೇ ದಾರಿಯಲ್ಲಿ ಬಾಲಲೀಲೆಯನ್ನಾಡುತ್ತ ನಮ್ಮ ಮನೆಗೆ ಬರುತ್ತಿದ್ದ, ಎಂದು ನನ್ನ ತಲೆ ಬಡಬಡಿಸುತ್ತಿತ್ತು. ಸಾಯಕಲ್ಲು ನಡುನಡುವೆ ಮುರಿದುಬಿದ್ದಂತಾಗುತ್ತಿತ್ತು.

ಅವ್ವನಿಗೆ ಎಲ್ಲವನ್ನೂ ಹೇಳಿದೆ, ಕೊರಗಿದಳು. ನಾನು ಉಣ್ಣುವಾಗ ನನಗೆ ಹಾಲು ನೀಡಲಿಲ್ಲ–ನಾನು ಅರ್ಥಮಾಡಿಕೊಂಡೆ.

ಹದಿನೈದು ದಿನಗಳುರುಳಿರಬಹುದು....ಒಂದು ಶನಿಪ್ರದೋಷ ಪೂಜೆ ಬಂದಿತಂತೆ. ಅವ್ವ ಅಪ್ಪನ ನೆನಪು ಮಾಡಿ ಅಂದಿನ ಪ್ರದೋಷ ಪೂಜೆಗೆ ಸೋಮೇಶ್ವರಕ್ಕೆ ಹೋಗೆಂದಳು, ನಮ್ಮೋಣೆಯವರೊಡನೆ. ತಾಯಿಯ ಎದುರು 'ಹೂಂ' ಎನ್ನಲೇ ಬೇಕಿತ್ತು. ಎದೆ ಮಾತ್ರ ಆ ಸಂಜೆಗೆ ಬೇರೊಂದು ಕಾರ್ಯಕ್ರಮವನ್ನು ಕೈಕೊಳ್ಳತೊಡಗಿತ್ತು.

ಆಫೀಸಿನ ಕೆಲಸ ಮುಗಿಸಿ ಸೋಮೇಶ್ವರಕ್ಕೆ ಹೋಗಲರಿಯದೆ ರಾಜಮಾನೆಡೆಗೆ ಹೋದೆ. ಹಿಂದಿರುಗಿ ಬಂದಿದ್ದಳು.

ನಾನು ಅವಳನ್ನು ಕಂಡೊಡನೆ.

''ನಿನ್ನ ಮೈಯಾಗಿನ ಅರಿವೀ ಕಳಿ'' ಎಂದಳು ರಾಜಮಾ. ಹಿಂದಿನ ದಿನ ಹಳ್ಳಿಗನ ವೇಷದಲ್ಲಿ ನೀನು ನನ್ನೊಡನೆ ಬರಬೇಕು ಎಂದು ಸೂಚಿಸಿದ್ದಳಲ್ಲದೆ ಉಳಿದಾವ ಕತೆಯನ್ನೂ ಹೇಳಿದ್ದಿಲ್ಲ. ಧೋತರ ಕೊಟ್ಟಳು, ಉಟ್ಟೆ : ಅಂಗಿಯನ್ನೂ ಕೊಟ್ಟಳು, ತೊಟ್ಟೆ : ಪಾವಡವನ್ನೂ ಕೊಟ್ಟಳು, ಸುತ್ತಿಕೊಂಡೆ. ಹೆಗಲಿಗೆ ಒಂದು ನೆರೆ ಕಂಬಳಿಯನ್ನು ತನ್ನ ಹಸ್ತದಿಂದಲೇ ಇರಿಸುವಾಗ ಅವಳ ಸಹನೆ ಮೀರಿತ್ತು.

''ತುಮಾರಾ ಸರಕಾ ಬೇಟಾ ಬೀ ಮರ್‍ಯಾ...ಮೇರೆ ನನ್ನೇ...''

ಎನ್ನುತ್ತ ಅಳತೊಡಗಿದಳು. ಹೊರಗೆ ನಡೆಯಲು ನನ್ನನ್ನು ಕೈಹಿಡಿದು ಮುನ್ನಡೆಸ ತೊಡಗಿದಳು ; ಅವಳ ಬಾಯಿ ಹೇಳುತ್ತಿತ್ತು : ''ಮರೇಸೋ ಬೇಟೇಕಾ ಕಪಡಾ... ತುಮಾರೇ ಬದನ ಪರ....ಅಚ್ಛಾ ದಿಖತೇ....ಮೇರೇ ಬೇಟಾ.... ನಹೀ....ಜಿಂದಾ ಹೈ....''

ರಾಜಮಾ ಇಷ್ಟೆಲ್ಲ ಹೇಳುತ್ತಿದ್ದಾಗ ನಾನು ಬಗೆಯುತ್ತಿದ್ದೆ :

''ಸತ್ತ ಮಗನ ಉಡುಪನ್ನು ನನಗೊಮ್ಮೆ ತೊಡಿಸಿ, ಅವನ ರೂಪವನ್ನು ನನ್ನಲ್ಲಿ ಕಾಣಲಾಶಿಸಿರಬೇಕು ರಾಜಮಾ''. ಇಲ್ಲ, ನಾನು ತಪ್ಪು ಬಗೆದೆ. ಆ ಆಸೆ ರಾಜಮಾನಿಗಿದ್ದರೂ ಮತ್ತೊಂದು ಗುಟ್ಟೂ ಅದರಲ್ಲಿತ್ತು.

'ಬೇಟಾ, ಕಾಶೀಮ : ಚಲೋ...ರಾತ ಹೋಗಾ'.

ಆಗ ರಾಜಮಾನ ಸತ್ತ ಮಗನ ಹೆಸರು ಕಾಶೀಮ ಎಂದಿತ್ತು ಎಂದರಿತೆ, ಅರೆ ಜೀವಗೊಂಡು ರಾಜಮಾನ ಮಾತುಗಳನ್ನಾಲಿಸುತ್ತ

ಸ್ಟೇಶನ್ ದಾಟಿದೆವು. ರಾಜಮಾ ಹೇಳಿದ್ದನ್ನೆಲ್ಲ ಕನ್ನಡಿಸುವೆ : ''ಮೊಮ್ಮಗ ಹುಟ್ಟಿದ ಸುದ್ದಿಯನ್ನು ನನಗೆ ಕಳಿಸುವ ಮೊದಲೇ. ಹುಟ್ಟಿದ ದಿನವೇ ದಾಂಡೇಲಿಯಲ್ಲಿದ್ದ ಮಗನಿಗೆ ಕಳಿಸಿದ್ದರಂತೆ. ಅಡವಿಯ ಕಾಡುಗಿಡ ಕಡಿಯುವಾಗ ಬಿಸಿಲಿನಲ್ಲೊಮ್ಮೆ ಎಚ್ಚರದಪ್ಪಿ ಗಿಡದಿಂದ ನಾಲ್ಕೈದು ವಾರದ ಹಿಂದೆ ಬಿದ್ದನಂತೆ. ಕೈಯ ಕೊಡಲಿ ಎದೆಯ ಮೇಲೆ ತಾಗಿ ಮತ್ತೆ ನೆಲ ಹಿಡಿದನಂತೆ. ನನಗೆ ಆ ಸುದ್ದಿ ತಿಳಿಯಲಿಲ್ಲ. ನೋವು ಘನವಾಗಿ, ನನ್ನನ್ನೂ ಹೆಂಡತಿಯನ್ನೂ ನೆನೆನೆನೆದು ಬಡಬಡಿಕೆಗಾರಂಭಿಸಿದನಂತೆ. ನೀನು ಹಿಂದೆ ಬಂದಾಗ ಮೊಮ್ಮಗ ಸತ್ತ ಸುದ್ದಿಯನ್ನು ಹೇಳಿದವರು ಕಾಶೀಮ ಸಾಯುವುದರಲ್ಲಿದ್ದಾನೆ ಎಂದು ಕಿತ್ತೂರು ಮುಟ್ಟುವವರೆಗೆ ನನಗೆ ಹೇಳಲಿಲ್ಲ. ದಾಂಡೋಲಿಗೆ ಬಂದು ನನ್ನ ಮಗನಿಗೆ ಮಗ ಹುಟ್ಟಿದುದನ್ನು ಹೇಳಿದವರೇ ಹಳವಿನ ಮಾಲಿಕರ ಮೋಟಾರನ್ನು ಕಾಡಿ ಬೇಡಿ, ಅದರಲ್ಲಿ ಅವನನ್ನು ಕಿತ್ತೂರಿಗೆ ಕರೆದೊಯ್ದರು. ಕಾಶೀಮ ಮನೆ ಮುಟ್ಟಿದಾಗ ಮೊಮ್ಮಗ ಮಸಣದ ತುತ್ತಾಗಿ–ಮಣ್ಣಾಗಿ–ಅರ್ಧ ದಿನವಾಗಿತ್ತು. ಅವನಿಗೂ ಮಗನ ಮುಖ ನೋಡಲು ಸಿಗಲಿಲ್ಲ–ನನಗೂ.... ದೂರ ದೂರವಾಯಿತು.

''ನಾನು ಹೋದೆ ಕಿತ್ತೂರಿಗೆ–ಮಗ ಸತ್ತ ದುಃಖದಲ್ಲಿ ಕಾಶೀಮ ಚಿಂತೆ ಹೆಚ್ಚಿಸಿಕೊಂಡ–ನೋವನ್ನೂ ಹೆಚ್ಚಿಸಿಕೊಂಡ. ಎದೆಯ ಘಾಯ ಉಕ್ಕಲೇರಿತು. ಗುರುವಾರ.... ನಾನು ಹೋದ ಎರಡನೆ ದಿನ... ಅವನೂ–ಸತ್ತ

''ಅವನ ಔಷಧಕ್ಕೆ ಸಾಲ ಪಡೆದ ದುಡ್ಡು ತೀರಿಸಬೇಕು. ನಾನು ಕಸ ಮುಸುರೆ ಮಾಡುವ ಮನೆಯ ಪಠಾಣ ಆರು ತಿಂಗಳ ಸಂಬಳ ಇನ್ನೂ ಕೊಟ್ಟಿಲ್ಲ. ಅದನ್ನು ಅವನಿಂದ ಪಡೆಯಲೆಂದು ಬಂದೆ. ಮುಂಜಾನೆ ಅವನ ಮನೆಗೆ ಹೋದಾಗ ಸಾಲಕೊಟ್ಟ ಬೀಗರ ಆಳುಮಗ ಬಂದಿದ್ದಾನೆ ಎಂದ. ''ಸುಳ್ಳು ಹೇಳುತ್ತೀ ನೀನು–ನನಗೆ ಬೇರೆಯವರಿಗೆ ಸಾಲ ಕೊಡಲು ದುಡ್ಡಿಲ್ಲ. ಆ ಆಳುಮಗನನ್ನು ಕರೆತಂದರೆ ನಿನ್ನ ನಾಲ್ವತ್ತು ರೂಪಾಯಿ ಕೊಡುವೆ'' ನೆಂದ. ಅದಕ್ಕೇ ನಿನ್ನನ್ನು ಕರೆದದ್ದು. ಕಾಶೀಮನ ವಸ್ತ್ರ ಉಡಿಸಿದ್ದು. ಈಗ ಆ ನಮಾಜು ಗಟ್ಟಿಗೆ ಅವನು ಬಂದಿರುತ್ತಾನೆ.''

''ಅವನಿಗೆ ನೀನು ಧೂಳೀಕೊಪ್ಪದ ಸಾಲಕೊಟ್ಟ ಬೀಗರ ಆಳುಮಗನೆಂದು–ಹೇಳುವೆ, ಇಲ್ಲದಿದ್ದರೆ ದುಡ್ಡು ಕೊಡುವದಿಲ್ಲ.''

ಲೈನ್‌ಬಝಾರದ ಸಮೀಪದ ನಮಾಜು ಮಾಡುವ ಮಸೀದಿಗೆ ರಾಜಮಾ ನಾನೂ ಹೋದೆವು. ಪಠಾಣ ಇದ್ದ–ನನ್ನನ್ನೂ ಒಂದೆರಡು ಮಾತು ಮಾತಾಡಿಸಿದ. 'ಜೀ ಸಾಬ. ಹಮ ಅಬೀಚ ಧೂಳೀಕೊಪ್ಪಕೋ ಜಾನೇವಾಲೆ ಹಮಾರಾ ಸಾವಕಾರ....' ಎಂದೆ.

ಪೂರ್ಣ ನಾಲ್ವತ್ತು ರೂಪಾಯಿಗಳೂ ರಾಜಮಾನ ಪಾಲಿಗೆ ದಕ್ಕಲಿಲ್ಲ. ಪಠಾಣ ಮೂವತ್ತಕ್ಕೆ ಮುಗಿಸಿದ. ರಾಜಮಾ ಶರಣೆಂದಳು–ನಾನೂ ಬಿನ್ನವಿಸಿದೆ ; ವ್ಯರ್ಥ ವಾಯಿತು.

ಮರಳಿದೆ ನಮ್ಮ ಗುಡಿಸಲಿಗೆ. ಆ ಉಡುಪು ನನಗೆ ಬಹಳ ನೀತಿಯನ್ನು ಕಲಿಸಿತು. ಹಾಗೆಯೇ ಬೆಳಗಾಗುವವರೆಗೆ ರಾಜಮಾನ–ಆ ಮಹಾತಾಯಿಯ ಮಡಿಲಲ್ಲಿ ಮಲಗಿದೆ.

ಗುಡಿಸಲು ಮುಟ್ಟುವಾಗಲೇ ರಾತ್ರಿ ಒಂಭತ್ತು ಗಂಟೆಯಾಗಿತ್ತು. ತಾಯಿ ಕಟ್ಟಿದ ಬುತ್ತಿಯನ್ನು ಬಿಚ್ಚಿದೆ. ಉಣ್ಣಲೆಂದು ರಾಜಮಾನ ಮನ ಒಲಿಸಲು ಒಂದು ತಾಸಿನಷ್ಟು ಹೊತ್ತು ಜುಲಮೆ ಮಾಡಿದೆ. ಧೈರ್ಯ ಹೇಳಿದೆ. ರಾಜಮಾ ಯಾವ ಸಂತಸದಿಂದ ಉಣ್ಣಬೇಕು ? ಇಬ್ಬರೂ ಕೂಡಿ ನಾಲ್ಕರಲ್ಲಿ ಒಂದು ರೊಟ್ಟಿಯನ್ನು ಅರ್ಧರ್ಧ ತಿಂದೆವು. ನನಗೆ ನಿದ್ದೆ ಬರುವವರೆಗೂ ರಾಜಮಾನ ಮನ ಹಗುರಗೊಳಿಸುವ ಮಾತನ್ನೇ ನಾನು ಆಡಿದೆ. ಯಾವಾಗ ನಿದ್ದೆ ಹತ್ತಿತ್ತೋ ನನಗರಿಯದು.

ರಾಜಮಾ ನನ್ನನ್ನು ಎಬ್ಬಿಸಿದಾಗ ಇನ್ನೂ ಪೂರ್ಣ ಬೆಳಕಾಗಿರಲಿಲ್ಲ. ಆ ಬೆಳಕು ರಾಜಮಾನ ಕಣ್ಣೀರನ್ನೆಲ್ಲ ಕುಡಿದು ಭಾರವಾಗಿ, ಜಡವಾಗಿ, ಚೈತನ್ಯ ಹೀನವಾಗಿ ಮೂಡುತ್ತಿತ್ತು. ಹತ್ತಿಯಕೊಳ್ಳದ ಕಾಡುಮ್ಮಗವೊಂದು ಅಳುವ ಧ್ವನಿ ತೆಗೆಯುತ್ತ ಚೀರುತ್ತಿತ್ತು. ಬೆಳಗಿನ ಗಾಡಿಯ ಕೂಗು ಕರ್ಕಶವಾಗಿತ್ತು.

''ನಾನಿಂದೇ ಬೀಗರ ಸಾಲ ತೀರಿಸಲು–ಇದ್ದಷ್ಟು ಕೊಟ್ಟು–ಧೂಳೀಕೊಪ್ಪಕ್ಕೆ ಹೋಗುವೆ''ನೆಂದಳು ರಾಜಮಾ. ''ಬರುವುದಕ್ಕೆ ಐದಾರು ತಿಂಗಳು ಕನಿಷ್ಠ, ಹೆಚ್ಚು ಕಡಿಮೆ ಒಂದು ವರ್ಷ ಹಿಡಿಯಬಹುದು.'' –ಮಾತು ಮುಂದುವರಿಸಿದಳು. ನನ್ನ ಕಂಬನಿಯನ್ನು ನೋಡಿ–''ಇಲ್ಲವಾದರೆ ಸೊಸೆಯನ್ನೂ ಧಾರವಾಡಕ್ಕೆ ಕರೆತರುವೆ. ಇಲ್ಲಿಯೇ ಕೂಲಿಕುಂಬಳಿ ಮಾಡುತ್ತ... ಅಂತೂ ಬಂದರೆ.... ಇಲ್ಲಿ ಬರಲು''.

ತಿಂದುಳಿದ ಮೂರು ರೊಟ್ಟಿಯನ್ನು ನಿರುಕಿಸಿ 'ಮನೆಗೆ ಒಯ್ಯೆ'ಂದಳು. ನಾನು 'ನಿನ್ನ ದಾರಿಯ ಬುತ್ತಿಯಾಗಲಾರದೇ ?' ಪ್ರಶ್ನಿಸಿದೆ. 'ತಂಗಳ ನನಗರಿಯದಂಥದೇ ?' ಎಂದುತ್ತರಿಸಿ ರಾಜಮಾ ಬುತ್ತಿಯನ್ನು ಕೊಂಡು ಕಲಘಟಗಿಯ ಹಾದಿಯತ್ತ ನಡೆಯತೊಡಗಿದಳು. ನಾನು ಹಿಂಬಾಲಿಸಿದೆ. ಸೋಮೇಶ್ವರದ ಬಳಿ ನವಿಲೂರ ದಾರಿ ಕವಲೊಡೆಯುತ್ತಿತ್ತು...ರಾಜಮಾ ತನ್ನ ದುಡಿತದ ಮೂವತ್ತು ರೂಪಾಯಿಗಳಿಂದ ಐದು ರೂಪಾಯಿಯ ನೋಟುತೆಗೆದು ನನಗೆ ಕೊಡಬಂದಳು.

ನನ್ನ ಬಾಯಿಗೆ ಮಾತು ಬರಲಿಲ್ಲ– ರಾಜಮಾನ ಅಡಿಗೆ ಬಾಗಿದೆ. ದುಃಖ ದುಂಬಿದ ಕಣ್ಣುಗಳಿಂದ ನನ್ನನ್ನು ರಾಜಮಾ ಹರಸಿ, 'ಬೇಡ'ವೆನ್ನುವ ನನ್ನ ಬಗೆ ತಿಳಿದು ಮತ್ತೆ ತನ್ನ ಕುಂಚಿಗೆಯ ಪದರಿನಲ್ಲಿ ಐದು ರೂಪಾಯಿಯನ್ನು ಕಟ್ಟಿಕೊಂಡಳು–ಅಡಿಯಿಡ ತೊಡಗಿದಳು. ಇಬ್ಬರೂ ಮೌನ ತಳೆದವು. ಅವಳ ದಾರಿಯನ್ನೇ ನೋಡುತ್ತ ದಿಙ್ಮೂಢನಾದೆ...ಇಷ್ಟೆಲ್ಲ ಹೇಗಾಯಿತೆಂದು. ನನಗಾಗ Gorky ಯ 'Mother' ನೆನಪಿಗೆ ಬಂದಳು–ಪ್ರೇಮಚಂದ್ರ 'ಕರ್ಮಭೂಮಿ'ಯಲ್ಲಿ ಚಿತ್ರಿಸಿದ ಮುದುಕಿಯ ಅರಿವಾಯಿತು. Wordsworth– ನು Miltonನನ್ನು ಕುರಿತು ಬರೆದ Sonnetನಲ್ಲಿಯ Milton England English ಈ ಮೂರು ಶಬ್ದಗಳಿಗೆ ಬದಲಾಗಿ–ಅನುಕ್ರಮವಾಗಿ Rajama Karnataka ಮತ್ತು Kannada ಈ ಮೂರು ಶಬ್ದಗಳನ್ನು ಸೇರಿಸಿದರೆ ಆ ಕವನ ನನ್ನ ರಾಜಮಾನ ಸಂಪೂರ್ಣ ಜೀವನವನ್ನು, ಹಾಡುಗಾರಿಕೆಯನ್ನು, ಅವಳ ಪವಿತ್ರ ಮೂರ್ತಿಯನ್ನು ಚಿತ್ರಿಸುವಂತಾಗುತ್ತದೆ, ಎಂದು ನನ್ನ ಎದೆ ಒಡನುಡಿಯಿತು–ಹಾರತೊಡಗಿತು–ನನ್ನ ಮೈ ನಡುಗಿ ಉಡುಗಿತು.

ರಾಜಮ್ಮಾ, ನಾನು–ನಮ್ಮಿಬ್ಬರು ಈ ಸಂಬಂಧ– ಪೂರ್ಣವಾಗಿ ವಿವರಿಸಲು ನನಗೆ ಇನ್ನೂ ಅಷ್ಟು ಶಕ್ತಿ ಬಂದಿಲ್ಲವೆಂದು ಜೀವ ಮನೆಯತ್ತ ಹೆಜ್ಜೆ ಸಾಗಿಸಿತು.

ಕೇಳಿದಳು ಅವ್ವ 'ನಿನ್ನೆ ಸೋಮೇಶ್ವರಕ ಯಾಕ ಹೋಗಿದ್ದಿಲ್ಲಾ?'

'ನನ್ನ ಸೋಮೇಶ್ವರ...ರಾಜಮ್ಮಾನ ಎದೆಯಲ್ಲಿದ್ದ'. ಬಿಕ್ಕುತ್ತ ಹೇಳಿದೆ, ರಾಜಮ್ಮಾನ ಬವಣೆಯ ಬೆಟ್ಟದ ಜೀವನ ವೃತ್ತಾಂತವನ್ನು .

* * *

ಮುಂದೆರಡು ವರುಷ, ಆಗಸ್ಟ್ ೪೬ರ ವರೆಗೂ, ಧಾರವಾಡದ ಸ್ಟೇಶನ್ ಕಾಣುವದಾಗಲಿಲ್ಲ; ರಾಜಮ್ಮಾನ ನೆನಪಾಗುತ್ತಿದ್ದರೂ ನಿಶ್ಚಿತವಾಗಿ, ರಾಜಮ್ಮಾನ ಯಾವ ಸುದ್ದಿಯೂ ತಿಳಿಯಲಿಲ್ಲ. ಸರಕಾರದ ಸೇವಕನಾಗಿ ಜೀವ ಸವೆಸುವುದರಲ್ಲಿಯೇ ಎರಡು ವರ್ಷಗಳು ಮಾಯವಾದವು.

ನನ್ನ ಸುಯೋಗ :

ಕಣ್ಣು ಮಬ್ಬಿಗಾಗಿ ಬೇಸತ್ತು ನಾನು ತೊಳಲಾಡುತ್ತಿದ್ದಾಗ ಸರಕಾರ ನನಗೆ–ನಾನಿದ್ದಂತೆ–'ಅರೆಕುರುಡ'ನೆಂದು ಹೆಸರಿಟ್ಟು. ಕೆಲಸಕ್ಕೆ ಅಯೋಗ್ಯನೆಂದು ನನ್ನನ್ನು ಬಹಿಷ್ಕರಿಸಿತು.

ಕಣ್ಣಿನ ಉಪಚಾರಕ್ಕಾಗಿ ಒಂದು ದಿನ ಪುಣೆಗೆ ಪಯಣ ಬೆಳೆಸಲೆಂದು ಧಾರವಾಡಕ್ಕೆ ಬಂದೆ. ಸ್ಟೇಶನ್ ದಾರಿಯಲ್ಲಿ ರಾಜಮ್ಮಾ ನನ್ನನ್ನು ಎತ್ತಿ ಆಡಿಸುವ ಚಿತ್ರ ಕಂಡೆ.

ಗಾಡಿಯಲ್ಲಿ ಕುಳಿತೆ, ರಾಜಮ್ಮಾ ಮೊದಲಿದ್ದ ಗುಡಿಸಿಲಿನ ದಿಕ್ಕಿಗೆ ಮುಖ ಮಾಡಿ.

ಗಾಡಿ ಒಂದರೆಡು ಫರ್ಲಾಂಗಿನಷ್ಟು ಓಡಿತು.

'ಆ ಗುಡಿಸಲು...ಈಗ ಕಾಣುತ್ತದೆ. ನಮ್ಮ ಹೊಸ ನಾಡಿನ ಬಾಳಿಗೆ ಸಲಹೆ ನೀಡುವ ರಾಜಮ್ಮಾ ಅಲ್ಲಿರಬಹುದು. ಪುಣೆಯಿಂದ ಮರಳಿ ಬಂದು...ಸಂಗ್ರಹಿಸಲು...ಮತ್ತೆ... ಅಲ್ಲಿಗೆ ನಾನು ಹೋಗಬೇಕು.' ಗಾಡಿಯ ವೇಗದಂತೆ ಮನೋವೇಗ ಹೆಚ್ಚುತ್ತಿತ್ತು.

ಆದರೆ...ದಿಟ್ಟಿಸಿ ನೋಡುತ್ತಿದ್ದಂತೆ...

ಅಲ್ಲಿ ಗುಡಿಸಲಿರಲಿಲ್ಲ...ರಾಜಮ್ಮಾ, ನನ್ನ ನಾಡಿನ ಜನನುಡಿಯ ರಾಜ್ಯದ ರಾಜ್ಯಶ್ರೀ ಅಲ್ಲಿರಲಿಲ್ಲ.ಅವಳ ಬರವನ್ನು ನಿರೀಕ್ಷಿಸಿ, ಬಡವಾಗಿ ಹೋದ ಗುಡಿಸಲು ಬಿದ್ದಿತ್ತು, ಮೇಲು ಹೊದಿಕೆಯ ಹುಲ್ಲಿಗೂ ಅಲ್ಲಿ ಸ್ಥಾನವಿರಲಿಲ್ಲ.

ನಾನು ಕುಳಿತ ಗಾಡಿಯ ಗಾಲಿಗಳು ನನ್ನೆದೆಯ ಮೇಲೆ ಓಡುತ್ತಿವೆ ಎನ್ನುವಂತಾಯಿತು. 'ನಿನ್ನ ರಾಜಮ್ಮಾ... ಇರುವಳೋ ಸತ್ತಳೋ...ನೀನು ಅರಿಯೇ...ನಾನೂ ಅರಿಯೆ' ಎಂದು ಗಾಡಿ ಘೋಷಣೆಗೈಯ್ಯುತ್ತಿತ್ತು, ನನ್ನನ್ನು ಸಮಾಧಾನಗೊಳಿಸಲು ಯಾರೂ ನನ್ನೊಡನಿರಲಿಲ್ಲ.

ಕತ್ತಲೆ ನನ್ನನ್ನು ಮುತ್ತಿತ್ತು... ನನ್ನ ಜೀವ ಅತ್ತಿತ್ತು...ಸತ್ತು ಬದುಕಿ, ನಂಬಲಾರದೆ ನೋಡಿ ಚಡಪಡಿಸಿತು...

ನಾನು ಡಾಂಬರು ಬಳಿದ ಕರಿಯ ಕಂಬವೊಂದು ಮಾತ್ರ ರಾಜಮಾನ ಪಾದಧೂಳಿಯನ್ನು ಪೂಜಿಸುತ್ತ ಅರೆಮುರಿದು ನಿಂತಿತ್ತು.

ಪುಣೆಯನ್ನು ಮುಟ್ಟಿದಾಗ ಕಣ್ಣಿನ ವೈದ್ಯ ಕೇಳಿದರು :

'ನಿನ್ನ ಕಣ್ಣಿಗೇನಾಗಿದೆ?'

'ಒಂದು ಕರಿಯ ಕಂಬ ನಿಂತಿದೆ'!—ಕಣ್ಣಲ್ಲಿ ! ಅದನ್ನು ಅಲ್ಲಿಂದ ಕೀಳಲು ನಿಮಗ ಸಾಧ್ಯ!' ಎಂದೆ.

ಡಾಕ್ಟರರೂ ನನ್ನಂತೆ ಮೌನಮೂರ್ತಿಯಾದರು.

□□

ಭಾವಾನುವಾದಿತ ಸಣ್ಣಕತೆ

ನಮ್ಮ ನಡುವಿನ ಗೋಡೆ

ಪ್ರಿಯೆ..........

ನೀನು ಟ್ರಾಮಿನಲ್ಲಿ ಎಲ್ಲಿ ಯಾವಾಗ ಕುಳಿತುಕೊಂಡೆಯೋ ಅದರ ಅರಿವು ನನಗಿರಲಿಲ್ಲ. ಹಣ ಕೇಳಿದಾಗ ಮಾತ್ರ ನಿನ್ನನ್ನು ಗುರುತಿಸಿದೆ. ನೀನು ಅಲ್ಲಿ ಅದೂ ನಾನು ಕೆಲಸ ಮಾಡುವ ಟ್ರಾಮಿನಲ್ಲಿ ಬಂದುದೇ ನನಗೊಂದು ಅಚ್ಚರಿಯಾಯಿತು. ನನ್ನ ಕೆಲಸದಲ್ಲಿ ನಾನು ನಿರತನಾಗಿ ಪಯಣಿಗರನ್ನು ನಿರೀಕ್ಷಿಸುತ್ತಿದ್ದಾಗ, ನೀನು ನನ್ನೆಡೆಗೆ ನೋಟ ಬೀರಿದೆ. ಆಗ ನಿನ್ನ ಮುಖ ಹಿಗ್ಗಿರಲಿಲ್ಲ. ದೀರ್ಘ ಕಾಲಾನಂತರದ ನಮ್ಮ ಭೇಟಿ ಹೀಗೆ ಕೊನೆಗಾಣುವುದೆಂದು ನಾನೆಣಿಸಿರಲಿಲ್ಲ.

ನಾನು ಟ್ರಾಮ್ ಕಂಡಕ್ಟರನಾಗಿರುವ ಕಾರಣವೊಂದೇ ನಿನ್ನನ್ನು ಬಲವಾಗಿ ಘಾಸಿಗೊಳಿರಬೇಕು. ಹೌದು, ನಿಜ. ನನ್ನ ಸ್ಥಿತಿಯನ್ನು ಅರಿತೊಡನೆ ಒಮ್ಮೆಲೆ, ನನ್ನ ಮೇಲಿದ್ದ ಪ್ರೇಮ– ಆದರವನ್ನೆಲ್ಲ ನೀನು ಹಾಳು ಸುರಿಸಿದಾಗಲೇ ನಾನದನ್ನು ಊಹಿಸಿದೆ.

ನನ್ನಲ್ಲಿ ಮತ್ತೆ ಮಗುತನ ತಲೆದೋರಿತ್ತು. ನಿನ್ನೊಡನೆ ಮಾತನಾಡಬೇಕೆಂದು ಮನ ಹವಣಿಸುತ್ತಿತ್ತು. ಆತುರ ನೂರ್ಮಡಿಸುತ್ತಿತ್ತು. ನನ್ನಂತಹ ಸಾಮಾನ್ಯನೂ ನಿನ್ನಂತಹ ಶ್ರೀಮಂತ ಯುವತಿಯೊಡನೆ ಪ್ರೇಮದ ಮಾತಾಡುತ್ತಾನಲ್ಲಾ...ಎಂದು ಉಳಿದ ಜನ ಬೆರಗುಗೊಳ್ಳ ಲೆಂಬುದೇ ನನ್ನ ಬಯಕೆಯಾಗಿತ್ತು.

ನನ್ನ ಕೆಲಸದ್ದೊಂದು ಸುತ್ತು ಮುಗಿಸಿ, ಮತ್ತೆ ನೀನಿದ್ದ ಸ್ಥಳದೆಡೆಗೆ ನಾನು ಧಾವಿಸಿದೆ. ಅಲ್ಲಿರಲಿಲ್ಲ ನೀನು. ಯಾವುದೋ ನಿಲ್ದಾಣದಲ್ಲಿ ಇಳಿದು ಬಿಟ್ಟಿದ್ದೆ. ಮಹಾ ಮೌನದ ಒಡತಿಯಾಗಲು ನೀನು ದೂರ ಹೋಗಿದ್ದೆ.

........ಆಮೇಲೆ ಒಂದು ದಿನ ಅನೀರೀಕ್ಷಿತವಾಗಿ ನಿನ್ನಿಂದ ಒಂದು ಓಲೆ ಬಂತುಃ ಟ್ರಾಮಿನಲ್ಲಿ ಎಷ್ಟೊಂದು ಜನ ಸುಶಿಕ್ಷಿತರು, ಧನಿಕರು, ಬುದ್ಧಿಜೀವಿಗಳಿದ್ದರು ! ಎಣಿಕೆಗೆ ಹತ್ತದಷ್ಟು. 'ಅವರೆದುರು ನೀನು ನನ್ನನ್ನು ಮಾತಾಡಿಸಿದ್ದರೆ ನನ್ನ ಮಧ್ಯಮ ವರ್ಗದ ಜೀವದ ವೈಭವಕ್ಕೆ ಕಲಂಕ ತಟ್ಟುತ್ತಿತ್ತು. ಅಂತೂ ಪಾರಾದೆ. ನೀನು ನನ್ನೊಡನೆ ಮಾತು ಬಿಚ್ಚಲಿಲ್ಲ!'' ಅಷ್ಟೇ ಅಲ್ಲ, ನಿನ್ನಂತಹ ಸಿರಿವಂತರೊಡನೆ ನಾನು ಹೇಗೆ ವರ್ತಿಸಬೇಕೆಂಬು ದನ್ನೂ ವಿವರಿಸಿ ಎಚ್ಚರ ಹೇಳಿದ್ದೆ. ''ಹಿಂದೆ ಹಿರಿಯಾಸೆ ಉಚ್ಚ ಭಾವನೆಗಳನ್ನರಿತ ನೀನು, ಈಗ ಒಮ್ಮಿಂದೊಮ್ಮೆ ಈ ಟ್ರಾಮ್ ಕಂಡಕ್ಟರನಂಥ ವೃತ್ತಿಗೇಕೆ ಜೀವಮುಡಿಪಿಟ್ಟೆ?'' ಎಂದೂ ಕೇಳಿದ್ದೆ.

ಆಗ ನಿನಗೆ ಮಾರೋಲೆ ಬರೆಯುವುದಾಗಲಿಲ್ಲ. ಬರೆದಿದ್ದರೂ ಆ ಓಲೆ ನಿನ್ನಲ್ಲಿ ಪರಿವರ್ತನೆಯನ್ನುಂಟುಮಾಡೀತೆಂಬ ಧೈರ್ಯ ನನಗಿರಲಿಲ್ಲ.

ಈ ದಿನವೇಕೋ ಬರೆಯಬೇಕೆನ್ನಿಸಿತು.

ಜನೆವರಿ ೨೧ ರಿಂದ ಏಪ್ರಿಲ್ ೧೬ರವರೆಗೆ ! ಈ ಮೂರು ತಿಂಗಳಿನ ಸಂಧಿ ಕಾಲದಲ್ಲಿ ನಮ್ಮ ಕಾರ್ಮಿಕ ಜಗತ್ತಿನಲ್ಲಾದ ಬದಲಾವಣೆಯ– ಕ್ರಾಂತಿ ಕಹಳೆಯ ಕೂಗನ್ನು, ಮತ್ತೊಮ್ಮೆ ನಿನ್ನ ಕರ್ಣಪಟಲಕ್ಕೆ ತಾಗಿಸುವೆ. ಆ ಕೂಗಿಗೆ ಎಚ್ಚೆತ್ತು ನಮ್ಮ ದೇಶದ ನಿಜೋನ್ನತಿಗಾಗಿ ಹೆಣಗುವ ನನ್ನಂತಹ ಜೀವಕೋಟಿಗಳನ್ನು ನೀನು ನೆನೆ. ಆಗ ದೇಶವನ್ನೆಲ್ಲ ಕತ್ತಲೆ ಘೋರ ದಳ್ಳುರಿಗಳು ಮುತ್ತಿ, ಒಂದೇ ಒಂದು ತುತ್ತಾಗಿ ಸ್ವಾಹಾ ಮಾಡಲು ಹೊಂಚುಹಾಕುತ್ತಿದ್ದುವು. ಆಗ, ಜೀವನಪರೀಕ್ಷೆಯ ವಿಷಮ ವೇಳೆಯನ್ನೆದುರಿಸಲು ಟ್ರಾಮ್‌ಕೆಲಸಗಾರರಾದ ೮೦೦೦ ಹಿಂದೂ–ಮುಸಲ್ಮಾನರು ನಾವು ಒಂದಾದೆವು. ನಮ್ಮ ಕಷ್ಟನಷ್ಟಗಳಿಗೆ ಚ್ಯುತಿ ಕೊಡಲು, ಹೋರಾಡಿ ನವ ಜೀವನದ ತಳಹದಿಯನ್ನು ಭದ್ರಗೊಳಿಸಲು ನಿರತರಾದೆವು.

ಹಿಂದೂ ಮುಸಲ್ಮಾನರು ನಾವು ಸಹಭುಜರಾಗಿ, ದೇಶ ಪರದೇಶಗಳ ಹಿರಿ ಬಂಡವಾಳಗಾರರ ವಿರುದ್ಧ ಹೋರಾಟ ಹೂಡಿದೆವು. ಧನಿಕಜನಸಾಮಾನ್ಯರ ನಡುವಿನ ಮಹದಂತರವನ್ನು ನೀಗಲೆಂದೇ ನಾವು ತೋಳೇರಿಸಿದೆವು. ಕೊನೆಗೊಮ್ಮೆ ನಮ್ಮ ಹೋರಾಟಕ್ಕೆ ಗೆಲುವಾಯಿತು. ಶೋಷಕ ವರ್ಗ ತಲೆಬಾಗಿತು.

ಏಪ್ರಿಲ್ ೧೭ ಆ ದಿನ ಕಲಕತ್ತೆಯಲ್ಲೆಲ್ಲ ನಮ್ಮ ವಿಜಯೋತ್ಸಾಹವನ್ನು ಪ್ರದರ್ಶಿಸಿದೆವು. ನಮ್ಮ ಮುಖಂಡರು, ಕುಸಿಯುತ್ತಿದ್ದ ಜೀವಗಳನ್ನೆಲ್ಲ ಕತ್ತಲೆಯ ಗಡಿಯಿಂದ ದಾಟಿಸಿ, ಬೆಳಕಿನ ದಾರಿ ತೋರಿಸಿದರು. ಜನತೆಯ ಈ ಜೀವನ ಸಮರವನ್ನು ಬಗ್ಗು ಬಡೆಯಲೆಂದು, ಬಂಗಾಲದ ಶೋಷಕರು ಒಡ್ಡಿದ ಅಡ್ಡಿ ಆತಂಕ ನೂರಾರು. ನಮ್ಮ ಮೆರವಣಿಗೆಯನ್ನು ವಿಫಲಗೊಳಿಸುವ ಯತ್ನವಾಯಿತು. ಹಿಂಜರಿಯಲಿಲ್ಲ ನಾವು. ಕೆಂಬಾವುಟವನ್ನೆತ್ತಿ ಎದೆಗಾನಿಸಿ ಹಿಡಿದು, ರಕ್ತ–ಗೀತೆಯನ್ನು ಹಾಡಿದೆವು. ನಮ್ಮ ಕೆಚ್ಚಿನ ಪ್ರದರ್ಶನ ಮಾಡಿದೆವು. ಅವರಾಟ ಮುರಿಯಿತು. ಮುಖ ಬಣಗುಟ್ಟಿತು. ಅವರ ಸಿರಿ–ಸೌಧಗಳಿಗೆಲ್ಲ ಬೂದಿ ಅಡರಿತು !

ಜೂನ್ ೨೯. ನಾವಿಕರ ಬಂಡಾಯದಲ್ಲಿ ಜೀವಬಿಟ್ಟವರ ನೆನಪಿಗೆಂದು, ಹೊಸ ಹುಮ್ಮಸ್ಸಿನಿಂದ ನಾವೆಲ್ಲ ಕಲ್ಕತ್ತೆಯ ಹಾದಿ ಬೀದಿಯ ಕೆಲ ಬಲಗಳನ್ನಾವರಿಸಿ ಸಾಗಿದೆವು. ನಮ್ಮ ರಣಗೀತೆಯ ಒಕ್ಕೊರಲಿನ ಗಡಸು ಗಾಂಭೀರ್ಯಕ್ಕೆ, ಆ ವೀರ ಯೋಧರ ಸ್ಮರಣೆಯಿಂದ ಮತ್ತಷ್ಟು ವೀರಾವೇಶ ಬರಲೆಂದು ಹಾರೈಸಿದೆವು. ಆ ಅಳಿದ ಜೀವಗಳೆಲ್ಲ ಮೌನ ತಾಳಿ ರಕ್ತಸಂದೇಶವನ್ನಿತ್ತರು ನಮಗೆ.

ನಮ್ಮ ಹೋರಾಟಕ್ಕೆ ಮೆಚ್ಚಿ ಬಂಗಾಲದ ಹಿರಿಯ ಪ್ರಗತಿಶೀಲ ಲೇಖಕ ಮಣಿಕ್‌ಬಂದೋಪಾಧ್ಯಾಯರು ''ಸ್ವಾಧೀನತಾ'' ಪತ್ರಿಕೆಯಲ್ಲಿ ಹೀಗೆ ಬರೆದರು:

''ಟ್ರಾಮಿನ ಕೆಲಸಗಾರರಾದ ನನ್ನ ಸಂಗಾತಿಗಳೇ, ನೀವು ಪಡೆದ ವಿಜಯಕ್ಕಾಗಿ ಎದೆ ತುಂಬಿದ ಆವೇಶದಿಂದ ನಾನು ಧನ್ಯವಾದಗಳನ್ನರ್ಪಿಸುವೆ. ಸ್ವೀಕರಿಸಿ! ಲೇಖನಿಯ ನೆರವಿಂದ ಹೊಟ್ಟೆ ಹೊರೆದುಕೊಳ್ಳಲು ಹೊರಟ ಲೇಖಕನೊಬ್ಬನ ವಂದನೆಗಳನ್ನು ಸ್ವೀಕರಿಸಿ! ಈ ನಿಮ್ಮ ವಿಜಯದಿನವನ್ನು ನಾಡು ಮರೆಯುವಂತಿಲ್ಲ. ಈ ನಿಮ್ಮ ವಿಜಯ,

ಕೊನೆಯ ಹೋರಾಟದ ಅವಧಿಯನ್ನು ತೀರ ಸಮೀಪಕ್ಕೆ ತಂದುಕೊಡಲು, ಗುರಿ ಮುಟ್ಟಿಸಲು, ನಾಡಿಗೆಲ್ಲ ನೆರವು ನೀಡುವಂತಿದೆ.''

ಆ ಸಂದೇಶ ನಮ್ಮಲ್ಲೆಲ್ಲ ಹೊಸ ಉತ್ಸಾಹ ಹುಟ್ಟಿಸಿತು. ಮನದ ಸಡಿಲತನವನ್ನು ಕಡಿದೊಗೆಯಿತು. ಆ ಸಂದೇಶ ಕಳಿಸಿದ ಸಾಹಿತಿ ನಮ್ಮಂತೆಯೇ ಹೋರಾಟ ಪ್ರೇಮಿ ಎಂಬುದನ್ನರಿತೆವು. ನಮ್ಮ ನಾಡಿನ ಬರೆಹಗಾರರೆಲ್ಲ ಬಂದೋಪಾಧ್ಯಾಯರ ಅನುಯಾಯಿಗಳಾದರೆ ನಮ್ಮಂಥ ಕಾರ್ಮಿಕರಿಗೆ ಎಷ್ಟು ಹಿಗ್ಗು ! ಎಂದು ಉದ್ಗಾರ್ರ ತೆಗೆದೆವು. ಇತರರು ನಮ್ಮೆಡೆಗೆ ದೃಷ್ಟಿ ಬೀರಬೇಕೆಂದು ಆಹ್ವಾನಿಸಿದೆವು.

ಈ ಹೋರಾಟ ನಡೆಸುವವರೆಲ್ಲರೂ ಎಷ್ಟೊಂದು ನೊಂದವರು! ನೀನದನ್ನು ಅರಿಯಲಾರೆ. ನಮ್ಮಲ್ಲೆಷ್ಟೋ ಜನ, ಸ್ವಲ್ಪವಾದರೂ ಅವಕಾಶ ದೊರೆತಿದ್ದರೆ ಸ್ವಲ್ಪ ವಾದರೂ ಸಹಾಯ ದೊರೆತಿದ್ದರೆ, ದೊಡ್ಡ ದೊಡ್ಡ ಕಲಾವಿದರಾಗುತ್ತಿದ್ದರು. ಪ್ರತಿಭಾವಂತ ಪ್ರಗತಿಶೀಲ ಸಾಹಿತಿಗಳಾಗುತ್ತಿದ್ದರು, ನಮ್ಮ ದರಿದ್ರ ದೇಶದ ಉನ್ನತಿಗಾಗಿ ಜನರನ್ನು ಜಾಗೃತಗೊಳಿಸಲು ಶಕ್ತಿ ಮೀರಿ ನೆರವು ನೀಡುವವರಾಗಿದ್ದರು. ''ಆ ಅವಕಾಶ ದೊರೆತಿದ್ದರೆ'' ಎನ್ನುವ ಮಾತೆಲ್ಲ ಬರಿಯ ಆಸೆ. ಹೀಗಿದ್ದರೂ, ''ಈ ಕಷ್ಟದ ಕತ್ತಲೆಯ ಕಾಲದಲ್ಲೂ ಅರೆಕ್ಷಣ ಬಿಡುವಿದ್ದರೆ ನಮ್ಮ ಹುಟ್ಟು ಗುಣವಾದ ಕಲೆಯ ಮೇಲ್ಮೆಗಾಗಿ ನಾವು ಜೀವ ಸವೆಸುತ್ತೇವೆ,'' ಎಂದು ಅಂಥ ಜೀವಿಗಳೆಲ್ಲ ಆಗಾಗ್ಗೆ ಹೇಳುವುದನ್ನು ನಾನು ಕೇಳುತ್ತಿರುತ್ತೇನೆ.

ನವರತ್ನ– ನನ್ನ ಸಹೋದ್ಯೋಗಿ ಆತ. ಈ ಜತೆಗಾರನ ನೆನಪೊಂದು ನನಗೆ ಧೈರ್ಯದ ಆಸರೆ. ತನ್ನ ಬಾಂಧವರ ಹಿತಕ್ಕಾಗಿ ದುಡಿದು, ಅವನು ಅದೆಷ್ಟೋ ಸೊರಗಿದ್ದಾನೆ, ಸಣ್ಣಾಗಿದ್ದಾನೆ. ಹೋರಾಟದ ಚಿಂತನೆಯಲ್ಲಿಯೇ ಅವನು ದಿನ ಕಳೆಯು ತ್ತಾನೆ.

ಇನ್ನೊಬ್ಬ ಗೆಳೆಯ ಹರಿನ್. ಆತ ಹೇಳುತ್ತಾನೆ : ''ಸಮತಾವಾದವು ಪುಸ್ತಕದಲ್ಲಿ ಹುದುಗಿಕೊಂಡಿಲ್ಲ, ದಿನನಿತ್ಯದ ಅನುಭವ, ನಮ್ಮ ಬಡತನ ಆಸೆ,ಪ್ರತಿಗಾಮಿತ್ವದ ದಬ್ಬಾಳಿಕೆಯನ್ನಿದಿರಿಸುವ ನಮ್ಮ ನೀತಿ, ಇವುಗಳಿಂದಲೇ, ಮಾರ್ಕ್–ಎಂಗೆಲ್ಸ್‌ರನ್ನು ನಾವು ಕಂಡುಕೊಳ್ಳಬೇಕು. ಆದೇ ನಿಜವಾದ ಸಮತಾವಾದ.''

ನಿನ್ನೆ ನಮಗೆಲ್ಲ ಸಂಬಳ ದೊರೆಯಿತು. ಸಂಬಳದ ದಿನವೇ ನಿಧಿವಂತಿಗೆ ಕೊಡುವದು. ಆ ದಿನ ಹರಿನ್ ಊಟ ಬಿಟ್ಟು, ವಿಶ್ರಾಂತಿಯನ್ನು ಅಪೇಕ್ಷಿಸದೆ, ''ನಿಧಿ ಡಬ್ಬಿ''ಯೊಡನೆ ಹೊರಟ. ಆಸ್ಪತ್ರೆಯಲ್ಲಿ ನರಳುತ್ತಿರುವ ರಾಜಕೀಯ ಸಂತ್ರಸ್ತರಿಗಾಗಿ ಸಹಾಯ ಕೂಡಿಸಿದ.

ಇದೆಲ್ಲವನ್ನು ಮನದೆದುರು ತಂದುಕೊಂಡು ನಮ್ಮ ಬಾಳಿನ ಏನೇನೋ ಕತೆ ಬರೆಯಬೇಕೆನಿಸುತ್ತದೆ. ಆದರೆ, ತಾಂಬೂಲ ಸೇವಿಸುವಾಗ ಸುಣ್ಣ ಹೆಚ್ಚಾಗಿ ಸುಟ್ಟ ನಾಲಿಗೆಯಂತಾದ ನನ್ನ ಮನ, ಬರೆಯಗೊಡುವುದಿಲ್ಲ. ನಮಗಾಗಿ ಬರೆಯುವ ಲೇಖಕರಿಲ್ಲವೇ ? ಅವರು ನಮ್ಮ ಕತೆ ಬರೆಯಲಿ ; ಹಾಳು ಕಲ್ಪನಾ ರಾಜ್ಯದಿಂದ ಹೊರ ಬಂದು ಬರೆಯಲಿ ; ಎಂದು ಸುಮ್ಮನಾಗುತ್ತೇನೆ.

ಹೋರಾಟದಲ್ಲಿ ವಿಜಯ ದೊರೆತ ಆ ದಿನದ ವೈಭವ ನನ್ನ ಮನವನ್ನಾವರಿಸುತ್ತದೆ. ಆ ದಿನ ಊರಿಗೆಲ್ಲ ನಮ್ಮ ನಗೆಯನ್ನು ಹಂಚಿಕೊಟ್ಟೆವು. ನಮ್ಮ ಕಥೆ ಹೇಳಿ ಅವರ ವ್ಯಥೆಯ ಹುಟ್ಟಿಗೆ ಅಳಿವು ತಂದೆವು.

ಮನೆ ಮುಟ್ಟಿದೆ. ತಂಗಿ ನನ್ನ ಬರವನ್ನೇ ನಿರೀಕ್ಷಿಸುತ್ತಿದ್ದಳು. ನನ್ನನ್ನು ಕಂಡೊಡನೆ ತಂಗಿಯ ಉತ್ಸಾಹದ ನಗೆ, ಮನೆ ತುಂಬ ತನ್ನ ರಾಜ್ಯ ಕಟ್ಟಿಕೊಂಡಿತು. ನನ್ನ ಮುಖಚರ್ಯೆಯ ಗೆಲುವು ತಂಗಿಯ ಎದೆ ಸೇರಿ, ''ಅಣ್ಣಾ ನೀನು ಗೆದ್ದು ಬಂದೆ!'' ಎನ್ನಿಸಿತು.

ತಂಗಿಗೆ ಎಂದಿಲ್ಲದ ನಗೆ ಬಂದುದರ ಮೂಲ ಕಾರಣವೇನು ? ಎಂದೆಲ್ಲ ವಿಚಾರಿಸಿದೆ. ವಿಚಾರದ ಸುರುಳಿ ಒಂದು ಉತ್ತರದಲ್ಲಿ ಪರಿಸಮಾಪ್ತಿಯಾಯಿತು.

ನಮ್ಮ ಹೋರಾಟದಲ್ಲಿ ನಾವು ಜಯಶ್ರೀಯನ್ನು ಒಲಿಸಿಕೊಂಡಿದ್ದೆವು.

ಬಹಳ ಹೊತ್ತು ನನಗೆ ಸಮಾಧಾನ ಕೊಡುವ ಉತ್ತರವಾಗಿರಲಿಲ್ಲ ಅದು. ''ನನ್ನ ತಂಗಿ, ತಂಗಿಯಂತಹ ಇನ್ನೂ ಸಹಸ್ರ ಹಸುಗೂಸುಗಳು, ಇನ್ನು ದಿನ ದಿನವೂ ಕ್ಷಣ ಕ್ಷಣವೂ ನಗುತ್ತಿರಬೇಕು. ಆ ನಗೆಯ ಗೆಲುವಿಗಾಗಿ ನಮ್ಮ ಕೊನೆಯ ಹೋರಾಟ ಬಿರುಸಾಗಬೇಕು'' ಎಂಬ ವಿಚಾರಲಹರಿ ಮತ್ತೆ ಮೈಯುದ್ದಕ್ಕೂ ಹರಿಯತೊಡಗಿತು.

ಕೊನೆಗೆ ನಾನೆಂದೆ :

''ತಂಗೀ ! ನಾನು ಗೆದ್ದು ಬಂದೆ. ನಾವು ಎಲ್ಲವನ್ನೂ ಗೆಲ್ಲುವುದಕ್ಕೆಂದೇ ಜೀವ ತಾಳಿದ್ದೇವೆ. ಕಳೆದುಕೊಳ್ಳುವುದೊಂದೇ ಇದೆ– ಅದು ನಮ್ಮ ಬೇಡಿ. ಇನ್ನೂ ಗೆಲ್ಲಬೇಕು. ಗೆಲ್ಲಲು ಬಹಳವಿದೆ– ಅದು ಈ ವಿಶಾಲ ವಿಶ್ವ !''

ನಮ್ಮ ಓಣಿಯ ಕಿರು ಮನೆಯ ಎಲ್ಲ ಮಕ್ಕಳೂ ಅಂದು ಒಂದಲ್ಲ ಒಂದು ರೀತಿಯಿಂದ ಉಬ್ಬಿ, ಹೊಸ ದಿನದ ಒಂದು ಹಬ್ಬವನ್ನಾಚರಿಸದಿರಲಿಲ್ಲ! ಆ ದಿನ ಮತ್ತೆ ಟ್ರಾಮುಗಳೆಲ್ಲ ಓಡತೊಡಗಿದವು. ಕೆಲಸಗಾರರ ಮಕ್ಕಳಿಗೆಲ್ಲ ಮತ್ತೆ ಅಲ್ಲಿ ಸುಳಿದಾಡುವ ಯೋಗ ಒದಗಿತು !

ಅದೇ ಕ್ಷಣ, ಅವ್ಯಕ್ತ ನುಡಿಯೊಂದು, ಎದೆಗುಂದಿಸಿದ ಸೆಳೆತವೊಂದು, ಎರಡೂ ಸೇರಿ ನಿನ್ನನ್ನು ಮತ್ತೆ ನನ್ನ ಮನದೆದುರು ಹಿಡಿದು ತಂದುವು......

......ಚಳಿಗಾಲದ ನವಂಬರದ ಆ ದಿನದ ಮುಂಜಾವು. ಮೊದಲ ವರ್ಗದ ಕಂಪಾರ್ಟ್‌ಮೆಂಟಿನಲ್ಲಿ ನಾನು ಕೆಲಸ ಮಾಡುತಿದ್ದ ಟ್ರಾಮಿನಲ್ಲಿಯೇ ಕುಳಿತ ನೀನು!....ಮತ್ತು ನಿಂತ ನಾನು !

ನೀನು ಸುಶಿಕ್ಷಿತೆ. ನಾಗರಿಕತೆಯ ಹೊಸ ಬಗೆಯ ಆಭರಣ ಧರಿಸಿದ ಶ್ರೀಮಂತ ನವತರುಣಿ. ನಿನ್ನೆದುರಿಗಿದ್ದ ನಾನು ಬಡವ......ಮತ್ತೆ ನನ್ನ ತಂಗಿಯ ನೆನಪು. ಸಂದಿಯೊಂದರಲ್ಲಿಯಾದರೂ, ಇದ್ದುದರಲ್ಲಿಯೇ ನಕ್ಕು, ಹೊಸ ಬಾಳಿಗಾಗಿ ತವಕಿಸುವ, ನನ್ನ ಒಲವಿನ ನಾಡಿನ ಸಂಸ್ಕೃತಿಯ ಗುಡಿಯ ಹೊಂಗಳಸವಾದ– ನನ್ನ ತಂಗಿ ! ಆ ತಂಗಿ ನನ್ನನ್ನು ಸ್ವಾಗತಿಸುತ್ತಿದ್ದಾಳೆ– ವಿಜಯಿಯಾಗಿ ನಾನು ಮನೆಯೊಳಗೆ ಅಡಿ ಇಡುವಾಗ !

ಆದರೆ ನೀನು ? ಆ ವಿಜಯವನ್ನೇ ಅಧೋಗತಿಯೆಂದು ತಪ್ಪು ಭಾವಿಸಿ ನನಗೆ ಶಾಪ ಕೊಟ್ಟೆಯಲ್ಲವೆ ? ಎಷ್ಟು ಅಂತರ!

ನಮ್ಮ ಓಣಿಯಲ್ಲೆಲ್ಲ ಅಂದು ಒಸಗೆ ಉತ್ಸಾಹ. ನಿನ್ನ ಸಡಗರದ ಮನೆಯನ್ನು ಅಂದು ಕತ್ತಲು ಅಪ್ಪಿಕೊಂಡಿತ್ತೇ ?

ನಾವೆಲ್ಲ ಮುಷ್ಕರ ಹೂಡಿದಾಗ, ನಾನು ದಿನವಿಡೀ ನಿಧಿ ಸಂಗ್ರಹಕ್ಕಾಗಿ ತಿರುಗುತಿದ್ದೆ. ಕಲ್ಕತ್ತೆಯ ಒಂದು ತುಣುಕು ದಾರಿಯನ್ನೂ ನಾನು ಸುತ್ತದೆ ಇರಲಿಲ್ಲ. ನಿಮ್ಮ ಓಣಿಯಲ್ಲಿ ನಿನ್ನಂಥ ಮಧ್ಯಮ ವರ್ಗದ ಹೆಣ್ಣು ಮಗಳೊಬ್ಬಳು ದಿನವೂ ನನ್ನ "ನಿಧಿ ಡಬ್ಬ"ಕ್ಕೆ ಹಣ ಹಾಕಿ ಹೋಗುತಿದ್ದಳು. ಆಕೆ ಮಾತ್ರ ನಿನ್ನಂಥ ತಿರಸ್ಕಾರದ ನೋಟ–ಭಾವನೆಯವಳಾಗಿರಲಿಲ್ಲ. ನಮ್ಮ ಹೋರಾಟದ ಬಗ್ಗೆ ಆದರವಿತ್ತು ಆಕೆಗೆ.

ನೀನು ಮಾತ್ರ ನನ್ನನ್ನು ಆ ದಿನ ನೋಡಿ ತಿರಸ್ಕಾರ ಪಟ್ಟೆ. ನಾವು ಕೈಕೊಂಡ ಕಾರ್ಯದ ನಿಜ ಸ್ವರೂಪವನ್ನು ಅರಿಯದಷ್ಟೂ ನಿನ್ನ ಕಣ್ಣುಗಳು ಕುರುಡಾಗಿದ್ದುವು. ಆ ೮,೦೦೦ ಹಿಂದೂ ಮುಸಲ್ಮಾನರ ಐಕ್ಯ ಸಾಧಿಸಿ, ಏಕಮುಖವಾಗಿ ನಡೆಸಿದ ನಮ್ಮ ಹೋರಾಟದ ವಿಸ್ತಾರ, ನಿನ್ನನ್ನು–ನಿನ್ನ ಕಲ್ಲೆದೆಯನ್ನು–ಕರಗಿಸಲಿಲ್ಲವೆ ? ನನಗಾಗ ಮಿತಿಯಿಲ್ಲದ ವೇದನೆಯಾಯಿತು. ನನ್ನನ್ನು ನಾನೇ ನಂಬದಾದೆ. ನಮ್ಮ ಹಿಂದಿನ ಸಂಬಂಧ ಹೀಗಾಯಿತೇ ? ಎಂದುಕೊಂಡೆ.

ಟ್ರಾಮ್ ಕಂಡಕ್ಟರನಾದ ಮೊದಲ ಕೆಲವು ದಿನ ನಾನು ಬಹಳ ಅಪಮಾನ ಸಹಿಸಿದೆ. ಕೆಲಸ ಬಿಟ್ಟು ದೂರ ಓಡಿಹೋಗಬೇಕೆನಿಸಿತು. ಆದರೆ ಹಾಗೆ ಮಾಡದೆ "ನಾನು ಜೀವನದಲ್ಲಿ ನಗೆ ಕಾಣುವುದು ಇದೇ ಕೆಲಸದಲ್ಲಿ, ಬೇರೆ ಕಡೆಯಲ್ಲಲ್ಲ" ಎಂದು ನಿರ್ಧಾರಕ್ಕೆ ಬಂದೆ, ನೀನು "ಒಳಿತಾಯಿತು" ಎನ್ನುವೆ ಎಂದು ಕಾದಿದ್ದೆ.

ದೂರ ದೂರ ಸಿಡಿದ ಜಾತಿ ಮತಗಳ ಐಕ್ಯ ಸಂಪಾದನೆಗೆ, ನಮ್ಮ ಹೊಸ ಬಗೆಯ ಹುಟ್ಟಿಗೆ, ನಾವು ಟೊಂಕ ಕಟ್ಟಿ ನಿಂತು ರಣ ಕಹಳೆಯನ್ನು ಊದುತ್ತಿರುವಾಗ, ಪರದೇಶಗಳ ಪ್ರವಾಸಿಕರೂ ನಮ್ಮ ಮೇಲೆ ಸಹಾನುಭೂತಿ ತೋರಿಸುತ್ತಾರೆ. ದೇಶದ ಮುಖಂಡರೆಲ್ಲ "ಸ್ವಾತಂತ್ರ್ಯ ಸಾಧನೆಯಲ್ಲಿ ನಿಮ್ಮ ಸ್ಥಾನ ದೊಡ್ಡದು, ನಿಮ್ಮನ್ನು ನಾವು ಗಮನಿಸದೆ ಇರಲಾರೆವು" ಎನ್ನುತ್ತಾರೆ.

......ನಾವು ಕೇವಲ ಟ್ರಾಮ್ ಕೆಲಸಗಾರರಲ್ಲ, ನಾಡಿನ ವೀರಯೋಧರು. ಇದನ್ನು ನೀನು ಮನಗಾಣು.

ಬಡವರಾದ ನಾವು ಮತ್ತು ನಿಮ್ಮ ಧನಿಕ ಕುಲವು ನಿಂತ ನೆಲವೊಂದೇ ಒಂದು ! ನಿಮ್ಮ ಈ ಬಗೆಯ ಅಂಧ ದುರಭಿಪ್ರಾಯದ ಹೊಲಸು ನೀರಿನ ಹೊಳೆ, ನಮ್ಮ ಸುಂದರ ನೆಲವನ್ನು, ನಮ್ಮ ಹಿರಿಮೆಯ ಸಂಸ್ಕೃತಿಯನ್ನು, ನಮ್ಮಂತಹ ಕಾರ್ಮಿಕರ ಎದೆಗಳನ್ನು, ಇಬ್ಭಾಗಿಸದಿರಲಿ ! ಆ ಹೊಲಸು ನೀರಿನ ಕೊರಕಲು ಹೊಳೆಯಲ್ಲಿ ನೀವು ಕಾಣುವುದೇನು ? ಕಲಂಕಿತ ನೀರನ್ನಷ್ಟೇ ಅಲ್ಲವೆ ?

ಪ್ರಿಯೆ–ನನ್ನ ಕೊನೆಯ ಪ್ರಶ್ನೆಯಿದು :

''ಇನ್ನೊಮ್ಮೆ ಅಪ್ಪಿತಪ್ಪಿ ನನ್ನನ್ನು ನೋಡಿದರೆ, ಹಿಂದಿನ ಸಲದಂತೆ ಮುಖ ಮುದುಡಿಸುವೆಯಾ ?''

ನೀನು ಹಾಗೆ ಮಾಡಲಾರೆ ; ನಿರ್ಮೋಣಿಯವಳೇ ಆದ, ಮಧ್ಯಮ ವರ್ಗದವಳಾದ, ನಮ್ಮ ನೆರವಿಗೆಂದು ''ನಿಧಿ ಡಬ್ಬಿ''ಗೆ ಹಣಕಾಸು ನೀಡಿದ, ತಿಳಿವಳಿಕೆಯ ಆ ಇನ್ನೊಬ್ಬ ಸೋದರಿಯನ್ನು ನೀನು ಅನುಸರಿಸುವೆ; ಎಂಬ ಆಸೆಯಿದೆ ನನಗೆ.

ಎಂದು

ಧನಂಜಯ ಘೋಷ್

ಅನುವಾದ :

೧೦/೮/೧೯೪೭

ಶ್ರೀ ಧನಂಜಯ ಘೋಷ್ (ಬಂಗಾಳಿ ಕಾರ್ಮಿಕ–ಸಾಹಿತಿ) ಅವರ ಈ ಕತೆ ''ಸ್ವಾಧೀನತಾ''ದಲ್ಲಿ ಪ್ರಕಟವಾಗಿತ್ತು. ಮೂಲಕತೆಯ ಭಾವಾನುವಾದವಾಗಿರುವ ಈ ಕತೆ 'ಜನಶಕ್ತಿ'ಯಲ್ಲಿ ಮೊದಲು ಮತ್ತು 'ನಮ್ಮ ನಡುವಿನ ಗೋಡೆ' ಎಂಬ ಕಥಾಸಂಕಲನ (ಪುರೋಗಾಮಿ ಪ್ರಕಾಶನ, ಬೆಂಗಳೂರು ೧೯೫೧) ದಲ್ಲಿ ಮರು ಪ್ರಕಟಗೊಂಡಿತು.

□□

ಭಾಗ ನಾಲ್ಕು

ತ್ರಿಪದಿ ಹಾಗೂ ಇತರ ಹಾಡುಗಳು

*

ಹೆಣ್ಣೆದೆಗೂ ಬೇಕು ಬೆಳಕು, ನಾಡವರೆ
ಕೇಳಿರಿದೊ, ಬೇಡುವುದ ನಾಡಗಂಭೀರೆ
ಕಣಕಣದಿ ಹರಿಯುತಿದೆ ರಕ್ತನದಿ ನೋಡಿ
ಕೇಳಿರಿದೋ–ಹಿಗ್ಗುತಿದೆ ಹೆಣ್ಣೆದೆ ಹಾಡಿ

*

ನಗೆ ನಾಡು

ರಾಯಾರ ಸಿರಿನಾರಿ ಸೀರಿ ಭೂಮಿ ತುಂಬ
ಕುಣಿ ನವಿಲ ರೇಸಿಮಿಗಡಲ : ದಡಿಗುಂಟ
ಜರತಾರಿ ಬೇಲಿ ಕಬ್ಬೀನ !

ರಾಯಾರ ನೀ ಹಂಪಿರಾಣಿಯುಟ್ಟಾಳವ್ವ
ತೇರ–ಸೆರಗೀನ ಸಿರಿಸೀರೆ ! ನಗಿನ್ನಾರೆ
ಸುತ್ತಿಬರಲೆಂದ ನಗಿನಾಡ !

ರಾವುತರ ಮಾವುತರ–ಸೇವೀಸಿ ರಥದೇರ
ರಾಯರನ ನಮಿಸಿ ಕರದಾರ : ಬರದಾರ–
ಹಂಪಿಯರಸಯ್ಯ ಸಲವೆಂದ !

ತೇರ ಹೊಂಟೈತೆವ್ವ–ಮೂರಹರದಾರೆವ್ವ
ಪರಿವಾರ ಪರಿಯ ಸಿರಿಸಿದಿಯ : ತುಂಗವ್ವ
ಎದಿನೀರ ಸಿಂವಿಯ ನೆನೆನೆನದ.

ಮೋಜ ಮೂಜಗ ತುಂಬಿ ಮಾಜದ ನಗಿ ನಂಬಿ
ಪವುಜವ್ವ ಪುಣ್ಣೇದ ನಾಡ : ನಗಿನಾಡ–
ಪಂಜೀನ ನಾಡ ಬೆಳಗ್ಯಾರ.

''ಸುಖ-ದುಃಖ''

ಜಮಕಾನದಾಗೀನ ಬಣ್ಣದಂಗವ್ನೋಡ
ಜನುಮಾಕ ಸುಖ– ದುಃಖದಾಟ ! ಜಯಮಾಲಿ
ಹಿಡದ ನಿಂತೈತೆ ನಗಿ ನಗತ !

ದುಃಖ ಬಂದರವಾವ ಅಕ್ಕರತಿ ಮರತ್ಯಾಕೊ ?
ಮಕ್ಕಳ ಮ್ಯಾಲ ಮಲಿನಿಂತ : ಹಣ್ಣಾದೆ
ಮೆಕ್ಕಿನೀ ವಿಷವ ಬಿಡದೇನೊ ?

ಛತ್ತರಾ ಗುಡಿಸ್ಯಾರ ಹೊತ್ತಿದನ್ನದ ಹೊಟ್ಟೆ
ಹೊತ್ತ ಬಡವಾರ, ನಿಲದೇರ ! ಸತ್ತರಗಿ
ನಳ್ಳೀತ್ಯೆದಾರ ನಾಡವರ !

ಮುಳ್ಳ ಕೊಳುವೂತಾನ ಸಲ್ಲಾದ ದಾರೀಗೆ
ದೊಳ್ಳಾರಿ ಕಾಲ ಮುರದಾರ : ಬಳೆಶ್ಶೊಳ್ಳಿ
ಕೊಳ್ಳಾದ ಕೈಯ ಹೋಲ್ಯಾವ !

ಸೀಳ ದಾರೀ ಕಂಡ ಹಾಳ ಸುರದಂಗಾದೆ
ಬಾಳೀನ ಬಗಿಯ ಬಯಲಾದೆ : ಸುಖ ದುಃಖ
ಒಳಕೊಂಡ– ತೆಲಿ ಬೆಳ್ಳಗಾದೆ !

□□

ನಾಡ-ಸಿರಿ

ಮರಿಯಾದಿ ಮಾನಾಡ ಮನಿಯಾಗ ಮಾನವ್ವೆ
ಹಿರಿಯಾರ ಹೊತ್ತ–ಹೊರಿ–ನಾಡ ! ತನ್ನೀರೆ
ಆರತಿಯ ಚೆನ್ನ ಮಕ್ಕಳಿರ !

ಗಂದಚೆಂದದ ಸೆಕ್ಕಿ, ಮುಂದವ್ವ ಸಣ್ಣಕ್ಕಿ,
ನಿಂದಾರ ಸೊಕ್ಕಿ ಕಲಿಗಳ : ತಂದಾರ
ತಂದೆ ತಾಯರಿಗೆ ಗಂಡೆಂದ

ಇಂದಿರನ ಲೋಕಾದ ಮುಂದಾದ ಮನಸೇನ ?
ಚೆಂದ ಚೆಲುವೀನ ಒಡೆಯಾರ : ಚಂದರನ
ಹಿಂದಿಟ್ಟ ಬಂದ ನಾಡೀನ !

ತೆಳಗ ತೆಂಗಿನ ಸಾಲ ಮ್ಯಾಲ ಹಿಮಗಿರಿ ಸಾಲ
ತುಂಗವ್ವ ನಾಡ ಬಲನಾಡ : ಗುಡಿನಾಡ
ಗೋಪುರದ ಹಂಪಿ–ವಿರುಪಾಕ್ಷಿ !

ಗಂಗಾಳಗುಲದವರ ತಂಗಳಡಗೀಯಂಗ
ಮಂಗಳವ ನಮ್ಮ ನಾಡಾಗ : ಗಂಗೀಯ
ನೀರಂಗ ನಾಡ ಬೆಳಿಯಂಗ !

ಹೆಸರೆತ್ತಿ ಹೇಳಿದರ ಉಸಲ ಸಾಲದ ದುರ್ಗೆ,
ಸನಿಯಾಳೆ ಇಂದಿದ್ದರೇನ ? ಮನಿಮನಿಗೆ
ದುಡುದುಡದ ನಾಡ ಮಕ್ಕಳರೊ !

ಕೇಸು ಕೇಶದ್ದಂಗ, ಬಾಳಿ–ಬೆಳವಲದಂಗ
ಹೂವೀನ ತೆನಿಗೊನಿಯಂಗ : ನಾಡೀನ
ಸಿರಿನಿರಲಿ ಉಳದ ಬೆಳಬೆಳದ !

ಆಗಸ್ಟ ೧೯೪೪ ರ 'ವಾಣಿ'ಯಲ್ಲಿ
ಪ್ರಕಟಿತ.

□□

‘‘ಒಡನಾಡಿ’’

ಮುಕ್ಕ ಹಾಕಿದ ಮ್ಯಾಲ ನಕ್ಕಂತ ನಗಿಯಂಗ
ಹಿಟ್ಯಾದೆ ನಾಕ ಸುತ್ತೀಗೆ : ಹರಿಯೇಕ
ಮಡದ್ಯಾದೆ ಕೂಡಿ ನಗಿಯಾಡು

ಕಲ್ಲೆದಿ ಕರಗೀತ ಮಲ್ಲೀಗಿ ಅಳ್ಳೀತ
ಸೊಲ್ಲ ನನಮಗನ ನಿನನಲ್ಲಿ: ಕೇಳಿದರ
ಹೊಲ್ಲದ ಜೀವದ್ದೊಗ್ಗಿಯಡಗೇ

ತಣ್ಣನ್ನ ನೀರಾಗ ಬೆಣ್ಣೆ ಕರಗೀತೇನ
ಉಣ್ ಏಳೋ ಹೆಣ್ಣ ತರುವೀನಿ : ನನ್ನಣ್ಣಾ
ಮಾಣೆಹಾಕಿ ಮನಸ ಉಣ್ ನೀಡು !

ಕಟ್ಟೀದ ರೊಟ್ಟೀಗೆ ಹೊಟ್ಟೆಂಗ ತುಂಬೇತೋ
ಕೊಟ್ಟ ಕಳಿವೀನಿ ನಿನಮಡದೀ : ನನತಮ್ಮಾ
ನೆಟ್ಟಗ ಹಿಡಿಯಾ ಹೊಲದ್ವಾದಿ !

ತಟ್ಯಾಗ ತುಂಬಿಟ್ಟ ಕೆಟ್ಟ ಕಿತ್ತಳಿಯಂಗೊ
ಇಟ್ಟಂತ ನಿನ್ನ ಸೂಳ್ಯಾರೋ : ಕರದಾಳೊ
ಕಟ್ಯಾಣಿ ನಿನ್ನ ಒಳ ಹೋಗೊ !

ತೀಡ್ಯುಟ್ಟ ಸೀರ್ಯೆವಳ ಮುಡಿಗೆ ಹೂನಿಟ್ಟವಳ
ನಡುವಾಗ ನಾಡ ಮರಸವಳ : ಕೈಹಿಡದ
ಪಡದಾನ ಪೊಡವೀಯ ಸಿರಿಯ !

‘‘ತೇರಜಾತರಿನೆಂತ ಊರೀಗೆ ಹ್ವಾದೋಳ
ಮಾರಿ ಕಾಣೂದಕ ಎರವಾದೆ : ಮೂಲೋಕ’’
ಅಂತಾನ ನೋಡ ಅವ್ವಣ್ಣ !

□□

ತವರಿಗೆ ಬಂದ ತರುಣಿಗೆ

ಬೆತ್ತಾಸದಾಣಕ್ಕ ಹೊತ್ತೆಷ್ಟ ಬೇಕವ್ವ,
ನತ್ತೀನ ಮೂರಿ ನಗಿಮಗಳ : ರಾಯಾರ
ಸತ್ತೀನಿ ನೆಳ್ಳಿಗೆಷ್ಟೊತ್ತ?

ನಿತ್ಯನೇಮವು ಮಾಡ ಮೆತ್ತಗೊಳ್ಳಿದೂಡ
ಪುತ್ತಳಿಯ ಸರದ ಪುರಿಮಗಳ : ರಾಯಾರಿಗೆ
ಗೊತ್ತಾಗ ಹೊತ್ತಹೊತ್ತೀಗ !

ದೇವರ್‍ಯಾತಕು ನಿನ್ನ ದೈವಾಕ ರಾಯರ
ಸಾವಿತ್ತಾಗುಣದ ಸಿರಿನೇತ್ರೀ : ಸಲಿಸ್ಯಾನ ?
ಕಿವಿಗೊಡ ಸವಿಗೆ ನನಮಾತ–'

ದಾವತಿ ಮಾಡಿದರ ಪೂವಸಿರಿ ತ್ವಾಟಕ್ಕ
ಪಾವನ-ನೋಡ ನೆಲಗಾಡ : ನೀನರಿಯಾ
ಜೀವಾದ ಕೈಯ–ನಿನರಾಯ

ನೀರೀಗಿ ಸಿರಿತೋರ–ನಾರಿನೀ ಮೊಗದೋರ
ರಾಯಬಂದಾರ ನಗಿದೋರ : ಬಗಿದೋರ–
ಭಾಗ್ಯನೀವೆಂದ ಒಲಿದಾಡ.

□□

ತವರು ಬಿಡುವ ತರುಣಿಗೆ

''ಗಾಳ್ಯೊಂದ ಬೀಸೀದೆ ಬಾಳಿ ಫಲಸೂವಂತ
ಬೆಳುವಲದ ನಾಡ ವನಕೆಲ್ಲಿ : ಹಿರಿಯವ್ವ,
ಬಳಗಾದ ಮುತ್ತ ಬಯಕ್ಯೇನ ?''

''ಹೆಣ್ಣೊಂದ ಮನಿಯಾಗ ಅಣ್ಣನ ಮನಿಗಿತ್ತ
ಹಣ್ಣಾದನೋಡ ನನ ಸೊಸಿಯ : ಮನಿಮುತ್ತ
ಎರಬಗನ್ಯಾದ ಕಿಂವಿಯವಳ''

''ಚಿಕ್ಕನೀ ಮಗಳನ್ನ ತಕ್ಕ ಗಂಡನ ಮನಿಗೆ
ಕಳವೂದ ದಿನದ ಬರವೇನ ? ಅತ್ತೆವ್ವ
ಹೊಳಿದಾಟಿ ಕಳ್ಳ–ಕುಡಿನೀರ ?''

''ಮಕ್ಕಳಂಬವರೆಲ್ಲ ತಕ್ಕಡೀಯಂಗವ್ವ,
ತವರೀನ ಪಡ್ಡಿ ಮೇಲಾದೆ : ಗಂಡಾನ
ತೂಗಮಣಿಗ್ಯೆವಳ ಒದಿವಾದೆ''

''ತೂಗಮಣಿಗೊಲದವಳ–ಬಾಗ್ಯೇದ ರಾಯಾರ,
ಸಾಗೋಳಿ ಹೊಲದ ಪಡದವಳ : ನನಮಗಳ (ಅತ್ತೆವ್ವ)
ಕಿಂವೀಗಿ ನಾಕ ಮತಿ ಹೇಳ''

''ಬಾರವ್ವ ಮಮ್ಮಗಳ, ಭಾರವ್ವ ನಗಿಮಗಳ,
ಸಿರಿನಿನ್ನ ತುಟಿಗೇನಣಸೀತ : ನಾರ್‍ಯಾರ
ಹದಬಂದ್ಹಬ್ಬಾದ ಸವಿಸವಿಯ''

''ಮಗಳ, ಮಂಗಳಗೌರಿ ಎರವಾದೆ ತವರನ್ನ
ತಳ ನಿನಗ ಇನ್ನ ತೊಳಿ ಹಚ್ಚಿ : ನಗಿನಗುವ
ಹಿರಿಯಾಳ ಮಾತ ಕಿಂವಿಗೊಡ !

ಮಿದನೇರಿ ಮನಿಯಾಗ ನಗಿನಕ್ಕ ಮಮ್ಮಗಳ
ಹದಬಂದೆ ನಿನಗ ಹದನಾರ : ಮುದಿತೇರ
ಎಳದ ಎರವಾದೆ ನಮಮನಿಯ !

ರಾಯಾರ ಬಂದಾರ ಬಾಯಾರಿ ನನ ಮುದ್ದ
ತಂಗಾಳಿ ಬೀಸ ತನಿ ಹನಿಯ : ಮಂಗಳದ
ಮನಸಂಬು ಹೊಲದ ಮುದುಬೆಳದ !

ಹೊಸಗನ್ನಿ–ಹುಸಿಗೆನ್ನೆ, ಅಂದಾರ ಅತ್ಯಾರ
ಗಲ್ಲಾದ ಗಳಿಗಿ ತುಂಬಿರಲೆ : ಬೆಲ್ಲಾದ
ಸಂವಿ ಸೂಸು ನಗಿಯ ಒಳಹೊರಗಾ!

ತಂದಿ–ನಿನ ಮನಿಅಂದ ಹೊಂದಿಸಿಕೊಂಡೊಯ್ಯ
ಚೆಂದಾದ ಚೆನ್ನ ಮಾತುಗಳ : ರಾಯಾರ
ನೊಂದಾರ–ಮುಂದ ನಲದಾಡ !

ತೊಳಲಾಟ ಬಳಲಾಟ ಬಾಳಿಗಿಲ್ಲ ಚೆನ್ನಿ
ಗೆಲಕೋಳ ಬಲಕರಾಯರನ : ಸೆಲ್ಲೇದ,
ನೆಲಿಯುವರ ಬಾವಿ ಸೊಗಸಂಬು !

ಪುರುಷ ಬಂದರ ನಿನ್ನ ಪರಸಿ ತುಂಬಲಿಹೊನ್ನ
ಹಿರಿಗುಡಿಯ ಮನದ ಮುದಬಂದ : ರಾಯಾರ
ನಡವಿರಲಿ ಒಡಲ ಗುಡಿಯಾಗ

ಸಡಗರ ದುಡಿಗ್ಯಾಗ ನಡಿಯವ್ವ ಮುಮ್ಮಗಳ
ಮನಿಯಾಗ ಪೆರಿಸದ ರಾಯಾರ : ತನಿ–ಗೊನಿಗೆ
ಹೂವಾಗೆ ಹಣ್ಣ ಕಾಯಾಗೆ !!

ನವಂಬರ ೧೯೪೪ ರ
'ಉಷಾ' ಪತ್ರಿಕೆಯಲ್ಲಿ ಪ್ರಕಟಿತ

□□

ಹೆಣ್ಣು-ಹೃದಯ

ಹರವ ಹೆಣ್ಣಿನ ಮನಸ ತೆರಿತೆರಿಯಸೊರಿಯೊರಿಯ
ಸಾಗರದಕಿಂತ ಸಾವಿರದ : ಬೆಲಿಬಾಳು
ಮುತ್ತಿನ ಮೂಗ–ನತ್ತಿನ !

ಸುಳಿಯೆಲಿಯ ಬಿಳಿಯಲಿಯ, ತೋಳ ಕಂಕಣಕುಡಿಯ
ತಿಳಿನೀರ ತೊರಿಯ–ಕರಿನಾಡ : ನಾರ್‍ಯಾರ
ಹೋರ್‍ಯಾವ ಮನಸ–ಮಿದು ನಿಮ್ಮ!

ಹಣ್ಣಾಗಿ ತೂಗೂವ–ಹೆಣ್ಣ ತೊಟ್ಟಿಲು ಕಾಣ
ನುಣ್ಣಾಗ ಮನಸ ನೆನಿಹಾಕಿ : ಮಗರಾಯ
ಉಣ್ಣೂವ ನಿನ್ನ ಮಲಿಹಾಲ

ನಾರ್‍ಯಾರ ನೋಡಣ್ಣಾ, ಬಿರಿನೋಡಿ ತಡಿಯಣ್ಣಾ
ಮನಸವರ ಮುದುಡಿ ನೊಂದಾವ : ಕೈಬಡಿದ
ಕೆರಿಯಾನ್ನ ತಾವರ್‍ಯೆಲಿಯಂಗ !

ಶಿವನಬುಟ್ಟೀ ಬೆಳಕ–ಪಣತೀಯ ಕುಡಿದೀಪ
ತಾಗಿದರ ಕಾಸಿ–ಕಾಗದವ :ಮುಳುವಾದೆ
ಹೆಣ್ಣೀನ ಬೆಂದೆದೀಯಂಗ !

ಮಲಮಲಾ ಮಲ್ಲೀಗಿ ಎಲಿಮರಿ ಕಳ್ಳೀದ
ನೋಡವ್ವ ಸಾರಿ ನಿನಮಾರಿ : ರಾಯಾರ
ನುಡಿಯಾಗ ನಡವೆ ಮನಗೂಡೆ

ಮೊದಲಿಟ್ಟ ತೋಡೇಕಕಲೊಮ್ಮೆ ಸುಲದಾವ
ನಾರೀಯ ಮನಸ ಕರಗ್ಯಾವ : ಮದಿನಿಂತ
ನೀರಾನ್ನ ನೋಡಿ ತವರಿಯ.

□□

ಮನದನ್ನೆ

ತಿಕ್ಕಿದ್ಹಲ್ಲಿನ ನಗಿಯ ನಕ್ಕೀರೆ ನೀವೆಂದ
ಮಕ್ಕಳಿರೆ– ನನ್ನ ಹಿರಿಮಗನ : ಮತ್ತೆಂದ
ಸಿಕ್ಕೀರೆ ವರನ ತೆಕ್ಯಾಗ ?

ಒಕ್ಕಲಕುಲದಣ್ಣ ತಿಕ್ಕ್ಯಾಟ ನಿನಗ್ಯಾಕೊ
ಬಿಕ್ಕಳಿಕಿ ಕಳಿದ್ಯಾಳೊ ನಿನ್ನ : ನಿನ ಮಗಳು
ತಕ್ಕವನ ಕೈಯ ಕೇಳಂದ !

ನಿಕ್ಕಡಿ ನೀರೀನ ಮುಕ್ಕ ಹಾಲ ಕುಡದ
ಬಿಕ್ಕೇನ್ಯೊ ರಾಯ ನಾನು ನೆನೆದ : ಸೊಗಸುಂಡ
ಸೊಕ್ಕೇನಿ ಕಂಡ ನಿನಮಾರಿ.

ದುಕ್ಕಾದ, ದುಗುಡಾದೆ ಸೆಕ್ಕೆಲ್ಯೆ ಗಂದಾದ
ನಕ್ಕರಳ ನಗಿಯ ದೂಪಕ್ಕ ? ನನ ರಾಯ
ಇಕ್ಕೆಲಕ ಇಕ್ಕರಿ ನಿಮ ಕೈಯ !

ಹಕ್ಕಿನಾ ಬಳದೇನೆ ನಕ್ಕನಾ ನಡದೇನೆ
ಬುಕ್ಕಿಟ್ಟು– ಚೀಟ ತಂದವರ : ನಾಕಂಡ
ಹಿಕ್ಕೇನೆ, ಹೆಳಲಿ ಹೆಣದೇನೆ !

ದಿಕ್ಕುದಿಕ್ಕೀನ್ಯಾಗ ಸಿಕ್ಕಾವ ನಗಿಹೂವ
ಹುಕ್ಕೇರಿ ನಾಡ ಒಡಿಯಾರ : ಮನದಾಗ
ಹೊಕ್ಕಾಡಿ ಹರಸ ತರಸವರ

ಮಕ್ಕಳ ಫಲಕೊಟ್ಟ ಇಕ್ಕೇರಿ ವರನಿಟ್ಟ
ಅಕ್ಕರತಿರಾಯ ನಕ್ಕಾರ : ಮನಿಮಡದಿ
ಚಿಕ್ಕವಸ ಚಿತ್ತದೊಳಸಿಕ್ಕ!

ಮೇಣೇದ ಗುರುತೇನ, ಬಾಣ– ಬಿಲ್ಲಿನ ಜಾಣ ?
ಮಿಣಿಮೀಣಿ ನಗಿಯ ಪಣತೀಗೆ : ಬೆಣ್ಣೀಯ
ಬೆಳಕಾದೆ ತುಪ್ಪ ತುಂಬೀದ !

ಮಣೆಯ ಮ್ಯಾಲುಣ್ಣೂವ ದಣಯಾರದ್ಯಾ ನಾಡ ?
ಕಣ್ಣೆಟ್ಟ ಹೆಣ್ಣ ನನ್ನವಳ : ತಣ್ಣೀರ
ತುಂಬೀದ ಎದಿಯ ಎರಿನಾಡ !

ಕಾಣಾಕ ರಾಯರನ ಮಣದ ಸಕ್ಕರಿನ್ಯಾಕ ?
ವಿವಿಯ ಜ್ಯಾಳಗಿಯ ಒಳಗೀರು : ಕಣ್ಣಾನ್ನ
ಗುರತೊಂದ ಸಾಕ ಸಖಿ ಕೇಳ !

ದಣುವೆಲ್ಲೆ ಜನುಮಕ್ಕ ? ಪಣವೆಲ್ಲೆ ಜನುಮಕ್ಕ ?
ಪಣತೊಟ್ಟ ತಂದ ರಾಯಾರ : ಕೈಹಿಡದ
ಕಣಜೀದ ಮನಿಯ ಮಡದೀಗೆ ?

ಬಾನಾನ ಉಣ್ಣೀಸಿ ಜೀನೆಳಿಯ ಸೀಪೀಸಿ
ಮನ್ನೀಸಿ ಮನದ ಮಾತುಗಳ : ನನರಾಯ
ಕೆನ್ನೀಗೆ ಗುರುತ ನಿಮಜೀವ !

ಕಣಕಣ್ಣ ಹೆಣಯಾತ ಕುಣಿಯಾಕ ಮಣದೇನೆ,
ಕಣಿನುಡಿಯೆ ತುಂಬ ಕವಿಯಾಗ : ಎರಡೆದಿಯ
ಕಣಿಹೊನ್ನತಂದ ನನರಾಯ.

ಹೆಣ್ಣದೇನೆ ಮಲ್ಲಿಗಿಯ ಪೋಣೀಸಿ ಪುತ್ತಳಿಯ
ಮಣಿದೇನೆ ಮುಂದ–ನಿಮಗಿಂದ : ನನರಾಯ
ಕರುಣೆಸರಿ ಕಾಯದಾವಗಳ !

ಮಾನದ ಮನಿಯಾಗ ನಾನವ್ವ ನನರಾಯ
ಗೊನಿಯಾಗಿ ಬಾಳೆ ಹಣ್ಣಂಗ : ಬಾಳೀವೆ
ಅನುಗಾಲ ಸೊಕ್ಕ–ನಗಿಯಾಡಿ !

ಏನು ಎರವಿಲ್ಲ ಮನಸೇಟು ತೆರವಿಲ್ಲ
ವನದಾಗ ಕುಸುರು–ಹಸರಕ್ಕ : ಮನದಾಗ
ಮನಗೆದ್ದ ರಾಯನಿದ್ದಾರ !

ಸಿನಿಸೊಂಟಿ ಸೀತಾರ ಏನುಂಟ ಏನಿಲ್ಲ ?
ಕೆನಿಯುಂಟ ಗೊನಿಯುಂಟ ಹಣ್ಣ : ರಾಯಾರ
ತಿನಸುಂಟ ತಿಳಿಯ ಬೆಳಗೇನ !

ದೇಟೀನ ಮ್ಯಾಲೆದ್ದ ತ್ವಾಟ–ತಾವರಿನೋಡ
ನೀಟಾದೆ ತುರುಟ ನಿನ್ನವಳ, ನನರಾಯ
ದಂಡಸನ್ನೆ ಮುತ್ತಿನ್ನನಿಗೂಡಿ !

ಸಕ್ಕರಿ ಕರದಂಟ ತೆಕ್ಯಾಗ ಮನಗೀಸಿ
ಹಿಕ್ಕೂತ ಮುಡಿಯ ಕೈಚಾಸಿ : ತಿನಿಸೀದ
ಚಿಕ್ಕದೇವ, ಕೈಯ ಹಿಡಿ ನನ್ನ !

ಮುಗಳಮಲ್ಲಿಗಿರಾಯ ನಿಮ್ಮಮೂತೀಗಾಯ
ಸಿಗಲಿಲ್ಲ ಸರಿತೂಗಿ ನನ್ನ : ನಾನಿಮ್ಮ
ಬಿಗದೇನೆ ಬಿಗಿಯ ನಗಿಯಾಗ !

ಕೂಗಿಕರದವರ್‍ಯಾರ ಕೋಗೀಲಿ ದನಿಯವಳು
ಮ್ಯಾಗೀನ ಬನದ ಗಡಿದಾಟಿ ? ತಾಯವ್ವ
''ಅವರೇನ ದಂಡಿಯೊಡಿಯಾರ ?''

□□

ಶೃಂಗಾರ

ಕಾಡಗಿಡದಡಿವ್ಯಾಗ ಕೂಡಿಕುಂತವರೆಲ್ಲ?
ಮುಡಿತಿದ್ದ ಮಡದಿ–ನನ್ನವಳ : ಕುಡಿತಿದ್ದ
ಕುಡಿಗಣ್ಣ–ಕೋಡ–ಕಾಮಾದ !

ಎರಿನಾಡ ಎಲಿತಿನ್ನೊ ಕರಿನಾಡ ಕುಡಿ ತಿನ್ನೊ
ಸೆರಿಯಾಗ ಸೇರ ಹೂವಣ್ಣ: ಹಿಡಕೊಂಡ
ನಾರ್‍ಯವಳ–ತಂದ ಒಳಸೇರೊ !

ಸೀರಿ ಕುಬ್ಬಸದಂತ, ಮಾರಿ ಹುಬ್ಬೀನಂತ
ಸಿರಿನಿಲ್ಲ ಸಾರಿ ಇದಕಿಂತ : ನಿನಕುಲಕ
ಸೆರಗ್ಹಿಡಿಯೆ ಸರಿಯ ಪುರುಷಾರ !

ತೇರ ಕಳಸದ್ಹಂಗ ನಾರಿ ನಿನ್ನ ನಗಿಯ
ಹೊಳದಾವ ಎದೆಯ ಎಳದಾವ : ಎದಿಗಾರ
ಬಿಳಗಾದ ಬಂಟ–ತಮ್ಮಾನ !

ಕಾಡಿಗಿ ಕಣ್ಣವಳ ಪಾಡ್ಹಣ್ಣ ಉಣ್ಣವಳ
ಗಿಡದಾನ್ನ ನನ್ನ ಗಿಣಿಯಾಗಿ : ಬಾ ಅನ್ನಿ
ಹಿಡದೇನೆ ನಡವ–ನಗಿ–ನಾಡ !

ತಡಿಯಾಕ ? ನುಡಿ ಯಾಕ ? ಕಡತಾರ ಮುಡಿಗೆನ್ನಿ
ಪಡತೇನೆ ಪಟ್ಟ–ಸಿರಿ ನಿನ್ನ : ಬಡಗನ್ನೆ
ಕೊಡತೇನೆ ಮುತ್ತ–ಮುದ–ನೆಲದ !

ಮುಂಗಾರಿ ಬೆಳಿಬಂದ ಇಂಗಿತೇನವ್ತಂಗಿ
ಅಂಗಗಳ ನಂಗ ಬಗಿಸ್ಯಾವ : ರಾಯಾರ
ತೆಂಗೀನ ನಾಡ–ಮಂಗಳದ !

ಚೆಂಗಳಿಕೆ ನನಮಗಳ–ನೀಲಂಗಿ ನಿಬ್ಬಣದ
ಮುಂಗುರುಳ ಮಕದ ಹದಬಂದ : ತಮ್ಮಾನ
ಮುಂಗೈಯ ಮುರಗಿ ಸುತ್ತಿದ.

ಬಂಗಾರ ಕಂಡೇನ ತಿಂಗಳಾ ಉಂಡೇನ
ಸಂಗವಳ–ಬಿಂಗ ಬ್ಯಾಗಡಿಯ : ಹಿಡಕೊಂಡ
ನುಂಗೇನ ಇಂಗ ಸೆಳಿಮನಿಯ !

ಶಿವೇಶ್ವರ ದೊಡ್ಡಮನಿ : ಜೀವನ ಸಾಹಿತ್ಯ

ಹೀರ್‍ಯ್ಯಾರಳಿ ಹಿತ್ತಲದ– ನಾರ್‍ಯೈವಳ ಮುತ್ತೊಲದ
ಕಾರಂಜು ಬೆಳದೆ ಬೆಳಕಳದ : ಸೆರಿಸಿಕ್ಕ
ಸರಿಯವಳ ಸಿರಿಯ ಪರಿಮಳದ

ಗುರತೇನ ? ಗೊತ್ತೇನ ? –ನಾರೀಗೆ ನಗಿಬಂದ
ಒರತ್ಯೆವಳ ಪುಟದ ಪುಟ್ಟೆದಿಯ : ಎದಿಯವಳ
ಎದಿರಾದೆ ರಾಯ ಚಳಿಮ್ಯೆಯ !

ತೇದ ಗಂದದ ನಾತ ಹ್ವಾದಿತೆಲ್ಲಿ ಮನವ ?
ಮದಿವ್ಯಾಗ ಕೈಯ ಕೊಟ್ಟವರ : ಕೂಡಾಡಿ
ಹದಕಾತ ಹಸದ ಹೊಸನಗಿಗೆ !

ಓಣೀಯ ಹುದಲಾಗ, ಬಣ ಬಣಾ ಬದಕಾಗ
ಗೆಣೆಕಾರ ನಿನ್ನ ಕಾಲ್ಯಾಕೊ : ಬಾಲ್ಯಿದ್ದ
ಮಣಿತೂಗಿ ಕುಣದ ಹಾಡವಳ ?

ಕೈಯ ಹಿಡದ ರಾಯ, ಸ್ಯೆಯನ್ನೊ ಸೆಳವೀಗೆ
ಸೆರಿಬೀಳೂ ನಾರಿ–ನನಕೂಡ : ಬಲಿಯಾಗ
ಬದಕೆಲ್ಲ ಬಚ್ಚಿ ಬಲಗೊಡುವ !

ವಿರಹ

ದಂಡಿ– ಒಡೆಯರ ಮಾರಿ, ಪುಂಡ ಗಂಡರ ಮಾರಿ
ಬೆಂಡಾಗಿ ನಾರಿ ಕಾಣುದಕ : ಕಾದಾಳ
ಚೆಂಡಾಗಿ ಬಯಲ–ಕಣ್ಣೀರ !

ಸತ್ತೀಗಿ–ಮಾನೇಕ ಅತ್ತೆವ್ವ ಏನೆನಲೆ ?
ಚಿತ್ತೆಲ್ಲ ಸುತ್ತ ರಾಯಾರ : ಸುಳದಾರ
ಮತ್ತೆಲ್ಲೆ ಹೊಲದ–ಸಿರಿಬಯಕೆ ?

ಕಟ್ಟೀದ ಮಲಕಟ್ಟ, ಉಟ್ಟ ಸೀರಿ ನಿರಿಯೆ
ಸಡಲೂದ ಎಂದ ನೀವನ್ನೆ : ರಾಯಾರ
ಸಡಗರದ ತಾಗಿ ಕೈಬೆರಳ ?

ಈಡ ಹಾಕಿದಹಂಗ ಗೋಡೀಗೆ ಬದಕೇನ,
ಬಿಡವಿಲ್ಲ ಬಿಕ್ಕು–ದುಕ್ಕಕ್ಕ : ಮುಗರಾಮು
ಹಡದವರ–ನಿನ್ನ ಮರಿಯಾಗೆ !

ಬಾಡೀದ ಕಣ್ಣವಳ ಕೋಡಿಕಣ್ಣೀರವಳ
ಉಡಿಯವಳ–ಬಿಚ್ಚಿ ಬರಿದಾಗಿ : ತಡಿಯನ್ನೆ
ನಡದಾರಿ ಹಿಡದ ನಿನಗಂಡ !

''ಚೆಂಜೀಕೆ ಬರುವೂರ ಹಿಂಜಿದಳ್ಳೀ ನಗಿಯ
ಅಂಜೀಕಿ ಬಿಡಿಸಿ ನಿನ್ನವರ : ಹೊನ್ನವರ
ಸಿರಿನಾಡ ಕಣಿಯ–ಕುಣಿಕುಣಿಯ !

ಸಣ್ಣನಡದ್ಹೆಣ್ಣೀನ–ಕಣ್ಣಾ–ನಗಿ ಹುಣ್ಣಾದೆ
ಮಣ್ಣಾದೆ ಕೊಳತ ಹುಳಬಿದ್ದ : ನನ ಮಗನ
ನಿನಮಾರಿ ಎರವಾದ ದಿನಕ !

ಸುಣ್ಣಿಲ್ಲದೆಲಿ ತಿನ್ನ, ಬಣ್ಣೆಲ್ಲೆನಾಲೀಗಿ ?
ಮಣ್ಣೆಲ್ಲೆ ಬೆಳಿಯ ಬೀಜರದ ? ಹೆಣ್ಣೀಗೆ
ಸೊಗಸೆಲ್ಲಿ ಸಿರಿರಾಯರಿರದ !

ಹಾರೇನೆಂದರ ಹಕ್ಕಿ ರೆಕ್ಕಿಪಕ್ಕೀ ಬೇಕ
ಇರಬೇಕ ಮುಂದ ಬೆಳಿಸಂದ : ಹೆಣ್ಣೀಗೆ
ದೊರಿಬೇಕ–ಹ್ವಾದ–ನಗಿಗೊಮ್ಮೆ!

ಮಳಿಗಾಲ–ಹೋಳಿಬಂದ ! ತವರಾಗ ಉಳಿಯೆಂದ
ಅಡ್ಡಗಟ್ಟೈತೆ ನನಗ್ಯಾಕ ? ರಾಯರಿಗೆ
ಅಡ್ಡುಣಾಗಿ ಇಟ್ಟ ಉಣಿಸವಳ !

ಮುದವೀಗೆ ಹೆಣತಂದ ಮ್ಯಾದಾರ ಚಾಪೀಯ
ಸೆದಿಗಡ್ಡಿ ಹಿರದ ನೋಡವ್ವ : ಅದರಂಗ
ಹದನಾಕ ದಿನದ ನನಜೀವ

ನಿಂಬೀ ಹಣ್ಣಿನ ಗಲ್ಲ–ತುಂಬಿಲ್ಲದ–ಹೂವಂಗ
ತಂಬೀಗಿಯಂಗ ನೀರಿಲ್ದ : ರಾಯಾರ
ತಂಬಲದ ತುಟ್ಟಿಯ ದೂರಾಗೆ

ಮುಂಚಿ ಬಾಕಲದನ್ನ ಹಂಚೀಕಿ ಸರ ನಕ್ಕ
ಕಂಚೀಯ ಹೂವ ಮಿಡಿತಕ್ಕ : ಪಡದಾವ
ಮುಂಚಿಂದ ರಾಯ ಬಳಿಬಾರೊ !

ಕಾಸೀದ ತುಪ್ಪಕ್ಕ ವಾಸನೀ ಇಡಗೇತಿ
ಏಸೊಂದ ದಿನಕ ನನರಾಯ : ಬರುವಾಗ
ಮೀಸಲದ ಹಸಿಗೆ–ಹೊಸನಾಡ.

ಎಂದೊಮ್ಮೆ ಬಂದಾರ ? ಮಲ್ಲೀಗಿ ತಂದಾರ ?
ತಾಯವ್ವ, ನಲ್ಲ ನಗಿಗೂಡಿ : ಚೆಂಜೀಯ
ಮುಳಗು ಸೂರಿದನ ಮರಿಮಾಡಿ ?

ಹೆಂತೆಂತ ದಿನಗೂಳ ಕುಂತ ನಾ ಕಳದೇನೆ
ಬಂತ ನನರಾಯ ಪಂಚಿಮಿ : ಪಂಚಾರತಿಯ
ಬೆಳಗಿ ಸುಖಸೇನಿ ನೀ ಬಾರೋ !

ಅಗಲಿ ನಾನಿರಲಾರೆ ಹಗಲಕಾಲದ ಗೆಣತಿ,
ನಾಗಲೋಕಾದ ನಗಿಯವನ : ಭಾಗ್ಯೇಕ
ಬಂದೊಲದ ನಿಂದ ಚಂದರನ !

ಕನ್ನಡಿ ತೋರವರ, ಹೊನ್ನವರಿ ಊರವರ
ಮನ್ನೀಸಿ ಮಾನವ ಸೆಳದವರ : ನನ್ನೂರ
ಹೆಣ್ಣೀನ ದಾರಿ ಕರಿ ಬಾರೋ !

ಚಿನ್ನ ದೊಡವೀನಿಟ್ಟ ಬಣ್ಣದುಡಗೀ ತೊಟ್ಟ
ಬೆನ್ನ ಕಾಯವರ ದನಿಗೊಟ್ಟ : ಬರಲೆಂದ
ಚೆನ್ನೀಗ ದೇವ ನನದೇನೋ !

ಕಾದಕಬ್ಬಿಣದಂಗ ಕೊಂದ ನೀ ತೆನಿಯಂಗ
ಹದನಾರ ದಾಟಿ ಹದಬಂದ : ಚಣಕವ್ವ
ನಾರಿ ನಿನಜನಮ ನೆನನೆನದ.

ತೇರೆಳದ ದಾರ್‍ಯೇನ ? ಬೇರೆಳದ ಬೆಳ್ಳೇನ ?
ಹಿಂಹಿಗ್ಗ–ನಗಿಯ ರಾಯರನ : ಅಗಲೀದ
ನೀರ್‍ಯಾರ ಕೇರಿಯ ಪರಿಯೇನ ?

ತುಂಬ ಮಳಿಗಾಲಕ್ಕ ತುಂಬಿ ಹರಿಯೂ ಹಳ್ಳನ
ಬ್ಯಾಸಿಗಿಗೆ ಬತ್ತಿ ಒಣದಾದೆ : ನಾರೀಯ
ಗಂಡನಗಲೀದ ಪರಿಯಾದೆ

ಖಂಡಗ ಜ್ವಾಳಾನ ಅಳದ ನೀ ಅರಪೋವ
ಪುಂಡರ ತುಂಡ ಕಾಲಂಗ : ಮುಳವಾದೆ
ಮುತ್ತೈದಿಯಂಗ ಗಂಡಿಲ್ಲ !

ಸಿಂಬಲ್ದ ತೆಲಿಯಂಗ, ಕಂಬಿಲ್ದ ಮನಿಯಾಂಗ
ನಂಬಿಕಿಲ್ಲಾದ ಜನದಂಗ : ಕರಿನಿಲ್ದ
ಕಂಬಳಿಯಂಗ ನೀವಗತಿ !

ತಂಬಲ ಮನಿಯೇನ ? ಜಂಬಲ ಜಂತ್ಯೇನ ?
ಸಂಬುಳ ಗಿಲ್ದ ಎಲಿಯೇನ ? ತುಂಬೀದ
ಹರಿಯಾದ ಮಡದಿ ಬಿಡವೇನ ?

ತೆಂಗ ಇಲ್ಲದ ವನಕ, ಮಂಗಳಿಲ್ಲದ ಮನಕ
ಕೆಂಗಾಯ ಗಿಡದ ನೀರಲಕ : ಮೋರಿ ಹೋಗ
ಹೆಂಗಳ್ಳ ಮ್ಯಾಲ ಸಂಗಳದ !

ಸಿಂಗಾರ ಪಂಚೀಮಿ ಬಿಂಗರೀ ದಾರಕ್ಕ
ಬಿದ್ದಾರ ಹರದ ಏನಂದೆ ? ಮಾರಾಯ
ಮರಿಗಿಡ್ಡನಾರಿ ಪರಿಯೆಂದೆ !

ಬುಗಡಿ ಸವದ ಸೀರಿ ದುಗಡ ತುಂಬಿದ ಮಾರಿ
ಸೊಗಗಳದ ನಾರಿ ನಗಿನಿಲ್ದ: ಕಂಡಾರ
ಬಗಿ–ಗಂಡ ಅವಳಿಗಿಲ್ಲಂದನಿ.

ಕಣಚಲೀ ಕಟ್ಯಾನ್ನ ಬೆಣಚಗಲ್ಲಿನ ಗಡಿಗೆ
ಹುಣ್ಣೀವಿಯಡಿಗಿಗಿಳಿಸೇನೆ : ಕಳಸೇನೆ
ಮನಸಿಲ್ಲ ರಾಯಲ್ಲದಲ್ಲುಣ್ಣಾ!

ಬೆಳದಿಂಗಳಿಳದಿಳದ ಸೆಳದ್ಯೆತೆ ನನ ಮನಸ
ಕಳಿದೆತೇ ನಲ್ಲರೂ ಮನಿಗೆ : ಬಾಳೀಯ
ಸುಳಿಸಾಲ ಜುಗಿಸಿ ಬಗಿ–ಬಗಿಸಿ !

''ಉಣ್ಣಾಕ ನೀಡೂದ ಹುಣ್ಣೀವಿ ಚಂದರಗ ?''
ದಣ್ಣೀಸ ವನದ ಕೋಗಿಲದ : ಎಂದಂದ
ಕಣ್ಣೀಗೆ ಕಂಡ ನುಡಿಗೊಂಡ !

ಮುಳ್ಳ ಇಲ್ಲದ ಬೇಲಿ–ಬಳ್ಳೀಯ ತ್ಯಾಟಕ್ಕ
ತೆಳ್ಳನ್ನ ತೋಳ ನಿನ ಗೆಣತಿ : ಕರೆದೊಯ್ಯೊ
ಮರಗ್ಯಾಳ ನೆನಸಿ ನನ ಮಗನ !

ಸುಳ್ಳಿ ಹೋಳಿಗಿ ಮಾಡಿ ಬಳ್ಳಿಸ್ಯಾಂವಿಗಿ ಬಸದ
ನಗೆ–ಎಲಿಯ ತಳಲಕಟ್ಟೇನೋ : ನನರಾಯ
ಸಾಗರದ ಸಿರಿಯ ಮರಿ ಬಾರೋ !

ನಿದ್ದಿಗಣ್ಣವ್ವನ್ನ ಒದ್ದಿಗಣ್ಣಾಗ್ಯಾವ
ಹೊದ್ದಾವ ಮಾರಿ ರಾಯಾರ : ಸದ್ದಿಲ್ಲ
ಬಿದ್ದಾದ ಗಡಿಗೆ ಕನಸಂಬು !

ತಿಂಗಳ ದಾಟ್ಯಾದ ಕಣ್ಣೀಗೆ ನಾಟ್ಯಾವ
ಸಿಂಗಾರ ಬಾರೊ ಸಂಗತಿಯ : ಕರಿಕೇಳಿ
ಅಂಗಳದ ನೆಲಕ ಅಡಿಯಿಟ್ಟ.

□□

ವಿಧವೆಯರ ಬಾಳು

ಕ್ಯಾದಿಗೀ–ಹೊಡಿಗರಿಯ ಕೋದ ಮುಡಿಯೂ ತಂಗಿ
ನೆನಿಯವ್ವ ಬಾಡಿ ಬಳಲ್ಯಾವ : ತುಟಿಯಂಗ
ಕನ್ನೀಯ ಕಳದ ಗಂಡನ್ನ !

ಸುದ್ದುಳ್ಳ ಗಿಡದ್ಹಣ್ಣ ಬುದ್ಧ್ಯುಳ್ಳ ಜಗದೊಡಿಯ
ಕದ್ದಾನ ಬಾಲಿ ಮರಿಬಂದ : ಮೆದ್ದಾನ
ಕಣ್ಣೀರ ಕೋಡಿ ಹರಸೆಂದ

ಕೆಂಡ ಇಲ್ಲದಂತ ದುಂಡ ದೂಪಾರತಿಯ
ಗುಂಡಿಲ್ಲದಂತ ಸರದಾಳೆ : ಸರಿಗಟ್ಟಿ
ನಿಂತಾವ ಸತಿಯ ಪತಿನಿಲ್ದ

ದುಂಡ ಮಲ್ಲಿಗಿ ಎಲ್ಲೆ ? ತೊಂಡೀಯ ತುಟಿ ನಲ್ಲೆ ?
ಗೊಂಡೇದ ಎಲ್ಲೆ ಗುಳದಾಳೆ ? ಗಂಡಿಲ್ದ
ನಾರೀಯ ಸಿರಿಯ ಸೆರಗೆಲ್ಲೆ ?

ಕಾರ ಬಂದರ ಕೊರಗ ನಾರಿ–ಮಡದಿ ಮರಗ
ಸ್ಕೀರಿರಾಯ ಚೆನ್ನ ಗಡಿದಾಟಿ : ನಿನ್ನೆದಿಯ
ಸೇರ್ಯಾನ ನಾಡ ಸೊರಗಾದ !

ದೇಟ ಸಂಪಿಗಿಹೂವ ಏಟ ದಿನಕ ಚೆಂದ
ದಿಟಪುರುಷ ನಾರಿಗಿಲ್ಲಾದವಳಮುಂದ
ಮಾಟಂದ ನೋಟಕಿರುವಂತ ?

ತಕ್ಕಡೀ ತೂಗ್ಯಾವ ಚಿಕ್ಕ ಬಾಲಿ ಕೈಯ
ಬಿಗಿಬಂದ ಹೊಗಿಯನಗಿಯೆಂದ : ಅನುತನಕ
ಈಗೇನ ಮಾಗಿ ಅನಗಾಲ ?

ಒರಗೀದ ಪರಿನೆನದ ಮರಗೀನ ಮರ ಹಿಡದ
ಒನದೇನೆ ಮಾತ ರಾಯಾರ : ಶನಿರಾಯ
ಮನಗಂಡ ಮನದ ಮತಿಯವರ !

ಒದ್ದೆಲ್ಲ ಕಣ್ಣಾದೆ ಗದ್ದೀಗೆ ಬರಿದಾದೆ
ಅರಮನಿಯ ನಿನ್ನ ನೆಲಹೊಲದ : ನನಮಗಳ
ಅಳಬ್ಯಾಡ ಕರದ ನಿನ್ನವರ !

ನೆತ್ತಿಬಾಳೀಯಂಗ ಹತ್ತಿತೊಳಿ ತೋದಂಗ
ಹಿತ್ತಲದಂಗ ಬೇಲಿರದ : ಹೆಣ್ಣವ್ವ
ಸತ್ತರಸ ಬಾರೊ ಅನುವರಿ !

ಹರಕ ಕೌದೀದಾರ– ಹಿರದ ಹ್ವಾದಂಗವ್ವ
ನಾರೀಯ ನಗಿಯ ಬಗಿಯಾದೇ : ಬಲಗಡಿಯ
ಬಲಗ್ಯೆಯ ಕಳದ ಬಗಸೂವ !

ಕೆತ್ತುಕುರಚಿಗಿ ನೋಡ ಮತ್ತಗ್ವಾದಲಿನೋಡ
ಹಿಡಿಕಿಲ್ದ ಎತ್ತ ಜೋಡಿಲ್ದ : ಪತಿನಿಲ್ದ
ನಾರೀಯ ಕಳಿಯ ಕಳಕೊಂಡ !

ಸುತ್ತರಾಜೇದಾಗ ಎತ್ತ ಹ್ವಾದರಿಲ್ಲ
ಕೊತ್ತಲದ ನೀರ ಕಣ್ಣೀರ : ನಾರ್‍ಯಾರ
ಸುತ್ತೀನ ಬಳ್ಳಿ ಸುಕಿನಿರದ

ಬತ್ತಲಗುದರಿ ಬೆನ್ನ ? ಮುತ್ತಕ್ಹಾಣದ ಹೊನ್ನ ?
ಜಲಮೇನ ನನ್ನ ಜಯಸಿರಿಯ : ನಾಡೀನ
ಮಾನಮ್ಮಿ–ಸೆಟ್ಟರಿಲ್ಲಾದ !

□□

ಅಲ್ಲೀಕೆರಿ

(ಹೆಣ್ಣು ಮಕ್ಕಳ ಹಾಡು)

ಹಟ್ಟಿಹಬ್ಬ ಆದಿಂದ ಕಟ್ಟಿಮ್ಯಾಲ್ಕಟ್ಟಿ ನಾವು
ಬಟ್ಟಗಣ್ಣಿನ ಗೆಣತ್ಯಾರ : ಕೂಡಿಕೊಂಡು
ನಟ್ಟ ಹಗಲಾಗ ಆಡೂನ !

ಹಾದಹೋಗುವ ಮಂದಿ ಕಂಡ ನಮ್ಮದ ಸಂದಿ
ನೋಡಲೇ ಸಡಗರದ ಆಟ : ಮುದಕಾರು
ಮೀಸಿ ತೋರಿಸಿ ನಗತಿರಲೆ !

ಬರ್ರೇಕೆ ! ಬರ್ರೇಕೆ ! ಹೂವ್ಗೋಳ ತನ್ರೇಕೆ !
ಮೆರಸೂನು ಅಲ್ಲಿಕೇರಿ ನಾವು : ಆಮ್ಯಾಲ
ಪೂಜಿಯ ಮಾಡಿ ಉಣ್ಣೂನು !

ಗೊಂಬಿಮದಿವೀ ಮಾಡಿ ಶಂಭುಲಿಂಗನ ಸ್ಮರಿಸಿ
ತಂಬೂಲ ಕೊಟ್ಟ ಬಂದವರ : ಜನಕೆಲ್ಲ
ಅಂಬಲೀ ಊಟ ಉಣಸೂನ !

ಅಡಗಿ ನೀ ಮನಿಯಾಗ ಅಡಿಗಿ ಮಾಡಿಕೊಂಡು
ಅಡಕಲಗಡಿಗೀ ಏರೀಸೆ : ಎಷ್ಟದಿನ
ಹುಡಗ್ಯಾರ ನಾವ ಆಡೂನ ?

ಅವ್ವ ಕಲಿಸಿದ ಅಡಿಗಿ ಈಟೀಟ ಸಾಮಾನ
ತೋಗೊಂಡು ನಾವು ಮಾಡೂನ : ಮಾಡಿದಿಂದ
ದೇವರೀಗೆಡಿಯ ಹಿಡಿಯೂನ !

ಗ್ವಾಡೀಗೆ ಜೋರಬಿಟ್ಟು ಬಣ್ಣಬ್ಯಾಗಡಿ ಹಚ್ಚಿ
ಅಣ್ಣಾನ ಶಿವನ ಬುಟ್ಟೀನ : ಕಟ್ಟೂನ
ಸಣ್ಣವರು ನಾವು ಆಡೂನ !

ಅಡಕಲದ ಗಡಗೀಯ ಸಾಲ ಏರಿಸಿಕ್ಯಾರ
ನಡಗಂಬ್ಯಕಟ್ಟಿ ಕಡಗೋಲ : ಹಾಡೂತ
ಮಜ್ಜಿಗಿ ಕಟದ ಕುಡಿಯೂನು.

ಇಂಬಾಗಿ ಆಡಾಕ ಕುಂಡ್ರಾಕ ತಳನಿಲ್ಲ
ಈ ಕೇರಿಯ ನಡಿವೆ ನಮಗವ್ವ : ಮುಂದ್ನೋರ
ದೊಡ್ಡ ಕಟ್ಟೀಯ ಕಟ್ಟಿಸೀಡ !

ಯೋಳದಿನ ಯಾಕೀದ ಅಲ್ಲೀಕೇರೀದಾಟ ?
ದಿನದಿನಾ ಬೇಕ ಹಗಲೆಲ್ಲ: ಅಂದಾಗ
ನಗತ ಕಾಲಾವ ಕಳದೇವ !

ಗುಡ್ಡದ ಬಸವಣ್ಣಗ ಅಡ್ಡದಾರಿ ಹಿಡದ
ಗಿಡ್ಯಾರು ನಾವು ಹೋಗೇವ : ಅಡ್ಯಾಡಿ
ಕೂಡಿಸಿ ಹೂವ ಏರಸೇವ !

ಸಣ್ಣವರೀಗೆಲ್ಲ ಬರದಕೊಟ್ಟಾರೇನ ?
ನೀವು ಬರಬೇಕ ಹಿರಿಯೂರ : ನಮಕೂಡ
ಅಲ್ಲಿ ಬಸವಾನ ಪೂಜಿಗೆ !

ನಿಲ್ಲನೀ ಗೊಂಬೆವ್ವ ಕಾಯಾಕಲ್ಲೀಕೇರಿ !
ನಿಲ್ಲದಿರ ನಾನೊಲ್ಲಿಸ್ಹೋಗ : ನಿನಕೊಳ್ಳ
ಹೂವಿನ ಸರವ ಹೆಣೆಯಾಕ !

ಸಿಂಗಾರ ಮಾಡಿದರ ಬಂಗಾರ ಅನತಾರ
ನೋಡಬಂದೆಲ್ಲ ಅವಗೂಳ : ಇಲ್ದೀರ
ಥೀ ಮುಂಡಿ ಅಂದ ಹೋದಾರ !

ಎಲ್ಲಿ ಇಲ್ಲದ ಚಂದ ಇಲ್ಲೇತಿ ನನಗೆಣತಿ !
ಅಲ್ಲಿ ಕೇರೀಗೆ ಆಡಾಕ : ನೀ ಬಾರ
ಮೂಲೀಗೆ ಯಾಕೆ ಮುಳವಾದ ?

ಅಣ್ಣನೀ ಉಣ್ಣಬಾ : ತಮ್ಮ ನೀನುಣ್ಣುಬಾ
ಮಾಡೇವಿ ನಾವ ಅಡಗೀಯ : ಗೊಂಬಿಮಗಳ
ಮನಿನೋಡ ಬಂದ ಸರದಾರ !

ಊರಸುತ್ತತಿರಗೋದು ಎಂದವ್ವ : ಯಾದೀನ
ಇಂದು ಅಲ್ಲದ ಮತ್ತೆಂದ : ನಮಗೀಗ
ಅಲ್ಲೀ ಕೇರಿ ಬಂದ ದಿನದಾಗ !

ಪಂಚಿಮೆಂದ ಬರಬೇಕ ? ಹಾಲೆಂದ ಹೊಯ್ಬೇಕ
ನಾಗಲ್ಲಿಕೆರಿಯ ಹೊಗಲಾಕ ? ಅದಕಿಂದ
ಪಂಚಮಿಲದೀರು ಪಂಚಿಮಿಯ !

ದೇವರಿಗೆ ಜಗಲೀಯ ಮಾಡೇವ ಆಡೇವ
ಸಾವೀರ ಮಂದಿಗೆಣತ್ಯಾರ : ಕೂಡಿಕೊಂಡ
ಹಾವಿನ್ಹೆಡಿ ಹೊತ್ತ– ಅವನ್ಹೊತ್ತ !

ಹಟ್ಟೆವ್ವ ನಮಶರಣ : ಅಲ್ಲೀ ಬಸವಣ್ಣ
ಸುತ್ತಗೆಣತ್ಯಾರ ನಮಶರಣ : ಬರುವನು
ದಿನದಾಗ ನೆನಪಿರಲಿ ನಮ್ಮ!

ಸಣ್ಣನ್ನ ಕೈಯವ್ರು ಸಣ್ಣನ್ನ ಬಾಯವ್ರು
ನಾವ್ಹಾಡಿದ ಹಾಡ ನಿಮಗೆಲ್ಲ : ಸೇರಿದರ
ಇದಕಿಂತ ಹೆಚ್ಚ ಬೇಕ್ಯಾಕ ?

□□

ದೇವರು

ಸಾಂವಿಕುಟ್ಟಿದರಕ್ಕೆ ಬತ್ತಕುಟ್ಟಿದರಕ್ಕೆ
ನವಣಕ್ಕೆ ನವಣ ಕುಟ್ಟಿದರ : ಪೂಜೀಗೆ
ದೇವರು ಕಲ್ಲಮಣ್ಣಲ್ಲ !

ಈಶವರ ನಾನಿನ್ನ ಕೂಸಯ್ಯ ಬಲ್ಲೀನೆ !
ಸೈಸೇನೆ ಏಸು ಕಾಲಕ್ಕ ನಿನಹೆಸರ
ದೆಸಿಗೆಡಿಸಿ ಮುಸರಿ ಮಾಡಿದರ !

ನೋವ್ನನ್ನ ತೊಡಿಯ ಆಡುವ ಕಂದನ್ನ
ಈಡ್ಯಾಡತಾನ ನಗಿಕೂಡ : ಮಾದೇವ
ಕೊಡತಾನ ಕೂಸೀಗೆ ಕಳಿಯ !

ನೋಸಬ್ಯಾಡ ಮನಸ ಬೆಳಸಬ್ಯಾಡ ಕುನಸ
ಬೆಸನಿರಲೆ ಶಿವನನ್ನು ಹೆಸರ : ಕಸರೆಲ್ಲ
ಹುಸಿಯಾಗಿ ಜೀಂವ ಹಸನಾದೆ !

ಪಾಗರದ ಗೂಟಕ್ಕೊ ಚಪ್ಪರಕು ಹೊಂದೀಕಿ
ಮ್ಯಾಗಿನ ಶಿವನ್ಹಂಗ ನನಗೆ : ಇರಲಯ್ಯ
ನಮಕೂಡ ನಿಮ್ಮ ಹೊಂದೀಕಿ !

ಕೊಂದರನ್ನಬ್ಯಾಡ ತಿಂದರನ್ನಬ್ಯಾಡ
ನಿಂಗಾರ ನಿನ್ನ ಆಸರಕ : ಮ್ಯಾಗೀನ
ವಂದೀಪ ದೇವರಿಗಿ ನಿನ್ನ !

ಅತ್ತಿನೀ ನೋಡವ್ವ ನೆತ್ತರಾ ಪೆಟ್ಟೀಗೆ
ಕೊಯ್ಲಿಲ್ಲ ಮೈಲಿಲ್ಲ ಸಗತೆ : ಶಿವರಾಯ್ನ
ನೆನಿಯದು ಕಾಲಕೀ ಹಾಡ !

ಸಲ್ಲಸಲ್ಲೀಗೊಮ್ಮೆ ಕೈಲಾಸದು ದೇವರ
ನಿಲ್ಲುವನ ಬಲ್ಲವರೆದಿಯಾಗ : ಕಲ್ಲಿಂಗ
ಕ್ಯಾಟೀಯ ಹೊರಗ್ಹಾಡಿ ನೋಡ !

ಮೂರದಳದ ಪತ್ರೆ ಹಿರಿಯಾದ್ಹೆಸುರಿನ ಪತ್ರೆ
ಇರಬೇಕ ದೇವರಿಗೆ ಕಾದ : ಆಗವ್ವ
ಹಿರಿಯೂರ ಪೂಜಿ ಸಿರಿನೋಡ

ಮಾರುದ್ದ ಮಾಲೀಯ ಮಾದೇವ ನಾತಂದೆ
ಮಾವೀನ ತಳಲ ಮ್ಯಾಲಂದೆ : ಮುಗಿಲಾನ್ನ
ಮಾಯ್ದರಸ ಮೆಚ್ಚಿ ಮೈಮೀಗೆ !

ಮೂರ ತಿಂಗಳಕುವರ ಮೂಲಿತೋಟದ ಚಿಗರ
ತೋರಿದರ ನಿನಗ ಮನ ಹಗರ : ಪರಶಿವನ
ಹಿರಿಹಿಗ್ಗ ನಿನ್ನ ಭಜಿಸಿದವರ !

ಪ್ಯಾರಲದ ಗಿಡದಾಗ ಸುರದಾವ ಹೂಮಗ್ಗಿ
ಪಾರತಿಯೊಡಿಯ ಪರಮೇಶನ : ದಯದಿಂದ
ಬರಬಂದ ಬವಣೆಂಬು ಹೊಲಕ !

□□

ಮಡದಿ

ಅತ್ತೀಯ ಮಗಳಿಂದ ಕಿತ್ತಳಿಹಣ್ಣತಂದೆ
ಸಿವಿಸಿವಿ ಮಾವನ ಮಗಳಿಂದ : ತಂದೇನೆ
ಸಮಪಾಲ ನನಗ ನಿನಗೊಂದ

ಮಾಗಿಯ ಬಿಸಲಾಗ ಮಾವಿನ ತೋಪೀನಾಗ
ನಿನಮಾರಿ ಮೊದಲ ನಾಕಣ್ಡಿ : ಈಗೇನ ?
ಜೇನ್ಹುಳಕ ತುಪ್ಪ ಇರುವಂಗ !

ಅದು ಇಲ್ಲ ಇದು ಇಲ್ಲ ಬ್ಯಾಡ ಈ ಹಳವಂಡ
ಬದಕೆಲ್ಲ ನೋಡ ಹುರಿಗೊಂಡ : ಸುಖವಾಗಿ
ಸಖಿನೋಡ ಯಾಕ ಯಮಗೊಂಡ ?

ರಾತರಾತರಿನಾಗ ರೀತಿನಡತೀ ಬಿಟ್ಟ
ಮತನಕ್ಕೆ ನಿನಮನಿಗೆ ಬಂದೆ : ನನ ಮಡದಿ
ಸೋತಾರ ಸೊಗಸಿಲ್ಲ ಕಾಣ !

ಮಡದಿ ಮಂಚದ ಮ್ಯಾಲ ಕುಡದು ಕಬ್ಬಿನ ಹಾಲ
ಕಿಡಕೊಂಡ ಎಡಗೈಯೊಡಿಯನ : ಮನಿಗ್ಯಾಳ
ಪಡಕೊಂಡ ಪಾರತೀ ಬಾಗ್ಯೆ !

ದುಡಕಬ್ಯಾಡ ಮಗನ ಮಡದಿ ಮಲ್ಲಿಗಿ ಮುಡದ
ಹಿಡದಾಳ ಕೈಯಾಗಿಳೇವ : ಮಗರಾಯ
ಬಿಡಇನ್ನ ಕಿಡಗೇಡಿ ಮನಿಯ !

ಅಡವಿ ಅರ್‍ಯಾಣದಾಗ ತೊಡಕಬಂಧನದಾಗ
ಬಿಡಲಿಲ್ಲ ಪಡದ ಮಡದೀನ : ದೇವರ
ಪಟ್ಟನೇರೀದ ಪತಿರಾಯ !

ನೀಡಿದವಳ ನೆನಪ ಆಡಿದವನ ನೆನಪ
ನುಡದವಳ ನೆನಪ ಸವಿಮಾತ : ಬಂದಾಗ
ಸುಡಗಾಡ ಕಣ್ಣ ಮುಂದವ್ವ !

ಒಲಿಮುಂದ ನಲದಾಳ ನನಮಗನ ನಾರೆವ್ವ
ಒಲದಾಳ ತಾನ ನೋಡಕ್ಕ : ಬ್ಯಾರೇನ ?
ಸಲಿಗೀಯ ಮಗಳ ನನ ಮಗಳ !

ಯಾರಗೊಡಿವ್ಯಾಕವ್ವ ಊರಿಗೋಗಿಬಾರ
ಮರಿಯಾಕ ಮತ್ತು ಮನಿಯಾನ್ನ ? ನನ ಮಡದಿ
ಸೊಸಿ ನಿನ್ನ ಸೂಸನಗಿಯವಳ.

ಅತ್ತಿ 'ಬಂದರು' ಬಾರ ನಕ್ಕನಗಸುವವರ
ಮುತ್ತೀಗೆ ಮನಸನಿತ್ತವರ : ರಾಯಾರ
ಎತ್ಯಾಡಿ ಹೊತ್ತ ಕಳುವವರ !

ಚಿತ್ತರದ ಮನಿಯಾಗ ಮೆತ್ತನ್ನಾಸಿಗ್ಯಾಗ
ನಿದ್ದಿಲ್ಲ ರಾಯ ಮಲಗ್ಯಾರ : ಗೆದ್ದವಳ
ಗಲ್ಲಗದ್ದಿಗಿಗೆ ತುಟಿಚಾಚಿ !

□□

ತಾಯಿಯ ಹಾಡುಗಳು

(ಧಾಟಿ : ಕೋಲು ಕೋಲಿನ ಕೋಲೆ ಕೋಲು ಮುತ್ತೀನ ಕೋಲೆ)

ಮುತ್ತಿನ ಕೋಲು ಕೋಲಿನ ಮುತ್ತಿನ ಕೋಲು ಕೋಲಿನ
ಸ್ವಾಮಿ ವೆಂಕಟ ಮುದ್ದು ಬಾಲ ನೀಲನೆ

ಹಾದಿ ಮನಿಯವ್ವ ಹಿಂದಗೆ ಬಾರೆ ರುಕ್ಮಿಣಿ ಹಿಂಗೆ ಬಾರೆ ರುಕ್ಮಿಣಿ
ಯಾರ್‍ಯೇನಂದಾರ ನಿನ್ನ ಮಾರಿ ಬಳ್ಯಾವ ? ನಿನ್ನ ಮಾರಿ ಬಳ್ಯಾವ

ಯಾರೇನಂದಿಲ್ಲ ನಮಗ ಯಾರ್‍ಯೇನಾಡಿಲ್ಲ
ನಲ್ಲ ಬಾರದೆ ನಾಳಿಗೆ ತಿಂಗಳಾದವ

ವಜ್ರದುಂಗುರ ಬಳ್ಳ ಗುಜ್ಜರ ಮಂಟಿಗಿ
ಗೆಜ್ಜೆ ಸರಪಳಿ ತಗದ ರಂಗನ್ನೆಜ್ಜಿಗೊಗಿದಾಳ

ಕಾನಬಾವಲಿ ಒಳ್ಳೆ ಮೀನ ಬಾವಲಿ, ಒಳ್ಳೆ ಮೀನ ಬಾವಲಿ
ಕಿಡಕಿ ಬಾವಲಿ ತಗದ ಗಿಡಕಗೊಗಿದಾಳ

ಗಂಧ ಹಚ್ಚಿದಾ ತನ್ನ ಇಂದ್ರ ಜ್ಯೋತಿಗೆ ತನ್ನ ತಂದ್ರ ಜ್ಯೋತಿಗೆ
ಅಂಜಬ್ಯಾಡಂದ ನಮಗೊಂದ ಭಯ ತೋರಿದಾ

ದಂಡಿಕಟ್ಟಿದಾ ತನ್ನ ಇಂದ್ರ ಜ್ಯೋತಿಗೆ ತನ್ನ ಇಂದ್ರ ಜ್ಯೋತಿಗೆ
ಹೂವ ಇಲ್ಲಂದಾ ನಮಗೊಂದ ಟೊಂಗಿ ತೋರಿದಾ

ಕರಿಯದಾರವ ತಂದು ಕೊರಳಿಗ್ಹಾಕಿದಾ ತಂದ ಕೊರಳಿಗ್ಹಾಕಿದಾ
ತುರಬ ಕಟ್ಟಿದಾ ಹರಿದು ಕಣ್ಣೀರೊರಸಿದ

ಕುದರಿ ಏರಿದಾ ಒಳ್ಳೆ ಕದನ ಮಾಡಿದ ಒಳ್ಳೆ ಕದನ ಮಾಡಿದ
ನಲ್ಲರ್‍ಯೊಬ್ಬಿಗ್ಯಾರ ಸ್ವಾಮಿ ಅಡವಿಗಂವದಾವ

೨

ದುಡ್ಡಿನ ಕಡ್ಡಿ ಕೊಟ್ಟರ ಗಂಡಾ
ಗುಡ್ಡದ ದಾರಿ ಹಿಡಿಸ್ಯಾನ ಗಂಡಾ
ಹೋಗಬ್ಯಾಡೊ ನನ್ನ ಬಡವಿ ಗಂಡನ್ನ

ತಂಗಳ ರೊಟ್ಟಿ ಕೊಟ್ಟರ ಗಂಡಾ
ತಿಂಗಳ ದಾರಿ ನಡಿಸ್ಯಾನ ಗಂಡಾ
ಹೋಗಬ್ಯಾಡೊ ನನ್ನ ಬಡವಿ ಗಂಡನ್ನ

ಬಿಸೇ ರೊಟ್ಟಿ ಕೊಟ್ಟರ ಗಂಡಾ
ಬಿಸಲಾಗ ದಾರಿ ನಡದಾನ ಗಂಡಾ
ಹೋಗಬ್ಯಾಡೊ ನನ್ನ ಬಡವಿ ಗಂಡನ್ನ

೩

ಹೊಲಿಯಾನಂದರ ಹೊಲಿಯಾನಲ್ಲ
ಹೊಲಿಯಾ ಬಾಳುತ್ತ ಮನ
ರೀತಿ ತಪ್ಪಿ ಯಾಂವ ನಡುತಾನ
ಅವಗ ಹೊಲಿಯಾ ಅನ್ನ ಬೇಕೋ !

ತಾಯಿ ಸಮಂದನಬೇಕೋ
ಅವರನ್ನೆದರತ್ತಿನೋಡಬಾರದೊ
ನೆರಮನಿ ಹೆಣ್ಣಮಕ್ಕಳಿದರಿಗಿ ಬಂದಾರ

ಕಾಗದ ಪತ್ರಾ ಕರಾರ ಮಾಡಿ
ಬರಬರದ್ಯಾಕಿಡ ಬೇಕೊ
ಬಡವನಾದರ ಆಗುವಲನ್ಯಾಕೊ
ವಚನಕ ಪ್ರಾಣಾ ಕೊಡಬೇಕೊ

ಹೆಂಡರು ಮಕ್ಕಳು ಬದುಕು ಬಾಳೇವು
ಅದ ನಮ್ಮದ್ಹೆಂಗನ ಬೇಕೊ ?
ಶಿವ ಕೊಟ್ಟ ಕಾಲಕ್ಕ ಬಜನಿಯ ಮಾಡಕೊಂಡ
ಬಂದಂದುಡಕೊಂಡು ಹೋಗಬೇಕು

ಊರ ಹೊರಗಿರುವದು ಮೂರಮೊಳ ಜಗಾ
ಅದು ನಮ್ಮದ್ಹೆಂಗನ ಬೇಕೋ
ಮೂರ ಗೇಣಿನಾ ಜೋಪಡಿಯೊಳಗ
ಗುಜರಾಣಿ ಮಾಡಕೊಂಡ್ಹೋಗಬೇಕು

೪

'ಕಾಲ ನೋಡು ಇದರ ಜಾಲಿ ಬಡ್ಡಿ
ಕಾಲತಕ್ಕೊ ನಿನ್ನಾಪನ ಹಡ್ಡಿ'
'ನೀರ ತಾ ನಿನ್ನಕ್ಕನ ಹಡ್ಡಿ'

ಹಿಂತಾ ಮುದುಕನಕೂಡ ಹೆಂಗ ಬಾಳೇಮಾಡ್ಲಿ?
ಅವಕ್ಕ ಕೇಳಿರಿ ಒಗತಾನ
ನಾ ಒಲ್ಲೆನ್ಹೋಗ ಈ ಮುದುಕಾನ್ನ

ಕೈಯ ನೋಡ ಇದರ ಕಳ್ಳೀ ಕಟಗಿ
ಕೈಯ ತಕ್ಕೊ ನಿನ್ನಾಪನ ಹಡ್ಡಿ
'ನೀರ ತಾ ನಿನಕ್ಕನ ಹಡ್ಡಿ'

ಅರಿಬಿ ನೋಡ ಇದರ ಮಸಿ ಕುಂಚ್ಗಿ
ಅಗಸರಿಗ್ಹಾಕೊ ನಿನ್ನಾಪನ ಹಡ್ಡಿ
''ರೊಕ್ಕಾ ತಾ ನಿನ್ನಕ್ಕನ ಹಡ್ಡಿ''

ಹಲ್ಲ ನೋಡು ಇದರ ಹುಣಚಿಪಕ್ಕ
'ಹಲ್ಲ ತಿಕ್ಕೊ ನಿನ್ನಾಪನ ಹಡ್ಡಿ'
''ಕರಿಬೂದಿ ತಾ ನಿನ್ನಕ್ಕನ ಹಡ್ಡಿ''

ತಲಿಯ ನೋಡ ಇದರ ಗುಡ್ಡದಾನ್ನ ಕಡ್ಡಾ
ಕಷ್ಟ ಮಾಡಿಸ್ಕೊ ನಿನ್ನಾಪನ ಹಡ್ಡಿ
ರೊಕ್ಕಾ ತಾ ನಿನ್ನಕ್ಕನ ಹಡ್ಡಿ

೫

ಕೋಲು ಕೋಲಿನ ಕೋಲ
ಕೋಲು ಕೋಲಿನ ಕೋಲು
ಕೋಲೆನ್ನ ಮುದ್ದು ಹವಳವ ಕೋಲ

ಕಾಲಾಗ ಕಂಚಿನ್ನ ಪಿಲ್ಲಿ
ಕಿಂವ್ಯಾಗ ಹಿತ್ತಾಳಿ ವಾಲಿ
ಸಣ್ಣ ಗುಲಗಂಜಿ ಸರಮಾಲ ಕೋಲ
ಸಣ್ಣ ಗುಲಗಂಜಿ ಸರಮಾಲಿ ಕೊರವಂಜಿ
ಬಂದಾಳ ಊರ ಒಳಹೊರಗೆ ಕೋಲ

ಒಕ್ಕಲಿಗ್ಯಾರವ್ವುಳರ್‍ಯೆ ಒಕ್ಕಲಿಗ್ಯಾರಕ್ಕ ಗುಳ್ಳಿರೆ
ನಿಮ್ಮ ತುಪ್ಪದ ತಕ್ಕ ಹೊಸನೆಲವ
ತುಪ್ಪು ಆದು ಹೊಸ ನೆಲವ ತಂದ್ಯೇನೆ
ನಿನ ಪುತ್ರ್ಯಾನ ತಕ್ಕ ಗಿಲಗಂಜಿ–ಕೋಲ

ಹಾರೂರವ್ವ ಗುಳರ್‍ಯಾ ಹಾರೂರಕ್ಕ ಗುಳರ್‍ಯಾ
ನಿಮ್ಹೊಳಿನ ತಕ್ಕ ಹೊಸ ನೆಲವ ಕೋಲ
ಹಾಲೀನ ತಕ್ಕ ಹೊಸ ನೆಲವ ನಾವ ತಂದ್ಯೇವೆ
ನಿಮ ಬಾಲಾನ ತಕ್ಕ ಗಿಲಗಂಜಿ ಕೋಲ

ಬಾಲನ ತಕ್ಕ ಗಿಲಗಂಜಿ ತಂದ್ಯೇವಿ
ಬಾಲ್ಯಾರೆ ಬಂದ ಬೆಲಮಾಡಿರ್‍ಯೇ ಕೋಲು
ಇಂದ ಬಂದ ಕೊರವೀ
ಇಂದ ಹೋಗಲಿ ಬ್ಯಾಡ
ಇಂದೀರ ನಮ್ಮ ಪುರದಲಿ ಕೋಲ
ನಾಳೆ ಬಂದ ಕೊರವಿ
ನಾಳೆ ಹೋಗಲಿ ಬ್ಯಾಡ
ನಾಳೀರ ನಮ್ಮ ಪುರದಾಗ ಕೋಲ
ಇದ್ದಾರ ಇದ್ದೇನೆ ಇರುವೂದಾಗಾಧಲ್ಲ!
ನಾಡ ಗೊಲ್ಲಾನ ನಮ ಗೊಲ್ಲ ಕೋಲ
ನಾಡೀನ ಗೊಲ್ಲಾನ ನಮ ಗೊಲ್ಲನ ಕೈಯಾಗ
ನಾನಿಲ್ಲೆ ಆಗಲ್ಯೇ ಇರೊರ್‍ಯೇ ಕೋಲ
ಕೆರಿಯ ಬಂಡೀ ಮ್ಯಾಲ ಕಾಳೀ ಹೊಲಿಯಾ
ಕೋಲು ಕೋಲೆನ್ನ ಕೋಲ
ನಿಂಗವ್ವ ನೀಲವ್ವ ನೀರಿಗಿ ಹೋದಾರ
ಕೋಲು ಕೋಲೆನ್ನ ಕೋಲ
ನಿಂಗವ್ವ ನೀಲವ್ವ ಕೊಡಗೋಳ ತುಂಬ್ಯಾರ ಕೋಲ
ನಿಂಗವ್ವ ನೀಲವ್ವ ತುದಿಗಾಲಿಟ್ಟ ನೋಡ ಕೋಲ
ಎಷ್ಟ ನೀ ನೋಡಿದರ ಹೊಲಿಯಾ ಬಾ ನೀಲವ್ವ ಕೋಲ
ನಿಂಗವ್ವ ನಿಂಗವ್ವನ್ನ ದಡಿಯ ದೋತರ ನೋಡ ಕೋಲ
ಎಷ್ಟ ನೀ ನೋಡಿದರ ಹೊಲಿಯಾ ಬಾ ನೀಲವ್ವ ಕೋಲ
ನಿಂಗವ್ವ ನಿಂಗವ್ವನ್ನ ತೊಡುವ ಅಂಗಿ ನೋಡ ಕೋಲ
ಎಷ್ಟು ನೀ ನೋಡಿದರ ಹೊಲಿಯಾ ಬಾ ನೀಲವ್ವ ಕೋಲ
ನಿಂಗವ್ವ ನಿಂಗವ್ವನ್ನ ಜರದ ರುಮಾಲ ನೋಡ ಕೋಲ
ಎಷ್ಟು ನೀ ನೋಡಿದರ ಹೊಲಿಯಾ ಬಾ ನೀಲವ್ವ ಕೋಲ
ನಿಂಗವ್ವ ನಿಂಗವ್ವ ಅವ್ನ ಉಡುವ ಕಾಳಿಯ ನೋಡು ಕೋಲ
ಎಷ್ಟು ನೀ ನೋಡಿದರ ಹೊಲಿಯಾ ಬಾ ನೀಲವ್ವ ಕೋಲ
ಹೊಲಿಯಾನ್ನಬೆನ್ನತ್ತಿ ಹ್ವಾದಾಳ ನೀಲವ್ವ ಕೋಲ

ನಿಂಗವ್ವ ನಿಂಗವ್ವ ಕೊಡನಾರ ಹೊತ್ತಾಳ ಕೋಲ
ಕೊಡನಾರ ಹೊತ್ತಾಳ ಮನಿಗ್ಯಾರ ನಡದಾಳ ಕೋಲ
ಏಳು ಮಂದಿ ಅಣ್ಣಗೊಳು ಹೊರಗ್ಯಾರ ನಿಂತಾರ ಕೋಲ
ನಿಂಗವ್ವ ನಿಂಗವ್ವ ನೀಲವ್ಯಾಕ ಬರಲಿಲ್ಲ ಕೋಲ
ಕೆರಿಯ ದಂಡಿಯ ಮ್ಯಾಲ ಚಿಲವ ಕಾಳಿಯ ಹೊಲಿಯ ಕೋಲ
ಹೊಲಿಯಾನ್ನ ಬೆನ್ನತ್ತಿಹ್ವಾದಾಳ ನೀಲವ್ವ ಕೋಲ
ಏಳು ಮಂದಿ ಅಣ್ಣಗೋಳು ಒಳಗಾರ ಹೋದಾರ ಕೋಲ

೨

ಹಾದ್ಯಾನ್ನ ನೀ ಮಣ್ಣ ಗೀರಿ ಬಸವನ್ನ ಮಾಡ್ಯೆ
ಹೋರ‍್ಯೆನ್ನ ಬಹುದ ಬಸವಣ್ಣಾ ಹರಹರಾ ಕೊಲು ಕೋಲು

ಕಟ್ಟೀ ಮ್ಯಾಲೀನ ಮಣ್ಣ ಕೆತ್ತಿ ಬಸವನ್ನ ಮಾಡ್ಯೆ
ಎತ್ತನ್ನ ಬಹುದು ಬಸವಣ್ಣಾ ಹರಹರಾ ಕೋಲು ಕೋಲು

ಕಡಲೀಯ ಕಾಳಷ್ಟ ಕಡದರ ನಮ್ಮ ಬಸವಣ್ಣನ
ಕಡಲಿ ನಮ್ಮಲ್ಲಿ ವಿಪರೀತ ಹರಹರಾ ಕೋಲು ಕೋಲು

ಕಡಲೀ ನೀನಮ್ಮನ್ನ ವಿಪರೀತ ನಮ್ಮ ಬಸವಣ್ಣನ
ಕಟದಾರ ಕ್ಯೂಣದ ಮಠದಾಗ ಹರಹರಾ ಕೋಲು ಕೋಲು

ಉದ್ದೀನ ಕಾಳಷ್ಟ ತಿದ್ಯಾರ ನಮ್ಮ ಬಸವಣ್ಣಾ
ಉದ್ದ ನಮ್ಮಲ್ಲೆ ವಿಪರೀತ ಹರಹರಾ ಕೋಲು ಕೋಲು

ಉದ್ದೀನ ನಮ್ಮಲ್ಲಿ ವಿಪರೀತ ನಮ್ಮ ಬಸವಣ್ಣನ
ತಿದ್ಯಾರ ಕ್ಯೂಣದ ಮಠದಲ್ಲೆ ಹರಹರಾ ಕೋಲು ಕೋಲು

ಕಡಲೀ ಕಾಳನ ತಿಂದು ಮಡಿಯ ನೀರನು ಕುಡಿದು
ಕೊಡಿಯ ಕತ್ತಲಕ ಢರಕೀಯ ಹರಹರಾ ಕೋಲು ಕೋಲು

ಉದ್ದಿನ ಕಾಳನ ತಿಂದು ಗೊಜ್ಜ ನೀರನು ಕುಡಿದು
ಹೆಜ್ಜೆಜ್ಜಿಗೊಮ್ಮೆ ಢರಕೀಯ ಹರಹರಾ ಕೋಲು ಕೋಲು

ಕೆರಿಯ ಬತ್ತಿ ಮಳಲೊತ್ತಿ ನಮ್ಮ ಬಸವಣ್ಣ
ಕೆರಿ ಒಳೈದಂದ ನೆನದಾನ ಹರಹರಾ ಕೋಲು ಕೋಲು

ಬೆಂಚಿ ಕೋಡಿನ ಬಸವಾ ಬೆಂಚ್ಯಾಗ ಹೆಂಗಿದ್ಡೊ
ಬೆಂಚಿ ಒತ್ತಿ ಬೆಂಚಿ ಮುಳಲೊತ್ತಿ ಹರಹರಾ ಕೋಲು ಕೋಲು

ಬೆಂಚಿ ಬತ್ತಿ ಬೆಂಚಿ ಮಳಲೊತ್ತಿ ನಮ್ಮ ಬಸವಣ್ಣ
ಬೆಂಚ್ಯೊಳ್ಳೇದಂದ ನೆನದಾನ ಹರಹರಾ ಕೋಲು ಕೋಲು

ಆಕಾಸದಾಗಿಂದ ಧೂಪಾದ ಹೊಗಿ ಬಂದೆ ಆತ ನಮ್ಮ ಬಸವಣ್ಣ
ಶಿವಪೂಜೆ ಹರಹರಾ ಕೋಲು ಕೋಲು

ತಂದಿ ನಮ್ಮ ಬಸವಣ್ಣ ಶಿವಪೂಜೆ, ಆಗ್ಹೊತ್ತಿಗೆ
ಆಕಾಸದಾನ ಘಂಟಿ ಢಣ್ ತಂದೆ ಹರಹರಾ ಕೋಲು ಕೋಲು

ಅಂಬರದಾಗಿಂದ ತುಂಬೀದ ಹೊಗಿ ಬಂದೆ
ತಂದಿ ನಮ್ಮ ಬಸವಣ್ಣ ಶಿವಪೂಜೆ ಹರಹರಾ ಕೋಲು ಕೋಲು

ತಂದಿ ನಮ್ಮ ಬಸವನ ಶಿವಪೂಜೆ ಆಗ್ಹೊತ್ತಿಗೆ
ಅಂಬಾರಾನ ಘಂಟಿ ಢಣ್ ಢಣ್ ಹರಹರಾ ಕೋಲು ಕೋಲು

□□

ಸುವ್ವಿಲಾಲಿ

ಎಡಗೈಯಲಿ ಜೋಳಿಗಿ ಬಲಗೈಯಲಿ ಚಿತ್ತ
ಭಿಕ್ಷಂತ ಬಂದ ಶಿವರಾಯ ಸುವ್ವಯ್ಯ ನಿಂಗದ ಸುವ್ವಯ್ಯ

ಹೊಸ ಮುತ್ತಲದಾಗ ಮುತ್ತ ತುಂಬಿಕೊಂಡು
ನೀಡ ಬಂದಾಳ ಚಂಗಳೆವ್ವ ಸುವ್ವಯ್ಯಾ

ಮುತ್ತ ನಮ್ಮನಿಯಾಗ ಮುಗ್ಗ ಜ್ವಾಳ ಆಗ್ಯಾವ
ಬಿನ್ನಾಯ ಹೇಳ ಚೆಂಗಳೆವ್ವ ಸುವ್ವಯ್ಯಾ

ಹಳೆ ಮುತ್ತಲದಾಗ ಹವಳದ ತುಂಬಿಕೊಂಡ
ನೀಡ ಬಂದಾರಿ ಚೆಂಗಳೆವ್ವ ಸುವ್ವಯ್ಯಾ

ಹೊಸಕಾಳು ಅನ್ನೂವು ಹಳಿ ಜ್ವಾಳ ಆಗ್ಯಾವ
ಬಿನ್ನಾಯ ಹೇಳ ಚೆಂಗಳೆವ್ವ ಸುವ್ವಯ್ಯಾ

ಮುಂಚೀ ಬಾಗ್ಲು ಕದಾ ಮುಂದಕ ಮಾಡಿ
ಅಂಗಡಿಗೆ ಹ್ವಾದರಳ ಚೆಂಗಳೆವ್ವ

ಬ್ಯಾಳಿ ಬೆಲ್ಲಗಳ ತರತಾಳ ಸುವ್ವಯ್ಯಾ
ಪಾಯಸ ಮುತ್ತಿನ ಕಣಚುಗಿ ಇಳಿವ್ಯಾಳರಿ ಸುವ್ವಯ್ಯ

ಎಡಗೈಲಿ ವಿಭೂತಿ ಉಂಡಿ ಬಲಗೈಲಿ ತೀರತ ಗಿಂಡಿ
ಉಣ್ ಏಳ್ರಿ ಗುರುವೆ ಸೋ ಸೇಳ್ರಿ ಸುವ್ವಯ್ಯ

ಹಂತಾ ಹಿಂತಾ ಅಡಗಿ ಉಣ್ಣು ಜಂಗಮನು
ನಿನ್ನ ಕಂದನ್ನ ಕೊಯ್ದು ಪಾಯಸ ಸುವ್ವಯ್ಯ

ಮುಂಚೀ ಬಾಗಲ ಕದಾ ಮುಂದಾಕ ಮಾಡಿ
ಹ್ವಾದಾಳ ಚೆಂಗಳೆವ್ವ ಸುವ್ವಯ್ಯ

ಬಾರಪ್ಪ ಮಗನ ಗಿಣಿರಾಮು ಸುವ್ವಯ್ಯ
ಎಡಗೈಲಿ ಪಾಟಿಗಂಟು ಬಲಗೈಲಿ ಹೊತ್ತಿಗೆ ಗಂಟು
ಗಿಲ್ಲಂತ ಬಂದ ಮಗರಾಯ ಸುವ್ವಯ್ಯ
ಅಟ್ಟುದ ಕೆಳಗಿರು ಚಿತ್ತಾರದೀಳಿಗಿ

ತಂದ ಕೊಡ ನನಗೆ ಬೆಳವಯ್ಯ (ಆಳಮಗ)ಸುವ್ವಯ್ಯ
ಆಕಿ ಹೀರಿಕಾಯಂಗ ತಳದಾಳ ಮಗನ ಸುವ್ವಯ್ಯ

ಕುಂಬಳ ಕಾಯಿ ಮಾಡಿ ಒಡದಾಳ್ರೀ ಸುವ್ವಯ್ಯ
ಸವತೀಕಾಯಿ ಮಾಡಿ ಹೆರಚಾಳ್ರೀ ಸುವ್ವಯ್ಯ
ಸಣ್ಣಗಿ ಸೋಸ ಬಳ್ಳುಗರ ಸುವ್ವಯ್ಯ
ಹಾಡ್ಯಾಡಿ ಕುಟ್ಟಂದ ದಿಡಗೂಳ ಸುವ್ವಯ್ಯ
ಅಮ್ಮಯ್ಯ ಪಾಯಸ ಮಾಡಿ ಕಣಚಂಗಿ ಇಳವ್ಯಾಳ್ರೀ ಸುವ್ವಯ್ಯ

ಎಡಗೈಯಲಿ ಈ ಬತ್ತಿ ಉಂಡಿ ಬಲಗೈಲಿ ತೀರತ ಗಿಂಡಿ
ಉಣ್ಣೇಳ್ರಿ ಗುರುವೆ ಸೋಸ್ಥೇಳ್ರಿ ಸುವ್ವಯ್ಯ

□□

ವೀರಗೀತೆ

ನಾಡ ನಡಕಿನ ಕಣಕ ಹಡದವ್ವ ಹೋಗ್ಯಾನ
ಗುಡಿಗಟ್ಟಿ, ಗಡಿಗೆ–ನನ ಮಗನ : ಕುಡಿಲೆಂದ
ಕೆಡಕ ಬಗಿದವರ ಎದಿರಗತ !

ಹತ್ತಿ ಬೆಳಿಯುವರಿಲ್ಲ ಹೊತ್ತಿಗ್ಯಾಗ್ಹೋಗ್ಯಾರ
ಹೊತ್ತ ನೆಲದವಳ ಸುತ್ತೊರ್ರದ : ಮುತ್ತೀಗಿ
ಇತ್ತವರ ಗೆದ್ದನಗಿ ಹೊದ್ದ !

ಹೊರಗೆಳದ ಕತ್ತೀನ ಬೆರಗಾಗಿ ತಿರಗ್ಯಾನ
ಶಿರಬಾಗಿ ರಣಕ, ಚಣಚಣಕ : ಚೆಂಡಾಡಿ
ಚಲುವ ಗೆಲದಾನ ದೊರಿ ನಾಡ !

ಮಲ್ಲೀಗಿ ಮುಡಿಬಿಟ್ಟ–ಜನುಮಾನ ಅಡವಿಟ್ಟ
ಸೆಲ್ಲೇದ ಸೆರಗ ತೊಡದಿಟ್ಟ : ತೆಳುಮಗನ
ಭಲ್ಲೀಲ್ಯೆನಾಡ ಗೆಲ್ಲಿದನ !

ಕುಂಕುಮ್ಯಾರ ಹಚ್ಯಾರ–ನೈಸ್ಯಾರ ಕೊಚ್ಯಾರ ?
ಸಂಕ್ರಾಂತಿ ಮುಂದ ನಾಡಾಗ ! ನೆತ್ತರದ
ಕಂಪುಂಡ ಕತ್ತಿ ಕಂಡಾವ :

ಕಾಳಿಸೀ ಊಬ್ಯಾವ ಬಾಳಬಗಿ ಹರಿದಾವ
ನಾಳೆ ನಮ್ಮೂರ ನಡದಾರಿ : ತೆರವಾದೆ
ಹೋಳಿ–ರಗತ ತುಂಬ ರಣನಾದೇ

ಆರತಿ ನೀನೆತ್ತ ಮಾರುತಿ ಕುಲದವಗ
ಕೀರೂತಿ ಗೆದ್ದ ನಲವರಗ : ನೆತ್ತರದ
ನೀರನದಿಕಂಡ–ನಗಿನುಂಡ !

ಕೊಡಲಿಯ್ಯೆವಾರೆತ್ತಿ ನಾಡಬಾಗಿಲ ಸುತ್ತಿ
ಕೋಡಿ ಹರಿಸ್ಯಾರ ನೆತ್ತರದ : ಚತ್ತರಗಿ
ಹಿಡದಾರ : ಆಡಿ ರಣಗದನೆ

ಹೊಸಬಂದ ಸೊಸಿ ನಿನಗ ಕುಸುಕುಸು ಅಳುವ್ಯಾಕ ?
ಯಶವಂತ ಒಡಿಯ ನಿನ್ನವನ : ಹಾಡ್ಹೇಳ
ಈ ಸಂದ ನೆತ್ತರ್‍ರೊಳ್ಗಿಯಾಗ

ನೆತ್ತರಾ ನೀ ಕಲಿಸಿ ಮೆತ್ತ್ಯಾರ ಕೊತ್ವಾಲ !
ಎತ್ತರಕ ಮತ್ತ ಗುಡಿನೆಟ್ಟ : ಒತ್ತರಿಸಿ
ಒಲಿದ ಚರುವಾನ ಜಯದೇವ !

ಏರಿನಾಡ ದೊರಿ ನಮ್ಮ ಹಿರದಾನ ಒರಿಗತ್ತಿ
ಸುರಿಸ್ಯಾನ ಸುತ್ತ ನೆತ್ತರನ : ನಗಿ ನಗಿಸಿ
ನಲ್ಯಾದ ನಾಡ ಜಯಿಸ್ಯಾನ

□□

ಬಸವಣ್ಣ

ಅಪ್ಪ ಗುಡ್ಡದಬಸ್ವ ತಪ್ಪ ಬಕ್ಷಿಸಮಾಡೊ
ಒಪ್ಪತ್ತಿನಾಲ ಮಗನುಂಡ : ತಪ್ಪಿನ್ಯಾಗ
ತಪ್ಪದೊಪ್ಪತ್ತ ಮಾಡೇನಿ

ಸ್ವಾಮಾರ ಬರಲಯ್ಯ ನಿನಗುಡ್ಡಿ ಬರವೀನಿ
ಕುಮಾರಕುವರ್‍ಯಾರ್‍ನೆಲ್ಲ : ತರವೀನಿ
ನಮಿಸ್ಯಾರೊ ನಿನ್ನ ಪಾದಕ

ಬೇಡಿದ್ದ ಕೊಡೊ ಬಸ್ವ ಮಾಡೂವೆ ತಿಳಿದದ್ದ
ನಿನ್ನುದ್ದ ಹೂವ ತರತೀನಿ : ನೋಡಯ್ಯ
ನಿನಗ್ಯಾಕ ಚಿಂತ್ಯೊ ಬಸವಯ್ಯ

ಗಂಡ ಸೊಸಿ ಹಡಿಯಲೀ ಗಲ್ಲೀಪ ಕೊಡ್ವೀನಿ
ಉಂಡ ನಿನ ಗುಡ್ಗೆ ಬರ್‍ವೀನಿ : ಬಸವಣ್ಣಾ
ಅಂದರಿಬ್ಬರ್‍ಗೆ ಹರಸಯ್ಯ

ಕೆಂಡದಾ ಬಣ್ಣದಾ ಗೊಂಡೆವಿನ ಕೂಲಾಯ
ಬೆಂಡಿನಕಿಂತ ಹಗರಿರ್‍ಪ : ಗಲ್ಲೀಪ
ಹಗ್ರಮಾಡಿದರ ನನಮನ್ಸ.

ಗುಡ್ಡದಾ ಬಸ್ವಣ್ಣ ಅಡ್ಡದಾರೀ ಬಿಡ್ಸೊ
ಮಡ್ಡನನ ಮಗಾ ಕೇಳಾನ : ಬಸವಣ್ಣಾ
ಜೋಡೆಡ್ಡ ಕಾಯ ತಂದೀನಿ

ಎಮ್ಮಿ ಈದರೊಮ್ಯೋ ಮೀಸಲಾ ಹಿಡ್ವೀನಿ
ಕುಡ್ಡಸುಕ್ಸಯ್ಯ ಮಡಿಹಾಲ : ಬಸವಯ್ಯ
ಪಡ್ಡಸುಕ್ಸೂವೆ ನಿನಪುಣ್ಯಾ

ಗಡ್ಡಿ ಗಂಗಾಳ ನಿಂದು ಬೂಮಿಗೀಮಿ ನಿಂದೋ
ಹಿಡ್ಡಸಲ್ವಾದ ನೀ ನಪ್ಪ : ಬಸವಯ್ಯ
ಎಲ್ಲ ನಿನ್ನದೋ ನನ್ನಯ್ಯ

ಮಡ್ಡಿ ನೀಲವ್ವಾನ ಮತಿಕೊಡೆನಗತಂದೇ
ಪಡ್ದತರ್ತೀನಿ ದೇವ್ರಲ್ಲಿ : ನನಮನಿಗಿ
ಹಡ್ದ ಕೊಡ್ವೀನಿ ಹಸಮಗ್ನ

'ಕೊಡತೇನಿ' ಅಂದರೋ ಕೋಡಣಸೊಕೊಂಬೀಗೆ
ಕೊಡತೇನಿ ಅನ್ನೊ ಬಸವಯ್ಯ : ಅದನನ್ಗ
ಕೊಡತೈತೊ ಇಲ್ದ ಬಾಗ್ಯಾನ.

ಮಡ್ಡಿ ಮಕ್ಕಳ ಚಿಂತೀ ಒಡಿಯಾಗ ಬಸವಯ್ಯ
ಹಡ್ದವ್ರಿಗೈತೊ ನಮಚಿಂತಿ : ನನ್ನಪ್ಪ
ಆ ಚಿಂತಿ ಕಳ್ದು ಕೊಡಶಾಂತಿ.

ಊರಗುಡ್ಡದ ಮ್ಯಾಲ ಕಂಡೇನ್ಯೊ ನಿನಮಾರಿ
ಹಿರಿಹಿರಿಹಿಗ್ಗಿ ಮರಳೇನ : ಬಸವಯ್ಯ
ಪರಿವಾರನೆಲ್ಲ ತಂದೇನೊ !

□□

ತಮ್ಮಂದಿರು

ತಮ್ಮೆಲ್ಲಿ ಹೋಗ್ಯಾನ ಗುಂಡಕಟ್ಟಿ ತಾನೇನ
ತಿಮ್ಮ ಹೌದೇನ ನನ ತಮ್ಮ : ವಡ್ಡಾರು
ತಿಮ್ಮೀನ ತಂದ ಕೊಡಲೇನ.

ತಮ್ಮ ಬಾರಪ್ಪಯ್ಯ ಸುಮ್ಮನ್ಯಾಕ ನಿಂತೀದಿ
ತಿಮ್ಮೀ ನನ ಮಗಳು ಬಾರಪ್ಪ : ವಡ್ಡಾರು
ಮುಡ್ಡಾನು ಮಗಳು ಅಲ್ಡಾರೊ.

ತಮ್ಮ ಬಂದಾನವ್ವ ಅಮ್ಮನೂ ಜಾತರಿಗೆ
ಕೊಟ್ಟೇನ ಅವ್ನ ಕಳುಹಲೇ : ನನ ಮಗಳ
ಉಟ್ಟಟ್ಟಿ ಕೊಟ್ಟ ಕಳಿವೇನ.

ತಮ್ಮ ಅಳಬ್ಯಾಡಪ್ಪ ಅವ್ವ ಬರಲಿಲ್ಲಂದು
ನಮ್ಮಗಳ ಕೂಡ ಆಡೇಳುಃ ಹೊತ್ಬಂದ್ರ
ನಮ್ಮಗಳ ಕದ್ದು ಒಯ್ಯೇಳು.

ಏನೇನು ಕಲ್ತೀಯೋ ನನ್ತಮ್ಮ ಸಾಲೀಲಿ
ಅದ್ನೆಲ್ಲ ಹೇಳೊ ಮಗಳೀಗಿ : ಅಂದಾರ
ಮುಗ್ಳೊಂದ ನಕ್ಕ ನಲದಾಳು

ತಮ್ಮ ನಿನ ನೆವ್ಯಾಳು ನಮ್ಮಗ್ಳು ಆಲೂರ
ಹೆಣ್ಣೀಗಿ ಯಾಕ ಕಣ್ಣಿಟ್ಯೋ : ನನ ತಮ್ಮ
ಮಾತೊಂದ ಆಡೆ ಸೋತಿಯೊ

ಮಗಳೆ ಮಂಗಳ ಗೌರಿ ಅಡಿಗಿ ನೀ ಮಾಡೇಳು
ತಮ್ಮಾನು ನೀನ ನೀಡೇಳು ಮುಂದೀನ
ಹಾದೀಯ ಇರದ ಕಾಣೇಳು

ತೆಲಿಗೆ ಕೂದಲುಗಂಟು ಹೂವೀಗಿ ಗಿಡಗಂಟ
ಪಾಲೀಗಿ ಗಂಟ ಪರ್‍ಯಾಣ : ಇದೇನ
ಮಗಳತ್ಮಮ್ಮರಿಗೆ ಕಗ್ಗಂಟು

ಅಮ್ಮಮುಲಿ ಹತ್ತ್ಂಡಿ ಬಲಗೀಲಿ ಹತ್ತ್ಂಡಿ
ಮದಿವೀಯ ಮಾತು ಆತಂಡಿ : ಇನ್ನೇನು
ತಮ್ಮ ಮಗಳೀಗಿ ಹತ್ತ್ಂಡಿ
ಹಮ್ಮೀಣಿ ತಮ್ಮಿನ್ನ ನಡ್ದಾಗು ನೋಡೇನ
ಹಮ್ಮೀಣಿ ತುಂಬ ಹೊನ್ನ್ಯಾಕ : ಮಗಳೀಗೆ
ವಂತೀಗೆಂದರ ಬಂಕ್ಯಾಕೊ

ಸುಮ್ಮಸುಮ್ಮನ ತಮ್ಮ ನಿನ್ಯಾಕ ಅಳಸಲಿ
ನಿಮ್ಮಮನಿ ಬಳ್ಳಿ ಹಬ್ಬಾಲಿ : ಮರಿಮಗ್ಗ
ಮಗಳು ಮುತ್ತಜ್ಜೈಯಾಗಲಿ

ಬಗಲಾಗ ದೇವೀಂದ್ರ ಕಾಲಾಗ ಕಾಲುಂಗ್ರ
ನನ್ನ ತವು ಮನಿಗೆ ಹೊಂಟೇನಿ : ಬಂಡ್ಯೊನ್ನ
ತುಂಬ ಮನ ತುಂಬಿ ತಂದೇನ

ಅನ್ನೀಗನವನಲ್ಲ ಮಗಳೀಗೆ ಗಂಡವ್ವ
ಅವ ನನ್ನ ತವ್ರ ತಮ್ಮವ್ವ : ಗೆಳ್ತೆವ್ವ
ಮಗಳೀಗೆ ದಂಡಿ ತಂದಾಗ

ಹಿಂದೊಬ್ಬ ಅಣ್ಣಾನ ಮೇಲೊಬ್ಬ ತಮ್ಮಾನ
ಬೆನ್ನೀಗೆ ಕಣ್ಣು ಇವರವ್ವ: ಬೆನ್ನಿಂದೆ
ಬೆಂಕೀಯ ಹಾಯಗೊಡೆನವ್ವ

ಮಲ್ಲಯ್ಯ

ಮಲ್ಲಯ್ಯ ಬರ್ತಿದ್ದೆ ನಿನ್ಗಿರಿ ದೂರಯ್ಯ
ಮಲ್ಲಿ ಬಲ್ಲಂಗೆ ಅರಳ್ಯಾವ : ಹಿತ್ಲದಾಗ
ಮುಟ್ಟಿಲ್ಲ ಬಂದ ಮುಡಿಯಯ್ಯ

ಪರೂತಿ ಮಲ್ಲಯ್ಯನ ಪರಸಿ ಬರತಾವಂತ
ಬೆರೆಸಿಟ್ಟೆ ಬೆಲ್ಲ ನೆನ್ಗಡ್ಲಿ : ಮಗರಾಯ
ಪರಸಿಗೆ ಮಾಡೊ ಪನಿವಾರ

ಪರೂತ ಮಲ್ಲಯ್ಯಾನೆ ಬಂಗಾರ್ದ ಗುಡಿಯವ್ನೆ
ಕಿರಿಯೂರ ಜಾತ್ರಿ ಮಾಡ್ಯಾರ : ನಾವ್ರ
ಪಾದ ನಿನ್ಜಂತಿ ಮುಟ್ಟೇನಿ

ಬಂದರೂ ಬಂದೇನೊ ಏನಾರ ತಂದೇನೊ
ಬಂದದಿನಕಿಲ್ಲ ನಿನಮಾರಿ : ಮಲ್ಲಯ್ಯ
ವಂದಿಸತೇನೊ ಒಲಿಮುಂದ

ಗಡಗೀ ತೊಳಿಯುವಾಗ ಸವಿಯ ತಾವ್ರೋ ಉಗುರು
ದುಡಿಯುವಾಗ ನೋಡೊ ಮೈಬೆವ್ರು : ಮಲ್ಲಯ್ಯ
ನಿನ್ನ ನೆನಿವಾಗ ಮನ ಹಗ್ರು

ಬತ್ತ ಕುಟ್ಟುವಾಗ ಹಾಡಕಲಿಸುತ ಒಡ್ಯ
ಗೂಳ್ಳಿ ಕೂಡ್ಗೋಳ ಕಳ್ತೀರಿ : ಮಲ್ಲಯ್ಯ
ಬಳ್ಲಿಕಿಯಾಗ ಭಯವಾಗ

ದವ್ನದಾ ಹುಣ್ಣೀಗೆ ದೇವ ನಿನ ನೆನೆದಾರ
ದವ್ನದಾನಾತ ಇಲ್ಲೀಗೆ : ಮಲ್ಲಯ್ಯ
ನಿನ್ನಲ್ಲಿಗೆ ನನ್ನ ಮನವಯ್ಯ

ಸಿರಸೈಲ ಮಲ್ಲಯ್ಯ, ಪರವೂತ ಮಲ್ಲಯ್ಯ
ಮರಸಬ್ಯಾಡಯ್ಯ ನಿನ್ನೆಂಪ : ದಿನ್ದಿನ್ನ
ಉಸ್ರಿನಂಗಿರ್ಲೊ ನಿನ್ಹೆಸ್ರು

ಹ್ಯಾಮ್ರಡ್ಡಿ ಮಲ್ಲವ್ವ ಹ್ಯಾಮಾ ಕೊಟ್ಟವನೇ
ಬರ್ಮರಡ್ಡಿ ಹುಚ್ಚಳದಯ್ಯ : ಇದ್ದರೇ
ನನ್ನುಚ್ಚ ಬಿಡ್ಲೊ ಮಲ್ಲಯ್ಯ
ಏಸೇಸ ದಿನ ಇರ್ವೆಅನಿಸದಿನ ನೆನೆವೇ
ಕೂಸನಾ ನಿನ್ನ ಕರಸಯ್ಯ : ಮಲ್ಲಯ್ಯ
ತೋರಿಸೋ ನಿನ್ನ ಸಿರಿಮೊಗ

ಗುಡ್ಡ ಇಳ್ಳಿತೇನೋ ಗುಡ್ಡ ಏರತೇನೋ
ಅಡ್ಡ ಬೀಳತೇನಿ ನಿನ್ಮುಂದ : ಮಲ್ಲಯ್ಯ
ಕೈಮುಗ್ಯತೇನಿ ಕರೆಸಯ್ಯ

ಎಷ್ಟೈತ್ರ ನಿನ್ಗುಡಿಯ ಕಳಸೋ ಮಲ್ಲಯ್ಯ
ಹಂಪ್ಯಾಗ ಕಾಣತೈತಂತ : ಮನಿಯೊಡ್ಯ ಮಲ್ಲೇಸಿ
ನಾ ಕಂಡೆ ನಿನ್ನ ಸಪನಾದಿ

ದೂರಿಲ್ಲೊ ಮಲ್ಲಯ್ಯ ದಿನ್ದಿನಾ ನೆನೆದಾರೆ
ಬೆರ್ರಿರತಾನೋ ನಮ್ಮೋಡ್ರೆ : ಮಲ್ಲಯ್ಯ
ಹರಿತಿರತಾನ ನಮ್ಮಡ್ರ

ಮಲ್ಲಯ್ಯ ನಿನ್ಹೆಸ್ರ ಅನ್ನಕೂಡ್ಮಸ್ರಯ್ಯ
ಎಲ್ಲಾರೆ ಯಾಕ ಇರಹೋಗೊ : ಮಲ್ಲಯ್ಯ
ನಿನ್ಹೆಸ್ರ ನನಗ ಬೆಲ್ಲಯ್ಯ

□□

ತಾಯಿ-ಮಗು

ಮುಟಗೀನ ಕೊಟ್ಟೇನೆ ಮುಟು ಮುಟೂ ನುಂಗ್ಯಾನ
ಹಟಮಾರಿ ನನ್ನ ದಿಟ ಮಗಾ : ಮುಟಿಗೊಂದು
ಹಲ್ದಗತ್ತೆಂದ ಅತ್ತಾನ

ಬೆಕ್ಕಾಲಿ ಮಾಡೇನೆ ಚಮ್ಚೆ ತುಪ್ಪಚ್ಚೇಸಿ
ಅಕ್ಕರ್ತಿಮಾತ ಆಡೇನ : ತಾಲಿಪಟ್ಟಿ
ಬೇಕೆಂದು ಮತ್ತ ಅತ್ತಾನ

ಅತ್ತಾರು ಕಂದನ್ನ ಹಿತ್ತಲ್ಕ ಓಡೀನೆ
ಸುತ್ತಹಸ್ರುಲ್ಲ ತೋರೀನಿ : ಮತ್ತಲ್ದ
ಚೆಂದದಾ ಹಾಡ ಹಾಡೀನಿ

ಕತ್ಗೆ ಜರ ಬಂದಾವ ಹಿತ್ಲಾಡ ಕೇಳೀರ
ಮಾತ್ಗೆ ಮೊದಲೊಮ್ಮೆ ಅಳುವಾನ : ಒಂದೊಂದ
ಮತ್ಗೇಡಿ ನೆನ್ದ ದೂಕ್ಸೂನ

ಗೊಂಬೀನ ತೇದೀನಿ ನಿಂಬೀಸಿ ಪಾಳ್ಸೇನೆ
ತಂಬಲಾ ಇವ್ನ ಕೆನ್ನೆವ್ವ : ಕಣ್ಣೆಲ್ಲ
ತಾಂಬೂಲ ಸವ್ದ ನಾಲೀಗೆ

ಕೈಗುಣ್ಗೆ ಕಡಿಮೇವ, ಕೊಳ್ಗಿ ಬೆಳ್ಳೀ ಅಸ್ಲಿ
ನಡ್ಡಾಗ ಪಟ್ಟಿ ಉಡದಾರ : ನಮ್ಮವ್ವ
ಕೊಟ್ಟಿರೂ ಗೆಜ್ಜಿ ಉಡದಾರ

ಜುಲುಮೆಗೆ ಜುಲಿಪಿ ಹೂವ ಕಿವಿಯಾಗ ಚೌಕಳೀ
ಕಾಲಾಗ ಗೆಜ್ಜಿ ಗೋಡೆಂಬಿ : ಅಸದ್ಯಾಗ
ತಾಯೀತ ಬೆಳ್ಳಿ ಹನುಮಾನ

ನೋಡೀದ ಬಾಲೀಗೆ ಅಮ್ಮಮ್ಮ ಅನುಮಾನ
ಮುಂದಾಗ ತಾನ ಕಲಿವಾನ : ಊರನ್ನ
ಮಕ್ಕಳಿಗಿ ಮುಂದ ಆದಾನ

ರೊಟ್ಟೀಯ ತಿನಕೊಂತ ಕಟ್ಯಾಗ : ಕುಂತಾನ
ಅಡ್ಯಾಡು ಮಂದೀ ಕರ್‍ದಾನ : ಅವ್ರೀಗಿ
ಗುಡ್ಡಂತ ಮಾತ ಆಡ್ಯಾನ

ಒಂಟಿ ಕೈಲಿ ಬಂಟ ತೆಂಬಿಗೀ ಎತವ್ಯಾನ
ಕಂಟತನ ಬಾಯ್ಗಿ ಓದಾನ : ಮುಂದಿವ್ನ
ಜಟ್ಟಿ ಜಗ ಜಟ್ಟಿ ಆದಾನ

ನಗಿಮಾರಿನನ ಮಗನ ಹೊಗಿಯಬಡಿವುರ್‍ಲ್ಲೋಗೊ
ಸಾಗರಾ ಬಿದ್ದ ಕರಿತಾಳ : ನಿಮ್ಮಮ್ಮ
ತೂಗು ತೊಟ್ಟಿಲ್ವ ತಂದಾಳ

ಹಸ್ನುಳ್ಳ ಮೊಕ್ದಾವ ಬಸ್ವನಾ ಕಾಡೂನ
ಬಸ್ವನಾ ಬಾಲ ಹಿಡಿವೂನ : ನನ್ಮಗ್ನ
ಕಸ್ವಿಗಿಲ್ಲವ್ವ ಕಡಿತಾನ

ಕಾಶಿಕಾಗದಗದಂತ ಕೂಸಿನ್ನ ಎತಗೊಂಡ
ದೇಸಾಯ್ಗಂಡನ್ನ ಕರಕೊಂಡ : ನಸಕೀಲಿ
ತವ್ರೂರ ದಾರಿ ಹಿಡಿದೇನಿ

ಕೂಸೀನ ಕಪ್ಪಾಳ ರೇಶೀಮಿ ತುಪ್ಪಾಳ
ಮಾಸ್ಯಾವ ಬಿಡೋ ಮುಟ್ಟಿದ್ರ : ನನ್ನಣ್ಣಾ
ಹೇಸ್ಯಾವ ನಿನ್ನ ಬಿರ್‍ಸೀಗೆ

□□

ಅಣ್ಣಂದಿರು

ಹೆಣ್ಣೀನ ಜನುಮಾಕ ಅಣ್ಣಗಳಿರಬೇಕ
ಹೊನ್ನ ಕಟ್ಟೂರ ಉಡಿಯಾಗ : ಅಣ್ಣಗೂಳ
ಬೆನ್ನ ಕಟ್ಟೂರ ಸಭೆಯಾಗ

ಜಾತ್ರಿಗ್ಹೋಗುವಣ್ಣನ ಜರದರುಮಾಲ ಬೇಕ
ಮೇಲ ಸುತ್ವರ್ದ ಕೊಡಿಬೇಕ : ನನ್ಮವ್ವ
ಗೆಣೆಯಾರಿರ್ಬೇಕ ಜೋಡೀಲಿ

ಒಬ್ಬಣ್ಣ ಕ್ಯಾದೀಗಿ, ಮತ್ತೊಬ್ಬ ಮಲ್ಲೀಗಿ
ಇನ್ನೊಬ್ಬ ಹೌದ ಸಂಪೀಗಿ : ಲಕ್ಕಸ್ಮಿ
ಹೂವ ಮನಿಯಾಗ ಮುಡಿಯವ್ವ

ಕಾಮನನ ಮಲ್ಲಣ್ಣ ಭೀಮನನ ರಾಮಣ್ಣ
ರತಿದ್ರುಪತ್ಯವು ಹೆಂಡೀರ : ಅನಗಾಲ
ಗಂಡ್ಹೆಂಡರಿಗಿರ್ಲಿ ಸುಬಗಾಲ

ಅಣ್ಣೊಬ್ಬ ಬಲಗಣ್ಣ ಒಬ್ಬಣ್ಣ ಎಡಗಣ್ಣ
ಅಣ್ಣರಿಬ್ಬರೂ ನನಕಣ್ಣ : ಅಣಗೋಳು
ಕಣ್ಣಾಗಿ ನನಗ ಇರಲೆವ್ವ

ಸೀರಿಹರದಾವ ನನ್ನ ಸಿದ್ದಣ್ಣಗ ಬರಹೇಳ
ಸೀರೀಯದಿಂಡ ಗಿಣಿಹಿಂಡ : ಕರಕೊಂಡ
ತಂಗಿ ನನ ಮನಿಗಿ ಬರಹೇಳ

ಅಣ್ಣ ನಿನ ಮದಿವ್ಯಾಗು ಕಾಲನಾ ಹಿಡಿವೇನ
ಹೆಣ್ಣಮಗನಾಗಿ ಗೆಲವೀನ : ಯಾಡ್ಮನಿಯ
ಒಂದ್ಮಾಡಿ ನಾನ ಸಲವೇನೆ

ಹುಣ್ವೀಗೆ ಇಲ್ಲೆಂತ ಅಣ್ಣಾನು ಹೇಳಿದ್ದ
ಹುಣ್ಣೀವಿ ಬಂತ ಮದ್ದಿಣಕ : ನಮ್ಮಣ್ಣ
ಇನ್ನೂ ಯಾಕ ಬರಲಿಲ್ಲ.

ಮಾವೀನ ಗಿಡಹಣ್ಣ ತವ್ರಲ್ಲಿ ನನಕಣ್ಣ
ಕಾರಹುಣ್ಣಿಮ್ಗಿ ಕಡಿಗಾಲ : ನನ್ನಣ್ಗ
ಶೀಕಣೀ ಉಣ್ಣ ಬರಹೇಳ

ಅಣ್ಣ ಬರುತಾನಂತ ಬೆಣ್ಣಿನಾ ಕಾಸೇನ
ಗಿಣ್ಣ ಈದೆಮ್ಮಿ ಹಾಲನಾ : ನನ್ನಣ್ಣ
ಯಾಕ ಬರ್ವಲ್ಲ ದನಿದೋರ

ಮನಿಯಾಗ ಮಾವತ್ತಿಲ್ಲ ಭಾವಮೈದುನಿಲ್ಲ
ಮತ್ಯಾರು ಇಲ್ಲ ನನ್ನಣ್ಣ : ನೀ ಬಾರೊ
ಚಿಂತಿ ಆತಂಕ ನಿನಗ್ಯಾಕ

ಎಮ್ಮ್ಯೆತಿ ಹಿಂಡೋದು ಮಗನೈತಿ ಆಡೋದು
ಕಮ್ಮಾನ ಬಂದ ಇರಬಾರೊ : ನನ್ನಣ್ಣ
ಹೆಣ್ಣೊಂದು ಐತಿ ಕೈಹಿಡ್ಕೊ

ಹಣ್ಣೆಣ್ಣು ಒಲದೀರ ಹಾಲೈನ ಒಲದೀರ
ಅಣ್ಣ ಬರಬಾರದೇನಣ್ಣ : ನನ್ನಾಸೆ
ನಿನಗಿಲ್ಲೇನೋ ನಮ್ಮಣ್ಣ

ಹೆಣ್ಣೀನ ಜನುಮಾಕ ಅಣ್ಣಗಳಿರಬೇಕ।
ಹೊನ್ನಕಟ್ಟೂರ ಉಡಿಯಾಗ : ಅಣ್ಣಗೂಳು
ಬೆನ್ನಕಟ್ಟೂರ ಸಭೆಯಾಗ

ಹನಮಂತ

ಅತ್ಲೊಂದ ಮಸೂತೀ ಇತ್ಲೊಂದ ಮಸೂತೀ
ನಡುವೆ ಹನುಮಾನ ಮೂರೂತಿ : ಗೆಳತೀ
ಊರ್‍ತುಂಬ ಅವನ ಕೀರೂತಿ

ಬಲಕ ಜೈನರಬಸ್ತಿ ಬನಶಂಕರಿಯಮ್ಮಾ
ಎಡಗಡ್ಗೆಸಣ್ಣದೇವರೂ : ಗೆಳತಿ
ಊರ್‍ತುಂಬ ಅವ್ನೆ ಮಾರೂತಿ

ಮುಂದ ನೀರಿನ ಹೊಂಡ ದೂಪ್ತಾರ್‍ತ್ಯಾಗ ಕೆಂಡ
ಮತ್ತಕೇಳವ್ವ ಕೊಳಿಹಿಂಡ : ಗೆಳತೀ
ಅವ್ನೆ ನಮ್ಮ ಸಾರುತೀ

ಅಗ್ಸಿ ಕಾಯೂ ದೇವ ಬೊಗ್ಸಿ ದೂಪಾಹಾಕಿ
ಮಮಲಾ ಮಲ್ಲಿಗೀ ನಿನಗ : ಮಾರೂತಿ
ಏರಿಸುವೆ ಊರ ಕಾಯೂತಿ

ರಾಮಯ್ಯನ ಸೇವಕಾ ಸೀತವ್ನ ಪಾಲಕಾ
ಎಲಿಪೂಜೊ ನಿನಗ ಮೆಲ್ಲಾಕ : ಮಾರೂತಿ
ಕಟ್ಟಿಸತೇನೋ ತಡಿಯನಕಾ !

ರಾಮರಾಜ ಕಾದಂಗ ನಮ್ಮೂರ ಕಾಯಣ್ಣಾ
ನಿನಗ ಕುಂಕ್ಮಪೂಜಿ ಹೂಗಳ : ಕಾಯ್ದಣ್ಣಾ
ತಂದ ಕಟ್ಟುವೇ ಊರಣ್ಣಾ

ಉಗಾದಿ ಮಾನವ್ಮಿ ನಿನಗೆಷ್ಟೊ ಸಡಗರಾ
ಆದರೂ ಇಲ್ಲೊ ನಿನತೇರಾ : ಮಾರೂತಿ
ಏನಿದ್ದರೇನ ಸಡಗರಾ

ತೇರ ನಿನಗಿಲ್ಲಂತ ಊರನೋಡವಲ್ಲೇನು
ತೇರಕಟ್ಸೆದರ ನಿನಮುಕಾ : ಮಾರೂತಿ
ಊರತ್ತ ನಾನು ತಿರವೇನ.

ಯಾರಬರತಾರಯ್ಯ ನಿನ್ನುಡಿಗೆ ಹನಮಂತ
ಅತ್ಯಾಕ ಮಾರಿ ತಿರವೀಯೋ : ಹನಮಂತ
ಏನೈತೋ ಹೇಳೊ ನಿನಪಂತ.

ಬೆಳ್ಳಿಕೀರಿಟ ತಲ್ಗೆ ನಡಕಯ್ಯ ಹುರಿಗೆಜ್ಜಿ
ಉಳ್ಳವ್ರು ಕೊಟ್ಟ ಹುರಿಗೆಜ್ಜಿ : ಹನಮಂತ
ನಾ ಬಡವಿ ಆಗೊ ಸನಮಂತ

ಆಡಿಸೋ ಹನಮಂತ ತಲಿಮ್ಯಾಲ ನಿನಬಾಲ
ಮುಂದ ನಿಂತಾನ ನನಬಾಲ : ನನಮ್ಯಾಲ
ಕರುಣೆರಲಿ ಕೊಡೋ ನಿನಕಾಲ

ಶನಿವಾರ ದಿನಕೊಮ್ಮೆ 'ಶಿವಶಿವಾ' ಎನ್ನೂತ
ನಿನಗುಡಿಗೆ ಬರ್‍ವೆ ತಪ್ಪದಲೆ : ಮಾರೂತ
ನಿನದಯಾ ಇರ್‍ಲೊ ಏರೂತ

□□

ಮುಂಜಾವು

ಶಿವ ಶಿವಾ ಎನ್ನೂತ ಹಾಸಿಗೆಯ ಬಿಟ್ಟೇನೆ
ಶಿವನಾಮದುಡ್ಗಿ ಉಟ್ಟೇನೆ : ಬೆಳ್ಗಾಗೆ
ದಿವಸದೊಡಿಯಾನ ನೆನದೇನೆ

ಏಳೂತ ನೆನದೇನೆ ನೂರಾರು ದೇವರನ
ಎರಡಗ್ಸಿ ನಡುವ ನಮ್ಮೂರ : ದೇವರ್ನ
ಕರ್ಮ್ಗಿದೆ ಕಂಡ ನೆನದೇನೆ

ಒಂದಗ್ಸಿ ಕಡ್ಗಿರ್ದ ಮಲ್ಲಿಕಾರ್ಜುನನಾ
ಮತ್ತ ಕಲ್ಬುರ್ಗಿ ಬಸವನಾ : ಕೆರಿಲಿರುವ
ಕೋಡಿ ಭರಮಾನ ನೆನದೇನೆ

ಊರೂರ ಮಂದ್ಗೆಲ್ಲ ಮೇಲಾಗಿ ಮೆರ್ಯುವ
ಅಣ್ಣಾತೆಮ್ಮರ್ನ ನೆನದೇನೆ : ಅಲ್ಲಾಸಾಬ
ನಿಮ್ಮಿಬ್ರ ನಾನ ನೆನದೇನೆ

ರಾಮ್ಲಿಂಗ ನಿನ್ನೊಮ್ಮೆ ಮರಿಯದೇ ನೆನದೇನ
ಬೋರಗಲ್ಲಿರುವ ದೇವರನ : ಸರ್‍ಯಾಗಿ
ಝುಂಡೆಸಾಬರ್ನ ನೆನಸೇನ

ಊರೀಗೇ ನಡಿಬರುವ ಸಪ್ಪಿನಕಟ್ಟಿಬಸಪ್ಪ
ಅರ್ಗಳಿಗೊಮ್ಮೆ ನಿನ್ನವ್ವ : ದ್ಯಾಮವ್ವ
ದುರ್ಗವ್ವರ್‍ನೂಡ ನೆನದೇನ

ಮತ್ತೊಂದಗಸೀಗಿದ್ದ ಮಾರೂತಿ ಶಂಕರೀ
ಜೆಸ್ವೇವ ನಿಮ್ಮ ನೆನದೇನ : ದಿನಕೊಮ್ಮೆ
ನೆನ್ದೇವ್ನ ಕಾಯು ನಮ್ಮನ್ನ

ಮಲ್ಲೀಗಿ ಕಟ್ಟೀಯ ಬೇವಿನಾಗಿಡ್ಡದ್ಯ
ವಿಠ್ಠಪ್ಪ ನಿನ್ನೊಮ್ಮೆ ನೆನಸಿ : ಬೀಸಾಕ
ಕಲ್ಲ ಹಿಡದೇನೊ ಹಾಡಾಕ

ಹಾಡಾಕ ಕುಂತಾಗ ಹಾಡಿಹರಿಸೆನಿ ಬೆಳ್ಗ
ತೋಡಿಕೊಂಡೇನೆ ಇದ್ದಿದ್ದ : ಉದಾರೆ
ಹಾಡೀಗಿ ನಮ್ಗ ಕಗ್ಗಂಟ

ಇನ್ನುಳ್ಳ ದೇವರ್ನ ಹಾಡೀಲೆ ಉಣ್ಸೇನೆ
ಮನ್ನೂಣೆ ಕೊಟ್ಟ ನಗಸೇನೆ : ದೇವರ್ನ
ನನ್ನಾಣೆ ಇಟ್ಟ ನಗಸೇನೆ

ಕುಂತಿಸೊಸಿ ದ್ರೌಪತಾ, ರಾಮರಾ ಸೀತೇಯ
ಕುಂತಕುಂತಲ್ಲಿ ನೆನಸೇನೆ : ಅವ್ರುಂಡ
ಸುಕ್ದುಕ್ಕ ನೆನ್ದು ಸೊರಗೇನೆ

ನಮ್ಮನೀ ಮಾಡ್ಯಾಳ ಅರ್ಮನೀ ಗೌರವ್ನ
ಸುಮ್ಮನಿರಲ್ಡೆಂಗ ಅಕಿಗಾಗಿ : ಗೌರವ್ನ
ಹಾಡಿ ನೋಡೇನೆ ಬಾಯ್ತುಂಬ

ಅತ್ತಿಮಾವರ ನಾಕ ಪಾದವಾ ನೆನ್ದೇನಿ
ನಾಕಾರ ಹಾಡ ಹೇಳೇನಿ : ಗಂಡಯ್ನ
ಮಕಕಾಲಿಗೊಮ್ಮೆ ಹಾಡೇನಿ

ಬಿಸ್ಲ ಏರೂದ್ರೊಳ್ಗ ನೊಸ್ಲಗಣ್ಣವ್ನ ನೆನ್ದು
ಅಸ್ಲಿಹಾಕವ್ನ ಕದ್ದೇನ : ಅವ್ನಿಗೂ
ಹೇಳೇನೆ ದೇವ್ರ ನೆನ್ಕೆಂದ

□□

ಯಾವೂರ್ಗೆ ಕೊಡಲೆವ್ವ !

ಅವ್ವ ನನ ನಿಂಗವ್ನ ಯಾವುರ್ಗೆ ಕೊಡಲೆವ್ವ
ಕೋಟಿ ಮ್ಯಾಲಿರ್ವ ಕೊರವಾಗ : ಕೊಟ್ಟಾರ
ಕಸ್ಬರ್ಗಿ ಚಿಂತಿ ನನಗಿಲ್ಲ

ಕೋಟೀಯ ಮ್ಯಾಲಿರುವ ಕೊರವಾಗ ಕೊಟ್ಟಾರ
ನುಲಿಗೀಲಿ ಚಿಂತಿ ನನಗಿಲ್ಲ : ಹಗಲೆಲ್ಲ
ಕತ್ತೀಗೊಬ್ಬರಾ ಹೊಲಕೆಲ್ಲ

ಅವ್ವ ನನ ನಿಂಗವ್ನ ಯಾವೂರ್ಗೆ ಕೊಡಲೆವ್ವ
ಊರ ಹೊರಗೀರು ಹೊಲಿಯಾಗ : ಕೊಟ್ಟಾರ
ಕಾಲಮರಿ ಚಿಂತಿ ನನಗಿಲ್ಲ

ಊರೀನ ಹೊರಗೀರು ಹೊಲಿಯಾಗ ಕೊಟ್ಟಾರ
ತೊಗ್ಲಸಾಮಾನು ಪುಕ್ಕಾಟು : ಮುಂಜೇಲಿ
ಬಾಗ್ಲ ಮೊದಲೀಗೆ ಚೊಕ್ಕಾಟು

ಅವ್ವ ನನ ನಿಂಗವ್ನ ಯಾವುರ್ಗೆ ಕೊಡಲೆವ್ವ
ಕುಂಬಾರ ಓಣಿ ಗಂಗಾಗ ಕೊಟ್ಟಾರು
ಒಡ್ಡಗಡ್ಗೆಲ್ಲ ಮನಿಯಾಗು

ಕುಂಬಾರ ಓಣೀಯ ಗಂಗಗೇ ಕೊಟ್ಟಾರು
ರಂಬಿ ನನ ನಿಂಗಿ ಒಡದಾರ : ಗಡಗೀಯ
ರಂಗಿಗೇಳಾನ ಅವಗಂಗ.

ಯಾವುರಿಗೆ ಕೊಡಲೆವ್ವ ಊರಾಗ ಇಟ್ಕೊಂದಿ
ದೇವರಾ ಮನ್ಸ ಹೇಳಯ್ಯ : ನಿಂಗೀನೆ
ನೀನ್ಯಾ ಮಾಡ್ಕೊಂಡ ನಗಸಯ್ಯ

ಅವ್ವ ನನ ನಿಂಗವ್ನ ಯಾವುರ್ಗೆ ಕೊಡಲೆವ್ವ
ದ್ಯಾಮವ್ನ ಓಣಿ ಬಡಿಗ್ಯಾಗ : ಕೊಟ್ಟಾರೆ
ಹುಟ್ಟೀನ ಚಿಂತ ನನಗಿಲ್ಲ

ದ್ಯಾಮವ್ವ ಪೂಜಾರಿ ಬಡಿಗ್ಯಾಗ ಕೊಟ್ಟಾರೆ
ಬಾಳಿಹಣ್ಣೀನ ಕಾಯೇನ : ಬಾಯೇನ
ತಿಂದಂಗ ನೋಡ ಸವಿಯಾನ

ಆವ್ವ ನನ ನಿಂಗವ್ನ ಯಾವೂರ್ಗಿ ಕೊಡಲೆವ್ವ
ಬಿಕ್ಕಿ ಮಾತಾಡು ಬಿಸನ್ಯಾಗ : ಕೊಟ್ಟಾರು
ಉದ್ದುದ್ದಬಾಯಿ ತಡದಾಳು

ಬಿಸನೀಯ ಪಕ್ಕೀರ್ಗ ನನನಿಂಗಿ ಕೊಟ್ಟಾರು
ತಂಗ್ಯ ತುಕ್ಡೀಗೆ ಏನ್ಕಡ್ಮಿ : ನಮ್ಮವ್ನ
ಹಲ್ಲಾರೆ ಗಟ್ಟಿ ಆದಾವು

ಅವ್ವ ನನ ನಿಂಗವ್ನ ಯಾವೂರ್ಗೆ ಕೊಡಲೆವ್ವ
ಪತ್ತಾರು ಮನಿಯ ಪರ್ಮ್ಯಾಗ : ಕೊಟ್ಟಾರೆ
ಪಟ್ಟೇಯ ಚಿಂತಿ ನನಗಿಲ್ಲ

ಪತ್ತಾರು ಮನಿಯ ಪರ್ಮ್ಯಾಗು ಕೊಟ್ಟಾರೆ
ಹತ್ತಿಬದ್ಲೊನ್ನ ತೂಗ್ಯಳೆ : ನನನಿಂಗಿ
ಚಿನ್ನದಾ ಚೆನ್ನಿಯಾದಾಳೆ

ನನ ನಿಂಗಿ ಕೇಳಾದೆ ಯಾರಿಗೂ ಕೊಡಲಾರೆ
ಯಾರೀಗೆ ಕೊಡಲೆ ನನನಿಂಗಿ : ಹೇಳವ್ವ
ತೊಟ್ಟಿಲಕ ಕೊಟ್ಟೆ ಮಲಗವ್ವ

□□

ದ್ಯಾಮವ್ವ-ದುರಗವ್ವ

ಸತ್ತೂರು ಸುತಗಟ್ಟಿ ನಡವೆ ಗಾಮನಗಟ್ಟಿ
ಸನಿಯದಾಗೈತಿ ನವಲೂರ : ದ್ಯಾಮವ್ವ
ಹುಟ್ಟಿನಾಗೈತಿ ಸಿರಿಗಂದ

ದ್ಯಾಮವ್ವ ನಿನಗುಡಿಗೆ ನನಮಗನ ಕಳಿಸಿದ್ದೆ
ಅಂಗಾರ ತಂದ ಹಚ್ಚಿದಾ : ನಮ್ಮವ್ವ
ಯುಗಾದಿಗಿ ಉಡಿಯ ತುಂಬೇನಿ

ದೂರ ದೇವರ ಸುತ್ತಿ, ನಿನಗ ಮೊರೆ ಹೊಕ್ಕಾರ
ಆ ರೋಗ ಕಳದಿ ಹಡದವ್ವ : ನಾನಿನಗ
ಸರಿಗೀಯ ತಂದ ಕೊಡಿವೇನೆ

ನಿನ್ನ ಗುಡಿಗೊಮ್ಮೆ ಪರದಕ್ಷಿಣಾ ಹಾಕಿದರ
ನನ್ನ ರೋಗೆಲ್ಲ ಪರಿಹಾರ : ತಾಯವ್ವ
ನಿನಗಿಂತ ಹೆಚ್ಚು ಮತ್ಯಾರ

ನಿನ್ನ ಗುಡಿಯ ಮುಂದೇ ಬೇವಿನಾ ಗಿಡವೊಂದ
ಸುತ್ತಮುತ್ತೆಲ್ಲ ಬಡಿಗ್ಯಾರು : ಊರವ್ವ
ಅವ್ರೆಲ್ಲ ನಿನ್ನ ಪೂಜ್ಯಾರ್ರು

ತಪ್ಪೇನ ಮಾಡಿದ್ರು ಒಪ್ಪೇವೆ ದ್ಯಾಮವ್ವ,
ಒಪ್ಪುಣ್ಣೆ ನಿನಗ ಮಾಡೇವಃ ನಮಗಿದ್ದ
ಸಪ್ಪತನವ ನೀ ಗಪ್ಮಾಡೇ

ಉಪ್ಪರಿಗಿ ಮನಿಯೈತಿ ಮನಿಯಾಗ ಬಾಳೈತಿ
ನಿನಗೇನ ಬೇಕು ಹೇಳವ್ವ : ನನ್ನೊಡತಿ
ಹಾ ಎನ್ನುರೊಳಗ ತರತೀನಿ

ಹಾಳಾದ ಗುಡಿನೋಡಿ ರೈತರೆಲ್ಲ ಕೂಡಿ,
ಊರ ಕಟ್ಟೇತ ನಿನಗುಡಿಯ : ದ್ಯಾಮವ್ವ
ನಮ್ಮ ಮೇಗ್ಯಾಕ ನಿನ ಸಿಟ್ಟ

ಸತ್ತೂರು ನಿನ್ತವ್ರು, ಊರೆಲ್ಲ ಸ್ಯಾವಕ್ರು
ಮತ್ತೇನು ಬೇಕು ನಿನಗವ್ವ : ಹೇಳಬಾರು
ಬತ್ಲ ಕತ್ತೀಲಿ ಕಾದಾರು.

ಗಚ್ಚೀನ ಗುಡಿಯವ್ರೇ ಸುತ್ತಹ್ಳಿಗೆ ದೊಡ್ಡವ್ರೆ
ಹೊಚ್ಚಲಾ ದಾಟಿ ಬರಲೇನ : ನಿಮ್ಮಣ್ಣಾ
ಸಣ್ಣಾವ ಮಾಡಿ ನೋಡೆಂದೆ

ದ್ಯಾಮವ್ವ ದುರಗವ್ವ ನೀವಿದ್ರ ಊರವ್ವ
ತಂಗಿ, ದೇವತ್ಯಾರ್ನ ನೋಡ : ಬಾರವ್ವ
ತಂದೇನಿ ತೆಂಗು ಸಂತೀಲಿ

ಹೊತ್ತೇರಿದರೊಮ್ಮೆ ನಮ್ಮವ್ವ ನಿನಪೂಜಿ
ಗಂಟಿ ಸಪ್ಪಳಾ ಊರೀಗೆ : ನಿನಗುಡಿಯ
ದೂಪದಾ ವಾಸ್ನಿ ಅಡವೀಗೆ

ಹಬ್ಬಬಂದಾರೊಮ್ಮೆ ನಿಬ್ಬಣಾ ನಿನಗವ್ವ
ಸುಬಮೂರ್ತ ನೋಡ ನಮಗೆಲ್ಲ : ದೇವತೀ
ಊಬಿನಂಗ್ಹಾರ್ರೆ ಹಾರ್‌ಸೇವ

ಸತ್ತೂರ ಜನಗೋಳು ನಿನನೋಡಿ ಬರ್‍ವಾಗ
ನಮ್ಮೂರ ಹೊಗ್ಳಿ ಹೋದಾರ : ನಿನ್ನೋಡಿ
ಬಾಯೀಗೆ ಬಟ್ಟ ಓದಾರ

□□

ಪರಮ ಪತಿವ್ರತೆ ಸೀತೆ

ಅಂಗೈಯೊಳ್ಳಮಾಡಿ ಮುಂಗೈಯೊಣಕೀ ಮಾಡಿ
ಕಬ್ಬೀಣದಕ್ಕೀ ತಳಸಂದಾರವಯ್ಯ
ಕಬ್ಬೀಣದಕ್ಕೀ ತಳಸಾಕ ಹ್ವಾದರ
ನಾಗಗನ್ನಕ್ಯಾರ ನಿಲನಿಂತಾರ

ಹೊಂಡವ ಕಡಿಸ್ಯಾರ ಕೆಂಡವ ಒಗಿಸ್ಯಾರ
ಸೀತೆಗದರಾಗ ಧುಮಕಂದಾರವಯ್ಯ
ಸೀತವ್ವ ಅದರಾಗ ಮುಳಗಾಕ ಹ್ವಾದರ
ದಾಸಾಳದ್ಹೂವಾಗಿ ಈಸಿ ಬಂದೆ

ಹಾರೀಯ ಕಾಸ್ಯಾರ ಹಾದ್ಯಾಗ ಇಟ್ಟಾರ
ಭೇದ ಇಲ್ಲದ ಸೀತಾಗ್ಹಿಡಿಯಂದಾರವ್ವಯ್ಯ
ಭೇದ ಇಲ್ಲದ ಸೀತಾ ಹಿಡಿಯಾಕ ಹೋದಾರ
ರಾಮಲಕ್ಕಿಸಿಮಿ ನಿಲನಿಂತಾರ

ಊರಹೊರಗ ಒಂದ ಯೋಳಹೆಡೀಯ ಸರ್ಪ
ಭೇದ ಇಲ್ಲದ ಸೀತಾಗ್ಹಿಡಿಯಂದಾರವ್ವಯ್ಯ
ಭೇದ ಇಲ್ಲದ ಸೀತಾ ಹಿಡಿಯಾಕ ಹೋದರ
ಕಾಳಿಂಗ ಕೈಯಲ್ಲಿ ನಲನಾಡಿದ

ಎಣ್ಣೀಯ ಕಾಸ್ಯಾರ ರನ್ನವ ಹೊಯ್ಸ್ಯಾರ
ಚಿನ್ನಾದ ಬೆರಳೆದ್ದಿ ತೆಗಿಯೆಂದಾರವ್ವಯ್ಯ
ಚಿನ್ನಾದ ಬೆರಳದ್ದಿ ತೆಗಿಯಾಕ ಹೋದಾರ
ರನ್ನದುಂಗರಾಗಿ ನಾವಿಬಂದಿ

ದಶರಥರಾಜ ಸತ್ತ ಹನ್ನೆರಡು ವರಸಾದ
ಗುಡ್ಡೀಮ್ಯಾಗ ಸೀತಾಗ್ಹಿಡಿಯಂದಾರವ್ವಯ್ಯ
ಗುಡ್ಡೀಮ್ಯಾಗ ಸೀತಾ ಒದರಾಕ ಹೋದಾರ
ದಶರಂಥವಳ ಮಾವ ದನಿದೋರಿದ.

□□

ವಿಧವೆ

ಅಲ್ಲಿ ನೀ ಬಾರವ್ವ ! ಇಲ್ಲಿ ನೀ ಬಾರವ್ವ !
ಎಲ್ಲೀತನಕ ಈ ಸೊಲ್ಲ ? ನಲ್ಲಾನ
ಇರುತನಕ ಮಕ ನಮ್ಮಮುಂದ !

ಗಂಡಸತ್ತಮ್ಯಾಗ ರಂಡೀತನದ ಸಿರಿಯ
ಸುಡಬೇಕ ಏನಾದರೇನ : ಆ ಜೀವ–
ಬಿಚ್ಚಿಟ್ಟ ಬಂಡಿ ಇದ್ದಂಗ !

ಕ್ವಾಳ ಕಾಯುವತನಕ ಗೊಳಲೀಯ ಪರಿಯೇನ ?
ಒಡದಿಂದ ಭತ್ತಾನು ಎಲ್ಲ : ಆ ಗೊಳಲಿ
ಮಳಲೀನಕಿಂತ ಕಡಿಯಾದೆ !

ಹಂದರಕ ಹಬ್ಬಿತ್ತ ಹರಿಚಂದ್ರೂವಿನಬಳ್ಳಿ
ಮುಳುವಾತ ಮರಣೆಂಬುಗಾಳಿ : ಚಳಿಯಂಗ
ಹಣ್ಣ ಮಾಡೀತ ಎಲಿಯೆಲ್ಲ !

ಕೂಡಿಕುಂತ ನೆನಪ, ನೋಡಿ ನಕ್ಕ ಒನಪ
ಈಗೆಲ್ಲೆ ? ಇತ್ತೆಲ್ಲೊ ಆತ : ಮುಗಿಲಾನ್ನ
ಮೋಡದು ಬಣದಂಗ ಮರಿಯಾತ

ಗಂಡಹೆಂಡರು ಎಂದು ಕಂಡಾಡಿದವರೆಲ್ಲ
ಕಂಡಾರ ಕಣ್ಣಿತಿರುವೂರ : ಗಂಡಿಲ್ದ
ನಾರೆವ್ವ ಕೊಳಿನೀರ ನಾರ

ತವರೀನು ತಳದಾಗ ದಕ್ಕಗನೆ ಉರುವಾಗ
ಇಲದಾಗ ಗಂಡಂಬಾದಾರ : ನಾರೀಯ
ಉಂಡಂಗ ಕಂಡ ಇಳದೀತ

ಬಾಕಲಕು ಕಟ್ಟೀದು ಚಂಡಹೂವಿನಸರದ
ಎಳದಾರ ದಾರಾನ ಹೊರಗು : ಬೀಳೂವ
ಹೂವ್ಹಂಗ ಪತಿಗಾಣದ ನಾರೆ

ಹೆಣ್ಣೀನ ಜೀಂವಕ್ಕ ಕುತ್ತೆಷ್ಟು ಕೊರತೆಷ್ಟು ?
ಹೇಳೇನ ಮೈಗೆಲ್ಲ ಮುಳ್ಳ : ಮಾರಾಯ್ನ
ಕೊರತೆಂದೆ ವರತಿಲ್ಲುಹಣ್ಣದ

ಕೆರಿಯ ತುಂಬ ನೀರಂಗ ಮನತುಂಬಿ ನನ್ನೊಡಿಯ
ಇರತಿದ್ದ ಅಗಲದೆಳಕಸದ : ಬಾಗ್ಯೇವು
ಕಂಡಿತ್ತ ಕೊಂಡಾಡು ನದಿಯ !

ಏನ ಹಾಡ್ಹಳುಕಿದರ? ಬಳಗಕೂಡಿದರೇನ ?
ಬೆಳಿಗಾಯ ತುಂಬಕೋದಂಗ : ಶಿವರಾಯ
ಒಳಕೋರೊ ಬಯಕಿ ಪತಿರಾಯ್ನ

ಮುಗ್ಗ ಜ್ವಾಳದಹಂಗ ಕಗ್ಗುಬೆಳಸಿಯಹಂಗ
ಹಗ್ಗಿಲದ ಬಾಂವಿ ಕೊಡದ್ಹಂಗ : ಏನೇನೊ !
ಏನ ಮಾಡಿದರೂ ಮಾದೇವ !

□□

ಬುಡಬುಡಕ್ಯಾ

ಬುಡಬುಡಕ್ಯಾ ಏನವ್ವ ವಡ್ಡಡಾ ಹಾಡಾಂವ
ದುಡಕೀಲಿ ಹರಕಿ ಕೊಡಾಂವಾ : ಯಾಕವ್ವ
ಅವ್ನೇನ ಹೇಳ ಬಂದಾನ

ಹಾಲಕ್ಕಿ ಹಿಂಗಂತು ಟೀಟಿಂವು ಟೀಕಸ್ತು
ಮೇಲೂರ ಗೂಗಿ ಘೂಕ್ಕಂತು ಎನ್ನಾವ
ನೋಡವ್ವ ಅವ್ನೆ ಬುಡಬುಡ್ಕ್ಯಾ

ಸರವಸಿದ್ಧೀ ಆಗತತಿ ತಾಯಿ ಗುರುವು ನಿಮ್ಗ ಕಾದಾನು
ದರವು ಮಕಳೀಗಿ ಬಾಳತಿ : ತಾಯೀ
ಮರವ ಮಾತ್ರಕೂ ಇಲತಾಯಿ

ಆಯುಸಾ ನಿಮಗೇ ಬಾಳಯ್ತಿ ತಾಯೀ
ಕಂಟಕೆಲ್ಲಾ ಕುಂಟ್ಯಾವು : ತಾಯೀ
ಉಂಟು ಸಕಲ ಸಾಯಿತವು

ಹದಿನೈದ ದಿನ್ದಯಾಳೆದಾಗ ತಾಯೀ
ಮೇಲೋಣಿ ಮಗಾ ಸತ್ತಾನ : ತಾಯಿಗೆ
ಗುರುವು ನಿಮ್ಮನ್ನ ಕಾದಾನ

ಗುರುವು ನಿಮ್ಗ ಕಾದಾನ ತಾಯೀ ಪರಮೇಸ
ದೂರ ಮಾಡ್ಯಾನ ನಿಮಕಸ್ಟ : ತಾಯೀ
ದೂರ ಮಾಡೂವ್ನ ಕಂಟಕಾ

ಕುಬಸಾ ಒಂದಿದ್ರ ಕೊಡವ್ವ ತಾಯೀ
ಹರಕ ಧೋತರಾ ಒಡಿಯರ್ದು ತಾಯೀ
ಗುರುವ ನಿಮ್ಮನ್ನ ಕಾದಾನ

□□

ಬೆಕ್ಕು

ಹಾಲಕುಡದೈತಿ ಬೆಕ್ಕು ಬೂದ್ಯಾಗ ಮನಗೇತಿ
ಬ್ಯಾಳಿಯಂಗ್ಕಣ್ಣಬಿಡತೇತೆ : ಕೂಳಂದ್ರ
ಮಾಳೀಗಿಗ್ಹೋಗಿ ಅಳತೈತೆ

ಮೊಸ್ರ ಕುಡದೈತಿ ಬೆಕ್ಕು ಹಸ್ರಾಗ ಮಲಗೇತಿ
ನೇಸ್ರು ನೋಡುತದ್ನಾತಾನು : ನಗತಾನ
ಬೇಸ್ರು ತನ್ನಾದ ಕಳೆದಾನ

ಬೆಣ್ಣೆ ಉಂಡೀಕದ್ದು ಮೈ ತಿನ್ಸಮೆದ್ದು
ಮಲಗೇತಿ ಮರಿಗೆ ನಾನೆದ್ದು : ಹೋದಾರ
ಉದ್ದನ್ನ ಗಿಡವ ಏರೈತಿ

ಇಟ್ಟನ್ನ ತಿಂದುಂಡು, ತೊಟ್ಲಲ್ಲಿ ಮನಗೇತಿ
ಕಟ್ಯಾಣಿ ಕೂಸ್ನ ಜೋಡಿಗೆ : ತಿಂದನ್ನ
ಬಿಟ್ಟೀ ಮಾಡೂತ ಬಿದ್ದೈತಿ

ಕಾಲಸಪ್ಪಳ ಮಾಡ್ದೆ ಒಂದಿಲಿ ಒಂದೂ ಬಿಡ್ದೆ
ಬಲಿಯಿಲ್ದ ಹಿಡ್ದ ತಿನತೈತಿ : ಕಾಳೀನಾ
ದುಪ್ಪಣೀ ಗಪ್ಪ ಮಾಡೈತಿ

ಕಂದಾ ಅಳೂದ್ಕಂಡು ಮುಂದೋಗಿ ಕುಂತೈತಿ
ಕಂದನ್ಕಣ್ಣೀರ ಒರಸೈತಿ : ನನಮುಂದ
ಬಂದು ಕಂದಳೂದ ಹೇಳೇತಿ

ಮನಿಯಾನ ಮುಂದೆಲ್ಲ ಸಾಯ್ಲಿಕುಡ್ಯುಳಿಯಲೇ
ದನದಿಂಡು ಹೈನ ಕರಿಯಾಲೇ : ನನಗೆಲ್ಲ
ಹಾಲ ದೊರ್ಕೈಲಿ ಎಂದು ಹರಸೂತ.

□□

ಗಡಿಗಿ

ಗಡಗಿ ನೋಡುಣ ಬಾರ ಗಡಗಿ ನೋಡುಣುಬಾ
ಕರಿಮೈನ ಗಡಗಿ ಬಂದಾವ : ಬಾರವ್ವ
ಚೆಂದಿದ್ರ ಹೋಗಿ ತರುವಾನ

ಸಿರಸಂಗಿವ್ ಬಂದಾವ ಕಾನ್ಪೂರ್ವ ಬಂದಾವ
ಕರ್ಕೆಂಪು ಗಡ್ಗಿ ಬಂದಾವ : ಬಾರವ್ವ
ಚಿತ್ತಾರದ ಗಡಗಿ ಚಿಟ್ಟೇಗಿ

ಬ್ಯಾಳಿಕುದ್ಸುವ ಗಡ್ಗಿ ಹಾಳಿ ಬಣ್ಣದ ಗಡ್ಗಿ
ಎಲ್ಲಾನೂ ಗಡ್ಗಿ ಬಂದಾವ : ಬಾರವ್ವ
ಚಟಾಕಿಗೆ ಒಂದು ಚೆಂಗಡಿಗಿ

ಮುಚ್ಚಾಳ ಬಂದಾವ ಕಚ್ಯಾಡತಾರವ್ವ
ಹೆಚ್ಚೇನ ಹೇಳ್ಳೀ ನಾನವ್ವ : ಬಾರವ್ವ
ಮೆಚ್ಚಿ ಬಂದೇನ ನುಚ್ಚಗಡ್ಗಿ

ಸೊಂಡೀಯ ಗಿಂದ್ಯೆತಿ ದುಂಡನ್ನ ಬಚ್ಚಾಲ್ಯೆತಿ
ಹಂಡೇಯದಂತಾ ಹರಿವ್ಯೆತಿ : ಬಾರವ್ವ
ಹಿಡಿ ಜ್ವಾಳಕೊಂದ ಬಡಗಡ್ಡಿ

ಕುಂಬಾರ ಬಂದಾನ ಕೊಲ್ಲಾರಿ ತಂದಾನ
ಕೊಲ್ಲಾರಿ ತುಂಬ ಗಡಿಗೆವ್ವ : ಬಾರವ್ವ
ದುಡ್ಡ ಕೊಟ್ಟಾರ ದೊಡಗಡಿಗಿ

ಅಲ್ಲಿ ಕೇರಿಗೆಲ್ಲೇ ಮಕ್ಕಳಾಟಕೆಲ್ಲೇ
ಬಲ್ಲವು ಮನಿಯ ಗಡಿಗೆಲ್ಲಿ : ಬಾರವ್ವ
ಇಲ್ಲೇನೊ ಬೇಗ ತರುವೂನು.

□□

ಮುಡಸ್ಕೋಳೊಕಾಳ ! ಮನಿದೀಪ

ಮಲ್ಲೀಗಿ ಮನಿ ಕಿಡಕಿ ಸೊಲ್ಲಳದೆ ವರಸಾದೆ
ಇಲ್ಲಾದೆ ದೀಪ ಅದರಾನ್ನ : ನನ್ನೆದಿಯ–
ಕಲ್ಲಾದೆ ಕಂದ ಕಳಿ (ಕಳೆ) ಬೇಡೆ

ಗುಳಿಗಣ್ಣಗೆದ್ದಾವ ಎದಿಗೆ ಜಳಬಿದ್ದಾವ
ಬಳಿ–ನನ್ನ ರಟ್ಟೆಗೇ ರ್‍ಯಾವ : ಬಳಿಯಾನ್ನ
ಹೊಳಪಿಳದ ಬಗಿಯ ನೀಗ್ಯಾವ

ಬೆಣ್ಣೆ – ಕಣ್ಣೀ ತಿಂದ ಬಣ್ಣ ಬಾಗ್ಯೇವೆಂದ
ಅಣ್ಣ ಹೇಳೆನ್ನ – ಹಿರಿಯೂರ : ಅರಮನಿಗೆ
ಆರೂತಿ ಬೆಳಗು – ದಿನವೆಂದ ?

ಇಪ್ಪತ್ತುಸಾವೀರ ಉಪ್ಪಿನಿಲ್ಡಂಡೀ ಹರವೆ
ಒಪ್ಪತ್ತಿನ್ಯಾಗ ಮತ್ತೆಂದ : ಹಂಚೀಯ
ಹಾಳಗಾಗಲಕ ಕಳವೇನೆ ?

ಹಿಡಿಲಾಕ ಚತ್ತರಗೆ, ಪಡದಾರ ಉಪ್ಪರಿಗೆ
ಮುಡಿಲಾಕ ಬೇಕ ಗರಿಹೂವ : ನನಕಂದ
ಮುಡಸ್ಕೋಳೊ ಕಾಳ ! ಮನಿದೀಪ.

□□

ಭಾಗ ಐದು : ಅನುಬಂಧ

ನೆನಪು : ಶ್ರದ್ಧಾಂಜಲಿ

'ಆ ಗಿಡಾ, ಈ ಗಿಡಾ, ಒಂದೊಂದೂ ಜೇಂಗೊಡಾ'

ಧಾರವಾಡದ ರಾಜಾಲಖಮುಗೌಡ ಸರದೇಸಾಯಿ ಹಾಯ್‌ಸ್ಕೂಲಿನಲ್ಲಿ ಕಲಿಯುತ್ತಿದ್ದಾಗಲೇ (೧೯೪೦–೪೫) ನಾನು ಪದ್ಯ ಬರೆಯುವ ಪ್ರಯತ್ನ ಮಾಡಿದ್ದೆ. ಅದರ ರಚನಾಕ್ರಮದ ಬಗ್ಗೆ ಏನನ್ನೂ ತಿಳಿದುಕೊಂಡಿರಲಿಲ್ಲವಾದರೂ ನಾನು ಓದಿದ ಹಾಗೂ ಕೇಳಿದ ಕವಿತೆಗಳ ಪ್ರಭಾವ ನನ್ನ ಮೇಲೆ ಸಾಕಷ್ಟಾಗಿತ್ತೆಂದು ತೋರುತ್ತದೆ. ಹಾಯ್‌ಸ್ಕೂಲ್ 'ಮಿಸೆಲಿನಿ'ಯಲ್ಲಿ ನನ್ನ ಪದ್ಯವೊಂದನ್ನು ಮೊದಲು ಪ್ರಕಟಿಸಿ ಪ್ರೋತ್ಸಾಹಿಸಿದವರು ಶಾಲೆಯ ಮುಖ್ಯಾಧ್ಯಾಪಕರಾಗಿದ್ದ ಶ್ರೀ ವಿ. ರು. ಕೊಪ್ಪಳ ಅವರು. ನಾನು ಬರೆದದ್ದನ್ನು ಬೇರೆ ವರ್ಗದ ವಿದ್ಯಾರ್ಥಿಗಳೆದುರು ಅವರು ಓದಿ ತೋರಿಸುತ್ತಿದ್ದರೆಂದು ನನಗೆ ಆಮೇಲೆ ತಿಳಿಯಿತು. ಅವು ಈಗ ನನ್ನ ನೆನಪಿನಲ್ಲಿಯೂ ಕೂಡ ಉಳಿದಿಲ್ಲ. 'ಕೋಲ್ಮಿಂಚು' ಎನ್ನುವ ಒಂದು ಪದ್ಯದ ಎರಡು ಸಾಲುಗಳು ಮಾತ್ರ ನೆನಪಿನಲ್ಲಿವೆ :

ಕೋಲ್ಮಿಂಚೊಂದು ಮಿಂಚುತಲಿತ್ತು
ಬಾಲೆಯ ಚಪಲವ ಚಾಚುತಲಿತ್ತು

ನನ್ನ ಅಂದಿನ ಸಹಪಾಠಿ, ಸ್ನೇಹಿತ ಷಣ್ಮುಖಪ್ಪ ಇಚ್ಚಂಗಿ (ಈಗ ಧಾರವಾಡದ ಪ್ರಸಿದ್ಧ ಅಡ್ವೋಕೇಟ್) ಅವರು ಈಗಲೂ ಅದನ್ನು ನೆನಪಿಟ್ಟುಕೊಂಡು ಹೇಳಿ ನನ್ನನ್ನು ಅಚ್ಚರಿಗೊಳಿಸುದುಂಟು. ಬಿ.ಎಂ.ಶ್ರೀ ಸಂಪಾದಿಸಿದ್ದ 'ಕನ್ನಡದ ಬಾವುಟ' ಪುಸ್ತಕ ನನಗೆ ಬಹುಮಾನವಾಗಿ ಬಂದಿತ್ತು. ಹಳಗನ್ನಡ ಹಾಗೂ ನಡುಗನ್ನಡ ಕಾವ್ಯದ ಆಯ್ದ ಕಾವ್ಯ ಭಾಗಗಳಲ್ಲದೆ ಹೊಸಗನ್ನಡ ಕವಿತೆಗಳೂ ಆ ಸಂಕಲನದಲ್ಲಿದ್ದವು. ನವೋದಯದ ಹಿರಿಯ ಕವಿಗಳೆಲ್ಲರ ಕವಿತೆಗಳ ಮಾದರಿಗಳು ನನಗೆ ಅದರಲ್ಲಿ ಓದಲು ದೊರೆತು, ನನ್ನ ಹುಮ್ಮಸ್ಸನ್ನು ಹೆಚ್ಚಿಸಿದವು. ನಾನು ಮೆಚ್ಚಿಕೊಂಡ ಕವಿತೆಗಳ ನುಡಿಗಳನ್ನು ನಾನು ಆಗಾಗ ಮೆಲುಕು ಹಾಕುತ್ತಿದ್ದೆ. ನಮಗೆ ಮ್ಯಾಟ್ರಿಕ್ ಕ್ಲಾಸಿಗೆ ಪಠ್ಯವಾಗಿದ್ದ 'ಗದ್ಯಪದ್ಯ ಸಂಗ್ರಹ'ದಲ್ಲಿಯ ಬೇಂದ್ರೆ, ಕುವೆಂಪು, ಮಧುರ ಚೆನ್ನ, ಕಡೆಂಗೊಡ್ಲು ಶಂಕರಭಟ್ಟರ ಕವಿತೆಗಳಂತೂ ನನಗೆ ಬಾಯಿಪಾಠವಾಗಿಬಿಟ್ಟಿದ್ದವು.

ಮುಂದೆ ಕಾಲೇಜಿಗೆ ಹೋದ ಮೇಲೆ (೧೯೪೬) ನಾನು ಬರೆಯತೊಡಗಿದ ಕವಿತೆಗಳಿಗೆ ತಾನಾಗಿಯೇ ಒಂದು ರೂಪ ಬರತೊಡಗಿತು. ಕಾವ್ಯದ ಅಭ್ಯಾಸ ಒಂದು 'ಹುಚ್ಚು' ಎನಿಸುವಷ್ಟು ಬೆಳೆಯಿತು. ಆ ಸಂದರ್ಭದಲ್ಲಿ ನಾನು ಬರೆದ ಮೊದಲ ಕವಿತೆ 'ಕಾವ್ಯಾಕ್ಷಿ'. ಆ ಹೆಸರು ನನಗೆ ಹೇಗೆ ಹೊಳೆಯಿತೋ ಗೊತ್ತಿಲ್ಲ. ೧೯೪೭ರಲ್ಲಿ ಅದು ಮಾಸ್ತಿಯವರ 'ಜೀವನ' ಪತ್ರಿಕೆಯಲ್ಲಿ ಪ್ರಕಟಗೊಂಡಾಗ ನನ್ನ ಆನಂದಕ್ಕೆ ಮೇರೆಯಿರಲಿಲ್ಲ'. ನನ್ನ ಪ್ರಥಮ ಕವನ ಸಂಕಲನ ಅದೇ ಶೀರ್ಷಿಕೆಯಲ್ಲಿ ನಾನು ಜ್ಯೂ. ಬಿ.ಎ.ದಲ್ಲಿದ್ದಾಗಲೇ ೧೯೪೮ರಲ್ಲಿ ಗೆಳೆಯರ ಒತ್ತಾಯದಿಂದ ಪ್ರಕಟವಾಯಿತು. ಕವಿವರ್ಯ ಬೇಂದ್ರೆಯವರು ಅದಕ್ಕೆ ಮುನ್ನುಡಿ ಬರೆದು ಹರಸಿದರು. ಡಾ : ಹಿರೇಮಲ್ಲೂರು

ಈಶ್ವರನ್ ತಮ್ಮ 'ಕಲ್ಪನಾ ಗ್ರಂಥಮಾಲೆ'ಯಲ್ಲಿ ಅದನ್ನು ಪ್ರಕಟಿಸುವ ಔದಾರ್ಯ ತೋರಿದರು.

ಇನ್ನು ಈ ಮೊದಲ ಕುಸುಮ 'ಕಾವ್ಯಾಕ್ಷಿ' ಅರಳಿದ ಸಂದರ್ಭ–ಸನ್ನಿವೇಶವನ್ನು ಈಗ ಸ್ವಲ್ಪ ವಿವರಿಸಬೇಕು: ಧಾರವಾಡ–ಹುಬ್ಬಳ್ಳಿ ಮಾರ್ಗದಲ್ಲಿ ಧಾರವಾಡದಿಂದ ಮೂರು ಮೈಲಿನ ಅಂತರದಲ್ಲಿದೆ, ನವಲೂರು ಗ್ರಾಮ. ನನ್ನ ಗೆಳೆಯ ಶ್ರೀ ಶಿವೇಶ್ವರ ದೊಡ್ಡಮನಿ ಆ ಊರಿನವರು. ಧಾರವಾಡದ ಕಛೇರಿಯೊಂದರಲ್ಲಿ ಅವರು ಟೈಪಿಸ್ಟ್ ಆಗಿ ಕೆಲಸ ಮಾಡುತ್ತಿದ್ದರು. ಅವರೂ ಕಾವ್ಯಪ್ರೇಮಿಗಳಾಗಿದ್ದರಲ್ಲದೆ ಜನಪದ ಗೀತೆಗಳ ಸಂಗ್ರಹ ಅವರ ಹವ್ಯಾಸವಾಗಿತ್ತು. ಬೆಳಗಿನಲ್ಲಿ ನಾವಿಬ್ಬರೂ ನವಲೂರು ದಾರಿಯಲ್ಲಿ ವಾಕಿಂಗ್ ಹೋಗುತ್ತಿದ್ದೆವು. ಅವರ ಊರಿನ ಸಮೀಪ ಹೆದ್ದಾರಿಯ ಇಕ್ಕೆಲಗಳಲ್ಲಿ ಕಕ್ಕೆಯ ಮರಗಳೆರಡು ಹಳದಿಯ ಹೂಗೊಂಚಲುಗಳಿಂದ ಕಿಕ್ಕಿರಿದುದನ್ನು ನಾವಿಬ್ಬರೂ ಮೊದಲ ಸಲ ಕಂಡಾಗ ರೋಮಾಂಚನಗೊಂಡೆವು. ಆ ಹೂವುಗಳ ಸುಗಂಧ ನವುರಾಗಿ ಗಾಳಿಯಲ್ಲಿ ತೇಲಿ ಬರುತ್ತಿತ್ತು. ಭೃಂಗಗಳು (ಜೇನ್ನೊಣಗಳಲ್ಲ) ಆ ಹೂಗೊಂಚಲ ಸುತ್ತ ಸೊಕ್ಕಿನಿಂದ ಸುಳಿದಾಡುತ್ತಿದ್ದವು. ದಿನವೂ ಅದೇ ಸ್ಥಳ ನಮ್ಮ ವಿಹಾರದ ಪಾಜೆಗಟ್ಟೆಯಾಯಿತು. ಕೆಲದಿನಗಳ ನಂತರ ಒಂದು ಸಂಜೆ (೧೯೪೮) ನನ್ನ ಕೋಣೆಯಲ್ಲಿ ಏನೋ ಓದುತ್ತ ಕುಳಿತಾಗ ''ಆ ಗಿಡಾ ಈ ಗಿಡಾ ಒಂದೊಂದು ಜೇಂಗೊಡಾ' ಎಂಬ ಸಾಲು ನನ್ನ ಮನಸ್ಸಿನಲ್ಲಿ ತಾನಾಗಿಯೇ ಹೊರಹೊಮ್ಮಿತು. ಅದೇ ನಾದದ ಗುಂಗಿನಲ್ಲಿ ನಾನು ಒಂದು ಕವಿತೆಯನ್ನು ಬರೆದು ಮುಗಿಸಿದೆ.

ಅದರ ಮೊದಲ ನುಡಿ :

'ಆ ಗಿಡಾ, ಈ ಗಿಡಾ ಒಂದೊಂದೂ ಜೇಂಗೊಡಾ;
ಬಾಂದೇವಿಗೆ ನೆಲದಾಯಿಯ
ಹೂಗೊಂಡೆಯ ಹೊಂಗೊಡಾ'

ಏಳೆಂಟು ನುಡಿಗಳಲ್ಲಿ, ಅದೇ ಛಂದದಲ್ಲಿ ಮುಂದುವರಿದು,

''ತನಗೆ ತಾನೆ ತಿಳಿಯದಂತೆ
ತುಳುಕಿತಹಹ ಭಾವನಾ
ಕಮ್ಮಲರಿಗೆ
ಕವಿಗಾಳಿಗೆ
ಕಾವ್ಯಾಕ್ಷಿಗೆ ವಂದನಾ'

–ಹೀಗೆ ಮುಕ್ತಾಯಗೊಂಡಿತು. ನನ್ನಷ್ಟಕ್ಕೆ ನಾನು ಅದನ್ನು ಗುಣುಗುಣಿಸುತ್ತ ಆನಂದಪಟ್ಟಿದ್ದನ್ನು ಮರೆಯುವಂತಿಲ್ಲ; ಮರುದಿನ ಶಿವೇಶ್ವರ ಅದನ್ನು ನೋಡಿ ಹಿಗ್ಗಿ ಹೋದರು. ಇಷ್ಟೇ ಅಲ್ಲ, ನಾವಿಬ್ಬರೂ ಮತ್ತೆ ಆ ಸ್ಥಳಕ್ಕೆ ಹೋದಾಗ ಆ ಮರದ ಕೆಳಗೆ ನನ್ನನ್ನು ನಿಲ್ಲಿಸಿ ಒಂದು ಫೋಟೋ ಕೂಡ ತೆಗೆದರು. ಆ ಕವಿತೆ 'ಜೀವನ'ದಲ್ಲಿ

ಪ್ರಕಟವಾದದ್ದನ್ನು ಹಿಂದೆಯೇ ಹೇಳಿದ್ದೇನೆ. ಕಾಲೇಜಿನ ಗೆಳೆಯರಲ್ಲಿ ಕೆಲವರು ಭಾವಗೀತೆಗಳನ್ನು ಚೆನ್ನಾಗಿ ಹಾಡಬಲ್ಲವರಾಗಿದ್ದರು. ಅವರ ಕೈಯಲ್ಲಿ (ಬಾಯಲ್ಲಿ) ಸಿಕ್ಕು ಅದು ಆಗಲೇ ಜನಪ್ರಿಯವಾಗಿಬಿಟ್ಟಿತು. ಮುಂದೆ ಧಾರವಾಡ ಆಕಾಶವಾಣಿ ಯಿಂದಲೂ ಅದು ಹಲವು ಸಲ ಪ್ರಸಾರಗೊಂಡಿತು.

ಇತ್ತೀಚೆಗೆ ಪರಿಸರ ಕುರಿತ ನುಡಿಚಿತ್ರವೊಂದರಲ್ಲಿ ಈ ಹಾಡನ್ನು ಹಿನ್ನೆಲೆಯಾಗಿ ಬಳಸಿಕೊಂಡಿದ್ದಾರೆಂದು ಕೇಳಿದ್ದೇನೆ. ಇತ್ತೀಚೆ ವಿಮರ್ಶಕ ಮಿತ್ರರೊಬ್ಬರು ನನ್ನ ಕಾವ್ಯದ ಬಗ್ಗೆ ಲೇಖನವೊಂದನ್ನು ಬರೆಯುವಾಗ, ನಾನು ಸೃಷ್ಟಿಸಿದ ಕೆಲವು ಹೊಸ ಪದಗಳನ್ನು ಉದಾಹರಿಸುತ್ತ ಈ ಕವಿತೆಯಲ್ಲಿಯ 'ಕಾವ್ಯಾಕ್ಷಿ' ಹಾಗೂ 'ಕವಿಗಾಳಿ' ಎಂಬ ಪದಗಳನ್ನು ಅದರಲ್ಲಿ ಸೇರಿಸಿದ್ದಾರೆ. ಈ ಕವಿತೆ ಬರೆದು ಇಂದಿಗೆ ಸರಿಯಾಗಿ ೫೧ ವರ್ಷವಾಯಿತು.

ಈ ಕವಿತೆಯನ್ನು ಬಹುವಾಗಿ ಮೆಚ್ಚಿಕೊಂಡಿದ್ದ ಗೆಳೆಯ ಶಿವೇಶ್ವರ ದೊಡ್ಡಮನಿ, ತಮ್ಮ ಮೊದಲ ಮಗಳಿಗೆ 'ಕಾವ್ಯಾಕ್ಷಿ' ಎಂದು ಹೆಸರಿಟ್ಟರು. ಮುಂದೆ, ೧೯೫೦ರಲ್ಲಿ ಅವರು ಅಕಾಲ ಮರಣಕ್ಕೀಡಾದಾಗ, ನನ್ನ ಮನಸ್ಸಿಗೆ ಆದ ಆಘಾತ ವರ್ಣಿಸಲಸದಳ. (೧೯೫೦ರಲ್ಲಿ ಪ್ರಕಟವಾದ ನನ್ನ ''ಆಕಾಶಬುಟ್ಟಿ'' ಕವನ ಸಂಗ್ರಹದಲ್ಲಿಯ ''ಚರಮ ಗೀತೆ'' ಶಿವೇಶ್ವರರನ್ನೇ ಕುರಿತು ಬರೆದದ್ದು) ಅವರ ಕವನಗಳು ; ಸಂಗ್ರಹಿಸಿದ ಜನಪದ ಗೀತೆಗಳು ಹಾಗೂ ಲೇಖನಗಳನ್ನೊಳಗೊಂಡ 'ವಾಚಿಕೆ'ಯೊಂದನ್ನು ಕನ್ನಡ ಪುಸ್ತಕ ಪ್ರಾಧಿಕಾರದವರು ಇದೀಗ ಪ್ರಕಟಿಸುವ ಸನ್ನಾಹದಲ್ಲಿರುವುದು ನನಗೆ ಸಮಾಧಾನವ ನ್ನುಂಟು ಮಾಡಿದೆ.

ಮೊದಲ ಕುಸುಮ ಶೀರ್ಷಿಕೆಯ ಈ ಲೇಖನವನ್ನು 'ಮಂಗಳ'ದ ಕೃಪೆಯಿಂದ ದಿವಂಗತ ಗೆಳೆಯ ಶಿವೇಶ್ವರನಿಗೆ ಅರ್ಪಿಸುತ್ತಿದ್ದೇನೆ.

ಚೆನ್ನವೀರ ಕಣವಿ

ಮಂಗಳ, ವಾರಪತ್ರಿಕೆ, ೧೩-೧-೧೯೯೯, ಬೆಂಗಳೂರು

□□

ಚರಮಗೀತೆ

ಇರುಳು ಹೊರಳಿತು ಜೀವ ನರಳಿತು ಕತ್ತಲೆಯೆ ಚೀರಿಟ್ಟಿತು !
ಏನ ಬಯಸಿದರೇನಿದಾಯಿತು, ಆಗಬಾರದುದಾಯಿತು ;
ವಿಷಮ ಬಾಳಿಗೆ ವಿಷಮಜ್ವರವೇ ಹೊಂಚು ಹಾಕಿತು ಹಿಂಡಿತು
ಮಾನವನ ಇಷ್ಟಾರ್ಥಶಕ್ತಿಗು ಯುಕ್ತಿಗೂ ಕೈ ಮೀರಿತು ॥ ೧ ॥

ನಡುವರಯದಲ್ಲಿಂತು ಝುಂಝಾವಾತವೇತಕೆ ಬೀಸಿತೋ !
ಬಾಳಗಿಡ ಬುಡಮಟ್ಟವಲುಗಿತು ಬೇರ್ವರಸಿ ಅಡಗೆಡೆಯಿತು.
ಚಿಗುರು ಹೂ ಮಿಡಿಸಿಡಿದು ಚೆಲ್ಲಾಪಿಲ್ಲಿಯಾಯಿತು ಗೊಂಚಲು
ಎಂಥ ಗಂಡೆದೆಯಾದರೂ ತಲೆದಂಡ ವಿಧಿಗೆತ್ತೆತ್ತಲು ! ॥ ೨ ॥

ಜೀವ ಜೀವಕೆ ಬೆಸೆದುಕೊಂಡಿದ್ದವಗೆ ಕರುಣಾಮೂರ್ತಿಗೆ
'ಮೂಜಗಕೆ ಮಾದರಿಯು ನಮ್ಮೀ ಒಲವು' ಎನ್ನುವ ಜೀವಿಗೆ ;
ಇಂತು ಕೊನೆಯೇ ಶಿವಶಿವಾ ! ಇನ್ನೆಂತು ಬದುಕುವ ರೀತಿಯು
ಇದ್ದ ಕಿದ್ದೊಲೆ ಇಲ್ಲವೆನಿಪುದೆ ವಿಧಿಯ ನಿಷ್ಠುರ ನೀತಿಯು ? ॥ ೩ ॥

ನನ್ನವರು ನನ್ನವರು ಎಲ್ಲರು, ಎಂಬುದೊಂದೇ ಚಿಂತನೆ
ಪರಹಿತದಿ ಪರಮಾತ್ಮನನ್ನೇ ಕಂಡು ಕೊಂಡಾಡಿದನೆನೆ ;
ತನ್ನ ಅಳಲಿಕೆ ತನ್ನ ಬಳಲಿಕೆಯೊಂದನಾದರು ನೆನೆಯದೆ
ಒಳಗೆ ಒಳಗೇ ನುಂಗಿ ನಗುತಿರಲಯ್ಯೊ ಮಿಂಚಿದೆ ಮೀರಿದೆ ! ॥ ೪ ॥

ಹೊರಗೆ ಹೋದರೆ ಒಳಗೆ ಬಂದರೆ ನೀನೆ ನೀನೇ ಬಳಿಯಿರೆ
ಯಾವ ಪುಣ್ಯದ ಫಲವೊ ಸ್ನೇಹವು ನಮ್ಮ ಚಿರಬದುಕಾಗಿರೆ ;
ಎಂಥ ನೋವಿಗು ನರಳಿಕೆಗು ಗೆಳೆತನವೆ ತೈಲವನೆರೆಯಿತು
ಬಾಳಿನುದ್ದಕು ಅಮೃತವಾಹಿನಿ ಎದೆಗೆದೆಯ ಸಂಗಮಿಸಿತು. ॥ ೫ ॥

ನಿನ್ನ ಹೃದಯದ ದೊಡ್ಡಿತೆಗೆ ನಮ್ರತೆಗೆ ಘನ ಔದಾರ್ಯಕೆ
ಕವಡು ಹೊದ್ದದ ಕೃತಕವರಿಯದ ಮುಗ್ಧಮನ ಮಾಧುರ್ಯಕೆ ;
ಏನು ಕೊಟ್ಟರು ತೀರದಯ್ಯೊ ಏನು ಕೊಟ್ಟರು ಬಾರದು !
ಪರಮ ಪ್ರೀತಿಗೆ ಪ್ರೀತಿಯೇ ಪ್ರತಿಫಲವು ಉಳಿದುದು ಸಲ್ಲದು. ॥ ೬ ॥

ಒಂದೆ, ಎರಡೇ ? ಗಣನೆಗರಿಯದು ನೀನು ಮಾಡಿದ ಉಪಕೃತಿ
ಹಾಡಿಕೊಂಡರು ತೋಡಿಕೊಂಡರು ಮರೆಯಲಾಗದ ಸಂಸ್ಕೃತಿ ;
ಅಳಿಯಲಾರದು ಜೀವಜೀವಾಳದಲಿ ಜಿನುಗುವ ಝೇಂಕೃತಿ
ನೆನಹು ಗಂಧದ ಕರಡಿಗೆಯು ಮತ್ತದುವೆ ಚಿನುಮಯ ಮೂರುತಿ. ॥ ೭ ॥

'ಈಗ ಇಲ್ಲಿಯೆ ಹೋಗಿ ಬರುವೆನು' ಎಂದು ಹೊರವಂಟಂತೆಯೆ
ದೂರ ದೂರದ ದಾರಿಯನು ನೀ ಹಿಡಿದು ಸಾಗಿದೆ ಅಂತೆಯೆ
ಮರಳಿಬಾರದ ಭಾಗ್ಯವೇ ಇಂತಾಡಿಸಿತು ಏಡಿಸಿತಲಾ !
ಬಾಳು ಬಿತ್ತರಗೊಂಡ ನೀಲಾಂಬುಧಿಯ ತೆರೆಗ್ಗೆ ಚೆಂಡಲಾ ! || ೮ ||

ಆಗ ಇದ್ದವನೀಗ ಇಲ್ಲೆನೆ ಬಾಯಿ ಬರದಂತಾಗಿದೆ
ಬಪ್ಪುದೆಲ್ಲವು ತಪ್ಪದೆಂದರು ಮನಕೆ ಒಪ್ಪದೆ ಹೋಗಿದೆ
ನೆನೆಯಲೊಡನೆಯೆ ಧುಮುಧುಮಿಸಿ ದುಡುಕುವುವು ಧಮನಿಯು ಧಮನಿಯು
ಜೀವರತ್ನವ ಕಳೆದುಕೊಂಡವರಂತೆ ಹುಡುಕುವೆ ಮೌನಿಯು. || ೯ ||

ಸಂಜೆ ಮುಂಜಾವಿನಲಿ ಕೂಡಿಯೆ ಬೆಟ್ಟ ಬನಗಳನಲೆದೆವು
ಸೃಷ್ಟಿ ಹೃದಯದ ರೂಪರಸಗಂಧದಲಿ ನಮ್ಮನೆ ಮರೆದೆವು ;
ಒಂದು ಚಿಕ್ಕೆಯೆ ಚಂದಿರನೆ ಕಿರುಮೋಡ ಬಣ್ಣದ ಹಕ್ಕಿಯೆ ?
ಎಲ್ಲವೆಲ್ಲವು ಶೋಕಗೀತೆಯೊಳೇಕವಾಗಿಹವಿಲ್ಲಿಯೆ ! || ೧೦ ||

ನಾನು ಎಲ್ಲೋ ತೊದಲು ನುಡಿದರೆ ಅದನೆ ಕವಿತೆಯ ಮಾಡಿದೆ
ನಿನ್ನ ಮಹದನುಭೂತಿಯಲ್ಲಿಯೆ ನನ್ನ ಕಲ್ಪನೆ ಆಡಿದೆ ;
ಎಲೆಯನುದುರಿಸಿ ಕೊಂಬೆಯಲಿ ಹಿಡಿಹೂವು ತಳೆದಿಹ ಕಣಗಿಲೆ
ಅಂತೆ ನಿನ್ನಯ ಬದುಕು ; ಸ್ವಾರ್ಥದ ಸೊಗಡು ಸೋಂಕದ ಚಿತ್ಕಲೆ ! || ೧೧ ||

ಸಾಕು ಸೂರ್ಯೋದಯವು ಚಂದ್ರೋದಯವು ನಿನ್ನಯ ನೆನಪಿಗೆ
ನಾಕದಲ್ಲಿಹ ಆತ್ಮಗಳ ಚೆಲ್ವೆಳಕು ಬೀರುವವಿಂದಿಗೆ ;
ಅವರಿವರ ನಡೆನುಡಿಗಳಲ್ಲಿಯೆ ನಿನ್ನ ಭಂಗಿಯ ಕಾಣುತ
ನೀನೆ ಮೈವೆತ್ತಂತೆ ಭ್ರಾಂತಿಯೊಳಿರುವೆ ಮಮ್ಮಲ ಮರುಗುತ. || ೧೨ ||

ಕಣ್ಣೆನರೆಬೆಳಕನ್ನು ಮುನ್ನವೆ ಕದ್ದ ಕಾಲಗೆ ಮತ್ಸರ
ಜಗಕೆ ಅರೆಗುರುಡಾಗಿ ಬಾಳುವೆನೆಂಬ ಚಿಂತೆಯಬೆಂತರ;
ಇರವಿನಾಸೆಯ ಹಿಂಗಿಸಿತೆ ನುಂಗಿಸಿತೆ ಜಗದಾನಂದವ ?
ಒಂದು ಕೊಟ್ಟೊಂದನ್ನು ಕಸಿವುದು ಅವನ ನಿತ್ಯದ ಕೈತವ. || ೧೩ ||

ತ್ಯಾಗಮಯ ಜೀವನಕೆ ಇದ್ದುದರಲ್ಲೆ ಒಂದಿನಿತಾದರೂ
ಶಾಂತಿ ದೊರೆವುದೆ ? ದೊರೆವುದೆನ್ನಲು ಎಲ್ಲೊ ಅವರಿವರೊಬ್ಬರು ;
ಅವರ ಬಾಳೇ ಕೃತಿಯು ; ಪ್ರತಿಕೃತಿ ಕವಿಯ ಪ್ರತಿಮಾಸೃಷ್ಟಿಯು
ತನ್ನ ಪಾಲಿನ ಭಾಗ್ಯವನು ಹಲವರಿಗೆ ಹಂಚುವ ದೃಷ್ಟಿಯು. || ೧೪ ||

ಹೆತ್ತ ಹೊಟ್ಟೆಯು ಕಕ್ಕುಳಂಗುದಿಕುದಿಯೆ ಬಿಸಿಗಂಬನಿಯಲಿ
ಆರು ಸಂತಯಿಸುವರು ಗೆಳೆಯಾ, ತಾಯ ಕರುಳೇ ಬೆಂಬಳಿ ;
ಅಕ್ಕರೆಯ ಸಕ್ಕರೆಯ ಸವಿಯೂಡಿಸುವ ಅಂತಃಕರಣವು
ಕರಗಿ ಕಂಬನಿಯಾಗಿ ಹರಿದರು ತಾಪಕಿಲ್ಲವೊ ಶಮನವು || ೧೫ ||

ಚಿಕ್ಕ ಮಕ್ಕಳ ಮಾತಿನಿಂದಾ ದುಃಖ ಮರುಕಳಿಸುತ್ತಿದೆ
ಕರುಳು ಕಿತ್ತೆಸೆದಂತೆ ಜೀವಕೆ ಅರೆಮರುಳು ಬಡಿದಂತಿರೆ ;
ಅಂತು ಇಂತೂ ಅಳಲ ಬುತ್ತಿಯೆ ಜೀವನದ ಸೌಭಾಗ್ಯವೇ ?
ಬಡಿದುಕೊಂಡರು ಬುದ್ಬುದವೆ ನಮ್ಮಾಯುಸಿನ ಸಾಫಲ್ಯವೇ || ೧೬ ||

ಜಾನಪದ ಜೀವನವನರಗಿಸಿಕೊಂಡು ಕೊನೆದಿಹ ಸತ್ಕವಿ
ಲೋಕಗೀತಕೆ ಮಾರುವೋಗಿರೆ ಮನಕೆ ಬಂದಿತೆ ಜೇನ್ ಸವಿ
ಹಾಡು ಕೂಡಿಸಲೆಂದು ಓಡಿದೆ ಬೇಡಿ ಜನತಾ ಹೃದಯವ
ಯಾವ ತೃಪ್ತಿಯೊ ನಿನಗೆ ಹನಿಹನಿ ಹೀರಿಕೊಂಡಿರೆ ಸಾರವ. || ೧೭ ||

ನಾಡ ತಿರುಗಿದನಂದು ಗುಡುಗಾಡಿದನು ಕವಿ ಸರ್ವಜ್ಞನು
ಕರದಿ ಕಪ್ಪರವಿಡಿದು ಕಂಬಳಿ ಹೊದೆದು ಜೀವವ ತೆಯ್ದನು ;
'ಭವತಿ ಭಿಕ್ಷಾಂದೇಹಿ' ಕವಿಗಳ ಮಂತ್ರವೆಂದನು ಮುದ್ದಣ
ಅಶ್ವಮೇಧವೆ, ವಿಶ್ವಮೇಧವೆ–ಕವಿಗೆ ಕಂಬನಿ ಕಂಕಣ ! || ೧೮ ||

ಅರಿವು ಪಾರಾಯಣವ ನಡಸಿದೆ ಸಾವು ಮೀರಿದ ಸತ್ಯದ
ಇರವು ಬಂದುದ ಮೆಟ್ಟನಿಂದಿದೆ ತುತ್ತತುದಿಯಲಿ ಕರ್ಮದ
ಜೀವ ಕೋಟಾಕೋಟಿ ಕೋಟಲೆಗೊಂಡರಿಲ್ಲವೊ ಬೆಂಬಲ
ನರನ ದುಃಖವು ನರಗೆ, ಹರನಿಗೆ ಮೂರು ಕಣ್ಣೂ ನಿಷ್ಫಲ || ೧೯ ||

ಕಣ್ಮರೆಯು ಮಣ್ಮರೆಯು ದೇಹವು ಎಂದು ತತ್ವವು ಸಾರಲಿ
ಇಂದೊ ನಾಳೆಯೊ ನಮ್ಮ ಪಾಲೂ ಸಲ್ಲುವದು ಎಂದೆನ್ನಲಿ ;
ಆದರಾ ಚೈತನ್ಯ ಜೀವನದರ್ಕವಿಲ್ಲಿಯೆ ಉಳಿವುದು
ಒಳಿತಿನೊಡಲಲಿ ಮೊಳೆತು ಬೆಳ್ಳಸವಾಂತು ಬೆಳೆವುದು ಹೊಳೆವುದು. || ೨೦ ||

ಶಿವಶಿವೇಶ್ವರ ನಿನ್ನ ರೂಪವೆ ನನ್ನ ಕಣ್ಣಲಿ ತುಂಬಿದೆ
ನಿನ್ನ ನೆನಹಿನ ಜೇನಿಗೆನ್ನಯ ಮನದ ಮೊನೆಯಲಿ ಇಂಬಿದೆ ;
ಅಳಿದನೆಂದವರಾರು ? ಚೀ ನಮ್ಮಚ್ಚು ಮೆಚ್ಚಿನ ಮೂರುತಿ ;
ಎದೆಯ ಹೊಂಬಟ್ಟಲಲಿ ಇದಿಗೋ ಬಾಷ್ಪಬಿಂದುವಿನಾರತಿ ! || ೨೧ ||

ನಿನ್ನ ಪ್ರೀತಿಯ ಹೂವು ಮಲ್ಲಿಗೆ ಚೆಲುಗುಲಾಬಿಗಳಿಲ್ಲಿವೆ
ಸ್ನೇಹ ಸೌಗಂಧವನು ಹರಡಿವೆ ತೀಡುವೆಲರಿಗೆ ನೀಡಿವೆ;
ನಡುಗುತಿಹ ಪಕಳೆಯಲಿ ಮೌನದಿ ಬಾಷ್ಪದಂಜಲಿ ಪಿಡಿದಿವೆ
ಶಾಂತಿಪೊಂದಲಿ ಆತ್ಮ ಓಂ ಶಿವ ಭಾವಚಿಂತಾರತ್ನವೆ ! ॥ ೨೨ ॥

ಚೆನ್ನವೀರ ಕಣವಿ

□□

ಶಿವೇಶ್ವರನ ಸಾವು

ಮಬ್ಬಿಗಿಳಿದ ಸಾಲು ಸಾಲು ಅಮೃತಶಿಲೆಯ ಗೋರಿ
ಕತ್ತಲೆದೆಯ ಚೂರಿ;
ಮನದ ಮಕ್ಕಳೆಲ್ಲ ನಕ್ಕ ಮಲ್ಲಿಗೆ ಬನತೋಟ
ಮರೆದು ಮಸಣವಾಟ.

ಗೋಪಾಲಕೃಷ್ಣ ಅಡಿಗ

''ಕನ್ನಡದಲ್ಲಿ ಕವಿಯಾಗಿ ಜನಿಸಬೇಡ'' ಎಂದು ಹಿರಿಯರೊಬ್ಬರು ಹೇಳಿರುವುದುಂಟು. ನಿರಾಸೆಯಿಂದಾಗಿಯೇ ಅವರ ಮುಖದಿಂದ ಅಂಥ ಮಾತು ಬಂದಿರಲು ಸಾಕು. ಆ ಮಾತಿನಲ್ಲಿ ನಿರಾಸೆ ಮೂಡಿದ್ದರೂ ಸತ್ಯವೂ ಇದೆಯೆಂಬುದನ್ನು ಅಲ್ಲಗಳೆಯುವಂತಿಲ್ಲ.

ಕನ್ನಡದಲ್ಲಿ ಪುಸ್ತಕಗಳನ್ನು ಕೊಂಡು ಓದುವ ಜನ ವಿರಳ. ಕವಿತೆಯ ಪುಸ್ತಕಗಳನ್ನೋದುವವರು ಇನ್ನೂ ವಿರಳ. ಪತ್ರಿಕೆಗಳಲ್ಲಿ ಪ್ರಕಟವಾಗುವ ಕವಿತೆಗಳನ್ನು ವಿಮರ್ಶಾತ್ಮಕವಾಗಿ ನೋಡಿ ಹೊಸದಾಗಿ ತಲೆಯೆತ್ತುವ ತರುಣ ಕವಿಗಳ ಯೋಗ್ಯತೆಯನ್ನು ಕಂಡು ಹಿಡಿದು ಮೆಚ್ಚಿಕೊಳ್ಳುವವರು ಇನ್ನೂ ವಿರಳ. ಇಂಗ್ಲೆಂಡ್, ಅಮೇರಿಕೆ, ರಶಿಯ ಮೊದಲಾದ ರಾಷ್ಟ್ರಗಳಲ್ಲಿ ಗುಣಗ್ರಾಹಿಗಳೂ ನಿಷ್ಪಕ್ಷಪಾತಿಗಳೂ ಆದ ವಿಮರ್ಶಕರು, ಪ್ರಕಾಶಕರು ಪ್ರತಿಭಾಶಾಲಿಗಳಾದ ತರುಣ ಕವಿಗಳನ್ನು ಪ್ರೋತ್ಸಾಹಿಸಿ ಬೆಳಕಿಗೆ ತರುತ್ತಾರೆ. ಅವರ ಗ್ರಂಥಗಳು ಸಾವಿರಗಳ ಸಂಖ್ಯೆಯಲ್ಲಿ ಮಾರಾಟವಾಗುತ್ತವೆ. ಹೊಟ್ಟೆಯ ಪಾಡಿಗಾಗಿ ಇಷ್ಟವಿಲ್ಲದ ನೌಕರಿಯಲ್ಲಿ ಕೊಳೆಯಬೇಕಾದ ಪ್ರಸಂಗ ಅವರಿಗೆ ಬರುವುದಿಲ್ಲ. ಕಾವ್ಯಾಭ್ಯಾಸ, ಕಾವ್ಯಚಿಂತನೆ, ಕಾವ್ಯರಚನೆಗಳಲ್ಲೇ ತೊಡಗಿಕೊಂಡು ಅವರು ತಮ್ಮ ಕ್ಷೇತ್ರದಲ್ಲಿ ಮುಂದುವರಿಯಲು ಸಾಧ್ಯವಾಗುತ್ತದೆ.

ಕನ್ನಡದಲ್ಲಿ ಎಲ್ಲವೂ ಇದಕ್ಕೆ ವಿರುದ್ಧವೆ. ಇಲ್ಲಿ ಭಾವುಕ ಕವಿಜೀವಗಳಿಗೆ ಕೊಂಚವೂ ಪ್ರೋತ್ಸಾಹವಿಲ್ಲ. ಎತ್ತ ತಿರುಗಿದರೂ ತಾತ್ಸಾರ, ಕುಚೇಷ್ಟೆ, ನಿರ್ಲಕ್ಷ್ಯ, ಅಸೂಯೆ. ಅವರ ಕವನಸಂಕಲನಗಳು ಪ್ರಕಟವಾಗುವುದು ಹಾಗಿರಲಿ, ಪತ್ರಿಕೆಗಳಲ್ಲಿ ಕವಿತೆಗಳು ಪ್ರಕಟವಾಗುವುದೂ ಕಷ್ಟಕರವಾಗುತ್ತದೆ. ತಮಗೆ ತಾವೇ ನಿರ್ಮಿಸಿಕೊಂಡ ಶ್ರೇಷ್ಠತೆಯ ಪೀಠವನ್ನೇರಿ ಕುಳಿತ ಕೆಲವರು ಸಂಪಾದಕರು ಈ ತರುಣ ಕವಿಗಳನ್ನು ಅತ್ಯಂತ ಅನಾದರದಿಂದ ನೋಡುತ್ತಾರೆ. ''ನೀವು ಚೆನ್ನಾಗಿ ಬರೆಯುತ್ತೀರಿ. ಸಂತೋಷ. ನಮಗೂ ನಿಮ್ಮ ಕೃತಿಗಳನ್ನು ಕೊಡಿ, ಪ್ರಕಟಿಸುತ್ತೇನೆ'' ಎಂದು ಹೇಳಿ ಪ್ರೋತ್ಸಾಹಿಸುವ ದೊಡ್ಡ ಮನಸ್ಸು ಇವರಿಗಿಲ್ಲ. ತರುಣ ಕವಿಗಳು ತಮ್ಮ ಕೃತಿಗಳನ್ನು ತಾವಾಗಿಯೆ ಇವರಿಗೆ ಕಳಿಸಬೇಕು. ಅವುಗಳನ್ನು ಪ್ರಕಟಿಸುವುದೆಂದರೆ ಕವಿಗಳಿಗೆ ದೊಡ್ಡ ಉಪಕಾರ ಮಾಡಿದಂತೆ ಎಂದು ಈ ಸಂಪಾದಕವರೇಣ್ಯರ ಭಾವನೆ. ಒಂದು ಕವಿತೆ ಅಚ್ಚಾಗಿ

ಬರಬೇಕಾದರೆ ಒಂದೊಂದು ಸಲ ಎರಡೆರಡು ವರ್ಷಗಳ ವರೆಗೆ ಕಾಯಬೇಕಾಗುತ್ತದೆ. ಬೆಳೆಯಬೇಕಾದ ಕವಿಗಳಿಗೆ ಸಂಪಾದಕರಿಂದ ದೊರೆಯುವ ಪ್ರೋತ್ಸಾಹ ಇಂಥದು.

ಇನ್ನೂ ಕೆಲವರು ಸಂಪಾದಕರಿದ್ದಾರೆ. ಹಿಂದೆ ಯಾವುದೋ ಕಾಲದಲ್ಲಿ ಅವರೂ ಕವಿಗಳಾಗಿ ಕವನಸಂಕಲನಗಳನ್ನೂ ಪ್ರಕಟಿಸಿರುತ್ತಾರೆ. ತಮಗಿಂತ ಚೆನ್ನಾಗಿ ಬರೆಯುವ ಕವಿಗಳನ್ನು ಇವರು ಮುಂದೆ ಬರಗೊಡುವುದಿಲ್ಲ. ಅಂಥವರ ಕೃತಿಗಳು ಪ್ರಕಟನೆಗಾಗಿ ಬಂದರೆ ಅವುಗಳನ್ನು ಕಸದ ಬುಟ್ಟಿಗೆ ಬಿಸುಟಿ ಸಮಾಧಾನಪಟ್ಟುಕೊಳ್ಳುವ ಸುಸಂಸ್ಕೃತರಿವರು ! ''ಏನು ಸ್ವಾಮಿ, ನನ್ನ ಕವಿತೆಯ ಗತಿಯೇನಾಯಿತು ?'' ಎಂದು ಆ ತರುಣ ಕವಿ ಕೇಳಿದಾಗ ''ಹಾ ! ನಿಮ್ಮ ಕವಿತೆಯೇ ? ಎಲ್ಲೋ ಇಟ್ಟಿದ್ದೆ. ಹಾಳಾದ್ದು ಎಲ್ಲೋ ಕಳೆದು ಹೋಯಿತು.'' ಎಂದು ಸುಳ್ಳು ಹೇಳಿ ಆ ವಿಷಯವನ್ನೇ ಮರೆಯಿಸುತ್ತಾರೆ. ಅಂಥ ಸಂದರ್ಭದಲ್ಲಿ ಆ ತರುಣ ಕವಿಗೆ ಎಷ್ಟು ಸಂಕಟವಾಗಲಿಕ್ಕಿಲ್ಲ ! ಅಂಥ ಮನಃಸ್ಥಿತಿಯಲ್ಲೇ ಆತ ಹೇಳಿಕೊಳ್ಳುವುದು : ''ಕನ್ನಡದಲ್ಲಿ ಕವಿಯಾಗಿ ಹುಟ್ಟಬಾರದು'' ಎಂದು.

ಎಲ್ಲ ಸಂಪಾದಕರೂ ಇಂಥವರೇ ಎಂದು ನನ್ನ ಅಭಿಪ್ರಾಯವಲ್ಲ. ವಿಶಾಲ ಮನಸ್ಸಿನ ಸಂಪಾದಕರೂ ಇದ್ದಾರೆ. ಆದರೆ, ''ಉಚ್ಚ ವರ್ಗದ ಪತ್ರಿಕೆ'' ಎಂದು ಟಾಂ ಟಾಂ ಹೊಡೆದುಕೊಳ್ಳುವ ಪತ್ರಿಕೆಗಳ ಸಂಪಾದಕ ಮಹನೀಯರಲ್ಲಿ ಅನೇಕರು ಇಂಥ ಸಂಕುಚಿತ ವೃತ್ತಿಯವರಾಗಿರುವರೆಂಬುದು ನಿಜ. ನೂರಾರು ತರುಣ ಕವಿಗಳ ಅನುಭವಕ್ಕೆ ಬಂದ ವಿಚಾರವಿದು.

ದೊಡ್ಡಮನಿ ಶಿವೇಶ್ವರನಿಗಂತೂ ಈ ಕಟು ಅನುಭವ ಮೃತ್ಯುದೂತನಂತಾಯಿತು ! ಆತನ ನಿಕಟ ಸ್ನೇಹಿತರಲ್ಲೊಬ್ಬನಾಗಿದ್ದ ನಾನು ಈ ವಿಷಯವನ್ನು ಚೆನ್ನಾಗಿ ಅರಿತುಕೊಂಡಿದ್ದೆ.

ಶಿವೇಶ್ವರ ದೊಡ್ಡಮನಿ ಉದಯೋನ್ಮುಖ ಕವಿಯೆಂಬ ವಿಚಾರ ನಮಗೆ ಗೊತ್ತಿದ್ದಿತು ! ಆತನ ಭವಿತವ್ಯದ ಬಗೆಗೆ ನಿಮ್ಮಲ್ಲಿ ಹಲವರಾದರೂ ಏನೇನೊ ಆಸೆಯಿಟ್ಟುಕೊಂಡಿರಲು ಸಾಕು. ಎರಡು ವರ್ಷಗಳ ಹಿಂದೆ ಆತ ಹಠಾತ್ತನೆ ಸಾವಿಗೀಡಾದ. ''ಇಪ್ಪತ್ತೈದರ ಪ್ರಾಯದಲ್ಲೇ ಹೇಗೆ ಸತ್ತ ಶಿವೇಶ್ವರ ? ಆತನಿಗೇನಾಗಿದ್ದಿತು ?'' ಎಂದು ಕೆಲವರು ಕೇಳಿದರು. ''ವಿಷಮ ಜ್ವರದಿಂದ ಸತ್ತ'' ಎಂದು ಹೇಳಿ ಸುಮ್ಮನಾದರು ಆತನ ಬಂಧುಗಳು.

ಆತ ಹೇಗೆ ಸತ್ತನೆಂಬುದನ್ನು ನಾನು ಚೆನ್ನಾಗಿ ಬಲ್ಲೆ. ಇಪ್ಪತ್ತೈದರ ಪ್ರಾಯದಲ್ಲಿ ಸಾಮಾನ್ಯವಾಗಿ ಎಲ್ಲರೂ ಸಾಯುವುದಿಲ್ಲ. ಆತನ ಸಾವಿಗೆ ಕಾರಣವಾದುದು ವಿಷಮಜ್ವರ ಎಂಬುದೇನೋ ನಿಜ. ಆದರೆ ಜನರು ತಿಳಿದುಕೊಂಡಂಥ ವಿಷಮಜ್ವರವಲ್ಲ ಅದು. ಸಾಮಾಜಿಕ, ಆರ್ಥಿಕ, ಸಾಹಿತ್ಯಿಕ, ಸಾಂಸ್ಕೃತಿಕ ವಿಷಮತೆಯ ಜ್ವರ ಅದು.

ಭಾವಜೀವಿ ಕೀಟ್ಸ್ ನರಳಿ ನರಳಿ ಸತ್ತ ವಿಷಯ ನಿಮಗೆ ಗೊತ್ತಿರಬಹುದು. ಜಾಕ್ ಲಂಡನ್, ಸಾನೆ ಗುರೂಜಿ ಮೊದಲಾದ ಪ್ರಖ್ಯಾತ ಲೇಖಕರು ಈ ದುಷ್ಟ ಪ್ರಪಂಚದಲ್ಲಿ

ಹೆಚ್ಚು ದಿನ ಬದುಕಲಿಬ್ಬಿಸದೆ ಆತ್ಮಹತ್ಯೆ ಮಾಡಿಕೊಂಡ ವಿಷಯವೂ ನಿಮಗೆ ಗೊತ್ತಿರಬಹುದು. ಅವರ ಹಾಗೆ ಶಿವೇಶ್ವರ ಆತ್ಮಹತ್ಯೆ ಮಾಡಿಕೊಳ್ಳಲಿಲ್ಲವೆಂಬುದು ನಿಜವಾದರೂ ಈ ನೀಚ ಸಮಾಜ ವ್ಯವಸ್ಥೆಯ ಸಾವಿರ ಕ್ರೂರ ಕೈಗಳು ಆತನ ಹೃದಯ, ಮನಸ್ಸು, ಮಿದುಳು, ಚೇತನಗಳನ್ನು ಒಳಗೊಳಗೇ ಹಿಸುಕಿ ಆತನನ್ನು ಕೊಂದು ಹಾಕಿದವೆಂದು ನಾನು ಹೇಳಬಯಸುತ್ತೇನೆ. ಆತ ಇಷ್ಟು ಬೇಗ ಸಾಯಲು ಸಾಹಿತ್ಯ ಕ್ಷೇತ್ರದ ಕೆಲವು ವ್ಯಕ್ತಿಗಳೂ ಅಪ್ರತ್ಯಕ್ಷವಾಗಿ ಕಾರಣರಾದರೆಂದು ಹೇಳಬಯಸುತ್ತೇನೆ.

ಇದನ್ನೋದಿ ನಿಮ್ಮ ಮೈಮೇಲೆ ಮುಳ್ಳು ಏಳಬಹುದು. ''ಆ ! ನಿಜವೆ ?'' ಎಂದು ನೀವು ದಿಗಿಲುಗೊಂಡು ಕೇಳಬಹುದು. ನಿಜ, ಸಂಪೂರ್ಣ ನಿಜ.

ದೊಡ್ಡಮನಿಯನ್ನು ಯಾರು ಕೊಂದರು ? ಈ ಸಂಕುಚಿತ ಮನಸ್ಸಿನ, ನೀಚ ಸ್ವಾರ್ಥದ, ಭೀಕರ ವಿಷಮತೆಯ ಪಾಪಿ ಸಮಾಜ ಆತನನ್ನು ಕೊಂದಿತು. ''ದೇವರು ಆತನನ್ನು ಕರದೊಯ್ದ''ನೆಂದು ಹೇಳುವುದೊಂದು ದೊಡ್ಡ ಸುಳ್ಳು. ಸಮಾಜದ ದೆವ್ವಗಳು ಆತನನ್ನು ಕೆಣಕಿ, ಕೆರಳಿಸಿ, ಅವಮಾನಗೊಳಿಸಿ, ಆತನ ಶಕ್ತಿಯನ್ನೆಲ್ಲ ಹೀರಿಕೊಂಡು ಮೃತ್ಯುವಿನ ದವಡೆಗೆ ದೂಡಿದುವು.

''I would drown this society in my vomit'' ಎಂದು ಫ್ಲಾಬೇ ಒಮ್ಮೆ ಹೇಳಿದ್ದ. ತನ್ನ ಕಾಲದ ವಿಷಮ ಸಮಾಜವನ್ನು ಕುರಿತು ಆತನಾಡಿದ ಮಾತು ಅದು. ಇಂದಿನ ನಮ್ಮ ಸಮಾಜವನ್ನು, ಅದರ ಶಿರೋಮಣಿಗಳೆಂದು ಮೆರೆಯುತ್ತಿರುವ ಡಾಂಭಿಕರನ್ನು ನಿರೀಕ್ಷಿಸಿದಾಗ ನನಗೂ ಒಮ್ಮೊಮ್ಮೆ ಹಾಗೇ ಅನ್ನಿಸುತ್ತದೆ. ಭಾವಜೀವಿಗಳಿಗೆ, ಕವಿಗಳಿಗೆ, ಲೇಖಕರಿಗೆ, ಕನಸುಗಾರರಿಗೆ, ಕಲಾವಿದರಿಗೆ, ವಿಶಾಲ ಮನಸ್ಕರಿಗೆ, ಧ್ಯೇಯವಾದಿಗಳಿಗೆ ಇಲ್ಲಿ ಲಭಿಸುವ ಅಸಡ್ಡೆಯನ್ನು ಕಂಡಾಗ ಘೋರ ತಿರಸ್ಕಾರದಿಂದ ಹೊರಡುವ ಉದ್ಗಾರ ಇದು.

ಶಿವೇಶ್ವರನ ದೃಷ್ಟಾಂತವನ್ನೇ ತೆಗೆದುಕೊಳ್ಳಿ : ಬಡ ನೇಕಾರ ಕುಟುಂಬವೊಂದರಲ್ಲಿ ಹುಟ್ಟಿದ ಆ ಜೀವ, ಹಳ್ಳಿಯ ಸರಳ ಸುಂದರ ವಾತಾವರಣದಲ್ಲಿ ಬೆಳೆದು, ಜಾನಪದ ಗೀತೆಗಳ ಸವಿಯನ್ನುಂಡು ಸಾಹಿತ್ಯದ ಕಡೆ ಆಕರ್ಷಿತವಾಯಿತು. ಮ್ಯಾಟ್ರಿಕ್ ಮುಗಿದ ಬಳಿಕ ಕಾಲೇಜಿಗೆ ಹೋಗಿ ವ್ಯಾಸಂಗ ಮಾಡುವ ಇಷ್ಟವಿದ್ದರೂ ಫೀಜಿಗೆ ಹಣವಿಲ್ಲದ್ದರಿಂದ ವಿದ್ಯಾಭ್ಯಾಸಕ್ಕೆ ಶರಣು ಹೊಡೆಯಬೇಕಾಯಿತು. ಹುಟ್ಟು ಪ್ರತಿಭಾಶಾಲಿಯಾದ ಶಿವೇಶ್ವರ ಎಂ. ಎ. ವರೆಗೂ ಓದಿ ಯಾವುದೊಂದು ಕಾಲೇಜಿನಲ್ಲಿ ಲೆಕ್ಚರರ್ ಕೆಲಸಕ್ಕೆ ಸೇರಿದ್ದಲ್ಲಿ ಆತನೂ ಇನ್ನೊಬ್ಬ ಬೇಂದ್ರೆಯೊ, ಕುವೆಂಪುವೊ ಆಗಬಹುದಾಗಿದ್ದಿತು. ಆದರೆ......

ಜನಪದಗೀತಗಳನ್ನು ಸಂಗ್ರಹಿಸುತ್ತ ಜತೆಯಲ್ಲೇ ಸ್ವತಂತ್ರವಾಗಿ ಕವಿತೆಗಳನ್ನು ರಚಿಸಿ ಪ್ರಕಟಿಸುತ್ತ ಕನ್ನಡ ಸಾಹಿತ್ಯದಲ್ಲಿ ಹೊಸ ಶಕ್ತಿ ಹುಟ್ಟಿಸಬೇಕೆಂಬುದು ಆತನ

ಆಶಯವಾಗಿದ್ದಿತು. ಆತನ ಆಸೆಯ ಬಳ್ಳಿ ಅಸಡ್ಡೆಯ ಉಸಿರಿಗೆ ಸಿಕ್ಕಿ ಕಮರಿ ಹೋಯಿತು. ತಿಂಗಳೆರಡು ತಿಂಗಳು ಹಳ್ಳಿಪಳ್ಳಿ ತಿರುಗಿ ಕಷ್ಟಪಟ್ಟು ಆತ ಸಂಪಾದಿಸಿದ ಜನಪದ ಗೀತಗಳನ್ನು ಧಾರವಾಡದ ದೊಡ್ಡ ಆಕಾರದ ಮಾಸಪತ್ರಿಕೆಯೊಂದರ ಸಂಪಾದಕರು ಕಸದ ಬುಟ್ಟಿಗೆಸೆದು ''ಕಳೆದುವು'' ಎಂದು ಸುಳ್ಳು ಹೇಳಿದರು. ತನ್ನ ಸ್ವಂತ ತಾಯಿಯನ್ನು ಕಳೆದುಕೊಂಡಷ್ಟು ದುಃಖವಾಯಿತು ಶಿವೇಶ್ವರನಿಗೆ. ದುಃಖದ ಜತೆಯಲ್ಲೇ ರೋಷ, ತಿರಸ್ಕಾರ, ಸಮಾಜದ ಬಗೆಗೇ ಜಿಗುಪ್ಸೆ.....

ಸಾಹಿತ್ಯ ಕ್ಷೇತ್ರದಲ್ಲಿಯೆ ತನ್ನ ಶಕ್ತಿ ಉತ್ಸಾಹ, ಪ್ರತಿಭೆಗಳನ್ನೆಲ್ಲ ವ್ಯಯಿಸುವ ಆಸೆ ಅವನದಾಗಿತ್ತು. ಆದರೆ ಅಲ್ಲಿ ಅವನಿಗೆ ದೊರೆತ ಸ್ವಾಗತ ಇಂಥದು. ಮನಸ್ಸಿಗೆ ವಿರುದ್ಧವಾಗಿ ಆತ ನಗರಸಭೆ, ಹೈಸ್ಕೂಲು, ಬ್ಯಾಂಕು ಮೊದಲಾದ ಕಡೆಗಳಲ್ಲಿ ಕಾರಕೂನಿಕೆ ಮಾಡಬೇಕಾಯಿತು. ಆ ಜನವೂ ಈತನನ್ನು ಸರಿಯಾಗಿ ನಡೆಸಿ ಕೊಳ್ಳಲಿಲ್ಲ.

ಚಿಕ್ಕಂದಿನಿಂದಲೂ ಆತನ ಕಣ್ಣು ದುರ್ಬಲವಾಗಿದ್ದವು. ಸಮರ್ಥರಾದ ಡಾಕ್ಟರಿಗೆ ತೋರಿಸಿ ಚಿಕಿತ್ಸೆ ಮಾಡಿಸಿ, ಸಾಕಷ್ಟು ವಿಶ್ರಾಂತಿ ಪಡೆದಿದ್ದಲ್ಲಿ ಕಣ್ಣು ನೆಟ್ಟಗಾಗುವಂತಿದ್ದಿತು. ಚಿಕಿತ್ಸೆಗಾಗಿ ಆತನ ಬಳಿ ಹಣವಿರಲಿಲ್ಲ, ಕಾರಕೂನಿಕೆಯಿಂದ ಬರುವ ಸಂಬಳ ಹೊಟ್ಟೆಗೇ ಸಾಲದು. ಇನ್ನು ಚಿಕಿತ್ಸೆಗೆ ಹಣ ಎಲ್ಲಿಂದ ಬಂದೀತು? ವರ್ಷಗಳುರುಳಿದ ಹಾಗೆ ಕಣ್ಣಿನ ಶಕ್ತಿ ಕುಗ್ಗುತ್ತ ಬಂದಿತು. ಸಾಹಿತ್ಯ ಪ್ರೇಮಿಯೂ ಕವಿಯೂ ಆಗಿದ್ದ ಆತನಿಗೆ ಪುಸ್ತಕಗಳೆಂದರೆ ಅಪಾರ ಪ್ರೀತಿ. ತನ್ನ ಬಾಳಿನ ಎಲ್ಲ ಕಷ್ಟಗಳನ್ನೂ ಪುಸ್ತಕ ವಾಚನದಲ್ಲಿ ಮರೆತುಬಿಡುತ್ತಿದ್ದ. ದಿನ ಕಳೆದಂತೆ ಆ ಅಲ್ಪ ಸಮಾಧಾನವೂ ದೊರೆಯಲು ಅಸಾಧ್ಯವಾಯಿತು. ಕಣ್ಣಿಗೆ ಅಕ್ಷರಗಳೇ ಕಾಣಿಸವು. ಓದುವಂತಿಲ್ಲ, ಬರೆಯುವಂತಿಲ್ಲ, ಕತೆಯಿಲ್ಲ, ಕವಿತೆಯಿಲ್ಲ, ಜನಪದ ಗೀತೆಯಿಲ್ಲ– ಏನೂ ಇಲ್ಲ.

ಏನೂ ಇಲ್ಲದಂತಾಯಿತು ಆತನ ಪಾಲಿಗೆ

ಅಂಥ ಅರೆಕುರುಡು ಸ್ಥಿತಿಯಲ್ಲೂ ಆತ ಟೈಪಿಸ್ಟ್ ಆಗಿ ದುಡಿಯ ಬೇಕಾಗಿದ್ದಿತು. ಟೈಪ್‌ರೈಟರಿನೊಂದಿಗೆ ಸೆಣಸುವುದರಲ್ಲಿ ಆತನ ಜೀವನದ ಕೊನೆಯ ದಿನಗಳು ಕಳೆದು ಹೋದುವು. ಆ ಯಂತ್ರದೊಂದಿಗೆ, ತಾನೂ ಒಂದು ಯಂತ್ರವಾಗಿ ದುಡಿದ. ಆತನ ಯಾತನೆಯನ್ನು, ಅಸಹಾಯಕತೆಯನ್ನು ಗುರುತಿಸಿ ಯಂತ್ರ ನಡುಗುತ್ತಿದ್ದಿರಬೇಕು. ಆತನ ಅರೆಕುರುಡು ಕಣ್ಣುಗಳಿಂದ ಅದರ ಮೇಲೆ ಕಂಬನಿಗಳು ಉರುಳಿ ಬೀಳುತ್ತಿದ್ದಿರ ಬೇಕು.

ಶಿವೇಶ್ವರನ ಮನೆಯಿದ್ದುದು ನವಿಲೂರಿನಲ್ಲಿ, ನೌಕರಿ ಧಾರವಾಡದಲ್ಲಿ, ಬರುವ ಕ್ಷುಲ್ಲಕ ಸಂಬಳದಲ್ಲಿ ಧಾರವಾಡದಲ್ಲಿ ಮನೆ ಮಾಡಿ ಬದುಕುವಂತಿರಲಿಲ್ಲ. ಧಾರವಾಡ ದಿಂದ ನವಿಲೂರು ಮೂರು ಮೈಲಿನ ದಾರಿ. ಬೆಳಿಗ್ಗೆ ಸೈಕಲ್ ಹತ್ತಿಕೊಂಡು

ಧಾರವಾಡಕ್ಕೆ ಬಂದು ಸಾಯಂಕಾಲ ಹಿಂದಿರುಗಬೇಕು. ತಳ್ಳನೆಯ ದುರ್ಬಲ ದೇಹ. ದಿನವೂ ಆರು ಮೈಲುಗಳ ವರೆಗೆ ಸೈಕಲಿನ ಸರ್ಕಸ್. ಒಮ್ಮೊಮ್ಮೆ ರಾತ್ರಿಯಾಗುವುದು. ಕತ್ತಲಲ್ಲೆ ಸೈಕಲ್ ಪ್ರಯಾಣ. ಸೈಕಲ್ ಚಕ್ರ........ಕಾಲಚಕ್ರ.......ವಿಷಮತೆಯ ಕ್ರೂರ ಚಕ್ರ ಆತನ ಬಾಳನ್ನು ತುಂಡರಿಸುತ್ತಿತ್ತು.

ಮೈ ಬಿಸಿಯಾದರೆ, ಜ್ವರ ಬಂದರೆ, ರಜ ಸಿಕ್ಕುವಂತಿಲ್ಲ, ಔಷಧ ತೆಗೆದು ಕೊಳ್ಳಲು ಕೂಡ ಬಿಡುವಾಗುವಂತಿಲ್ಲ, ಚಹವೇ ಔಷಧವಾಯಿತು, ಸಿಗರೇಟಿನ ಹೊಗೆಯೇ ಸೂಜಿಮದ್ದಾಯಿತು. ಜ್ವರದಿಂದ ಕೈ ನಡುಗುತ್ತಿದ್ದಾಗಲೂ ಟೈಪ್ ಮಾಡ ಬೇಕು. ಅಂಥ ಸ್ಥಿತಿಯಲ್ಲೇ ಆರು ಮೈಲು ಸೈಕಲ್ ನೂಕಬೇಕು. ರಾತ್ರಿಯೆಲ್ಲ ಕೆಂಡದಂಥ ಜ್ವರ. ಬೆಳಗಾಗುತ್ತಲೂ ಹಾಗೇ ಎದ್ದು ಸೈಕಲ್ ತುಳಿದುಕೊಂಡು ಕೆಲಸಕ್ಕೆ ಬರಬೇಕು. ಬರದಿದ್ದರೆ ಕೆಲಸಕ್ಕೆ ಕಲ್ಲು, ಹೊಟ್ಟೆಗೆ ಕಲ್ಲು ಮಣ್ಣು?

ವಿರಾಮವಿಲ್ಲದ, ಉಪಚಾರವಿಲ್ಲದ ಕತ್ತೆಯ ದುಡಿತ. ಮನಸ್ಸಿಗೆ, ಮಿದುಳಿಗೆ ಶಾಂತಿಯಿಲ್ಲ, ಜ್ವರ ಹೆಚ್ಚಿತು. ವಿಷಮ ಜ್ವರವಾಯಿತು. ಮೂರು ದಿನಗಳವರೆಗೆ ಆ ಬಗೆಗೆ ಯಾರಿಗೂ ಹೇಳದೆ ಹಾಗೆಯೆ ಕೆಲಸಕ್ಕೆ ಹೋಗುತ್ತಿದ್ದ. ನಾಲ್ಕನೆಯ ದಿನ 'ಚೆಂಬೆಳಕಿ'ನಲ್ಲಿ ಮಲಗಿದವನಿಗೆ ಬೆಳಗಿನಲ್ಲಿ ಏಳಲಾಗಲಿಲ್ಲ. ಮಧ್ಯಾಹ್ನವಾಯಿತು. ಜ್ವರ ವಿಪರೀತವಾಯಿತು. ಪ್ರಜ್ಞೆ ತಪ್ಪಿತು. ನವಿಲೂರಿನಿಂದ ತಾಯಿ ಹೌಹಾರಿ ಓಡಿ ಬಂದಳು. ''ಮಗನೇ, ಶಿವಣ್ಣಾ ಸ್ವಲ್ಪ ಅನ್ನ ಉಣ್ಣಪ್ಪಾ ತಮ್ಮಾ'' ಎಂದು ಹಲುಬಿದಳು. ಮೂರು ದಿನಗಳಿಂದ ಶಿವೇಶ್ವರ ಏನನ್ನೂ ತಿಂದಿಲ್ಲ. ಆ ತಾಯ ಕರುಳು ಕಿತ್ತು ಬರತೊಡಗಿದೆ. ಶಿವೇಶ್ವರನಿಗೆ ಬಾಯಿ ಕಟ್ಟಿ ಹೋಗಿದೆ. ಮಾತು ಹೊರಡುತ್ತಿಲ್ಲ. ಗೆಳೆಯರು ಮಾತನಾಡಿಸಿದಾಗ ಅವರಿಗೂ ಮೌನವೇ ಉತ್ತರವಾಯಿತು. ಡಾಕ್ಟರು ಬಂದರು. ಅವರ ಸಲಹೆಯಂತೆ ಆತನನ್ನು ನವಿಲೂರಿಗೆ ಸಾಗಿಸಲಾಯಿತು. ಡಾಕ್ಟರು ಸೂಜಿಮದ್ದು ಕೊಟ್ಟರು. ಆತನ ಪ್ರಾಣವನ್ನುಳಿಸಲು ಪ್ರಯತ್ನಿಸಿದರು. ಆದರೆ ಆ ದೇಹದಲ್ಲಿ ಶಕ್ತಿಯೇ ಉಳಿದಿರಲಿಲ್ಲ. ಗೂಡುಕಟ್ಟಿಕೊಂಡ ಎದೆ, ಮೂಳೆಮೂಳೆಯಾದ ಮೈ. ವಿಷಮತೆಯ ರಾಕ್ಷಸ ಆತನ ನೆತ್ತರನ್ನೆಲ್ಲ ಹೀರಿ ಬಿಟ್ಟಿದ್ದ.

ಶಿವೇಶ್ವರ ಉಳಿಯಲಿಲ್ಲ

೧೯೫೦ ಮಾರ್ಚ ೨೬. ಅಂದು ನಟ್ಟಿರುಳಿನಲ್ಲಿ ಶಿವೇಶ್ವರನ ಪ್ರಾಣ ದೇಹವನ್ನು ತ್ಯಜಿಸಿತು.

ಆತ ಬದುಕಿದ್ದಾಗ ಆತನನ್ನು ಕಡೆಗಣಿಸಿದ್ದ 'ಸುಸಂಸ್ಕೃತ' ಸಾಹಿತಿಗಳು ಆತನ ಸಾವಿನ ಸುದ್ದಿ ತಿಳಿದಬಳಿಕ-''ಅಯ್ಯೋ, ಪಾಪ. ಇನ್ನೂ ತರುಣ ವಯಸ್ಸು. ಈಗಲೇ ಸಾಯಬಾರದಾಗಿತ್ತು'' ಎಂದು ಹೇಳಿ ಮೊಸಳೆಯ ಕಣ್ಣೀರು ಕರೆದರು.

ಇಂಥ ಪ್ರಭೃತಿಗಳನ್ನು ಕುರಿತು ಗೆಳೆಯ ಆಡಿಗರು ಹೀಗೆ ಬರೆದಿದ್ದಾರೆ:

''ಇರುವ ಕೋಗಿಲೆಯ ಬಡಿ, ಕೊಲ್ಲು ; ಸತ್ತರೆ ಹುಲ್ಲು
ತುರುಕಿ ಇಡು ಸಾಲಾಗಿ ಕೊಂಬೆ ಮೇಲೆ.....''

ಸಮಾಜದ ಹೃದಯ ಹೀನತೆಗೆ ಬಲಿಯಾದ ಅನೇಕ ಕೋಗಿಲೆಗಳಲ್ಲಿ ಶಿವೇಶ್ವರನೂ ಒಬ್ಬ.

೧೯೪೯ ರಲ್ಲಿ ಒಂದು ಸಾಯಂಕಾಲ ನಾವಿಬ್ಬರೂ ಸಾಧನಕೇರಿಯ ದಾರಿಯಲ್ಲಿ ಹೊರಟಿದ್ದಾಗ ಶಿವೇಶ್ವರನಾಡಿದ ಮಾತೊಂದು ನನಗೀಗ ನೆನಪಾಗುತ್ತಿದೆ.

''ನಾನಿನ್ನು ಬಹಳ ದಿನ ಬದುಕುವದಿಲ್ಲ ಅಂತ ಅನಿಸುತ್ತದೆ. ನನ್ನ ಮೈಯಲ್ಲಿ ಏನೂ ಉಳಿದಿಲ್ಲ. ಜೀವನದ ಘೋರ ಹೋರಾಟದಲ್ಲಿ ನನ್ನ ಶಕ್ತಿಯೆಲ್ಲ ಹನಿಹನಿಯಾಗಿ ಹೊರಟು ಹೋಯಿತು. ಸಾಯುವುದಕ್ಕೆ ಮೊದಲೊಮ್ಮೆ ಈ ಸಮಾಜದ ರಾಕ್ಷಸ ಸ್ವರೂಪವನ್ನು ಸ್ಪಷ್ಟ ಶಬ್ದಗಳಲ್ಲಿ ಬಯಲಿಗೆಳೆಯುವ ಇಚ್ಛೆಯಿದೆ. ನಾನೇನೋ ಸಾಯಬಹುದು. ಆದರೆ ನನ್ನಂತೆ ಇನ್ನಿತರರೂ ಸಾಯಬಾರದು.''

ಶಿವೇಶ್ವರ ಸಮಾಧಾನದಿಂದ ಸಾಯಲಿಲ್ಲ, ತೃಪ್ತಿಯಿಂದ ಸಾಯಲಿಲ್ಲ, ಶಾಂತಿಯಿಂದ ಸಾಯಲಿಲ್ಲ, ಆತನ ಆತ್ಮಕ್ಕೆ—ಅದು ಇದ್ದುದೇ ನಿಜವಿದ್ದರೆ—ಶಾಂತಿಯೂ ಸಿಗುವಂತಿಲ್ಲ. ಆತನನ್ನು, ಆತನಂಥ ಲಕ್ಷಾವಧಿ ಜನರನ್ನು ಅಕಾಲಮೃತ್ಯುವಿಗೆ ಬಲಿಕೊಟ್ಟ ಈ ಕ್ರೂರ ಸಮಾಜ ವ್ಯವಸ್ಥೆ ಬುಡಮೇಲಾಗುವವರೆಗೂ ಆತನಿಗೆ ಶಾಂತಿ ಸಿಗಲಾರದು.

ಶಿವೇಶ್ವರ ತಾನೇ ಬರೆಯಬೇಕೆಂದುಕೊಂಡಿದ್ದುದನ್ನೆಲ್ಲ ನಾನಿಲ್ಲಿ ಬರೆದಿದ್ದೇನೆ. ಸತ್ತವರ ಬಗೆಗೆ ಸುಳ್ಳು ಬರೆಯಬಾರದು. ಆತ ಹೇಗಿದ್ದ, ಆತನ ವಿಚಾರಗಳು ಹೇಗಿದ್ದುವು, ಆತನು ಇಷ್ಟು ಬೇಗ ಸಾಯಲು ಏನು ಕಾರಣ ಎಂಬುದನ್ನೆಲ್ಲ ಇಲ್ಲಿ ಸ್ಪಷ್ಟವಾಗಿ ಬರೆದಿದ್ದೇನೆ.

ತನ್ನ ಕವನಸಂಕಲನವೊಂದು ಪ್ರಕಟವಾದುದನ್ನು ಕಂಡು ಸಾಯಬೇಕೆಂಬ ಅಪೇಕ್ಷೆ ಆತನಿಗಿದ್ದಿತು. ಅದೂ ವಿಫಲವಾಯಿತು.

ಕಳೆದ ವರ್ಷ ಕುಳುಕುಂದ ಶಿವರಾಯರು ''ನಮ್ಮ ನಡುವಿನ ಗೋಡೆ'' ಎಂಬ ಕಥಾ ಸಂಗ್ರಹವೊಂದನ್ನು ಪ್ರಕಟಿಸಿ ''ಸಂಗಾತಿ ಶಿವೇಶ್ವರನ ಚಿರಸ್ಮರಣೆಗೆ'' ಅದನ್ನು ಅರ್ಪಿಸಿದ್ದಾರೆ.

ಹುಬ್ಬಳ್ಳಿಯಲ್ಲಿ ಶಿವರಾಯರು ಹೊರಡಿಸುತ್ತಿದ್ದ 'ಜನಶಕ್ತಿ' ಪತ್ರಿಕೆಯ ಪ್ರಕಾಶಕನಾಗಿ ದುಡಿದಿದ್ದ ಶಿವೇಶ್ವರ. ಜನತೆಯ ಹೋರಾಟದಲ್ಲಿ ಭಾಗವಹಿಸಿ ಅದರ ಸವಿಯನ್ನೂ ಅನುಭವಿಸಿದ್ದ. 'ಜನಶಕ್ತಿ' ನಿಂತುಹೋಗುವ ಸಂದರ್ಭ ಬಂದಾಗ ಆತನಿಗೆ ಅತೀವ ಸಂಕಟವಾಗಿದ್ದಿತು.

ಇವರು ಕಮ್ಯುನಿಸ್ಟರು, ಅವರು ಸೋಶಿಯಲಿಸ್ಟರು ಎಂಬ ಭೇದಭಾವಕ್ಕೆ ಆತನ ಹೃದಯದಲ್ಲಿ ಎಡೆಯಿರಲಿಲ್ಲ. ಬಡವರಿಗಾಗಿ ಕೆಲಸ ಮಾಡುವವರನ್ನೆಲ್ಲ ಆತ ಪ್ರೀತಿಸುತ್ತಿದ್ದ.

ಸಾಹಿತ್ಯದಲ್ಲಿಯ ಕೆಲವರು ಹಿರಿಯರ ಬಗೆಗೂ ಆತನಿಗೆ ತುಂಬ ಪ್ರೀತಿಯಿದ್ದಿತು. ಶ್ರೀಗಳಾದ ಬೇಂದ್ರೆ, ಮಾಸ್ತಿ, ಗೋಕಾಕ, ದೀಕ್ಷಿತ ವಕೀಲರು ಎಲ್ಲರೂ ಆತನನ್ನು ಬಲ್ಲರು.

ಆತನ ಗೆಳೆಯರ ಬಳಗವೂ ಬಲು ದೊಡ್ಡದು. 'ಶಿವೇಶ್ವರನೆಂದರೆ ಒಂದು ರತ್ನ' ಎಂದು ಅವರೆಲ್ಲ ಹೇಳುತ್ತಿದ್ದರು.

ಅಂಥ ರತ್ನದ ಬೆಲೆ ಇಂದಿನ ಈ ಸಮಾಜಕ್ಕೆ ತಿಳಿಯಲಿಲ್ಲ. ಉಳ್ಳವರ ಬೊಕ್ಕಸಗಳಲ್ಲಿ, ಅವರ ಮಡದಿಯರ ಕೈ–ಕಾಲು–ಕೂದಲುಗಳಲ್ಲಿ ಹೆಣದಂತೆ ಕೊಳೆಯುತ್ತ ಬಿದ್ದಿದೆ ಹಣ–ಚಿನ್ನ. ಶಿವೇಶ್ವರನಂಥ ಉದಯೋನ್ಮುಖ ಕವಿಯ ಕವನ ಸಂಕಲನವೊಂದನ್ನು ಪ್ರಕಟಿಸಲು ಹಣ ದೊರೆಯಲಿಲ್ಲ.

''ಇಂಥ ಅನ್ಯಾಯ ಇನ್ನೂ ಎಷ್ಟು ದಿನ ಹೀಗೇ ನಡೆಯಬೇಕು ?'' ಎಂದು ಆಗಾಗ ಉದ್ಗಾರ ತೆಗೆಯುತ್ತಿದ್ದ ಶಿವೇಶ್ವರ.

ಗೋರಿಯಲ್ಲಿ ಮಲಗಿಕೊಂಡಿರುವ ಇಂದಿನ ಸ್ಥಿತಿಯಲ್ಲೂ ಆತ ಅದೇ ಉದ್ಗಾರ ತೆಗೆಯುತ್ತಿರಬಹುದೆಂದು ನನಗೆನ್ನಿಸುತ್ತದೆ.

ಬಸವರಾಜ ಕಟ್ಟೀಮನಿ

'ನವಿಲೂರ ಮನೆಯಿಂದ'

ಸಂಗ್ರಹದ ಮುನ್ನುಡಿ.

□□

ಹೊಸ ಕತೆಗಾರರು

''ನಮ್ಮ ನಡುವಿನ ಗೋಡೆ''ಯಲ್ಲಿ ಆರು ಸಣ್ಣ ಕತೆಗಳಿವೆ. ಕನ್ನಡದ ಮೂವರು ಪ್ರಮುಖ ಲೇಖಕರು ಅವುಗಳನ್ನು ಬರೆದಿದ್ದಾರೆ.

೧೯೪೭ರ ಮೇ ತಿಂಗಳಲ್ಲಿ 'ಜನಶಕ್ತಿ' ಎಂಬ ಕನ್ನಡ ವಾರಪತ್ರಿಕೆ ಹುಬ್ಬಳ್ಳಿಯಲ್ಲಿ ಆರಂಭವಾಯಿತು. 'ನಿರಂಜನ'ರು ಅದರ ಸಂಪಾದಕರಾಗಿದ್ದರು. ಒಂದು ವರ್ಷದ ಹಿಂದೆ ಅಕಾಲನಿಧನಕ್ಕೆ ಗುರಿಯಾದ ಶಿವೇಶ್ವರ ದೊಡ್ಡಮನಿಯವರು ಅದರ ಉಪ ಸಂಪಾದಕರೂ ಪ್ರಕಾಶಕರೂ ಆಗಿದ್ದರು. ಆರಂಭದ ಐದು ಕತೆಗಳೆಲ್ಲ ೧೯೪೭ರಲ್ಲೇ 'ಜನಶಕ್ತಿ' ಪತ್ರಿಕೆಯಲ್ಲಿ ಪ್ರಕಟವಾದುವು. ಆರನೆಯ ಕತೆಯಾದ ''ನಂಬರ್ ೨೧೮' ಮತ್ತು ನೀಲಿ ಬುಶ್ ಕೋರ್ಟು'' ಎಂಬ ಕತೆ ಮಾತ್ರ ಈ ವರ್ಷದ್ದು. ಜೂನ್ ತಿಂಗಳ 'ಕತೆಗಾರ'ದಲ್ಲಿ ಅದು ಅಚ್ಚಾಯಿತು.

'ಜನಶಕ್ತಿ'ಯು ಶ್ರಮಜೀವಿ ವರ್ಗದ ರಾಜಕೀಯ ಸಾಪ್ತಾಹಿಕವಾಗಿತ್ತು. ಆದರೂ ಸಾಂಸ್ಕೃತಿಕ ಹಾಗೂ ಸಾಹಿತ್ಯಿಕ ಚಳುವಳಿಯಲ್ಲಿ ಅದು ವಹಿಸಿದ ಪಾತ್ರವನ್ನು ಮೂಲೆಗೊತ್ತುವ ಹಾಗಿಲ್ಲ. '(ಶ್ರೀರಂಗ', ಗೋಕಾಕ, 'ಹೇಮಂತ', ಪಿ. ಜಿ. ಭಟ್, ಗಂಗಪ್ಪ ವಾಲಿ–ಮುತ್ತಿತರರ ಕೃತಿಗಳ ಬಗ್ಗೆ 'ನಿರಂಜನ'ರು ಬರೆಯುತ್ತಿದ್ದ ವಿಮರ್ಶೆ ಗಳಿಂದ, ಸಾಹಿತ್ಯಿಕ ವಾದ–ವಿವಾದಗಳ ಬಗ್ಗೆ ಪ್ರಕಟವಾಗುತ್ತಿದ್ದ ಲೇಖನಗಳಿಂದ, ಏಕೀಕರಣ ಚಳುವಳಿಗೆ ಸಂಬಂಧಿಸಿ ಬರೆಯಲಾಗುತಿದ್ದ ಬರೆಹಗಳಿಂದ 'ಜನ ಶಕ್ತಿ' ತುಂಬಿ ಬರುತಿತ್ತು. ಆಗ ಅದರಲ್ಲಿ ಪ್ರಕಟವಾದ ಈ ಸಣ್ಣ ಕತೆಗಳನ್ನು ಅಲ್ಲಿಗೇ ಮರೆಯುವುದುಂಟೆ ? ಅವು ಸಂಗ್ರಹಯೋಗ್ಯವೆಂಬ ತಿಳಿವಳಿಕೆಯಿಂದಲೇ ಅವುಗಳನ್ನು ಕಲೆಹಾಕಿದ್ದೇವೆ.

'ಜನಶಕ್ತಿ'ಯೇನೋ ಸರಕಾರದ ಕೃಪಾಕಟಾಕ್ಷಕ್ಕೆ ಗುರಿಯಾಗಿ ನಿಂತು ಹೋಯಿತು. ಅದರ ಸಂಪಾದಕ ಮಂಡಲದವರು ಕಷ್ಟ ಅನುಭವಿಸಿದರು.

ವರ್ಷಗಳು ಕಳೆದುವು. ಸಂಪಾದಕ ಮಂಡಲದ ಶಿವೇಶ್ವರರು–ಕಾಲವಾದರು.

ಅವರ ನೆನಪನ್ನು ಕನ್ನಡ ಜನ ಮರೆಯುವುದುಂಟೆ ?

ಹಾಗೆಂದೇ ಪ್ರಕಾಶನವು ಈ ಪ್ರಕಟಣೆಯನ್ನು ಅಳಿದ ಆ ಸೋದರನ ನೆನಪಿಗೆ ಕಾಣಿಕೆಯಾಗಿ ಅರ್ಪಿಸಿದೆ.

ಶಿವೇಶ್ವರರು ಮುಖ್ಯತಃ ಕವಿಗಳಾಗಿದ್ದರು. ಗದ್ಯ ಲೇಖನಗಳೂ ಕೆಲವನ್ನು ಬರೆದಿದ್ದಾರೆ. ಕತೆ ಎನ್ನುವಂಥಾದ್ದು ಒಂದೋ ಎರಡೋ ಮಾತ್ರ. 'ಜನಶಕ್ತಿ'ಯಲ್ಲಿ ಪ್ರಕಟವಾದ ''ನಮ್ಮ ನಡುವಿನ ಗೋಡೆ''ಯನ್ನು ಅವರು ಬರೆದರು. ಆ ಕತೆಯು ಅವರ ಸ್ವಂತ ಕೃತಿಯಲ್ಲ. ಅದರ ಮೂಲ ಲೇಖಕರು, ಕಲ್ಕತ್ತೆಯ ಕಾರ್ಮಿಕ–ಸಾಹಿತಿ

ಯಾದ ಧನಂಜಯ ಘೋಷ್ ಎಂಬವರು. ಬಂಗಾಳಿ ''ಸ್ವಾಧೀನತಾ'' ಪತ್ರಿಕೆಯಲ್ಲಿ ಅದು ಮೊದಲು ಪ್ರಕಟವಾದಾಗ ತುಂಬ ಆದರಣೀಯವಾಯಿತು. ಕನ್ನಡದಲ್ಲಿ ಶಿವೇಶ್ವರರು ನೀಡಿರುವುದು ಆ ಕತೆಯ ಭಾವಾನುವಾದ. ವರ್ಗಸಮರದ ಹಿನ್ನೆಲೆಯಲ್ಲಿ ಬರೆದ ಈ ಕಥೆ ಬಂಗಾಳಕ್ಕಷ್ಟೇ ಅಲ್ಲ, ಪ್ರತಿಯೊಂದು ನಾಡಿಗೂ ಅನ್ವಯಿಸುವುದು.

ನಮ್ಮ ರೈತರ ಜೀವನವಾದ ''ಮಣ್ಣಿನ ಮಕ್ಕಳು'' ಕತೆಯನ್ನು ಬರೆದವರು ಚೆನ್ನವೀರ ಕಣವಿಯವರು. ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ಇವರು ಈ ವರ್ಷ ಎಂ.ಎ. ವ್ಯಾಸಂಗವನ್ನು ಮುಗಿಸುತ್ತಿದ್ದಾರೆ. ಯೌವನದ ಹೊಸ್ತಿಲಲ್ಲಿ ನಿಂತು ಕಣವಿ, ಸಮಾಜದ ಭವ್ಯದರ್ಶನವನ್ನು ನಿರೀಕ್ಷಿಸುತ್ತಿದ್ದಾರೆ. ಅವರು ಕೂಡಾ ಮುಖ್ಯತಃ ಕವಿ. ಅವರ ಕಾವ್ಯ–ಕೃತಿಗಳೆರಡು ಆಗಲೇ ಅಚ್ಚಾಗಿವೆ. ಆದರೆ ಗದ್ಯ ಕೃತಿಯನ್ನು ಅವರು ಬರೆದರೆ, ಅದೆಷ್ಟು ಸುಂದರವೂ ಕಾವ್ಯಮಯವೂ ಆಗುವುದೆಂಬುದಕ್ಕೆ ''ಮಣ್ಣಿನ ಮಕ್ಕಳು'' ಸಾಕ್ಷಿ. ಅವರು ಶಿವೇಶ್ವರರ ಆಪ್ತಮಿತ್ರರಾಗಿದ್ದರು. ಎಂತಲೇ ಈ ಸಂಗ್ರಹದಲ್ಲಿ ಅವರ ಕತೆ ಬಂದಿರುವುದು ಯೋಗ್ಯವಾಗಿದೆ.

ಜುಲೈ ೧, ೧೯೫೧ ಮುಂಬಯಿ

ವಾಸುದೇವ

'ನಮ್ಮ ನಡುವಿನ ಗೋಡೆ'ಯ ಪ್ರಕಾಶಕರ ಮಾತು

□□

ಸೋದರ ಶಿವೇಶ್ವರರ ನೆನಪಿಗೆ

ಶಿವೇಶ್ವರ ತೀರಿಕೊಂಡು ಒಂದು ವರ್ಷದ ಮೇಲಾಯಿತು. ಇಷ್ಟು ಅವಧಿಯ ಅನಂತರವೂ ಶಿವೇಶ್ವರನ ಬಗ್ಗೆ ಬರೆಯಬೇಕೆಂದರೆ ನನ್ನ ಹೃದಯ, ಸಂವೇದನೆಯಿಂದ ಹೊಯ್ದಾಡುವುದು. ಮನ ತಳಮಳಿಸುವುದು, ಕೈ ತತ್ತರಿಸುವುದು.

ಆತ ನನ್ನ ಆತ್ಮೀಯನಾಗಿದ್ದ; ಆತನ ಭವಿತವ್ಯದ ಬಗ್ಗೆ ನಾನು ಏನೇನೋ ಕನಸು ಕಂಡಿದ್ದೆ.

ಸಾವಿನ ಕರಿಯ ಪರದೆ ಇಪ್ಪತ್ತೈದರ ಯೌವನದಲ್ಲೇ ಆತನನ್ನು ಮುಸುಕಿ ಹಿಸುಕು ವುದೆಂದು ನಾನು ತಿಳಿದಿರಲಿಲ್ಲ.

ಶಿವೇಶ್ವರ ದೊಡ್ಡಮನಿ ಕಾಲವಾದಾಗ ನಾನು ಬೆಂಗಳೂರಲ್ಲಿದ್ದೆ. ಆತ ತೀರಿ ಕೊಂಡು ಒಂದು ತಿಂಗಳಾದ ಮೇಲೆ, ಬರಸಿಡಿಲಿನಂಥ ಆ ವಾರ್ತೆ ನನಗೆ ತಲುಪಿತು.

ಆಪ್ತನೊಬ್ಬನನ್ನು, ಸಹಬಾಂಧವನೊಬ್ಬನನ್ನು ಕಳೆದುಕೊಂಡು ನಾನು ಬಡ ವಾದೆ. ಮತ್ತೆ ಹಲವು ತಿಂಗಳ ಬಳಿಕ, ಭಾರವಾದ ಹೃದಯ ಹೊತ್ತು, ಬಾಡಿದ ಮುಖ ವೆತ್ತಿಕೊಂಡು, ಧಾರವಾಡದ ಸಮೀಪವಿರುವ ಅವರ ಹಳ್ಳಿಯಾದ ನವಿಲೂರಿಗೆ ಹೋಗಿ ಬಂದೆ. ಅವರು ಬಿಟ್ಟುಹೋಗಿದ್ದ ತಾಯಿಗೆ, ಮಡದಿಗೆ ಗೌರವದಿಂದ ತಲೆ ಬಾಗಿ ಬಂದೆ. ಅವರ ಮೂವರು ಎಳೆಯ ಮಕ್ಕಳನ್ನು—ಕಾವ್ಯಾಕ್ಷಿ (ಬಸಮ್ಮ), ರವಿ, ಪೂರ್ಣಿಮಾರನ್ನು—ಕಂಡು ಬಂದೆ.

ಮಗನನ್ನು ಕಳೆದುಕೊಂಡಿದ್ದ ಆ ತಾಯಿ ದೂರದಿಂದ ಬಂದಿದ್ದ : ನನಗೆ ಉಣಬಡಿಸಿದರು: ಆ ತುತ್ತು ನನ್ನ ಗಂಟಲಿನ ಕೆಳಕ್ಕಿಳಿಯಲಿಲ್ಲ.

.....ಕಳೆದ ಜೂನ್ ತಿಂಗಳ ಕೊನೆಯಲ್ಲಿ ನಾನು ಹುಬ್ಬಳ್ಳಿಗೆ ಹೋಗಿದ್ದೆ. ಮೂರು ವರ್ಷಗಳ ಅಂತರದ ಬಳಿಕ ಒಂದು ಒಳ್ಳೆಯ ಪ್ರಾತಃಕಾಲ ಆ ನಗರದ ಬೀದಿಗಳಲ್ಲಿ ನಾನು ಓಡಾಡಿದೆ. ೧೯೪೬—೪೭; ಆಗಿನ ಸಾವಿರ ನೆನಪು.....ನಮ್ಮೆಲ್ಲರ ಚಟುವ ಟಿಕೆ.....''ಜನಶಕ್ತಿ'' ಪತ್ರಿಕೆ......

ಒಂದು ಪಕ್ಕದಿಂದ ಇನ್ನೊಂದು ಪಕ್ಕಕ್ಕೆ ತಿರುಗಿದಾಗ, ಒಂದು ಬೀದಿಯನ್ನು ಹಾದು ಇನ್ನೊಂದಕ್ಕೆ ಬಂದಾಗ, ದೂರದಿಂದ ಪಾಯಜಾಮ ಶರಟು ಕೋಟುಗಳ ಯಾವುದಾದರೂ ಎಳೆಯ ತೆಳ್ಳನೆಯ ಕರಿಯ ದೇಹವೊಂದು ಕಂಡು ಬಂದರೆ, ನನ್ನೆದೆ ಮಿಡಿಯುತ್ತಿತ್ತು.

ಆ ರೂಪದಲ್ಲೇ ೧೯೪೬ರಲ್ಲಿ ನಾನು ಶಿವೇಶ್ವರರನ್ನು ಮೊದಲು ಕಂಡುದು. ಆ ರೀತಿಯಲ್ಲೇ ನಾವು ಆಪ್ತರಾದುದು.

ನನ್ನ ಸ್ಮೃತಿಪಟಲದ ಮೇಲೆ ಸ್ಥಿರವಾಗಿ ಮುದ್ರೆಯೊತ್ತಿರುವುದು ಅದೇ ನೆನಪು.

ಒಂದು ಜೀವ ಹುಟ್ಟಿ ಬೆಳೆಯಿತು

೭-೫-೧೯೨೫. ಆಗ ಒಂದು ಜೀವ ಹುಟ್ಟಿತು. ಅದೇ ಶಿವೇಶ್ವರ ದೊಡ್ಡಮನಿ. ಆರು ತಿಂಗಳ ಕೂಸಾಗಿದ್ದಾಗಲೇ ಅವರ ತಂದೆ ಕಾಲವಾದರು. ಬಾಳ್ವೆಯ ಅಳಲನ್ನೆಲ್ಲ ನುಂಗಿಕೊಂಡ ತಾಯಿ, ಶಿವೇಶ್ವರನನ್ನು ಸಾಕಿ ದೊಡ್ಡವನನ್ನಾಗಿ ಮಾಡಿದರು. ಶಿವೇಶ್ವರ ಒಬ್ಬನೇ. —ಅಣ್ಣನಿಲ್ಲ ತಮ್ಮನಿಲ್ಲ ; ಅಕ್ಕನಿಲ್ಲ ತಂಗಿಯಿಲ್ಲ, ಆತ ಒಬ್ಬನೇ. ಬಲು ಮಮತೆಯಿಂದ ಆ ತಾಯಿ ಮಗುವನ್ನು ಸಾಕಿದರು.

ಹಿಂದೆ ಅವರದು ಶ್ರೀಮಂತ ನೇಕಾರರ ಕುಟುಂಬವಾಗಿತ್ತು, ಕಾಲ ಕ್ರಮೇಣ ದರಿದ್ರಾವಸ್ಥೆಗೆ ಇಳಿದುಹೋದ ಗುಡಿ ಕೈಗಾರಿಕೆ ಅದು. ಆ ತಾಯಿ, ಉಳಿದೊಂದು ಮಗ್ಗದ ಮೇಲೆ ಕೈಯಾಡಿಸುವುದರ ಜೊತೆಗೆ, ಒಂದು ಚೂರು ಹೊಲದಲ್ಲೂ ಸಾಗುವಳಿ ಮಾಡಿ, ಮಗನ ಪೋಷಣೆಯ ಭಾರ ಹೊತ್ತರು. ಹತ್ತಿರದ ಧಾರವಾಡದಲ್ಲಿ ವಿದ್ಯೆ ಕಲಿಸಿದರು. ಮನೆಗೊಬ್ಬ ಸೊಸೆಯನ್ನು ತಂದರು.

ಮ್ಯಾಟ್ರಿಕ್ ಮುಗಿಸಿದ ಶಿವೇಶ್ವರ, ಹೆಚ್ಚು ಖರ್ಚಿನ ಕಾಲೇಜ್ ಶಿಕ್ಷಣವನ್ನು ದೊರಕಿಸಿಕೊಳ್ಳಲಿಲ್ಲ.

ಕಹಿಯನ್ನೆಲ್ಲ ನುಂಗಿ ತಾಯಿ ಹಾಡುತಿದ್ದ ಗೀತಗಳ, ನೋವನ್ನೆಲ್ಲ ಮರೆತು ಹಳ್ಳಿಯ ಮೂಕ ಜೀವಿಗಳಾಡುತ್ತಿದ್ದ ಮೌನ ಮಾತುಗಳ, ಆ ಸರಳತೆಯ ಮುಗ್ಧತೆಯ— ವಾತಾವರಣದಲ್ಲಿ ಶಿವೇಶ್ವರ—ಸಂವೇದನಾ ಜೀವಿಯಾಗಿ ಸೂಕ್ಷ್ಮಗ್ರಾಹಿಯಾಗಿ ಬೆಳೆದರು. ಕನ್ನಡದ ಪುನರುದ್ದೀಪನ ಚಳುವಳಿ ಬಲಗೊಳ್ಳುತ್ತಿದ್ದ ಧಾರವಾಡ ಅವರ ಜೀವದ ಆಕಾಂಕ್ಷೆಗಳಿಗೆ ಪುಟಕೊಟ್ಟಿತು. ಹೈಸ್ಕೂಲಲ್ಲಿದ್ದಾಗಲೇ ಸಾಹಿತ್ಯದ ಕಡೆಗೆ ಅವರ ಒಲವು ಹರಿಯಿತು.

ಯಾವುದೋ ಹಾಡಿದ ಧ್ವನಿ ಕೇಳಿದಾಗ ಅವರದನ್ನು ಹಿಂಬಾಲಿಸಿದರು. ಯಾರದೋ ಕಾವ್ಯ ಹರಿದು ಬಂದಾಗ ಆ ತೊರೆಯಲ್ಲಿ ಕಾಲು ಚಾಚಿ ಅವರು ಲಲ್ಲೆಯಾಡಿದರು.

ಜನಪದವು ಹಾಡುತ್ತಿದ್ದ ತಾನು ಕೇಳುತಿದ್ದ ಗೀತಗಳನ್ನೆಲ್ಲ ಅವರು ಒಡಮೂಡಿಸಿಕೊಂಡರು. ಜತೆಯಲ್ಲೇ ತಾವು ಅನುಭವಿಸಿದ್ದನ್ನು ತಮ್ಮ ಪ್ರತಿಕ್ರಿಯೆಯನ್ನು ಅವರು ಪ್ರತಿಮೂಡಿಸಿದರು. ಹೀಗೆ ಶಿವೇಶ್ವರ ಕವಿಯಾದರು.

ಕಾವ್ಯ ಭಾಷೆ ಸಾಲದೆನಿಸಿದಾಗ, ಅವರು ಗದ್ಯರೂಪದಲ್ಲೂ ಬರೆಯ ತೊಡಗಿದರು.

ನೌಕರಿ—ಉದ್ಯೋಗ

ನವಲೂರನ್ನು ನವಿಲೂರು ಎಂದು ಪುನಃ ನಾಮಕರಣ ಮಾಡಲು ಎದೆಗಾರಿಕೆ ತೋರಿದ ಈ ಕವಿ, ನೌಕರಿಯ ಬೆನ್ನು ಹತ್ತಬೇಕಾಯಿತು. ಈ ಸಮಾಜ ಪದ್ಧತಿಯಲ್ಲಿ

ತನಗೆ ಪ್ರಿಯವಾದುದನ್ನೆ ಮಾಡುತ್ತ ದಿನಕಳೆಯುವ ಹಕ್ಕು ಅವರಿಗಿರಲಿಲ್ಲ. ಅವರು ದುಡಿದು ಸಂಪಾದಿಸಬೇಕಾಗಿತ್ತು.

ಮೊದಲಿನಿಂದಲೂ ಕ್ಷೀಣ ಪ್ರಕೃತಿಯವರಾದ ಶಿವೇಶ್ವರರನ್ನು ಅನಾರೋಗ್ಯ ಆಗಾಗ್ಗೆ ಕಾಡಿಸುತಿತ್ತು. ಕಣ್ಣು ಬೇನೆಯೊಂದು ಎಂದಿಗೂ ಬಿಡಲಾರದ ಹಾಗೆ ಅವರನ್ನು ಅಂಟಿಕೊಂಡಿತು. ದೃಷ್ಟಿ ದೋಷವೊಂದು ಸದಾಕಾಲ ಪೀಡಿಸಲೆಂದೇ ಅವರಲ್ಲಿ ಮನೆಮಾಡಿತು.

ಆರು ತಿಂಗಳ ಕಾಲ ಧಾರವಾಡದ ರೇಶನಿಂಗ್ ಆಫೀಸಿನಲ್ಲಿ ಕಾರಕೂನಿಕೆ; ಆ ಬಳಿಕ ಧಾರವಾಡದ ಮುನಿಸಿಪಲ್ ಸ್ಕೂಲ್ ಬೋರ್ಡಿನಲ್ಲಿ ಕ್ಲಾರ್ಕ್; ಮತ್ತೆ ಒಂದು ವರ್ಷ ಹುಬ್ಬಳ್ಳಿಯ ಆಂಗ್ಲೋ–ಉರ್ದು ಸ್ಕೂಲಿನಲ್ಲಿ ಗುಮಾಸ್ತಗಿರಿ......ಹೀಗೆ ಆ ಜೀವ ದುಡಿಯಿತು.

ರೂಪುಗೊಳ್ಳುತ್ತಲಿದ್ದ ಬಾಳು

ಸುತ್ತಲಿನ ವಾತಾವರಣದ ಬಗ್ಗೆ ದೊಡ್ಡಮನಿ ಪ್ರತಿಕ್ರಿಯೆ ವ್ಯಕ್ತಪಡಿಸ ತೊಡಗಿದಾಗ, ವಾತಾವರಣ ಅವರ ಮೇಲೆ ಪ್ರಭಾವ ಬೀರತೊಡಗಿದಾಗ, ಅವರ ಕಾವ್ಯಶಕ್ತಿ ಬಲಿಯಿತು.

ನೊಂದ ಜೀವಗಳಿಗಾಗಿ ಅವರು ಪರಿತಪಿಸಿದರು. ಅನ್ಯಾಯವನ್ನು ಕಂಡಾಗ ಅವರ ಮನಸ್ಸು ರೋಸತೊಡಗಿತು. ದುಷ್ಟ ಶಕ್ತಿಗಳನ್ನು ಅವರು ಮನಸಾರೆ ದ್ವೇಷಿಸಿದರು. ಕಂಬನಿ ಮಿಡಿಯುವ ಕಣ್ಣನ್ನು ತನ್ನ ಕಣ್ಣ ಹನಿಯಿಂದ ಅವರು ತೋಯಿಸಿದರು. ಬಡವರನ್ನು ಮನಮುಟ್ಟಿ ಅವರು ಪ್ರೀತಿಸಿದರು.

ನೋವು ಸಂಕಷ್ಟವನ್ನು ಅವರು ಎಂದೂ ಅಪೇಕ್ಷಿಸಿದ್ದಿಲ್ಲ. ಅಸ್ಪಷ್ಟವಾಗಿ ಹೊಸ ಸಮಾಜದ ಹೊಸ ಬಾಳಿನ ಕಲ್ಪನೆ ಅವರಲ್ಲಿ ಮೂಡಿತ್ತು.

ಅತಿ ಕ್ರೂರವಾಗಿ ಅವರ ಲೇಖನಿ ಇರಿಯುವುದನ್ನು ಕಲಿಯಿತು. ಈ ಸಮಾಜದಲ್ಲಿ ಬುದ್ಧಿ ಮತ್ತೆಯನ್ನೂ ಸಂಸ್ಕೃತಿಯನ್ನೂ ತಮ್ಮ ಸೊತ್ತಾಗಿ ಮಾಡಿಕೊಂಡ ಶೋಷಕರ ಮೇಲೆ ಅವರು ಕೆರಳಿಬಿದ್ದರು.

''ಧಿಕ್ಕಾರ !'' ಎಂಬ ಅವರ ಕವಿತೆ ಹೀಗೆ ಹರಿಯಿತು.

ಹನಿಯ ಗಾತ್ರದ ನಿಮ್ಮ ಗುಣಕೆ ಹೆಗ್ಗಡಲೆಂದು
ಸನ್ಮಾನಿಸಲಿ ಜನರೆನುವ ಬುದ್ಧಿ ಜೀವಿಗಳೆ,
ಒಳಗಣ್ಣ ಎವೆ ಮುಚ್ಚಿ ಹುಲುನುಡಿಯ ಬಗೆ ಕೊಚ್ಚಿ
ಮೆದುಳು ಮಂಕಾಗುವೊಲು ಹುಚ್ಚು ದುಡಿತಕೆ ಹಚ್ಚಿ
ನಿಮ್ಮ ನೀವರಿಯದೆಯೆ ನಾಡುನುಡಿಗಳ ಕಹಳೆ–
ಯೂದಿದರೆ ಯಾವ ಫಲ ? ಜಡಿಮಳೆಯು ಹೊಡೆವಂದು

ಜಂಪಲಿಕ್ಕಿದ ಮನೆಯ ತೆರ ನಿಮ್ಮ ಮನ ; ಕಂಡಿಹಿರ ?
ಸಂಸ್ಕೃತಿಯ ಪ್ರತಿಬಿಂಬವೇ ನೀವು ?—ಧಿಕ್ಕಾರ !
ಒಲವನಣಕಿಸಿ ಒಡಲ ಕರುಳ ಕೆಣಕಿದವರೆ
ಒಲವು ನನ್ನಿಗೆ ಉನ್ನತಾರ್ಥ ನೀತಿಯ ಪಹರೆ,
ನಶ್ವರತೆಗೆಡೆಯಿಲ್ಲವಿಯ ಮಹೇಶ್ವರ ಸದೃಶ ;
ತಾಯ ಎದೆ ಸಂದೇಶ ; ಲೇಖನಿಯ ಉದ್ಘೋಷ—
ಕೆರಡು ಬಗೆದರೆ ನಿಮ್ಮ ಜೀವಕೆಲ್ಲಿಯ ಚಿಂತೆ ?
ಪುಣ್ಯಭೂಮಿಗೆ ಕುಂದು ಮಣ್ಣುಪಾಲೀ ಘನತೆ.

ಇದೊಂದು ರೀತಿಯಾದರೆ, ಇಲ್ಲಿದೆ ಇನ್ನೊಂದು ರೀತಿ : 'ತಂಗಿಗೆ' ಎಂದು ಬರೆದ ಸುನೀತವೊಂದರ ಕೊನೆಯ ಆರು ಸಾಲುಗಳು :

ಹೋಗಿ ಬಾ, ಎದೆಗುಡಿಯ ಮುಂದೆ ದೀಪಸ್ತಂಭ
ಕಟ್ಟುವೆವು ನಮ್ಮೊಲುಮೆ ತಿರೆ ಎಂದೂ ನಶಿಸದಂತೆ
ನೀ ಬಂದು ಅಣ್ಣ ಎಂದು ಸೊಡರನಿಡು, ಅಂಬ—
ರಾಧಿಪತಿ ಹಿಗ್ಗಿ ನಮ್ಮೊಡನಾತ ಬರುವನಂತೆ ;
ಹೋಗಬಹುದೇ ಇನ್ನು, ಹೃದಯಕವನದ ಕಂತು
ಕೊಳ್ಳಿದನು, ಚಣಕೊಮ್ಮೆ ಹಾಡುವೆವು ಶುಭಮಸ್ತು !

ಕುಸುಮಕೋಮಲ ಭಾವನೆಯೊಂದು ವೈಯಕ್ತಿಕ ಜೀವಿಗಾಗಿ, ತನ್ನ ಬಾಳನ್ನು ಸ್ವಪ್ನಮಯಗೊಳಿಸಿದ ಅಲಂಕರಿಸಿದ ಯಾವುದೋ ಮನೆಯ ಸೋದರಿಯೊಬ್ಬಳಿಗಾಗಿ ಇಲ್ಲಿ ಅರಳಿದೆ.

ಗದ್ಯದಲ್ಲೂ ಹಾಗೆಯೇ. ಬೇಕಾದಾಗ ಗಡಸುತನ, ಬೇಕಾದಾಗ ಸೂಕ್ಷ್ಮ ನಗೆ—ವ್ಯಂಗ್ಯ, ಮತ್ತೆ ಬೇಕಾದಾಗ ಅತಿ ಮಧುರ ಭಾವನೆಯ ಕಲಕಲನಾದ.......

ಜನತೆಯ ಚಳುವಳಿಯೊಡನೆ ರೂಪುಗೊಳುತ್ತಲಿದ್ದ ಅವರ ಬಾಳು ೪೬—೪೭ರ ಅಂತರದಲ್ಲಿ ಜನತೆಯ ಎಡೆಗೆ ಅವರನ್ನು ತಂದು ಮುಟ್ಟಿಸಿತು.

ವಿವಿಧ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದ್ದ ತಮ್ಮ ಜನಪದ ಗೀತಗಳಿಂದ, ಕಾವ್ಯ ಕೃತಿಗಳಿಂದ, ನೂರಾರು ಜನರ ಗಮನವನ್ನು ಸೆಳೆದಿದ್ದ ನವಿಲೂರಿನ ಶಿವೇಶ್ವರ ದೊಡ್ಡ ಮನಿಯನ್ನು ಕಾಣಲು ನಾನು ಹಂಬಲಿಸುತಿದ್ದೆ. ಆ ಹಂಬಲಕ್ಕೆ ಉತ್ತರವಾಗಿ ಅವರೇ ಒಂದು ದಿನ ಹುಬ್ಬಳ್ಳಿಯ ಮರಾಠಾಗಲ್ಲಿಯ ಒಂದು ಅಟ್ಟದ ಮೇಲಿದ್ದ ನಮ್ಮ ಕಾರ್ಯಾಲಯಕ್ಕೆ ಬಂದರು.

ಅಂದಿನಿಂದ ನಾವು ಜತೆಯಾಗಿ ಕುಡಿದ ಚಹಾ, ಸೇದಿದ ಸಿಗರೇಟು, ಮೌನ ವಾಗಿಯೇ ಆದರೂ ಜತೆಯಾಗಿಯೇ ಬೀದಿಯುದ್ದಕ್ಕೂ ನಾವು ನಡೆದ ನಡಿಗೆ—ಒಂದೊಂದೂ ನನಗೆ ನೆನಪಿದೆ.

ಉತ್ತರ ಕರ್ನಾಟಕದಲ್ಲಿ ಅದೇ ಹೊಸತಾಗಿ ಆರಂಭವಾಗಿ ಬೆಳೆಯುತ್ತಲಿದ್ದ ರೈತರ ಚಳುವಳಿ, ಕೂಲಿಕಾರರ ಹೋರಾಟಗಳು, ಅವರನ್ನು ಆಕರ್ಷಿಸಿದುವು ಸೂಕ್ಷ್ಮಗ್ರಾಹಿಯ್ಯಾದ, ಬಾಳಿನ ಕುಲಿಮೆಯಲ್ಲೇ ಪುಟವಿಟ್ಟು ಬಂದ, ಈ ಬುದ್ಧಿಜೀವಿ, ತಾವು ಯಾರ ಕಡೆ ಎಂಬುದನ್ನು ನಿರ್ಧರಿಸಿದರು.

ಒಂದು ರಾತ್ರೆ ಅವರು ತಮ್ಮ ಹಳ್ಳಿಗೆ ಹೋಗದೆ ಹುಬ್ಬಳ್ಳಿಯಲ್ಲೇ ತಂಗಿದುದು ನೆನಪಾಗುತ್ತಿದೆ. ರಾತ್ರೆ ಹೊತ್ತಾಗಿದ್ದರೂ ಚಿಮಿಣಿ ದೀಪ ಉರಿಸಿಕೊಂಡು ಮಾರ್ಕ್ಸ್–ಎಂಗೆಲ್ಸರ 'ಘೋಷಣೆ'ಯನ್ನು ಅವರು ಓದುತಿದ್ದರು. ''ಆ ದೀಪದೆದುರಲ್ಲಿ ಎಂಥ ಓದು; ನೋವಿನ ಕಣ್ಣನ್ನು ಇನ್ನಷ್ಟು ನೋಯಿಸಬೇಡಿ;''–ಎಂದು ನಾನು ಹೇಳಿದೆ.

ಅವರು ಆ ಮಾತನ್ನು ಗಮನಿಸಲೇ ಇಲ್ಲ. ಯಾವುದೋ ಒಂದು ಶಬ್ದ ಅವರಿಗೆ ತೊಡಕನ್ನು ಉಂಟುಮಾಡಿತ್ತು.

''Proletariat ಅಂದರೇನ್ರೀ ?'' ಎಂದರವರು.

......ಹಾಗೆ ಅಭ್ಯಾಸಮಾಡಲು ಅವರು ಯತ್ನಿಸಿದರು. ತಮ್ಮ ವಿಚಾರಗಳನ್ನು ವಿಜ್ಞಾನದ ಒರೆಗಲ್ಲಿಗೆ ತೀಡಿ ನೋಡುವ, ಜೀವನ ವ್ಯಾಪಾರಗಳ ಬಗ್ಗೆ ತಿಳಿವಳಿಕೆಯನ್ನು ಶಾಸ್ತ್ರೀಯಗೊಳಿಸುವ, ಮಹಾವಕಾಶ ಅವರಿಗೆ ದೊರಕಿತು. ಆದರೆ, ಅಂಧತೆಯ ಕಡೆಗೆ ಧಾವಿಸುತಿದ್ದ ದೃಷ್ಟಿ ದೋಷ, ಅನಾರೋಗ್ಯ, ಚಿಕಿತ್ಸೆ ಮಾಡಿಸಿಕೊಳ್ಳಲು ಹಣದ ಅಭಾವ, ಜೀವವನ್ನು ಒಳಗಿಂದೊಳಗೇ ಕೊರೆಯುತ್ತಿದ್ದ ಗೃಹತಾಪತ್ರಯದ ಅಸಹನೀಯ ವೇದನೆ–ಇವು ಆ ಸೋದರನಿಗೆ ಎದುರು ನಿಂತುವು.

೧೯೪೭ರ ಮೇ ಮೊದಲಲ್ಲಿ ''ಜನಶಕ್ತಿ''ಯನ್ನು ಹೊರಡಿಸಿದೆವು. ತಮ್ಮ ಮುಂದಿದ್ದುದು ''ಬೆವರು–ಕಣ್ಣೀರು, ನಷ್ಟ–ನೋವು, ಸೆರೆಮನೆ ಕೂಡಾ'' ಎಂಬುದು ಗೊತ್ತಿದ್ದೂ ಶಿವೇಶ್ವರರು, ಇದ್ದ ನೌಕರಿಯನ್ನು ಬದಿಗೊತ್ತಿ, ಪತ್ರಿಕೆಯ ಪ್ರಕಾಶಕನಾದರು ; ಉಪಸಂಪಾದಕನಾದರು.

'ಜನಶಕ್ತಿ'ಯ ಉಪಸಂಪಾದಕನಾಗಿ

ಬೆಳಿಗ್ಗೆ ಬುತ್ತಿಕಟ್ಟಿಕೊಂಡು ನವಿಲೂರಿನಿಂದ ಅವರು ಬರುತಿದ್ದರು. ಬರುತ್ತ ಹಾದಿಯಿಂದ ಹಳದಿ ಹೂವಿನ ಎರಡು ಗೊಂಚಲುಗಳನ್ನು ಕಿತ್ತು ತರುತಿದ್ದರು.

ಕಾರ್ಯಾಲಯದಲ್ಲಿ ಮ್ಯಾಕ್ಸಿಂ ಗಾರ್ಕಿಯ ಎರಡು ದೊಡ್ಡ ಭಾವಚಿತ್ರಗಳಿದ್ದುವು. ಒಂದು ವೃದ್ಧ ಗಾರ್ಕಿ–ಇನ್ನೊಂದು ಬಾಲಕ ಗಾರ್ಕಿ. ಕವಿ ಶಿವೇಶ್ವರ ಒಂದೊಂದು ಹೂ ಗೊಂಚಲನ್ನು ಒಂದೊಂದು ಭಾವಚಿತ್ರಕ್ಕೆ ಆನಿಸಿ, ಅಲ್ಲಿಂದ ಹೊರಟು ದುರ್ಗದಬೈಲಿನಲ್ಲಿದ್ದ ಮುದ್ರಣಾಲಯಕ್ಕೆ ಬರುತ್ತಿದ್ದರು. ಅಲ್ಲಿ ಜತೆಯಾಗಿ ಆ ವಾರದ ಸಂಚಿಕೆಗೋಸ್ಕರ ನಾವು ದುಡಿಯುತ್ತಿದ್ದೆವು.

ಆ ವರ್ಷ ನವೆಂಬರ್ ಕ್ರಾಂತಿಗೆ ಸಂಬಂಧಿಸಿ ಇಪ್ಪತ್ತು ಪುಟಗಳ ಒಂದು ವಿಶೇಷಾಂಕ ಹೊರಡಿಸಲು ನಿರ್ಧರಿಸಿದೆವು.

ರಜಾದ ಮೇಲೆ ಹುಬ್ಬಳ್ಳಿಗೆ ಬಂದಿದ್ದ ಕನ್ನಡದ ಪ್ರಗತಿಶೀಲ ಕವಿ ಶ್ರೀ ಎಸ್. ಆರ್. ಎಕ್ಕುಂಡಿ ನಮ್ಮಲ್ಲಿಗೆ ಬಂದವರು, ಅಲ್ಲೆ ಕುಳಿತಲ್ಲೆ, ದಿವಂಗತ ಮಯಾಕೋವ್‌ಸ್ಕಿಯ ''ಕ್ರಾಂತಿಪಡೆಯ ಮುನ್ನಡೆ'' ಎಂಬ ಹಾಡನ್ನು ಕನ್ನಡಿಸ ಹೊರಟರು.

ನಮ್ಮ ಎಡಬದಿಯಲ್ಲಿ ದೊಡ್ಡ ಸಿಲಿಂಡರ್ ಮುದ್ರಣಯಂತ್ರ ಶಬ್ದಿಸುತ್ತಿತ್ತು, ಬಲಬದಿಯಲ್ಲಿ ಮೊಳೆ ಜೋಡಿಸುವ ವಿಭಾಗದಲ್ಲಿ ಹತ್ತಾರು ಜನ ಕೆಲಸ ಮಾಡುತ್ತಿದ್ದರು. ಹೊರಗೂ ಒಳಗೂ ಕಿವಿಯೊಡೆಯುವ ಸದ್ದಾಗುತ್ತಿತ್ತು. ಆದರೂ ಎಕ್ಕುಂಡಿ ಐದೇ ನಿಮಿಷಗಳಲ್ಲಿ ಮಯಾಕೋವ್‌ಸ್ಕಿಯ ಹಾಡಿನ ಭಾವಾನುವಾದವನ್ನು ಮಾಡಿದರು.

ಹೀಗೆ ಬರೆಯುವುದೇ ಮಯಾಕೋವ್‌ಸ್ಕಿಯ ಪರಂಪರೆ—ಎಂದು ನಾನು ಭಾವಿಸುತ್ತಿದ್ದಾಗಲೇ ಶಿವೇಶ್ವರ ಇನ್ನೊಂದೆಡೆ ಕುಳಿತು ''ಸೋವಿಯೆಟ್ ಬಾಂಧವರಿಗೆ'' ಎಂಬ ಇಪ್ಪತ್ತು ಸಾಲುಗಳ ಹಾಡು ಬರೆದರು. ಅದೂ ಧಾರಾಕಾರವಾಗಿ ಹರಿಯಿತು. ನಾನು ಮೂಕನಾಗಿ ಕುಳಿತಲ್ಲೇ ಕುಳಿತೆ.

> ''ಉರಿ ರೂಪವಾಂತು, ಸ್ವಾತಂತ್ರ್ಯ ಬಂತು, ಅರೆಬಿರಿದ ನಾಡಜೀವ ;
> ಸುಖಸಮತೆ ಸವಿಯ ಹೆಗ್ಗಳಿಕೆಯಾಸೆ ; ನೀಗುವೆವು ನಿತ್ಯನೋವ ;
> ಈ ಸುಡುವ ನೆಲಕ್ಕೆ ಈ ದುಡಿವ ಕುಲಕ್ಕೆ ನಗೆಸಲಿಗೆ ಬಹುಸುದೂರ
> ನೆಲೆನಿಲ್ಲಲೆಂದು ಸೌಹಾರ್ದಭಾವ ಹೂಡುವೆವು ನೂರು ಸಮರ !''

—ಇವು ಮೊದಲ ನಾಲ್ಕು ಸಾಲುಗಳು.

> ''ಮನದಂದು ನಿಮ್ಮ ಸಾಹಸದ ದಿವ್ಯ ಸೂತ್ಸಾಹಪೂರ್ಣದಿರವ,
> ವಂದಿಸುವೆವಿಂದು, ಬಂಧುತ್ವ ಬಲದ ಹಾರೈಕೆಯಿಂಬು ಸ್ವರವ
> ಆಲಿಸಿರಿ, ನೀವು ಜಗದೆಲ್ಲ ಚರಿತೆಯುನ್ನತಿಗೆ ಇತ್ತ ನೆರವು,
> ಮರೆಯಾಗದಖಿಲ ಜನಕೋಟಿಯೆದೆಯ ತುಂಬಿಹುದು ನಿಮ್ಮ ಕುರುಹು !''

—ಇವು ಕೊನೆಯ ನಾಲ್ಕು ಸಾಲುಗಳು.

ಬರೇ ಒಂದು ಸಲದ ಪರಿಚಯದಿಂದ, ಇಂಥ ಪ್ರತಿಭೆ ಈ ವ್ಯಕ್ತಿಯಲ್ಲಿದೆ ಎನ್ನುವುದನ್ನು ಯಾರೂ ತಿಳಿಯುವಂತಿರಲಿಲ್ಲ, ಅಷ್ಟು ವಿನಯಶೀಲರು ಅವರು ! ಆದರೆ ಅವರೆಷ್ಟು ವಿನಯಶೀಲರೋ ಅದೇ ರೀತಿ ಅವರ ವಿಚಾರ ವೈಖರಿಯೂ ಖಂಡ ತುಂಡ !

ಶಿವೇಶ್ವರ, ಹೊಸ ಹೊಸ ಪದಗಳನ್ನು ಹೇರಳವಾಗಿ ಉಪಯೋಗಿಸುತಿದ್ದರು. ಶ್ರಮಜೀವಿ ಚಳುವಳಿಯ ಪರಿಚಯವಿರುವವರಿಗೆ ''ಲಾಲ್‌ಸಲಾಂ'' ಎಂಬ ಪದಪ್ರಯೋಗ ಹೊಸತಲ್ಲ, ಹಾಗೆಯೇ ''ವಿಪ್ಲವ ವಂದನೆ'' ಎನ್ನುವುದು ಕೂಡಾ.

ಇದರ ಜೊತೆಗೆ ''ರಕ್ತ ನಮಸ್ಕಾರ'' ಎಂದು ಮೊದಲು ಪ್ರಯೋಗಿಸಿದ ಕೀರ್ತಿ ಶಿವೇಶ್ವರರಿಗೆ ಸಲ್ಲುವುದು.

ಆದರೆ ದಿನದಿಂದ ದಿನಕ್ಕೆ ಅವರ ಆರೋಗ್ಯ ಕೆಡುತ್ತಾ ಹೋಯಿತು. ಅವರು ಆರೈಕೆಯನ್ನು ಕಡೆಗಣಿಸಿದರು. ಬೆಳೆಯುತ್ತಲಿದ್ದ ಮಾನಸಿಕ ಚಿಂತೆಯನ್ನು ಅವರು ಸರಪಳಿ ಸಿಗರೇಟಿನಿಂದ ಸುಡತೊಡಗಿದರು. ''ಜನಶಕ್ತಿ''ಯಲ್ಲಿನ ಚಟುವಟಿಕೆ, ಚಳುವಳಿಯ ಚಿಂತನೆ, ಇವು ಮಾತ್ರ ಅವರ ಏಕಾಗ್ರತೆಯನ್ನು ಉಳಿಸುವ ಸಾಧನಗಳಾಗಿದ್ದವು.

ಅವರು ತುಂಬ ಸ್ನೇಹಮಯಿ. ಈಗ ಪ್ರಸಿದ್ಧರಾಗಿರುವ ಉತ್ತರ ಕರ್ನಾಟಕದ ಹಲವು ಪ್ರಮುಖ ಯುವಕ ಲೇಖಕರಿಗೆ ಆ ಗೆಳೆತನದ ಅನುಭವವಿದೆ.

ಅಂಥ ಬಂಧುತ್ವಕ್ಕೆ, ಧಾರವಾಡದ ಪ್ರಮುಖ ಯುವ ಕವಿಯಾದ ಚೆನ್ನವೀರ ಕಣವಿ ಮತ್ತು ಶಿವೇಶ್ವರರ ಸಂಬಂಧವೇ ಒಂದು ನಿದರ್ಶನ. ''ಜನಶಕ್ತಿ'' ಕಾರ್ಯಾಲಯದಿಂದ ಪ್ರತಿದಿನವೂ ಹೊರಬಿದ್ದ ಮೇಲೆ ಅವರು ಧಾರವಾಡ ಸೇರಿ ಕಣವಿಯವರ ಜತೆಯಲ್ಲಿ ಕಾಲಕಳೆಯುತ್ತಿದ್ದರು.

ದೃಷ್ಟಿದೋಷದಿಂದಾಗಿ ಪುಸ್ತಕಗಳ ಸಹವಾಸವೂ ಅವರಿಗೆ ದೊರೆಯದೆ ಹೋಯಿತು. ಮೌನವೊಂದೇ ಮನಕೊರೆಯುವ ಸಂಗಾತಿಯಾಯಿತು.

ದಬ್ಬಾಳಿಕೆಯನ್ನಿದಿರಿಸಿ—

೧೯೪೮ರ ಮಾರ್ಚ–ಏಪ್ರೀಲ್ ತಿಂಗಳಲ್ಲಿ ಆರಂಭವಾದ ಸಾರ್ವತ್ರಿಕ ದಬ್ಬಾಳಿಕೆ ''ಜನಶಕ್ತಿ''ಯ ಸಂಪಾದಕೀಯ ಮಂಡಲವನ್ನು ಚಲ್ಲಾಪಿಲ್ಲಿ ಮಾಡಿತು. ಕೃಶವಾದರೂ ''ಜನಶಕ್ತಿ'' ಮತ್ತೂ ಒಂದು ವರ್ಷ, ನಿಷೇಧಾಜ್ಞೆ ಬರುವ ತನಕ, ತನ್ನ ಕರ್ತವ್ಯಪಾಲನೆಯಲ್ಲಿ ಹಿಂದಾಗಲಿಲ್ಲ. ಆದರೆ ಅನಾರೋಗ್ಯದೆದುರಲ್ಲಿ ಶಿವೇಶ್ವರ ಅಸಹಾಯರಾದರು.

ಒಂದೆಡೆ ಅನಾರೋಗ್ಯ, ಇನ್ನೊಂದೆಡೆ ಆರ್ಥಿಕ ಸಂಕಷ್ಟ, ಬಾಳಿನ ಎಲ್ಲ ಕಹಿ ಒಮ್ಮೊಮ್ಮೆ ಹುಚ್ಚೆದ್ದು ಕುಣಿದು ತಂದೊಡ್ಡುತ್ತಿದ್ದ ಮಾನಸಿಕ ವ್ಯಥೆ—ಇಷ್ಟರ ಜತೆಯಲ್ಲಿ ಪೋಲಿಸರ ಕಾಟವನ್ನೂ ಅವರು ಸಹಿಸಬೇಕಾಯಿತು.

ಹೀಗಿದ್ದರೂ ಅವರು, ತನ್ನೆದುರು ವಿಶ್ವವ್ಯಾಪಿಯಾಗಿ ಭಾಸವಾಗುತ್ತಿದ್ದ ಮಹಾ ಆಂದೋಲನದ ಸಾಮೀಪ್ಯದಿಂದ ಎಂದೂ ದೂರ ಹೋಗಲಿಲ್ಲ.

ಮರಣಕ್ಕೆ ಒಂದು ವರ್ಷಕ್ಕೆ ಹಿಂದೆ ಅವರನ್ನು ಕಂಡಿದ್ದೆ. ಅದೇ ಸರಳ ಜೀವ. ಚಿಂತಾಕ್ರಾಂತವಾಗಿದ್ದರೂ ಆಗಾಗ್ಗೆ ಮುಗುಳ್ನಗುತ್ತಿದ್ದ ಮುಖ. ಅದೇ ಖಡಾಖಂಡಿತ ವಾದ.....ಕಣ್ಣುನೋವು ಸ್ವಲ್ಪ ಸುಧಾರಿಸಿದಂತಿತ್ತು ಆಗ, ರಾತ್ರೆ ಸ್ವಲ್ಪ ದೂರ ನಾನು ಹೋಗಬೇಕಾಗಿತ್ತು, ಸೈಕಲಿನ ಮೇಲೆ ನನ್ನನ್ನು ಒಯ್ದು ಮುಟ್ಟಿಸುವುದಾಗಿ ಶಿವೇಶ್ವರ

ಹೇಳಿದರು. ಆ ದೇಹಸ್ಥಿತಿಯಲ್ಲಿ ಅವರು ಆ ಕೆಲಸ ಮಾಡಬಾರದೆಂದು ಹೇಳಿದರೂ ಅವರು ಕೇಳಲಿಲ್ಲ. ಡಬ್ಬಲ್ ರೈಡ್ ಅಪಾಯ–ಎಂದು ಹೇಳಿ ಅವರ ಮನಸ್ಸು ನೋಯಿಸುವಂತೆಯೂ ಇರಲಿಲ್ಲ.

ನಗರದ ಹೊರ ವಲಯದವರೆಗೂ ಪ್ರತ್ಯಪ್ರತ್ಯೇಕವಾಗಿ ನಡೆದುಹೋಗಿ ಅಲ್ಲಿಂದ ಸೈಕಲನ್ನೇರಿದೆವು. ಡಬಲ್‌ರೈಡ್ ಮಾಡಿ ಅವರು ನನ್ನನ್ನು ಒಯ್ದು ಮುಟ್ಟಿಸಿದರು.....ಯಾವ ನಿಮಿಷ ಬೇಕಾದರೂ ವಾಹನ ಮುಗ್ಗರಿಸುವ ಅವಕಾಶವಿದ್ದರೂ, ಬಂಧುವಿನ ಆದರ ವಿಶ್ವಾಸಗಳಿಗೆ ಮಾರು ಹೋಗಿ ನಾನು ನಿಶ್ಚಿಂತನಾಗಿದ್ದೆ. ಆ ಊರಿನ ಬೀದಿಗಳೇ ಅವರ ರಕ್ಷಣೆಗೆ ನಿಂತಂತಿದ್ದುವು.

ಅದೇ ಅವಧಿಯಲ್ಲಿ ನಮ್ಮ ಒಬ್ಬರು ಬಂಧುವಿನ 'ಇರುವಿಕೆ'ಗೆ ತಾತ್ಕಾಲಿಕ ವ್ಯವಸ್ಥೆ ಮಾಡಬೇಕಾಗಿತ್ತು. ಆ ಮಾತು ಬಂದೊಡನೆಯೇ ದೊಡ್ಡಮನಿ ಆ ಹೊರೆ ಹೊತ್ತರು. ''ರಕ್ಷಣೆ''ಯ ಎಲ್ಲ ಭಾರ ತನ್ನದೆಂದರು. ಅಪಾಯ–ಗಂಡಾಂತರದ ಬಗ್ಗೆ ಒಂದು ಕ್ಷಣವೂ ಅವರು ಯೋಚಿಸಲಿಲ್ಲ.

ಅವರ ನವಿಲೂರಿನ ಹಳ್ಳಿ.......ಆ ಕೊನೆಯ ಭೇಟಿ......

ಮೋಟಾರು ರಸ್ತೆಯ ಬದಿಯಲ್ಲೇ ಅಲ್ಲೊಂದು ಹೋಟೆಲಿದೆ. ಅದೊಂದು ಮುರುಕು ಗುಡಿಸಲು. ತಲೆಬಾಗಿ ಒಳಹೋಗಬೇಕು.

ಆ ರಾತ್ರಿ, ''ಚಾ, ಕುಡಿಯೋಣ'' ಎಂದರು ಶಿವೇಶ್ವರ. ಗೆಳೆತನದ ಆರಂಭದ ದಿನಗಳಲ್ಲಿ ನಾವು ಜತೆಯಾಗಿ ಚಹಾ ಕುಡಿಯುತ್ತಿದ್ದ ಹಾಗೆ.

ಅವರ ಆಹ್ವಾನವನ್ನು ಅಲ್ಲಗಳೆಯಲು ಅತಿ ಕಠಿಣ ಮನಸ್ಸೇ ಬೇಕು.

''ಯಾರೋ ಜನರಿದ್ದಂತಿದೆ....ಖಾಕಿಧಾರಿಗಳು'' ಎಂದೆ.

ಅವರೊಬ್ಬರೇ ಹತ್ತಿರ ಹೋಗಿ ನೋಡಿಬಂದರು. ಒಳಗಿದ್ದವರು ಸಮೀಪದಲ್ಲೇ ಯಂತ್ರ ಕೆಟ್ಟಿದ್ದ ಯಾವುದೋ ಮೋಟಾರಿನ ಡ್ರೈವರ್–ಕಂಡಕ್ಟರುಗಳು.

''ಬರ್ರೀ–'' ಎಂದರು ಶಿವೇಶ್ವರ.

ಸದ್ದಿಲ್ಲದೆ ಒಳಹೋಗಿ ನೆಲದಮೇಲೆ ಮೂಲೆಯಲ್ಲಿ ಕುಳಿತು ಒಂಭತ್ತು ಕಾಸಿನ ಸ್ಪೆಶಲ್ ಚಾ ಕುಡಿದೆವು.

ನಸುಬೆಳದಿಂಗಳಿತ್ತು.....

ಅವರು ಹಳ್ಳಿಯಲ್ಲಿದ್ದ ತಮ್ಮ ಮನೆಯತ್ತ ಹೊರಟರು. ಮತ್ತೊಮ್ಮೆ ಸಿಗುವ ಆಶ್ವಾಸನೆ ಕೊಟ್ಟು ನಾನು ಹುಬ್ಬಳ್ಳಿಯತ್ತ ಸಾಗಿದೆ.

ಅದು ಮತ್ತೆ ಬರದೇಹೋದ 'ಮತ್ತೊಮ್ಮೆ'. ವಿಷಮಜ್ವರಕ್ಕೆ ತುತ್ತಾಗಿ ಶಿವೇಶ್ವರರು, ೧೯೫೦ರ ಮಾರ್ಚ ೨೭ ರಂದು ನಡುವಿರುಳು ದಾಟಿದಾಗ, ಕೊನೆಯ ಉಸಿರೆಳೆದರು.

ಇತಿಹಾಸದಲ್ಲಿ ಅವರ ಸ್ಥಾನ

ಈಗಿನ ಆಳುವ ವರ್ಗದ ಸೇವೆಯಲ್ಲಿ ನಿರತರಾಗಿರುವ ಸಾಹಿತಿಯೊಬ್ಬರು ಒಂದು ಲೇಖನ ಬರೆದು, ದಿವಂಗತ ಶಿವೇಶ್ವರರನ್ನು 'ಹೊಗಳಿ', ಅವರು ಸೇರಿದ್ದ ಚಳುವಳಿಯನ್ನು ನಿಂದಿಸಿದ್ದಾರೆ.

ತಾವೇ ಆಳುವ ವರ್ಗವಾಗಬೇಕೆಂದು ಚಡಪಡಿಸುತ್ತಿದ್ದ ಮತ್ತೊಂದು ರಾಜಕೀಯ ಪಕ್ಷದ ವ್ಯಕ್ತಿಯೊಬ್ಬರು ತಾವೂ ಒಂದು ಲೇಖನ ಬರೆದು, ಶಿವೇಶ್ವರರನ್ನು ''ಹೊಗಳುವ'' ನೆಪಮಾಡಿ, ಚಳುವಳಿಯನ್ನು ನಿಂದಿಸುತ್ತ ಶಿವೇಶ್ವರರ ಎಳೆಯ ಜೀವನದ ಮಹತ್ತರವಾದ ಒಂದು ಅಧ್ಯಾಯಕ್ಕೇ ಮಸಿ ಬಳೆಯಲು ಯತ್ನಿಸಿದ್ದಾರೆ.

ಇವರೆಲ್ಲ ಚಂದ್ರಬಿಂಬದತ್ತ ಯಾಕೆ ಉಗುಳುವರೋ ತಿಳಿಯದು. ಅಳಿದ ಸೋದರನೊಬ್ಬನ ನೆನಪು ಮಾಡುತ್ತಿರುವ ಈ ಸಂದರ್ಭದಲ್ಲಿ ಅವರೆಲ್ಲರ ಬಗ್ಗೆ ನಾನು ಬರೆಯಲಿಚ್ಛಿಸುವುದಿಲ್ಲ.

ಪುಷ್ಕಿನ್ ಕ್ರಾಂತಿಕಾರಿಯೇ ಆಗಿರಲಿಲ್ಲ ಎಂದು ಸಾಧಿಸಿದವರುಂಟು. ಮ್ಯಾಕ್ಸಿಂ ಗಾರ್ಕಿಯು ಸೋವಿಯೆಟ್ ಪದ್ಧತಿಗೆ ವಿರೋಧಿಯಾಗಿದ್ದ—ಎಂದವರುಂಟು. ಕ್ರಾಂತಿ ಕಾರಿ ಮಯ್‌ಕೋವ್‌ಸ್ಕಿಯ ಮರಣಕ್ಕೆ ಸೋವಿಯೆಟ್ ರಾಜ್ಯವೇ ಕಾರಣವೆಂದವ ರುಂಟು !

ಹೋರಾಟದ ಪರಂಪರೆಯನ್ನೆತ್ತಿ ಹಿಡಿದ ಶಿವೇಶ್ವರರ ಬಗ್ಗೆ ಆ ರೀತಿಯಲ್ಲೇ ನಿಂದಿಸಿ ಬರೆಯುವವರು, ನಿಜಕ್ಕೂ ಶಿವೇಶ್ವರರನ್ನು ಗೌರವಿಸುತ್ತಿದ್ದಾರೆ !

ನಮ್ಮ ಬುದ್ಧಿಜೀವಿ ಯುವಜನಾಂಗದ ಒಂದು ವಿಭಾಗ, ವರ್ಗ ಜಾಗೃತಿಯ ಕಾಲಘಟ್ಟದಲ್ಲಿ, ಕರ್ನಾಟಕದ ಶ್ರಮಜೀವಿ ಜನಸಮುದಾಯದೊಡನೆ ಒಂದಾಗಲೆ ಳಸಿತು. ಆ ವಿಭಾಗದ ಪ್ರತಿನಿಧಿ ಶಿವೇಶ್ವರ ದೊಡ್ಡಮನಿ. ಅವರ ಹೆಸರು ಚಿರಸ್ಥಾಯಿ ಯಾಗುವುದು. ಅಪಪ್ರಚಾರದ ಹೊದಿಕೆ ಹೊದಿಸಿ ಅವರ ನೆನಪಿನ ಮೇಲೆ ಗೋರಿ ಕಟ್ಟುವುದು ವ್ಯರ್ಥಯತ್ನವೇ ಸರಿ.

ಈ ದಿನ ಪರಿಸ್ಥಿತಿ ಏನೇ ಇರಲಿ; ನಾಳೆ ಅದು ಬದಲಾಗಿಯೇ ತೀರುವುದು.

ಭವಿಷ್ಯತ್ತಿನ ನಿರ್ಮಾತೃಗಳಾದ, ತಮ್ಮ ಗುರಿಯನ್ನು ತಾವೇ ರೂಪಿಸುವ ಸಾಮರ್ಥ್ಯವುಳ್ಳ, ಇತಿಹಾಸದ ಸಾಧನಗಳಾದ, ಉದಯಿಸಲಿರುವ ಹೊಸ ಸಮಾಜದ ಶಿಲ್ಪಿಗಳಾದ ಕರ್ನಾಟಕದ ಶ್ರಮಜೀವಿಗಳು ಶಿವೇಶ್ವರರನ್ನು ನೆನಪಿಡುವರು !

ಅವರ ನೆನಪಿಗಾಗಿ ಇಲ್ಲಿ ಮುಕ್ತಾಯದ ಮಾತೆಂದರೆ, ಅವರಿಗೆ ಪ್ರಿಯವಾಗಿದ್ದ ಪದಪ್ರಯೋಗ—ರಕ್ತನಮಸ್ಕಾರ ! ಸೋದರ ಶಿವೇಶ್ವರಗೆ ಅಂತಿಮ ರಕ್ತನಮಸ್ಕಾರ !

ಜುಲೈ ೧೯೫೧ — **ನಿರಂಜನ**

ಬೆಂಗಳೂರು — *'ನಮ್ಮ ನಡುವಿನ ಗೋಡೆ'*ಯ ಮುನ್ನುಡಿ

□□

ಉತ್ತರ ಕರ್ನಾಟಕದಲ್ಲಿ ಹುಟ್ಟಿ, ತಮ್ಮ ಬದುಕಿನ ಇಪ್ಪತ್ತೈದನೆಯ ವಯಸ್ಸಿಗೆ ಕಣ್ಮರೆಯಾದ ಶ್ರೀ ಶಿವೇಶ್ವರ ದೊಡ್ಡಮನಿಯವರು ಆಗ ಅತ್ಯಂತ ಪ್ರಖರವಾಗಿದ್ದ ಪ್ರಗತಿಶೀಲ ಸಾಹಿತ್ಯ ಚಳುವಳಿಯಲ್ಲಿ ಕಾಯಾ–ವಾಚಾ–ಮನಸಾ ಪಾಲ್ಗೊಂಡು ಜನಪರ ಹೋರಾಟಗಳಲ್ಲಿ ಮತ್ತು ಜನಪರವಾದ ಸಾಹಿತ್ಯ ರಚನೆಯಲ್ಲಿ ತನ್ನನ್ನು ತೊಡಗಿಸಿಕೊಂಡ ಕ್ರಿಯಾಶಾಲಿ ಲೇಖಕ. ಅ.ನ.ಕೃ, ತ.ರಾ.ಸು. ಬಸವರಾಜ ಕಟ್ಟೀಮನಿ, ನಿರಂಜನ ಮುಂತಾದ ಕನ್ನಡದ ಅಗ್ರಮಾನ್ಯ ಲೇಖಕರು ಪಾಲ್ಗೊಂಡಿದ್ದ ಈ ಸಾಹಿತ್ಯಕ ಚಳುವಳಿಯಿಂದ ಪ್ರಭಾವಿತರಾಗಿ ಸಾಹಿತ್ಯವು ಜನಜೀವನದ ಸಮರ್ಥ ಪ್ರತಿಬಿಂಬವಾಗಬೇಕೆಂಬ ತೀವ್ರ ಹಂಬಲದಿಂದ ಹುಟ್ಟಿಕೊಂಡ ಈ ಸಾಹಿತ್ಯ ಪರಂಪರೆ ಹುಟ್ಟು ಹಾಕಿದ ಆದರ್ಶವಾದಿ ಯುವ ಲೇಖಕರಲ್ಲಿ ದೊಡ್ಡಮನಿಯವರೂ ಒಬ್ಬರು. ಆ ಕಾಲದ ಧಾರವಾಡದ ಪರಿಸರದ ಮುಖ್ಯ ಕವಿಗಳ ಪ್ರೀತಿ–ಸ್ನೇಹಗಳನ್ನು ಸಂಪಾದಿಸಿದ ಈ ಯುವಕ ಹೊಟ್ಟೆ–ಬಟ್ಟೆಯ ಬವಣೆಗಾಗಿ ಹಲವಾರು ಕಡೆ ದುಡಿದು, ಆ ದುಡಿಮೆಯ ದಣಿವಿನಲ್ಲೇ ಸಾಹಿತ್ಯ ಸೃಷ್ಟಿಯ ಚಿಲುಮೆಯನ್ನು ಚಿಮ್ಮಿಸಿದರು; ಹಲವಾರು ಸಾನೆಟ್‌ಗಳನ್ನು, ಕಥೆ ಹಾಗೂ ಲೇಖನಗಳನ್ನು ರಚಿಸಿದರು. ಅದರ ಜೊತೆಗೆ ಅಮೂಲ್ಯವಾದ ಜನಪದ ಗೀತೆಗಳನ್ನೂ ಸಂಗ್ರಹಿಸಿದ್ದಾರೆ. ಈಗ ಶ್ರೀ ಶಿವೇಶ್ವರ ದೊಡ್ಡಮನಿಯವರ ಎಲ್ಲಾ ಬರಹಗಳನ್ನು ಈ ಸಂಪುಟದಲ್ಲಿ ಸಮಗ್ರವಾಗಿ ಸೇರ್ಪಡೆಗೊಳಿಸಲಾಗಿದೆ.

ಡಾ. ಎಚ್.ಜೆ. ಲಕ್ಕಪ್ಪಗೌಡ
ಅಧ್ಯಕ್ಷರು
ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು